ಜನಪ್ರಿಯ ಪುಸ್ತಕಮಾಲೆ

ಗಾಂಧಿ ಎಂಬುವ ಹೆಸರು

ಸಂಪಾದಕರು
ಚಂದ್ರಶೇಖರ ಪಾಟೀಲ
ಶಶಿಕಲಾ ವೀರಯ್ಯಸ್ವಾಮಿ



ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಜನಪ್ರಿಯ ಪುಸ್ತಕ ಮಾಲೆ

ಗಾಂಧಿ ಎಂಬುವ ಹೆಸರು

ಜನಪ್ರಿಯ ಪುಸ್ತಕ ಮಾಲೆ

ಗಾಂಧಿ ಎಂಬುವ ಹೆಸರು

ಸಂಪಾದಕರು

ಪ್ರೊ. ಚಂದ್ರಶೇಖರ ಪಾಟೀಲ

ಶಶಿಕಲಾ ವೀರಯ್ಯಸ್ವಾಮಿ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು - ೫೬೦ ೦೧೮

GHANDHI EMBUVA HESARU : A Collection of Kannada Poems on Mahatma Gandhiji Edited by Prof. Chandrashekar Patil & Shashikala Veerayya Swamy, Published by Kannada Pustaka Pradhikara (Kannada Book Authority); Pampa Mahakavi Road, Chamarajpet, Bangalore-560 018

Pages : XXII+331

ಗ್ರಂಥಸ್ವಾಮ್ಯ : ಕನ್ನಡ ಪುಸ್ತಕ ಪ್ರಾಧಿಕಾರ

ಪ್ರಥಮ ಮುದ್ರಣ : ೧೯೯೮

ಬೆಲೆ : ೭೫/-

ಮುಖಪುಟ : ಮಕಾಳಿ

ಮುದ್ರಕರು :
ಕೈಲಾಸ್ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್
ನಂ. ೧೯/೪, ನಾಗಪ್ಪ ಬೀದಿ, ಪ್ಯಾಲೇಸ್ ಗುಟ್ಟಹಳ್ಳಿ
ಬೆಂಗಳೂರು - ೫೬೦ ೦೦೩

ಮುನ್ನುಡಿ

ಜ್ಞಾನಾರ್ಜನೆಗೆ ಅಕ್ಷರ ಮಾಧ್ಯಮವೇ ಪ್ರಮುಖ ಸಾಧನ. ಆಧುನಿಕ ಕಾಲದಲ್ಲಿ ತಿಳುವಳಿಕೆಯನ್ನು ನೀಡಲು ಅನೇಕ ಮಾಧ್ಯಮಗಳು ಸಿದ್ಧವಾಗಿದ್ದರೂ ಸಾಹಿತ್ಯ ಕೃತಿಗಳಿಗೆ ಮಾತ್ರ ಅಪೂರ್ವವಾದ ಅನನ್ಯತೆ ಇದೆ. ಸಾಹಿತ್ಯ, ಸಂಗೀತ, ಕಲೆ ಮುಂತಾದ ಸಾಂಸ್ಕೃತಿಕ ಅನುಭವ ಜ್ಞಾನದಿಂದ ಮಾನವನ ಹೃದಯದಲ್ಲಿ ಆತ್ಮಸೌಂದರ್ಯ ವೃದ್ಧಿಸುತ್ತದೆ. ಭವ್ಯವಾದ ಪರಂಪರೆಯನ್ನು ನಿರಂತರವಾಗಿ ಮುಂದುವರಿಸಲು ಭಾಷೆಯ ಮೂಲಕ ಅನುವಾಗುವ ಗ್ರಂಥಗಳು ಸಂಸ್ಕೃತಿಯ ಜೀವನಾಡಿಯಾಗಿ ಜೀವಂತವಾಗಿ ಸಾಗಬೇಕಾಗುತ್ತದೆ. ಈ ಸಾಗುವಿಕೆಯಲ್ಲಿ ಮಾನವರು ತಂತಮ್ಮ ನಡುವಿನ ತಿಳಿವಳಿಕೆಯನ್ನು ಪರಸ್ಪರ ಅರಿಯುತ್ತ ವಿಸ್ತರಿಸುತ್ತ ಸಾಮರಸ್ಯಕ್ಕೆ ದಾರಿ ಮಾಡಿಕೊಡಬೇಕಾಗುತ್ತದೆ. ಇಂತಹ ಅಪರೂಪದ ಜ್ಞಾನಶಕ್ತಿಯನ್ನು ಒಳಗೊಂಡ ಸಾಹಿತ್ಯವನ್ನು ವಾಚಕರಿಗೆ ತಲುಪಿಸುವ ಜವಾಬ್ದಾರಿಯನ್ನು 'ಕನ್ನಡ ಪುಸ್ತಕ ಪ್ರಾಧಿಕಾರ' ಹೊತ್ತಿದೆ.

ಕರ್ನಾಟಕ ಸರ್ಕಾರ ಬಹುದಿನಗಳಿಂದ ಇಂತಹ ಮೌಲಿಕವಾದ ಗ್ರಂಥಗಳ ಪ್ರಕಟಣೆಗೆ ಪ್ರೋತ್ಸಾಹ ನೀಡುತ್ತಾ ಬಂದಿದೆ. ಶ್ರೀ ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಸಾಹಿತ್ಯ ಸಂಸ್ಕೃತಿಯ ಪ್ರಸರಣ ಕಾರ್ಯಕ್ಕೆ ಒತ್ತಾಸೆಯಾಗಿದ್ದರು. ಕುವೆಂಪು ಮತ್ತು ಮಾಸ್ತಿ ಅವರು ಸೇರಿ ಸಂಪಾದಿಸಿಕೊಟ್ಟ ಮತ್ತು ಅತ್ಯಂತ ಕಡಿಮೆ ಬೆಲೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಪ್ರಕಟವಾದ 'ಕುಮಾರವ್ಯಾಸಭಾರತ' ಗ್ರಂಥ ಇಂದಿಗೂ ವಿದ್ವಾಂಸರ, ಜನಸಾಮಾನ್ಯರ ಮೆಚ್ಚುಗೆಗೆ ಪಾತ್ರವಾಗಿದೆ. ಅನಂತರ 'ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನದ' ಕಾಲಕ್ಕೆ ಕರ್ನಾಟಕ ಸರ್ಕಾರವು ಇದೇ ಇಲಾಖೆಯ ಮೂಲಕ ಕನ್ನಡದ ಮೌಲಿಕವಾದ ಹಾಗೂ ಹಲವಾರು ವರ್ಷಗಳಿಂದ ಬೇಡಿಕೆಯಲ್ಲಿದ್ದ,

ಆದರೂ ಪುನರ್ ಮುದ್ರಣವಾಗದಿದ್ದ ನೂರಕ್ಕೂ ಹೆಚ್ಚಿನ ಗ್ರಂಥಗಳನ್ನು 'ಜನಪ್ರಿಯ ಪುಸ್ತಕ ಮಾಲೆ'ಯ ಮೂಲಕ ಆಯ್ದು ಪ್ರಕಟಿಸಿ ಓದುಗರ ಮೆಚ್ಚಿಗೆ ಗಳಿಸಿತು.

ಕರ್ನಾಟಕ ಸರ್ಕಾರ ಇದುವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ಪ್ರಕಟಿಸುತ್ತಿದ್ದ ಇಂತಹ ಅಪರೂಪದ ಕೃತಿಗಳನ್ನು ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸುತ್ತಿದೆ. ಅಲಭ್ಯವಾದ ಕನ್ನಡದ ಗ್ರಂಥಗಳನ್ನು ಜನಸಾಮಾನ್ಯರಿಗೆ ಎಟುಕುವ ಬೆಲೆಯಲ್ಲಿ ಮತ್ತೆ ಪ್ರಕಟಿಸಿ ತಲುಪಿಸುವುದೇ ಈ ಜನಪ್ರಿಯ ಪುಸ್ತಕ ಮಾಲೆಯ ಮುಖ್ಯ ಗುರಿ. ಹಿಂದಿನ ಪೀಳಿಗೆಯ ಅನೇಕ ಉತ್ತಮ ಕೃತಿಗಳನ್ನು ಇಂದಿನ ಪೀಳಿಗೆಯ ಓದುಗರಿಗೆ ಲಭ್ಯಗೊಳಿಸುವುದೇ ಈ ಯೋಜನೆಯ ಆಶಯವಾಗಿದೆ. ಅಲಭ್ಯವಾಗಿರುವ ಇತ್ತೀಚಿನ ಉತ್ತಮ ಕೃತಿಗಳನ್ನೂ ಈ ಮಾಲೆಯಲ್ಲಿ ಪ್ರಕಟಿಸಲು ಉದ್ದೇಶಿಸಿದೆ.

ಈ ಮಾಲೆಯಲ್ಲಿನ ಪುಸ್ತಕಗಳನ್ನು ಪ್ರಕಟಿಸಲು ನೆರವಾದ ಜನಪ್ರಿಯ ಪುಸ್ತಕ ಮಾಲೆಯ ಉಪಸಮಿತಿಯ ಸದಸ್ಯರಿಗೆ, ಪುಸ್ತಕ ಪ್ರಾಧಿಕಾರದ ಸದಸ್ಯರಿಗೆ, ನಮ್ಮ ರಾಷ್ಟ್ರದ ಸುವರ್ಣ ಸ್ವಾತಂತ್ರ್ಯೋತ್ಸವದ ಈ ಸಂದರ್ಭದಲ್ಲಿ ವಿಶೇಷವಾಗಿ ಹೊರತರುತ್ತಿರುವ 'ಗಾಂಧಿ ಎಂಬುವ ಹೆಸರು' ಈ ಕೃತಿಯಲ್ಲಿ ಮಹಾತ್ಮಾ-ಗಾಂಧಿಯವರನ್ನು ಕುರಿತು ಬರೆದ ತಮ್ಮ ಕವಿತೆಗಳನ್ನು ಬಳಸಿಕೊಳ್ಳಲು ಅನುಮತಿ ಕೊಟ್ಟ ಎಲ್ಲಾ ಕವಿಗಳಿಗೆ, ಸಂಪಾದನೆಯ ಹೊಣೆಯನ್ನು ಹೊತ್ತಿರುವ ಪ್ರೊ|| ಚಂದ್ರಶೇಖರ ಪಾಟೀಲ (ಚಂಪಾ) ಮತ್ತು ಶ್ರೀಮತಿ ಶಶಿಕಲಾ ವೀರಯ್ಯಸ್ವಾಮಿಯವರಿಗೆ, ಅಂದವಾಗಿ ಮುದ್ರಿಸಿದ ಕೈಲಾಸ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ಅವರಿಗೆ ಕೃತಜ್ಞತೆಗಳು.

ನೆಲಮನೆ ಕೆ. ದೇವೇಗೌಡ
ಅಧ್ಯಕ್ಷರು
ಕನ್ನಡ ಪುಸ್ತಕ ಪ್ರಾಧಿಕಾರ

ಸಂಪಾದಕರ ಮಾತು

ಇಪ್ಪತ್ತನೆಯ ಶತಮಾನದ ಕಟ್ಟಕಡೆಯ ತುದಿಯಲ್ಲಿ ನಿಂತು ಇತಿಹಾಸದ ಕಡೆಗೆ ಕಣ್ಣು ಹಾಯಿಸಿದಾಗ ಇಡೀ ಆಕಾಶವನ್ನೇ ಒಂದಿಲ್ಲೊಂದು ರೀತಿಯಲ್ಲಿ ಆವರಿಸಿದಂತೆ ತೋರುವ ಒಂದು ಆಕಾರ -ಗಾಂಧಿ. ೧೯೪೮ರವರೆಗೆ ನಡೆದಾಡುವ ಒಂದು ರೂಪವಾಗಿದ್ದರೆ, ಅನಂತರದ ಅವಧಿಯಲ್ಲಿ ಕಾಲಕಾಲಕ್ಕೆ ಸುಳಿದಾಡುವ ಒಂದು ನೆರಳಾಗಿ ಗಾಂಧಿ ನಮ್ಮೊಂದಿಗಿದ್ದಾರೆ.

ದಕ್ಷಿಣ ಆಫ್ರಿಕೆಯಿಂದ ಇಂಡಿಯಾಕ್ಕೆ ಬಂದಂದಿನಿಂದಲೂ ಇಂಡಿಯಾದ ಸ್ವಾತಂತ್ರ್ಯ ಆಂದೋಲನದ ಮುಂಚೂಣಿ ನಾಯಕರಾಗಿ ರೂಪುಗೊಂಡ ಗಾಂಧೀಜಿಯ ಜೊತೆ ಹೋಲಿಸಬಹುದಾದ ಅನೇಕ ನಾಯಕರು ಆಯಾ ಕಾಲಘಟ್ಟಗಳಲ್ಲಿ ಅವರ ಸಮಕಾಲೀನರಾಗಿ ಇತಿಹಾಸದಲ್ಲಿ ದಾಖಲಾಗಿದ್ದರೂ ಅವರೆಲ್ಲ ಆಯಾ 'ಕಾಲ'ಗಳಿಗೆ ಮಾತ್ರ 'ಬದ್ಧ'ರು. ಅವರನ್ನು ಅಲ್ಲಲ್ಲೋ ಸ್ಥಗಿತಗೊಳಿಸಿ ಅವರ ಸೋಲು-ಸಾಧನೆಗಳ ಮೌಲ್ಯಮಾಪನ ಮಾಡಬಲ್ಲೆವು ನಾವು. ಆದರೆ ಗಾಂಧೀಜಿ ಮಾತ್ರ ಅವರೆಲ್ಲರಿಗೆ ಸೈಡು ಹೊಡೆಯುತ್ತ ಸದಾ ಸದಾ ಸಮಕಾಲೀನರಾಗಿರುವ ರಹಸ್ಯಮಯ ವ್ಯಕ್ತಿ.

ಒಂದು ಮಗು ಕೂಡ ಪುಟ್ಟ ಬೆರಳಿನಿಂದ ಉಸುಕಿನಲ್ಲಿ ಗೆರೆ ಎಳೆದು ಗಾಂಧೀಜಿಯ ಚಿತ್ರ ಮೂಡಿಸಬಲ್ಲ. ಅಂಥ ಸರಳ ವ್ಯಕ್ತಿತ್ವ. ಕಡ್ಡಿಯಂಥ ಮೈ, ಬೋಳುತಲೆ, ಅಗಲ ಕಿವಿ, ಚಾಳೀಸು, ಹುಟ್ಟು ನಗೆ, ಅರೆ ಬೆತ್ತಲ ಫಕೀರನಂತೆ ಪೋಷಾಕು. ಕನ್ನಡಿ ಹರಳಿನಂಥ ನೇರ ಮಾತು. ನೇರ ನಡೆ. ಅಂತರಂಗದ ಧ್ವನಿ ಅಂತ ಹೇಳಿ ಅದನ್ನೇ ಸಾರ್ವಜನಿಕ ಅಭಿಪ್ರಾಯವಾಗಿ ಮಾರ್ಪಡಿಸಬಲ್ಲ ಮೋಡಿಗಾರ. ಉಪವಾಸ, ಗಿಪವಾಸ ಅಂತ ಹಟಕ್ಕೆ ಬಿದ್ದು ತನ್ನವನ್ನು ಸಾಧಿಸಿಕೊಳ್ಳಬಲ್ಲ ಛಲಗಾರ.

ಇಂಥವನ ವೈಯಕ್ತಿಕ ಬದುಕಿನ ಎಳೆಗಳು ನಮ್ಮ ದೇಶದ ಬದುಕಿನ ಎಳೆಗಳೊಂದಿಗೆ ತಳಕು ಬೀಳುತ್ತಲೇ ಹೋಗುತ್ತಿರುವುದು -'ಗಾಂಧಿ' ಎನ್ನುವ ಬಿಂಬ ಸಾವಿರ ಕಣ್ಣುಗಳಲ್ಲಿ ಸಾವಿರ ತೆರನಾಗಿ ರೂಪುಗೊಳ್ಳಲು ಕಾರಣ. ಇಂಡಿಯಾಕ್ಕೆ ಸ್ವಾತಂತ್ರ್ಯ ಸಿಕ್ಕು ವರುಷ ತುಂಬುವುದರೊಳಗೇ ಹಿಂದೂ ಮತಾಂಧನೊಬ್ಬನಿಂದ ಗಾಂಧಿ ಕೊಲೆಯಾದದ್ದು , ಗಾಂಧಿ ಎಂಬುವ ಹೆಸರು ಅಂಗಡಿ-ರೋಡು-ಬಜಾರು-ಮೈದಾನ-ಪಾರ್ಕುಗಳಿಗೆ ತಗುಲಿಕೊಂಡದ್ದು, ತುರ್ತು ಪರಿಸ್ಥಿತಿಯಲ್ಲಿ ಗಾಂಧಿಯ ಮೂರು ಮಂಗಗಳು ಮೈತಾಳಿದ್ದು, 'ಗಾಂಧಿ' ಎಂಬ ಅಡ್ಡ ಹೆಸರಿನವರು ಗಾಂಧಿಯನ್ನು ಒಂದು ಕಾರ್ಟೂನನ್ನಾಗಿ ಮಾಡಿದ್ದು, ಸತ್ಯಾಗ್ರಹದ ಸಂಕೇತವಾಗಿದ್ದ ಗಾಂಧಿ ಟೊಪ್ಪಿಗೆ ದುಷ್ಟ ದುರಾಗ್ರಹಿಗಳ ತುರಾಯಿಯಾದದ್ದು, ಇಂದು ಸಾಮ್ಯವಾದ, ಬಂಡವಲುವಾದಗಳು ಅಪ್ರಸ್ತುತವಾಗಿ ಮತ್ತೆ ಗಾಂಧಿವಾದ ಪ್ರಸ್ತುತವಾಗತೊಡಗಿದ್ದು -ಇವೆಲ್ಲ ಇಂಡಿಯಾದ ಅನೇಕ ಭಾಷೆಗಳ ಸೃಜನಶೀಲ ಸಂವೇದನಾಶೀಲ ಮನಸ್ಸುಗಳಲ್ಲಿ ಕಾಲಕಾಲಕ್ಕೆ ಅವರವರ ಭಾವಕ್ಕೆ ಅವರವರ ದರುಶನಕೆ ತಕ್ಕಂತೆ ಸಾಹಿತ್ಯ ಕೃತಿಗಳಾಗಿ ರೂಪುಗೊಂಡಿವೆ.

ಆಧುನಿಕ ಕನ್ನಡ ಕಾವ್ಯ ತನ್ನ ಅನೇಕ ಮಜಲುಗಳಲ್ಲಿ ಗಾಂಧೀಜಿಯನ್ನು ಕಂಡರಿಸಿದ ದಾಖಲೆ ಈ ಕವನ ಸಂಕಲನ: **ಗಾಂಧಿ ಎಂಬುವ ಹೆಸರು**. ಗಾಂಧೀಜಿಯ ೧೨೫ನೆಯ ಹುಟ್ಟು ಹಬ್ಬದ ನೆವದಿಂದ ಹೊರತರಲಾದ ಈ ಕೃತಿ, 'ಗಾಂಧಿ' ಎಂಬ ವ್ಯಕ್ತಿಯನ್ನು ಕುರಿತ ಕವನಗಳ ಗುಚ್ಛ ಎಂಬುದಕ್ಕಿಂತ, 'ಗಾಂಧಿ' ಎಂಬ ಸಂಕೇತದೊಂದಿಗೆ ಇಂಡಿಯಾದ ಪ್ರಜ್ಞೆಗಳು ಹೊಂದಿರುವ ಸಂಕರ್ಷ-ಸಂಘರ್ಷಗಳ ಸಮೂಹವಾಗಿದೆ.

*

೧೯೨೦ರ ಸುಮಾರಿನ ನವೋದಯ ಕಾಲದಿಂದ ಇವತ್ತಿನ ದಲಿತ/ಬಂಡಾಯ ಸಾಹಿತ್ಯದವರೆಗೂ ಈ ಸಂಕಲನದ ಬೀಸು ಇದೆ. ನವೋದಯದವರು ಗಾಂಧೀಜಿಯನ್ನು ಹತ್ತಿರದಿಂದ ಕಂಡವರು; ಗಾಂಧೀಜಿಯೊಂದಿಗೆ ಒಡನಾಡಿದವರು. ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲುಗೊಂಡವರು. ಈ 'ಭೌತಿಕ' ಸ್ಪರ್ಶದಿಂದಾಗಿ ಈ ಕಾಲದ ಕವಿಗಳು ಗಾಂಧೀಜಿಯನ್ನು ಪ್ರಾಮಾಣಿಕವಾದ ಭಾವಾತಿರೇಕದಿಂದ ಚಿತ್ರಿಸಿದ್ದು ಸಹಜ. ಅಂದಿನ ನಾಯಕ ಗಡಣದಲ್ಲಿ ಕಾವ್ಯಕ್ಕೆ 'ವಸ್ತು'ವಾಗಬಲ್ಲವರು ಗಾಂಧೀಜಿ ಒಬ್ಬರೇ ಎಂಬುದೇ ಗಾಂಧೀಜಿಯ ವೈಶಿಷ್ಟ್ಯ.

೧೯೪೮ರ ಗಾಂಧೀಜಿಯ ಕೊಲೆ ದೇಶದ ಬದುಕಿಗೆ ಒದಗಿದ ಒಂದು ರುದ್ರ-ನಾಟಕೀಯ ತಿರುವು. ಅಲ್ಲಿಯವರೆಗೆ 'ಗಾಂಧಿ ಅಂದರೆ ಇಂಡಿಯಾ' ಎಂಬಂತಿದ್ದ ಸಮೀಕರಣದ ಸೂತ್ರ ಹರಿದು ಹೋಗಿ 'ಗಾಂಧಿ' ಮತ್ತು 'ಇಂಡಿಯಾ' ನಡುವಿನ ಅಂತರ ಹೆಚ್ಚಾಗುತ್ತಲೇ ಹೋಯಿತು. ಗಾಂಧಿ ನಂಬಿದ ಮೌಲ್ಯಗಳೆಲ್ಲ ಎಮರ್ಜೆನ್ಸಿಯಲ್ಲಿ ಅದೇ ಹೆಸರಿನ ಮತ್ತೊಬ್ಬ ವ್ಯಕ್ತಿಯಿಂದ ಧ್ವಂಸಗೊಂಡಾಗ ಗಾಂಧಿ, ಆ ತುದಿಯಲ್ಲಿ ಮೌನವಾಗಿ ರೋದಿಸುತ್ತಿದ್ದ ವ್ಯಂಗ್ಯಮೂರ್ತಿಯಾಗಿಯೇ ಕನ್ನಡದ ಕವಿಗಳಿಗೆ ಕಂಡರು.

ಕನ್ನಡದ ಕವಿಗಳು ಗಾಂಧಿಯನ್ನು 'ವ್ಯಕ್ತಿ'ಯಾಗಿ ಕಂಡದ್ದಕ್ಕಿಂತ ಹೆಚ್ಚಾಗಿ ಮೌಲ್ಯಗಳ 'ಸಂಕೇತ'ವಾಗಿ ಕಂಡದ್ದೇ ವಿಶೇಷ. ಅಥವಾ ಸಮಷ್ಟಿಯ ಎಲ್ಲ ಹತಾಶೆ, ನೋವು, ರೊಚ್ಚು, ಪಾಪ-ಪ್ರಜ್ಞೆಗಳಿಗೆ 'ಗಾಂಧಿ' ಒಂದು ಅಭಿವ್ಯಕ್ತಿಯ ಮಾರ್ಗವಾಗಿದ್ದರು ಎನ್ನಬಹುದೇ?

*

ಅನೇಕ ಆಕರಗಳಿಂದ ಇಲ್ಲಿಯ ಕವನಗಳನ್ನು ಆರಿಸಿಕೊಳ್ಳಲಾಗಿದೆ. ನಮ್ಮ ವಿನಂತಿಯನ್ನು ಮನ್ನಿಸಿ ನಾಡಿನ ಕವಿಗಳೆಲ್ಲ ನಮಗೆ ಸಹಕಾರ ನೀಡಿದ್ದಾರೆ. ಅವರೆಲ್ಲರಿಗೂ ನಮ್ಮ ವಂದನೆ. ಇಂಥದೊಂದು ಸಮಯೋಚಿತ ಅಂಥಾಲಜಿಯ ಸಂಪಾದಕರಾಗುವ ಅವಕಾಶ ಕಲ್ಪಿಸಿಕೊಟ್ಟ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಿಗೆ ಮತ್ತು ಸದಸ್ಯರಿಗೆ ನಾವು ಕೃತಜ್ಞರು.

ಬೆಂಗಳೂರು
ಜನವರಿ ೩೦, ೧೯೯೮

ಚಂದ್ರಶೇಖರ ಪಾಟೀಲ
ಶಶಿಕಲಾ ವೀರಯ್ಯಸ್ವಾಮಿ

೩೩೦ ೩೩೧

ಪರಿವಿಡಿ

ಭಾಗ - ೧ : ಸರ್ವೋದಯ

ಭಾಗ - ೨ : ಸಮನ್ವಯ

ಗಾಂಧಿ ಎಂಬುವ ಹೆಸರು

ಭಾಗ - ೧ : ನವೋದಯ

ಇನ್ನಿನಿಸು ನೀ ಮಹಾತ್ಮಾ ಬದುಕಬೇಕಿತ್ತು!

ಇನ್ನಿಸಿಸು ನೀ ಮಹಾತ್ಮಾ ಬದುಕಬೇಕಿತ್ತು!
ಈಗ ಭಾರತಕತ್ಯಗತ್ಯವಿದೆ ನಿನ್ನ;
ಬಿರುಗಾಳಿಗೊಲೆವ ಹಡಗಂತಿಹುದದಾಸತ್ತು,
ನಿನ್ನ ಹೊರತಾರೊಯ್ಯ ರೇವಿನೊಳದನ್ನ?

ಹಿಮನಗವೊ ನಿನ್ನಚಲ ವಿಮಲ ಭಗವದ್ಭಕ್ತಿ,
ಜಗವನಪ್ಪುವ ವಾರ್ಧಿಯೆನೆ ಜಗತ್ಪ್ರೀತಿ,
ನಿನ್ನ ಸೂರ್ಯಾತಪಕಭಿನ್ನಮಾತ್ಮಿಕ ಶಕ್ತಿ-
ಕಾದುವೈ ನಮ್ಮನೀವರಮೇಕ ರೀತಿ!

ಸ್ವಾರ್ಥಪರರಾಗಿಹೆವು, ದೇವರಿಲ್ಲೆಮಗಿಂದು
ಸೋದರತೆ ಇಲ್ಲ, ಮುಂದಿನದಿಲ್ಲ ಗೊಡವೆ;
ಧರ್ಮಬಾಹಿರರೆಮ್ಮನೆತ್ತಲಿನ್ನಾರೆಂದು
ತೋಚದೆ ಮಹಾತ್ಮಾ ನಿನಗಿಂತು ಮೊರೆಯಿಡುವೆ-

ಗಾಳಿ ಕಾಣದೆ ಬೀಸಿ ಉಸುರುಗೊಳಿಪಂತೆ,
ತಾರ ನವಜೀವನವ ನಮ್ಮನುಳಿಪಂತೆ!

- ಎಂ. ಗೋವಿಂದ ಪೈ

ಸಾಧು ಗಾಂಧಿ

ಇಂದ್ರಿಯಂಗಳ ಜಯಿಸಿ ಚಿತ್ತಶುದ್ಧಿಯ ಬಯಸಿ
ಲೋಭಮಂ ತ್ಯಜಿಸಿ ರೋಷವ ವರ್ಜಿಸಿ।
ಸರ್ವಸಖ್ಯವ ಭಜಿಸಿ ತೃಪ್ತತೆಯನಭ್ಯಸಿಸಿ
ಸತ್ಯಪಾಲನೆಯೊಂದ ಮನದೊಳಿರಿಸಿ।
ಕಾಯಕಷ್ಟವ ಸಹಿಸಿ ವೈರಿಗಣಮಂ ಕ್ಷಮಿಸಿ।
ಸರ್ವಸಮತೆಯ ಗಳಿಸಿ ಶಮವನರಸಿ।
ಸ್ವಾತ್ಮ ಶಿಕ್ಷಣಮೇ ಸ್ವರಾಜ್ಯಮೆನ್ನುತ ವಚಿಸಿ
ದೇಶಸೇವೆಯನೀಶಸೇವೆಯೆನಿಸಿ॥
ಸಾಧುವರವೃತ್ತಿಯಂ ತನ್ನೊಳೇ ಜಗಕೆ ತೋರಿ।
ಐಹಿಕಾರ್ಥಗಳಾರ್ಥ್ಯಮಂ ವಿಶದಬಡಿಸಿ।
ಪಾಶ್ಚಾತ್ತ್ಯ ಜನಕಮತಿ ವಿಮಲ ನೀತಿಯನು ಪೇಳ್ವಾ।
ದೈವ ಸಂಪನ್ಮಾರ್ಗದರ್ಶಕಂ ಗಾಂಧಿಯಲ್ತೆ॥

– ಡಿ.ವಿ.ಜಿ

ಗಾಂಧಿಯವರ ದರ್ಶನ

ಇಂದು ನಮ್ಮ ಮಹಾತ್ಮ
ಗಾಂಧಿಯನು ನೋಡಲಿಕೆ
ಬಂದೆವಿಲ್ಲಿಗೆ ಲೋಕ
ಬಾಂಧವನ ದರುಶನಕೆ.

ಜನದ ಸೇವೆಯಲ್ಲಿ ಮೆಯ್
ಸೋತವನೆಂದರು.
ಅನುಮಾನ ಬರಿದು ಇದು,
ಭೀತಿ ಬಹುಬರಿದು.

ಸೋತವನ ಮೆಯ್ಯೆ ಇದು?
ಅಲಸಿದನೆ ಇವನು?
ಈತ ಸೋತಿಹನೆನಲು
ಗೆಲಿದವರು ಎಲ್ಲಿ?

ಎಳೆಯ ಮಗುವಿನ ಮೊಗದ
ನಗೆಯಿಹುದು ಮೊಗದೆ;
ಇಳೆಯರಸರಿಗೆ ಬರದ
ಬಗೆಯ ಗಾಂಭೀರ್ಯ;

ಅನುಜರೊಡನಾಡುತಿಹ
ಹಿರಿಯನುರುಸರಸ;
ಮನುಜರಾಟವ ನೋಡಿ
ಕರಗಿರುವ ಕರುಣೆ;

ತಾಪಸ ವೃತ್ತಿಯಲಿ
ಘನಿಸಿರಲು ತೇಜ
ದೀಪವೋ ದೇಹವೋ
ಎನಿಸುತಿಹ ಒಡಲು.

ಸೋಲೆಂಬ ಮಾತುಂಟೆ
ಕರುಮವೀರನಿಗೆ?
ಮೇಲಮೇಲ್ಮೇಲಲ್ಲೆ
ಹರಿಯ ದಾಸರಿಗೆ?

ಹರಿಯ ಹಿರಿಯಾಳಿವನು
ಗಾಂಧೀ ಮಹಾತ್ಮ
ಕರುಣಿಪನು ಹರಿ ತನ್ನ
ಬಾಂಧವಗೆ ಶುಭವ.

ಸಾಕು ಸದ್ಯಕೆ ಸೇವೆ
ಎಂದು ಹರಿ ಇವನ
ಬೇಕೆಂದೆ ಕುಳ್ಳಿರಿಸಿ
ನಿಂದಿಹನು ಕೆಲದೆ.

ಬಿಡುವ ಕೇಡೆಂದೆನುವ
ಮರುಳುತನ ಒಂದು
ಕಡೆಗಿರಲಿ; ಬಂದೆಲ್ಲ
ಎರಗಿ ಹಿರಿಯನಿಗೆ.

ಭರತಮಾತೆಯ ಹರಿಯ
ಕುವರನಿಗೆ, ಹರಿಯ
ಹಿರಿಯ ದಾಸಗೆ, ಬಂದು
ಇವನಿಗಿಂದೆರಗಿ.

ಇವನ ಧರಿಸಿದ ಭೂಮಿ
ಪುಣ್ಯಭೂಮಿ ಇದು;
ಇವನ ನೋಡಿದ ನಾವು
ಧನ್ಯರಾವಿಂದು.

– ಮಾಸ್ತಿ ವೆಂಕಟೇಶ ಅಯ್ಯಂಗಾರ್

ಗಾಂಧೀಸ್ತವ

೧

ನೆನೆವೆನೆಂದಿಗು ಪುಣ್ಯಜಾತನ ನಮ್ಮ ನಾಡವಿಧಾತನ
ಜನಪದ ಸ್ವಾತಂತ್ರ್ಯದಾತನ ಸಕಲ ಹೃದಯೋಪೇತನ
ನೆನೆಯುತಚ್ಚರಿಗೊಳುವೆ ಮಹಿಮನ ದಿವ್ಯಮಂಗಳ ಚರಿತೆಗೆ
ಕೊನೆಯ ಕೇಡಿಗೆ ದುಗುಡಪಡುವೆನು ರಿಕ್ತವಾದೀ ಜನತೆಗೆ

೨

ನಡೆಸುವೊಲೆ ನಡೆವಂಥ ಕುರಿಗಳೆ ನೀವು ಭಾರತಪುತ್ರರೇ
ಪಡೆದುದನು ಪಡುವಂಥ ದುರ್ಬಲ ದೈವದೇಹ ನಿರೀಹರೇ
ನಡೆಯಿರೀ ಬಳಿ ನೋಡಿಕೊಳ್ಳಿರಿ, ಪಡಿನೆಳಲನೆನ್ನಿರವೊಳು
ಬಿಡಿರಿ ದೈನ್ಯವನೆಂದು ಸಾರಿದ ಈತನಲ್ಲವೆ ತೀರ್ಥನು

೩

ಎನಿತು ತಾರೆಗಳಿರಲಿ, ಇರುಳೀ ಚಂದ್ರನಿಂ ಜ್ಯೋತಿಷ್ಮತಿ
ಅನಿತೆ ತಮವಿಡಿದೆಮ್ಮ ನೆಲವೀ ಗಾಂಧಿಯಿಂ ಜ್ಯೋತಿಷ್ಮತಿ
ಮನಕೆ ನಿಲುಕದ ದಿವ್ಯ ದೀಪ್ತಿಯ ಕೊಂಡು ಮೈಯೊಳು ಪಳಗಿಸಿ
ತನಿವೆಳಗ ನಮ್ಮೆಡೆಗೆ ಚೆಲ್ಲಿದ ಸೌಖ್ಯನಿವನೆಮಗಿನಿಯನೈ

೪

ತನ್ನ ನಿಜದೊಳು ತಾನು ನಡೆಯಲು ಲೋಕ ತನ್ನಂತಪ್ಪುದು
ಉನ್ನತಿಯ ಬಯಸುವೊಡೆ ವಿಷಯದ ನಂಟು ಸಾಧಕಗೊಪ್ಪದು

ಬನ್ನಗಳ ಬೆಲೆಯಿಂದಲಾತ್ಮದ ಸಂಪದವ ವಿಧಿಯಳೆವನು
ಎನ್ನುವೀ ಸಾಮಾನ್ಯ ನೀತಿಯಿನಾದನಿವನಸಮಾನನು

ತಾಳ್ಮೆಯಿಂ ಕ್ರೌರ್ಯವನು ಶಾಂತಿಯಿಂ ಕೋಪವನು
ಸತ್ಯದಿಂತನೃತವನು ಗೆಲ್ಲಬಯಸಿ
ಜಾಲ್ಮತೆಗೆ ಜಾಲ್ಮತೆಯನೊಡ್ಡಿ ಸೆಣಸುವ ರೂಢ
ರಾಜನೀತಿಯನೊಡೆದನೀ ಸಾಹಸಿ
ನಲ್ಮೆಗುರಿಯನು ಮುಟ್ಟೆ ಪೊಲ್ಲಮೆಯ ಬಳಿಸಲ್ಲ
ಭಾವದಂದದಿ ಬದುಕು ಬೇರೆಯಲ್ಲ
ಮೇಲ್ಮೆಯನು ಸಾಧಿಪೊಡೆ ನೇರವಿರಲೆಮ್ಮ ನಡೆ
ಎಂದಿವನ ಶಿವಛಲವನಾವ ಬಲ್ಲ?

೬

ಕೇಡಿಗೆ ಕೇಡೆಣಿಸುವ ಬಗೆ ದೇವಗು ತಪ್ಪದೆನೆ
ಹಾಡುವೆವೆಂಟವತಾರದ ಗೋವಿಂದನ ಭವವ
ಈಡಾಗದೇ ಈತರ ಖಲ ಶಾಪಕೆ ಮಾತಪಸಿ
ನೀಡಿದಭಯವ ಲೋಕಕೆ ಈತನಿಗಾವನೆಣೆ

೭

ಹೊಗಳಲೆ ಹರಿಜನ ಶಾಪವಿಮೋಚನ ಕಾರ್ಯವ
ಹೊಗಳಲೆ ನಾಡಿನ ನೈಚ್ಯವನಳಿಸಿದ ಕಾರ್ಯವ
ಹೊಗಳಲೆ ನರಪಶು ಮಾನವನೆನಿಸಿದ ಕಾರ್ಯವ
ಹೊಗಳಿಕೆಗೂ ಮಿಗಿಲೀತನ ಕಲ್ಯಾಣಕೃತಿ

೮

ಹದಗೆಡುವೊಲು ನರಲೋಕದೊಳಾಸುರಶಕ್ತಿಯ ತುಂಬಿ
ಅದ ತೂಗಲು ದುರ್ಬಲ ಶಿವ ಸದ್ಬಲನೊಬ್ಬನ ತಂದು
ಒದಗುತ್ತಿರಲೀ ತೂಕಕ್ಕೆ ಶಿವ-ಅಶಿವದ ಸಮತುಲನೆ
ವಿಧಿಯೀತನನೊಯ್ದನಲಾ ಏನೀ ವಿಷಮವಿಲಾಸ।

೯

ತಕ್ಕದೆ ಉಳಿಯುವುದೆನ್ನುವ ನಿಯಮದ
ಪಾಶವ ಲೋಕದೊಳನ್ವಯಿಸಿ
ತಕ್ಕವನೆನಿಸದ ಮಾನವ ಶಿಶುವನು
ಜೀವಶಕ್ತಿ ಪೊರತರದಂತೆ
ಉಕ್ಕಿನ ಯುಗದೊಳು ಯಾಂತ್ರಿಕ ಬಲವ-ದ್ಧರ್ಮವ
ಹಿಂಚಿಸಿ ಮುಂಬರಿಯ
ಸೊಕ್ಕಿದವರು ಬಲುನಕ್ಕು ಜರೆಯುವೀ
ಗಾಂಧೀಧರ್ಮವ ತಂದಿಹುದೋ?

೧೦

ಮಹಾತ್ಮನುದಿಸುವ ಮುನ್ನೀ ನಾಡಿನ
ಬಾಳ್ವೆಯ ತರಬೇರೆ
ಇಹಯಾತ್ರೆಯನಿವ ಮುಗಿಸುತ ಮರಳಲು
ಇದರೀ ತೆರಬೇರೆ
ಮಹಾನುಭಾವನ ಸಮ್ಮೃದ್ಧರುಚಿಯೀ
ಜೀವನ ರಸ ಬೆರೆತು
ಮಹಾಂತವಹುದೀ ಭಾರತ ಜೀವನ
ಸೌಹೃದ ರಸ ರುಚಿರ.

– ಪು.ತಿ. ನರಸಿಂಹಾಚಾರ್ಯ

ಆಶ್ಚರ್ಯದದ್ಭುತವು!

ಆಶ್ಚರ್ಯದದ್ಭುತವು ಧರೆಯೊಳಾಯ್ತು!
ನಿಶ್ಶೇಷ್ಟ ಜೀವನವು ಸಿಡಪೆದ್ದಿತು!!।

ಆಸುರೀ ಶಕ್ತಿ ಬದುಕನು ಹಿಳಿಯಲಾತ್ಮವಿ-
ಶ್ವಾಸವೆಂಬುದು ಜನತೆಯಲಿ. ತೋರದಿರಲು॥
"ಏಸುಕಾಲವು ದಾಸ್ಯದಲಿ ಬೇಯಲಿನ್ನು? ನನ-
ಗಾಸೆಯಿಲ್ಲವೆ?" ಎಂದು ನಾಡೊರಲುತಿರಲು ॥ ೧

ಜ್ಯೋತಿ ಜನಗಣಮಧ್ಯದಿಂದುದಯಿಸಿತು ಪರಂ-
ಜ್ಯೋತಿ ಅವತರಿಸಿತೀ ಭಾರತದಲಿ॥
ಚೇತರಿಸುತರಿತು ಬೆಳಕಿನೇಳಾತ್ಮ ಬಲವನಿ-
ನ್ನೇತರದು ಭಯವೆಂದು ಜನವೆದ್ದಿತು . ॥ ೨

ಬೆಳಕು ಹೊಸ ಬೆಳಕು ಪಸರಿಸಿತೆಲ್ಲಿಯೂ ವಿಶ್ವ-
ದೊಳು, ಜನವು ಕಂಡು ವಿಸ್ಮಯಗೊಂಡಿತು॥
ಅಳಿವಸದ್‌ಬಲಕೆ ತಪ್ಪಿದುದಲ್ಲವೆಂದು ನಿ-
ರ್ಮಳಾಂತರಂಗದಲಿ ನಲಿನಲಿದರು! ॥ ೩

ಬೆಳಕು ನಿಷ್ಕ್ರಿಯವಲ್ಲ, ಬೆಳಕಸತ್ ಕ್ರಿಯವಲ್ಲ;
ಬೆಳಕು ಸ್ವಾತಂತ್ರ್ಯ ಮಂತ್ರವನುಸಿರಿತು॥
ಬೆಳಕು ಚೈತನ್ಯವನು ಜೀವನದೊಳೊದವಿಸಿತು
ಬೆಳಕು ಬಾಳಿಗೆ ಮಂಗಲವ ತಂದಿತು! ॥ ೪

ಈಗಲೂ ಮತ್ತೆ ಮುಂದಾವಾಗಲೂ ನಿನಗೆ
ಬಾಗುವೆನು ನಿನಗೆನ್ನನೊಪ್ಪಿಸುವೆ, ಗುರುವೇ
ಯೋಗಸಂಸಿದ್ಧ ನೀನೆನ್ನನಮರಜ್ಯೋತಿ,
ತ್ಯಾಗಪಥದಲಿ ನಡೆಯಿಸಾಪ್ತ ಬಂಧೂ ॥ ೫ ॥

- ಸಾಲಿ ರಾಮಚಂದ್ರರಾಯ

ಮಹಾತ್ಮನಿಗೆ

-ಪಲ್ಲವಿ-

ನಮನವಿದೋ, ನಮನವಿದೋ, ನಮನ ಸಹಜಯೋಗಿ
ಸಮತೆಗಾಗಿ ಬಾಳ್ವೆಯನೆ ಬೇಳ್ದ ನವವಿರಾಗಿ!

೧

ಕತ್ತಲಲಿಯು ಗುರಿಯ ದಾರಿ ಕಾಂಬ ಕಣ್ಣು ನಿನ್ನದೊ,
ತತ್ತ್ವಮಾತೆಯಶ್ರುತ ರವ ಕೇಳ್ವ ಕಿವಿಯು ನಿನ್ನದೊ,
ವಿಗಡ ರಜದೊಳಿದ್ದು ಸೊವಡು ತಗಲದ ಮನ ನಿನ್ನದೊ,
ಜಗದ ಸೌಖ್ಯಕೆಂದೆ ಬೆರಳನೆಣಿಪ ಬುದ್ಧಿ ನಿನ್ನದೊ.....
ನಮನವಿದೋ, ನಮನವಿದೋ, ನಮನ ಸಹಜಯೋಗಿ!

೨

ನಿನ್ನ ಉಸಿರದೊಂದೊಂದೂ ಜಡಕೆ ಜೀವವಿತ್ತಿತೊ,
ನಿನ್ನ ಧಮನಿಮಿಡಿತವಹಹ ಚೈತನ್ಯವ ಬಿತ್ತಿತೊ,
ನಿನ್ನ ವಾಣಿ ದಿಗ್‌ದೇಶಕೆ ನನ್ನಿಯ ನೆಲೆ ತಿಳುಹಿತೊ,
ನಿನ್ನ ಗೆಯ್ಮೆ ಸಾವಜೀವಜಂಗುಳಿಯನ್ನುಳುಹಿತೊ.....
ನಮನವಿದೋ, ನಮನವಿದೋ, ನಮನ ಸಹಜಯೋಗಿ!

೩

ಮೈತ್ರಿಯಿಂದೆ ಶತ್ರುಗಳನು ಸೋಲಿಸಿರುವ ವೀರ,
ಮೃತ್ಯುವನೂ ಮಿತ್ರನಂತೆ ಸ್ವಾಗತಿಸಿದ ಧೀರ,

ನಿನ್ನ ನೌಕೆ ನಂಬಿದರನು ತಲ್ಪಿಸಿತ್ತೈ ತೀರ
ನೀನು ನಡೆದ ದಾರಿಯದೇ ಸತ್ಯಧರ್ಮ ಸಾರ....
ನಮನವಿದೋ, ನಮನವಿದೋ, ನಮನ ಸಹಜಯೋಗಿ!

ಳ

ಬಲುಮೆ- ಮೋಸಗಳನು ಹಣಿಯೆ ಕಲಹಗೈದೆ ರಾಜ!
ಕಲಿಸಿದೆ ಜೀವನವ ಚೆಲ್ವುಗೊಳಿಪ ಕಲೆಯನೋಜ!
ನಿಲಿಸಿದೆ ನಾಡಿಗರ ಹೃದಯದೊಳಗೆ ದಿವ್ಯತೇಜ-
ಸಲಿಪುದಂತು ಶ್ರದ್ಧಾಂಜಲಿ ಎಲ್ಲರಂತೆ ಸಾಜ!......
ನಮನವಿದೋ, ನಮನವಿದೋ, ನಮನ ಸಹಜಯೋಗಿ!

ನಮನವಿದೋ, ನಮನವಿದೋ, ನಮನ ಸಹಜಯೋಗಿ!
ಸಮತೆಗಾಗಿ ಸರ್ವಸ್ವವ ತೆತ್ತ ಮಹಾತ್ಯಾಗಿ!

– ಆನಂದಕಂದ

ನೂರು ವರ್ಷಾತು (ಶಕಪುರುಷನ ಶತಮಾನ)

ಅರ್ಥಕಾಮುಕರ ಬದುಕಿನೊಳಗ
ಮುಕ್ತ-ಭಕ್ತಿಯ ಬಾಳು ಬೆಳಕಾಗಿ ಬಂತು
ಅದು ನವಯುಗ ಧರ್ಮ
ಅದರ ಅಗಸೀ ಬಾಗಿಲ ತೆರೆದ
ಜೀವ ನೀನು.

ಅಲ್ಪಾತ್ಮರಾದ ಮಂದೀಯೊಳಗ
ಮಹಾತ್ಮನಾಗೋದು, ಅಷ್ಟು ಕಷ್ಟೇನೂ ಅಲ್ಲಾ!
ಹಿಂಸಾ ವೀರರ ಸಂದೀಯೊಳಗ
ಅಮರನಾಗೋದು, ಅಷ್ಟು ಸುಲಭನೂ ಅಲ್ಲಾ!
ನಿನ್ನ ಮಹಾತ್ಮ್ಯ ಒಪ್ಪಿಕೊಂಡು
ಸಣ್ಣವರು ದೊಡ್ಡವರಾದರು
ಹಿಂಜರ್‍ಯೋ ಅವರು, ಮುಂದಾಳಾದರು
ನೀನು ರಾಮನ್ನ ನೆನಿಸಿ, ರವಿ ಆದಿ.
ನಾವು ರಾಮಾಯಣ ನೆನಿಸಿ, ಕವಿ ಆದಿವಿ
ಇದು ಪವಾಡ. ಮನಮೋಹನದಾಸ! ಶಕಪುರುಷ ನೀನು

ಬಾಳು ಸುಲಿದವರಿಗೆ ಬಾಳೀಹಣ್ಣು
ಬದುಕು ಸುಲಿದವರಿಗೆ ಬಂಗಾರ ರುಂಡ
ಹಿರಣ್ಯಗರ್ಭ!
ಬಂಗಾರ ಮುಟ್ಟಿದ್ರ ಮೈಲಿಗಿ, ಶೃಂಗಾರ ಕೆಟ್ಟರ ಸೂತಕ
ಅಸ್ಪೃಶ್ಯತಾ ಇರೋವರಿಗೂ ನಿನ್ನ ಹೆಸರು ಮರೀಲಾರರು ಜನ

ಶುದ್ಧಿ ಅಂಬೋದು·ಬುದ್ಧೀ ಬಯಲಾಟಲ್ಲಾ
ಭಾವದ ಒದ್ದಾಟಲ್ಲಾ
ಅಸ್ಪೃಶ್ಯರ ಉದ್ಧಾರಕ್ಕಿಂತ, ಅಸ್ಪೃಶ್ಯತೆಯ ಉಪಸಂಹಾರಬೇಕು
ಹೊಸಾ ಸೃಷ್ಟಿಗೆ!
ಮನಸು ಹೊಲಸೋ, ಮನುಷ್ಯಾ ಹೊಲಸು!
ಹಳೇ ಮುಚ್ಚಾಟ ಮುಗಿದು
ಹೊಸಾ ಮುಚ್ಚಾಟ ಸುರೂ ಆಗಲಿ
ನಿನ್ನ ನೂರರ ನೆನಪಿನ ಈ ಶತಮಾನಕ್ಕ.
ಹೊಲಸು ಇರೋವರಿಗೆ ಹೊಲೆತನಾ
ಹ್ಯಾಂಗ ಹೋದೀತು?
ನಿನ್ನ ನೆನಪು ಪ್ರಾಯಶ್ಚಿತ್ತದ ಜಳಕ
ಪೂರ್ವ ತಾಪ, ಪಶ್ಚಾತ್ತಾಪ
ಏನು ಅತ್ತಾವು,
ಶಿವಾ ಅರಿಯದ ಶವದ ಮುಂದ?

ಮಸಣದಾಗ ಮನೀ ಕಟ್ಟಿದಮ್ಯಾಲೆ
ಮತಾ ಬ್ಯಾರೆ ಬೇಕಾಗಿಲ್ಲ.
ಭಾಳ ಹಡಿಯೋದು ಕಾನೂನಿಗೆ ಹೊರ್ತು
ತುರ್ತಿಗೆ ಪಡಿಯೋದು ಮಹಾ ಕಸರತ್ತು
ಹತ್ತರ ಜೋಡಿಗೆ ಒಂದು ಮುತ್ತು ಹಡೆವಳು
ಭಾರತಮಾತಾ, ಹಿಗ್ಗಿಕೊಂಡಳು
ಹೂವು ಬಿದ್ದಲ್ಲೇ ಬಾಡಿತು, ಗಂಧಾ ದಿಗ್ದೇಶಕ್ಕೆ ಹರಡಿತು
ಭಾರತಾ ಜೀವಂತಾ ಅನಿಸಿಕೊಂಡಿತು.
ನಾವು ಏನ ಮರತರೂ
ನೀನು ಬಾಳಿದೀ ಅಂತ ನಾವು ಬದುಕಿದ್ದೀವಿ
ಇದನ್ನ ಮರಿಯೋಹಾಂಗಿಲ್ಲಾ.
ಜಡಹಿಡಿದವರು ಹಿಂಸಾದ ಬಾಂಬು ಹಾರಿಸಿದರು
ಚೈತನ್ಯವಿಡಿದವರು ಅಹಿಂಸಾದ ಬಾಂಬು ಹಾರಿಸಿದರು
ಇನ್ನೂ ಅದರದು ಹೊಗಿ ಹಾರಿಲ್ಲಾ

ಬೆಂಕಿ ಆರಿಲ್ಲಾ.
ಉಳಿದ ಬೂದಿಯೊಳಗ ಏನೇನದನೋ
ಯಾರು ಬಲ್ಲರು?

ಹೊಸಾ ರೋಗ ಹೊಸಾ ಔಷಧ
ಹೊಸಾ ವೈದ್ಯರು ಬಂದs ಬರ್ತಾರ.
ಸತ್ತಾವ್ರ ಸಾಕ್ಷೀ ಥಗ್ಯೋದು ಹ್ಯಾಂಗ?
ಕೋಟಿ ಕೋಟಿ ಮರೀತಾವ
ಲಕ್ಷದಾಗ ಉಳಿಯೋವು ನಾಕಾರು ಹೆಸರು
ರಾಮ್ಮಾ-ಧರ್ಮಾ ಮತ್ತೆ ನೆನಪಾದರು
ಬುದ್ಧಾ, ಜಿನಾ, ಬೆಳಕಿಗೆ ಬಂದರು
ಹಿಂದಿನ ಇತಿಹಾಸ, ಇಂದಿನ ಇತಿಹಾಸ
ಒಂದs ಸೂತ್ರಾ ಆತು.
ಹರಿಶ್ಚಂದ್ರನ ಮಸಣ,
ಸಾಕ್ರೇಟೀಸನ ಜೇಲು-ವಿಷ,
ಜೇಸಸ್ಸನ ಶಿಲಬಿ
ಮಾಯದ ಗಾಯದ ಮ್ಯಾಲೆ ಹೊಸಾ ಬರೀ
ಮಾರ್ಟಿನ್ ಲುಥರ್ ಕಿಂಗ.
ನಿಮ್ಮ ಎಲ್ಲಾರ ಸಮಾಧಿ
ಮಹಾತ್ಮ್ಯದ ಸ್ಮಾರಕಾದವು.
ಎಲ್ಲಾರೂ ಅಲ್ಲೇ
ತಲೀ ಮಣಸ್ತಾರ
ಹೂ ಏರಸ್ತಾರ
ಕೃತಾರ್ಥರಾಗ್ತಾರ.
ಡಾಯರೀ ಒಳಗ ಬರಕೋತಾರ
ಬಂಗಾರ ದಿನಾ- ಅಂತ
ಮಣ್ಣಿನ ಹೊಟ್ಟೀಯೊಳಗs
ಚಿನ್ನದ ಸಮಾಧಿ
ಮಹಾತ್ಮರು ಮುಟ್ಟಿದ್ದೆಲ್ಲಾ ಚಿನ್ನಾ

ಅಲ್ಪಾತ್ಮರು ಮುಟ್ಟಿದೆಲ್ಲಾ ಮಣ್ಣು
ಅದಕೈ ನೀ ಬಂದು, ಇವರಿಗೆ
ಕರುಣಿಸಿ ಹೋಗೀ ಕಣ್ಣು-
ಅದೈ ಬಂದೈದ ಪೇಚು!
ಕುರುಡರು ಎಡವಿದರೂ ನಡೆದೀತು
ಕಣ್ಣು ತೆರೆದಮ್ಯಾಲೆ ಧೈರ್ಯದ ಹೆಜ್ಜೆನೂ
ತತ್ತರಸತೈ ಇರತೈದ
ಆದರೈ ನಿನ್ನ ಹೆಸರು ಬಾನುಲಿ ಬಿತ್ತರಸತೈ ಇರತೈದ
ಅವನ್ನ ಕೇಳಿದವರ ಕಣ್ಣಮುಂದೆ ಚಿತ್ತರಸತೈ ಇರತೈದ
ಹೊತ್ತ ಸೂರ್ಯಾ ಎಂದಾರೆ ತಣ್ಣಗಾದಾನು
ಹೊತ್ತ ಜ್ಯೋತಿ ಬಿಸೀ ಉರೀದೈ ಬೆಳಕೈ ನೀಡ್ತೈದ.
ಭಾರತದ ಭಾರ ನೀ ಇಳಿಸಿದೀ
ನಮಗ ನಿನ್ನ ನೆನಪಿನ ಭಾರ
ತಪಾ ಅನಸ್ತೈದ; ತಾಪ ಅನಸ್ತೈದ
ಎರಡೂ ತಪ್ಪಿಸಿಕೊಳ್ಳಲಾರಿವಿ
ಗಾಂಧೀ ಯುಗದಾಗ ಉಸಿರಾಡಿಸಿದ ಮಂದಿ ನಾವು
ಬಾಳಿದ್ದು ಪುರಾಣಾತು, ಬದುಕೋದು ಇತಿಹಾಸ ಆತು
ಕುಂಟಿಗ್ಯೋ ಕೂರಿಗ್ಯೋ ನಡದೈ ಅದೈ.
ಭಾವೈಕ್ಯ ನಮ್ಮ ಘೋಷ
ರಾಷ್ಟ್ರೈಕ್ಯ ನಮ್ಮ ವತನು
ಮಾನವೈಕ್ಯ ನಮ್ಮ ಮತ
ಮಿದುಳು ಮಿದ್ದಿ, ಒದ್ದಿ, ಮುದ್ದಿ ಆಗ್ತೈದ
ಬುದ್ಧಿ ಶುದ್ಧಿ ಇರದೈ ಖಬರತಪ್ಪಿ ಚೀರ್ತೈದ
ಎಲ್ಲಿಗೆ ಬಂತೋ ಸಂಗಯ್ಯಾ?
ಇತಿಹಾಸ ಸಾರತೈದ ನೂರು ವರ್ಷಾತು ಮಗನೈ ಅಂತ.
ಸಣ್ಣ ಕಣ್ಣಿಗೆ ದೊಡ್ಡ ಸೂರ್ಯ ಕಂಡಾನು
ಸಣ್ಣ ಮನಸ್ಸಿಗೆ ಮಹಾತ್ಮ ಒಪ್ಪಿಗಾಗೋದಿಲ್ಲ.
ಆಡೋದು ವೇದಾಂತ, ಮಾಡೋದು ವ್ಯವಹಾರ

ಈ ತಿರುವು ಮುರುವು ಬುದ್ಧಿಗೆ ಮಂಟ- ಮುಂಡಿಗೆ.
ಕನಕದ ಮಂಡಿಗಿ
ಕನಕಾ! ಸಿಕ್ಕವರಿಗೆ ಶಿವಲಿಂಗ!
ಮಿಕ್ಕವರಿಗೆ ಸಿಪ್ಪಿ-ಬಾಳೀಹಣ್ಣು.

- ಅಂಬಿಕಾತನಯದತ್ತ

ಸ್ವಾತಂತ್ರ್ಯ ಶಿಲ್ಪಿ

ಮರೆವುದೆಂತಾ ನಮ್ಮ ಸ್ವಾತಂತ್ರ್ಯ ಶಿಲ್ಪಿಯಂ
ದಿವ್ಯದಿನದೀ ಶುಭ ಮುಹೂರ್ತದಲ್ಲಿ?

ಮರೆವುದೆಂತಯ್ ಭುವನ ಗೌರವ ಮಹಾತ್ಮನಂ
ಸ್ವಾತಂತ್ರ್ಯದೀ ಸುಪ್ರಭಾತದಲ್ಲಿ?

ಹೆಜ್ಜೆ ಹೆಜ್ಜೆಯನಿಡಿಸಿ ಕೈಹಿಡಿದು ನಡೆಗಲಿಸಿ
ಬಿಡುಗಡೆಗೆ ತಂದ ಆ ತಂದೆಯೆಲ್ಲಿ?

ಎಲ್ಲಿ? ಓ ಅವನೆಲ್ಲಿ? ನಿಚ್ಚವೂ ನಮ್ಮೆದೆಯ
ನಂಜೀಂಟುವಾ ನೀಲಕಂಠನೆಲ್ಲಿ?

ಜನಮನದ ಹಗೆತನದ ರೋಷಹಾಲಾಹಲದಿ।
ಹಾಲುದಿಸಿ ಬರುವಂತೆ ಮೂಡಿ ಬಂದೆ!

ಕ್ರಿಸ್ತ ಬುದ್ಧರ ಮೈತ್ರಿಯಂ ಸಾಧಿಸುತ
ವಿಶ್ವ ಸೇವಕರ ಪಂಕ್ತಿಯಲಿ ನಿಂದೆ!

ಯಂತ್ರ ನಾಗರಿಕತೆಯ ರಾಜಕೀಯದ ಕುಟಿಲ
ತಂತ್ರಕಧ್ಯಾತ್ಮಮಂತ್ರವನು ತಂದೆ!

ಇಂದಿಗುತ್ಸವಕೆಮ್ಮನುಳಿದೆಲ್ಲಿ ಹೋದೆ, ಹೇ
ಸ್ವಾತಂತ್ರ್ಯ ಕನ್ಯೆಯಂ ಪಡೆದ ತಂದೆ?

ಇಲ್ಲಿ ಉತ್ಸವದೊಳವನಿಲ್ಲ ಆ ದೂರದಲಿ
ಕ್ರೋಧಕಾರ್ಪಣ್ಯ ರೋದನಗಳೊಡನೆ

ಕೆನ್ನೀರು ಕಣ್ಣೀರುಗಳ ಹೊನಲ ಗೋಳ್ ನಡುವೆ
ದಾರಿದ್ರ್ಯದೈನ್ಯ ಧನಮದಗಳೊಡನೆ,

ವಾದಿಸುತೆ ಬೋಧಿಸುತೆ ಕರುಣೆಯಂ ಸಾಧಿಸುತೆ
ಭಕ್ತಿಯಿಂ ದೇವನಂ ಪ್ರಾರ್ಥಿಸುತ್ತೆ

ನಿರಶನ ವ್ರತನಿಷ್ಠನಾಗಿಹನು ನೋಡಲ್ಲಿ
ಧರ್ಮ ಶಕ್ತಿಯ ಕೃಪೆಯನರ್ಥಿಸುತ್ತೆ!

ಈಶ್ವರ ಕೃಪಾಬಲದ ಯಾಚನೆಯ ಸಲುವಾಗಿ
ಭೂಮಾತೆ ಕಳುಹಿಸಿದ ದೂತಭಿಕ್ಷು;

ಈ ಲೋಕಮಂ ನಿರ್ನಿಮೇಷವಲೋಕಿಸುವ
ಆಲೋಕ ಋತದೊಂದಲೋಕಚಕ್ಷು;

ಸೃಷ್ಟಿಕರ್ತಂ ಸೃಷ್ಟಿ ತಾನಾಗಿ ಸೃಷ್ಟಿಯೊಳೆ
ಮಡಿಯುತಿರ್ಪುದಕವನೆ ದಿವ್ಯಸಾಕ್ಷಿ.

ಗಾಂಧಿಯೆಂಬಾ ಪೆಸರೆ ನಾಂದಿಯಾಗಲಿ ನಮ್ಮ
ಸ್ವಾತಂತ್ರ್ಯ ಸಂಭ್ರಮಕೆ ಹಾಡು, ಪಕ್ಷಿ!

ಜಯ್! ಶ್ರೀಗಾಂಧಿಗೆ ಜಯ್!
ಜಯ್! ಸ್ವಾತಂತ್ರ್ಯ ಶ್ರೀ ನಾಂದಿಗೆ ಜೈ!
ಜಯ್! ಭಗವತ್ ಕೃಪೆಯಾ ಶ್ರೀಮತ್ ಕರುಣೆಯ
ಚಿರಬಂಧಿಗೆ ಜಯ್!

ಜಯ್! ರಾಷ್ಟ್ರಧ್ವಜಕೆ!
ಜಯ್! ಸ್ವಾತಂತ್ರ್ಯವ ಸಾಧಿಸಿದಾ ವೀರ ಶ್ರೀಭುಜಕೆ!
ಜಯ್! ಸತ್ಯ ಅಹಿಂಸಾ ತ್ಯಾಗ ಸಮರ್ಪಣದಾ ಋತ ಚಿನ್ಮಯ
ನಿಜಕ!

– ಕುವೆಂಪು

ಗುರು ಗಾಂಧೀಜಿ

ನೋಡಲ್ಲಿ! ಕಾಣುತಿದೆ
ದಿವ್ಯ ಸೇವಾಗ್ರಾಮ!
ಭಾರತದ ಋಷಿಬೀಡು
ಪ್ರಾಚೀನ ಪುಣ್ಯತಮ
ಋಷ್ಯಾಶ್ರಮಂ ಹೋಲಿ,
ಶ್ರೇಷ್ಠ ಸಂಸ್ಕೃತಿ ಮೀರಿ
ಸತ್ಯಶಾಂತಿಯ ಸಾರಿ
ನಿಂದ ಪಾವನ ಭೂಮಿ!
ತೀರ್ಥಯಾತ್ರೆಯ ಕೋಟಿ
ಯಾತ್ರಿಕರು ಸಾಲಿಟ್ಟು
ಪುಣ್ಯಮಂದಿರವರಸಿ
ಮಿಂದು ಪಾಪವನೊರಸಿ
ಪೂಜಿಸುವ ಗರ್ಭಗುಡಿ
ದೇವಮಂದಿರವು!

ನೊಂದುಬೆಂದವರಪ್ಪಿ
'ನನ್ನ ಜನ' ಎಂದವನು
ಕರುಣೆ ಕಣ್ಣೀರಿರಿಸಿ
ಅಮರಗಂಗೆಯ ಹರಿಸಿ
ದೀನದಲಿತರ ಸೇವೆ-
ಗೋತು ಬದುಕುವೆನೆಂದು

ತನುಮನವ ಬಲಿಗೊಟ್ಟು
ತಾನು ಬಡತನತೊಟ್ಟ
ಪುಣ್ಯಾತ್ಮ ಬಾಪುವಿನ
ಹುಲ್ಲು ಗುಡಿಸಲು ನೋಡು!
ಭಾರತಿಯ ಪರ್ಣಕುಟಿ!
ತವಸಿಯೊರ್ವನ ಬೀಡು!
ಮುಂದೆ ನಿಂತಿಹನಾರು?
ಅರೆಬೆತ್ತಲಾಗಿಹನು!
ಬಿಳಿಯ ಖಾದಿಯನುಟ್ಟು
ಉದ್ದ ಕೋಲನು ಊರಿ
ಚಿಕ್ಕಮಕ್ಕಳ ಕೂಡೆ
ನಕ್ಕು ಕೆಲೆಯುತಲಿಹನು
ಇವನೆ ಬಾಪೂಜಿ!

ಬಡಜನರ ಹಿತಕಾಗಿ
ಬಾಡಿ ಸುಕ್ಕಿದ ಚರ್ಮ
ಕೋಟಿಜನಗಳ ಕರುಣೆ
ಪ್ರೇಮಪೂರ್ಣ್ಕೆಯ ಹೊತ್ತು
ಕಳಿತಿಹುದು ಹಣ್ಣಾಗಿ,
ತಾತ್ವಿಕರ ಕಣ್ಣಾಗಿ,
ದೀನಜನಗಳ ಆಸೆ
ಬದುಕಿನುಸಿರಾಗಿ!
ಸುಕ್ಕು ಸುಕ್ಕಿನೊಳೆಲ್ಲ
ಉಕ್ಕಿನಿಂತಿದೆ ಚಿಮ್ಮಿ
ಸೂಕ್ಷ್ಮ ಧರ್ಮದ ನಿಲುವು.
ನರೆತಕೂದಲೊಳವಿತು
ಜಗದ ತತ್ತ್ವದಸಾರ
ಸಾರ್ಥಕತೆ ಪಡೆದು
ಧನ್ಯತೆಯ ಸಾರುತಿದೆ.

ನವೆದ ದೇಹದ ಹಿಂದೆ
ನವೆದ ನೋಟದ ಸೌಮ್ಯ
ಜಗದ ನೋವನು ಹೊತ್ತು
ಹೃದಯಭಾರದ ಕರುಣೆ
ಅಖಿಲ ಸೃಷ್ಟಿಯ ಜೀವ-
ನಾಡಿಮಿಡಿದಿಹ ಪ್ರಾಣ
ಸರ್ವಸಮತೆಯ ತಾಳ್ದು
ತಾನೊಂದು ರೂಪಾಗಿ
ನಿನ್ನ ನಿಲವಿನೊಳಡಗಿ
ಬೆಳಕೊಂದು ಚೆಲ್ಲಿಹುದು!
ಈ ನನ್ನ ಸೌಂದರ್ಯ
ಕಾವಚೆಲುವಿದೆ ಸಾಟಿ?

ಮಕ್ಕಳೆಳನಗೆಮೂಡಿ
ನಿನ್ನತುಟಿಯೊಳಗರಳಿ
ಭುವಿಬಾನು ಬೆಳಗುತಿದೆ.
ಮಗುವಿನೊಲು ಹಗುರಾದ
ಹೂವಿನಂತಹ ಹೃದಯ
ಸುಕ್ಕಿದವಯವದಲ್ಲಿ
ಎಲ್ಲ ದಳಗಳ ತೆರೆದು
ಅರಳಿ ನಿಮಿರಿದೆ ನಿಂದು.

ಮಂಗಳದ ದನಿಬೆರಸಿ
ಪುಣ್ಯಗೀತೆಯ ಹಾಡಿ
ಮೊದಲ ಮುಂಬೆಳಗಿನಲಿ
ಅರುಣಕಾಂತಿಯ ತೋರಿ
ಶಾಂತಿಸ್ವೈಪನು ಬೀರಿ
ಜಗದವೆಯನೆಚ್ಚರಿಸಿ
ಮನುಜಕೋಟಿಯನುಳುಹಿ
ಉದ್ಧರಿಸಿ ಸಲಹಿದ್ದೈ

'ಓ ಗುರುವೆ ಗಾಂಧೀಜಿ'
ಹೃದಯ ಕುಸುಮವನಿರಿಸಿ
ನಿನ್ನ ಚರಣಸಲಿಸಿ
ಭಕ್ತಿ ಪ್ರಣತೆಯನೆತ್ತಿ
ನಮಿಸಿ ಕಾಣಿಕೆ ಸಲಿಸಿ
ಧನ್ಯತೆಯ ಪಡೆವೆ.

- ಟಿ.ಎನ್. ಮಹದೇವಯ್ಯ

ಕರ್ಮಯೋಗಿ ಗಾಂಧೀಜಿ

ಚಿದ್ರೂಪನಂತೆ ತೊಳ ತೊಳಗಿ ಬೆಳಗುತಿಹ
ದಿವ್ಯಜ್ಞಾನಿ ತಾತ
ಸದ್ಗುಣದ ಕಣಿಯು ಬಹುಪೂಜ್ಯನೆಂದು ಮನ
ಗಂಡೆನೆಂದೊ ಪೂತ

ನಿಜತತ್ತ್ವವರಿತು ಗುರು ಪೀಠವೇರಿ ಮೆರೆದಿರುವ
ಕರ್ಮಯೋಗಿ
ವಿಜಯವನುಗೈದೆ ಅದ್ವೈತದೊಳಗೆ ಬಿಡು
ನೀನೆ ಪರಮ ತ್ಯಾಗಿ

ಇಂದ್ರಿಯವ ಜಯಿಸಿ ಬಂಧನ ಹಾಯ್ದು ಆ-
ನಂದಮಯನು ನೀನು
ಬಂಧನದಿ ಬೆಂದ ಜಡಮತಿಯು ನಾನು ಏ-
ನೆಂದು ಬಣ್ಣಿಸುವೆನು
ಪರಮಾತ್ಮ ತನ್ನ ಮಡಿಲೊಳಗೆ ನಿನ್ನ ಲಾ-
ಲಿಸುತ ತೂಗುತಿಹನೊ
ಪರವಸ್ತುವಿಲ್ಲ ಪರಮಾತ್ಮ ತಾನೆ ತಾನೆನುತ
ಸುಮ್ಮನಿಹೆಯೊ

ಸೌಂದರ್ಯ ಸಗುಣ ನಿರ್ಗುಣನು ಸಕಲ ಚೈ-
ತನ್ಯ ತಪಸಿಯವನು
ಆನಂದಮಯನು ಸರ್ವಾತ್ಮನಾಗಿ ತಾ-
ನಿಲ್ಲಿ ನಲಿಯುತಿಹನು

ಘನ ಶಾಂತಿಯೊಂದು ನಿನ್ನೊಳಗೆ ತುಂಬಿ ಕಿರು
ನಗೆಯ ಸೂಸುತಿಹುದು
ಜನಕಜೆಯ ಮನವು ಗಾಂಧೀಜಿ ನಿಮ್ಮ ಬಳಿ
ಬಳಿಯೆ ಸುತ್ತುತಿಹುದು

- ಬೆಳಗೆರೆ ಜಾನಕಮ್ಮ

ನಮ್ಮ ಬಾಪೂ

ಒಂದೆ ಹಿಡಿಮೂಳೆ ಚಕ್ಕಳ ಅಷ್ಟೆ; ಅದಕೆ ಸುರಿ
ಮೂರುನಾಲ್ಕೋ ಚಮಚ ರಕ್ತ, ಮಾಂಸ ಜೊತೆಗಿರಿಸು
ಪಾಪವಂ ನೆರೆತೊರೆದ ಕಡಲಿನಾಳದ ಮನಸ,
ನೆರೆಬಂದ ಕಡಲಿನೊಲ್ ಪ್ರೇಮಮಂ ತುಂಬಿದೆದೆಯ;
ಹಚ್ಚು- ಮೊರಕಿವಿಯೆರಡ, ಎರಡು ಪಿಳಿಪಿಳಿ ಕಣ್ಣ ;
ಹಾಲುಹಸುಳೆಯ ಮಂದಹಾಸವನು ಲೇಪಿಸದಕೆ,
ಒಳಗಿರಿಸು, ಜೇನು ನಗುವವೊಲಿನಿಯ ನಾಲಿಗೆಯ
ಮೇಣ್ ಹಿಮಗಿರಿಯ ಮೀರಿಸಿ ನಿಮಿರ್ದ ಹಿರಿಯಾತ್ಮವ.

ಪೂರಣವೊ? ಸೋಯಬೀನ್ಸ್, ಖರ್ಜೂರ, ಮೇಕೆ ಹಾಲು!
ಮೇಲಿನಂಚಿನವರೆಗು ದುಃಖಿಗಳ ಕಣ್ಣೀರು ತುಂಬಿ
ಪಕ್ವಮಾಡೀ ಇದನು ಸೆರೆಮನೆಯೊಳೊಂದಿನಿತು ವರುಷ
ಹೊರಗೆ ತೆಗೆ ಪರಯ ಪರಿವಾರದಿಂ ಗಮಗಮಿಸಗೊಳಿಸಿ,
ಚಿಂದಿಯಂ ಸುತ್ತಿ, ಸೆಳಬೊಂಬಿನಾಲಂಬವನ್ನಿತ್ತು
ಬಡಿಸು ತಾ! ಅವನೆ ಕಾಣ್! ಲೋಕತಾರಕ! ನಮ್ಮ ಬಾಪೂ!

– ಟಿ.ಪಿ. ಕೈಲಾಸಂ
ಅನು: ಜಿ.ಪಿ. ರಾಜರತ್ನಂ

ಜನವರಿ ಮೂವತ್ತು

ಮೌನ-ಮೇಘದ ಮುಸುಕು ಜಗಕೆಲ್ಲ ಬಿದ್ದಿತ್ತು
ಗಾಳಿ ತಟ್ಟನೆ ತಡೆದು ನಿಂತುಬಿಟ್ಟಂತೆ ;
ಸಂಸಾರ ಸರ್ಪದೊಲು ಮತ್ತೊಮ್ಮೆ ತಿರುಗುತ್ತ
ಸೃಷ್ಟಿಕರ್ತನ ಒಡಲ ಹುತ್ತ ಹೊಕ್ಕಂತೆ.
ಜಗದ ಕೊನೆಯಂಚಿಗೇ ಬಂದು ಸೇರಿ
ನಿಂತವೊಲು ಪಥಿಕ ಹೆಜ್ಜೆಗೇ ಹೆದರಿ ॥ ೧ ॥

ಚಿಕ್ಕೆ ಬಾನಂಗಳದಿ ಮೈಸುಟ್ಟುಕೊಂಡಿತ್ತು
ಕಾಳರಾತ್ರಿಯೊಳಿಲ್ಲವಾಯ್ತು ಜಗವು
ಕಾಲವ್ಯಾಧನು ಬಿಟ್ಟ ಮೃತ್ಯುಬಾಣದ ಗುರಿಗೆ
ರಕ್ತಸಿಂಚಿತವಾಯ್ತು ಸೃಷ್ಟಿಮುಖವು
ನೂರು ದನಿ ಚೀರಿದವು ಅದನು ನೋಡಿ
ನೂರು ಎದೆ ನರಳಿದವು ಅದರ ಜೋಡಿ ॥ ೨ ॥

ಸತ್ಯದರ್ಪಣ ನಡೆದ ಸ್ವಾತಂತ್ರ್ಯ ಸಿರಿಗೈಯ
ಹೊಳೆವ ಖಡ್ಗವು ಬಿತ್ತು ಚೂರಾಗಿ
ಜಗದ ಸುಖದುಃಖಗಳ ಉಸಿರೊಳೊಂದಾಗಿಸಿದ
ಆತ್ಮಪ್ರಭೆ ಬಾಡಿತ್ತು, ಮಬ್ಬು ಮಂಕಾಗಿ.

ನಿರ್ಲಿಪ್ತ ಪಂಕಜವು, ನಿಶ್ಚಲದ ದೀಪ !
ಯಾವ ಕೈ ಕೆಡಿಸಿತ್ತೊ ಈ ವಿಮಲ ರೂಪ ! ॥ ೩ ॥

ದೇವಶಕ್ತಿಯ ಕೇಂದ್ರದಿಂದ ಪ್ರಾಣವ ಪಡೆದು
ಬಾಳುವೆಯ ನೆವದಲ್ಲಿ ಪ್ರಾರ್ಥನೆಯ ಸಲಿಸಿ
ಜೀವಿತದ ಹೋರಾಟ ಅವನ ಸೇವೆಯೆ ಎಂದು
ಬಿದ್ಧ ಆಗಲು ಅವನ ಹೆಸರನ್ನು ನಿಲಿಸಿ
ಬಿದ್ದ ಯೇಸುವು. ಇಂಥ ಯುಗದ ಗ್ಲಾನಿಯಲಿ
ಕಂಡು ದೈವದ ಸೂತ್ರ ಧರ್ಮ ಪತನದಲಿ ॥ ೪ ॥

ಇವನ ಕೊಂದಾ ಕೈಯು ಬಾಳನುಣ್ಣುವುದೆಂತು?
ಕೈಯ ಹೊಲೆ ಮೈಲಿಗೆಯ ಕಳೆವುದೆಂತು?
ಮಡದಿಮಕ್ಕಳ ಗಲ್ಲ ನೇವರಿಸಬಹುದೆಂತು?
ಬೆಳೆವಬಾಳಿಗೆ ಪರಕೆಯೀವುದೆಂತು?
ದೇವಕೃಪೆ ಬೇಡುತ್ತ ಕಾಯ್ವುದೆಂತು?
ಕ್ಷಮ್ಯವಾದರು ಕೂಡ ಬಾಳ್ವುದೆಂತು? ॥ ೫ ॥

ಮಂಜುಗಟ್ಟಿದ ಪಾಪ, ಪರಿತಾಪವೇನಿದಕೆ ?
ಚಿತೆಯ ಬೆಂಕಿಗೆ ಬೇಯದಂಥ ಕರುಳು
ತಾಳಿಕೊಳ್ಳುವದೆಂತು ಬಿದ್ದಿರಲು ಮೈಮೇಲೇ
ಜಗವ ಕಂಗೆಡಿಸುವೀ ಕಪ್ಪು ನೆರಳು?
ಕರುಣೆಯೆಂಬುದ ಕಲಿಯದಂಥ ಜೀವ
ಅರಿತಿರಲು ಬಿಸುಡಬಹುದಿತ್ತು ಸಾವ? ॥ ೬ ॥

ಆದರೂ ಬದುಕಿರಲಿ ಹಾಳಾದ ಮರುಭೂಮಿ
ಕಡಲಕೊನೆ ತೀರಗಳ ತುಳಿಸುತಿರಲಿ
'ಕೇನ'ನಾಗುತ ಕೊಲೆಯ ಸುಖವದೇನೆಂಬುದನು
ಕೊಲೆಗಡುಕ ಹೃದಯಕ್ಕೆ ಕೇಳುತಿರಲಿ
ಗಾಳಿಮಳೆಗಳಿಗೆಲ್ಲ ಅರಚುತಿರಲಿ
ತನ್ನ ಹೆಮ್ಮೆಯನಲ್ಲಿ ಕೊಚ್ಚುತಿರಲಿ! ॥ ೭ ॥

ಹೌದು, ಅವ ಬದುಕಿರಲಿ, ನಮ್ಮ ಒಡಹುಟ್ಟಿದವ
ಕೊಲೆಗಡುಕನಾದರೂ ನಮ್ಮ ಬಂಧು
ಕುಲದ ಕೆನ್ನೀರಿನ ಕಲಮಲವನೆಬ್ಬಿಸಿದ
-ನೆಂದು ಬಲ್ಲರು ಅಣ್ಣತಮ್ಮಂದಿರಿಂದು
ನಮ್ಮ ಪುಣ್ಯದ ತಲೆಗು ಬಂತು ಆ ಪಾಪ
ನಮ್ಮ ಎದೆಗಳಿಗೆಲ್ಲ ಇಹುದು ಪರಿತಾಪ ॥ ೮ ॥

ಯುಗಯುಗದ ನಿಗಳಗಳು ಕಳಚಿಬಿದ್ದವು ತಂದೆ!
ಬಂಧ ಮುಕ್ತಿಯ ಹಿಗ್ಗು ತುಂಬುತಿಹುದು
ನಾಡ ತಂದೆಯಾಗಿ, ಆರ್ತರಿಗೆ ಸಖನಾಗಿ
ನಿನ್ನ ಪುಣ್ಯವೆ ನಾಡ ಕಾಯುತಿಹುದು
ನಿನ್ನ ಬಲಿದಾನವೇ ಹರಕೆಯಾಗಿರಲಿ!
ನಿನ್ನ ಕನಸಿಗೆ ನಾಡು ಹದವಾಗಿ ಬರಲಿ! ॥ ೯ ॥

ವ್ಯಕ್ತರೂಪದಿ ಹೊಳೆದು ಅವ್ಯಕ್ತವಾಗಿರುವ
ಅರಿವಿನಾಚೆಗೆ ನಿಂತ ನಿಲವೆ ಒಲವೆ,
ಮೈಯ ಸಿಪ್ಪೆಯ ಕಳೆದುಕೊಂಡ ಕರುಣೆಯ ತಿರುಳೆ,
ನಮ್ಮ ತಿರುಳನು ಮುಟ್ಟು ದಿವ್ಯಬಲವೆ,
ನಿನ್ನ ನಗೆಯೊಳು ಭುವನ ದೀಪ್ತವಾಗಿರಲಿ
ಚರಚಕ್ರದ ಹಾಗೆ ತಿರುಗುತಿರಲಿ!! ॥ ೧೦ ॥

- ಅರ್ಮಾಂಡೋ ಮೆನೆರಿಝಸ್
(ಅನು : ಕೀರ್ತಿನಾಥ ಕುರ್ತಕೋಟಿ)

ಮಹಾತ್ಮ

ಎಲ್ಲವನು ಬಲ್ಲವನು ಎಲ್ಲರಿಗು ಒಲಿವವನು
ಎಲ್ಲವನು ಗೆಲುವವರನು ನೀನು ಕಾಣಾ,
ಎಲ್ಲ ಸೊಬಗನು ಸವಿದು ಬಲ್ಲವನು ನೀ ಕಾಣಾ
ಎಲ್ಲರೂ ಸವಿವನಕ ತಣಿಯದವನು

ಎಲ್ಲ ಕಾಲದ ಜನರ ಎಲ್ಲ ದೇಶದ ಜನರ
ಎದೆಗಳಲಿ ಪರಿದಿರುವ ಒಲುಮೆ ಒಂದೆಂದು
ಎಲ್ಲ ಜನಗಳ ಮನದಿ ಮಲೆತಿರುವ ಭಾವಗಳು
ವೇದನೆಯ ರೀತಿಗಳು ಒಂದೆ ಎಂದು

ಯಾರೆಲ್ಲಿ ನೋಯುತಿರೆ ಬೇನೆವಡುವವನು ನೀನು
ಯಾರ ಸಂತಸದಲ್ಲು ಹರುಷಗೊಳುವವನು
ಯಾರೆಲ್ಲಿ ಸತ್ಯವನು ನಿಲಿಸುತಿರಲಲ್ಲಲ್ಲ
ಸಾರಿ ಸೇವೆಗೆ ಬಾಗಿ ಸೇರುವವನು.

ದೀನರನು ಆರ್ತರನು ನಿರ್ಬಲರ ಬಳಗವನು
ಸೋದರ್ಯರೆಂದೆಂದು ಕಾಯುವವನು
ಎದೆಕರಗಿ ಮನಮರುಗಿ ಕರುಣೆಯಲಿ ಕರೆಯುತ್ತ
ಅವರೆದೆಯ ಬೇಗೆಗಳನಿಳಿಸುವವನು.

ಅಶುಭಮೊಡಲಲಿ ಶುಭವ ಹಿಂಡುತ್ತ ಹೀರುತ್ತ
ಶುಭದ ಸಾರವನೆರೆದು ಬೆಳಸುವವನು

ನಾಳಗೆಲ್ಲೆಲ್ಲಿಯೂ ಏಳ್ಗೆ ಬರಲೆನ್ನುತ್ತೆ
ಮೇಲ್ಮೆಗಳ ಬಿತ್ತುಗಳ ಬಿತ್ತುವವನು.

ಹೊರಗಿರುವ ರೂಪಗಳ ಭೇದಗಳ ಬಸಿರಲ್ಲಿ
ಎಲ್ಲೆಲ್ಲು ಮೊರೆಯುವುದು ಜೀವವೊಂದೆಂದು
ನಾ ಕಂಡೆ ನಿಮಗವನು ತೋರುವೆನು ಎನ್ನುತ್ತ
ತಿಳಿದ ಸಂತಸದಲ್ಲಿ ಮದಿಸಿದವನು.

ಜಗದ ಸೌಖ್ಯದ ಸಿರಿಯ ಸವಿಗನಸು ಕಾಣುತ್ತೆ
ಮದಿಮದಿಸಿ ನಡೆಯಲ್ಲಿ ನೇಯುವವನು
ಬದುಕಿ ಬಾಳುವ ಆಸೆ ಬಾಳ ಬೆಳಗುವ ಆಸೆ
ಮೈಮೆಯಲಿ ನಿಲುವಾಸೆ ಕಲಿಸುವವನು.

– ವಿ.ಸೀ.

ಗಾಂಧಿ

ಇಳೆಗ ಹಿಂಸೆಯ ಪರಮ ತತ್ತ್ವವನು ತೋರಿತ್ತಿ
ಉಸಿರ ಬಲವುಳ್ಳನಕ ಸಾರಿದ ಗುರು;
ದರ್ಪವನು ಧೈರ್ಯದಲಿ, ಶಸ್ತ್ರವನು ಸಹನೆಯಲಿ,
ಶಠತೆಯನು ಸತ್ಯದಲಿ ಜಯಿಸಿದ ಕಲಿ;
ಹುಡಿಯ ಹುಳುಗಳನೆತ್ತಿ ವಜ್ರ ಹೃದಯವ ಬಿತ್ತಿ
ವೀರ ಜನ್ಮವನಿತ್ತ ಹಿರಿಯ ತಂದೆ;
ನೆಲದ ನಡೆವಳಿಕೆಯಲಿ ನಾಕದೌನ್ನತ್ಯವನು
ಮೇಳವಿಸಿ ತೋರಿದ ಪವಾಡಪುರುಷ;
ಪ್ರೇಮ ಸಂಸ್ಥಾಪನೆಯ ವಿಶ್ವಜಿದ್ಯಜ್ಞದಲಿ
ಪ್ರಾಣ ಪೂರ್ಣಾಹುತಿಯನಿತ್ತ ದಾನಿ;
ಭಾರತದ ಭಾಗ್ಯರವಿ ದೀನದಳಿತರ ರಕ್ಷೆ ;
ವಿಮಲ ಧರ್ಮದ ವಾಣಿ ಜನತೆಯಂತಃಸಾಕ್ಷಿ ;
ಸರ್ವೋದಯದ ಸೂತ್ರಧಾರ ಗಾಂಧಿ!

– ತೀ.ನಂ. ಶ್ರೀಕಂಠಯ್ಯ

ಅಮರಜ್ಯೋತಿ ಬಾಪೂಜಿ

ನಿನ್ನ ಹುಟ್ಟು ಹಬ್ಬದಂದು
ಅಟ್ಟಹಾಸದಿಂದ ಸಂದು
ಒಟ್ಟುಗೂಡಿ ನಿಂದಿಹೆವು 'ಜಯ' ಬಾಪುಗೆಂದು
ನಿನ್ನ ಒಡಲು ಹಾಲುಗಡಲು
ಲೋಕಕೆಲ್ಲ ಉಣಲು ಬಡಿಸಿ
ಹೀಂಟಿದೆಮ್ಮ ಮಡಲುಕಿಲ್ಮಷ, ನಾಡನಾಯಕ
ಸನಾತನಿ ಸಂತನಲ್ಲ
ಸಂಪ್ರದಾಯ ಶರಣನಲ್ಲ
ಸತ್ಯಸಂಧ ಪ್ರೇಮತವಸಿ ನಮ್ಮ ಪಾಲಕ
ಲೋಕ ವಿರೋಧಿ ; ದೀನದಲಿತ
ಹೀನ ಅಬಲ ವೃದ್ಧರೆಲ್ಲರ
ರಕ್ಷಬದ್ಧನು ಬಾಪೂ ಲೋಕನಾಯಕ

ನಿನ್ನ ಮರಣ ಸನ್ನ ಹರಣ
ಕದುವೆ ಕಿರಣವಾಗಲಿ
ನಿನ್ನ ಬಾಳು, ಬಯಕೆ ಎನಗೆ ಹರಕೆಯಾಗಲಿ
'ದೀನ' ರೆಲ್ಲ ಬಳಗವಾಗಲಿ
'ಪಾಪಿ' ಎನ್ನ ದೇವರಾಗಲಿ
ನಿನ್ನ ಅಮರಜ್ಯೋತಿ ಎನಗೆ ದಾರಿತೋರಲಿ

– ಜಯದೇವಿತಾಯಿ ಲಿಗಾಡೆ

ಮಹಾತ್ಮ ಗಾಂಧಿಗೆ

ಸೂರ್ಯನಂತಗ್ನಿಯಂತಾ ವಿದ್ಯುತೆಂತಂತೆ
ಹೊನಲಂತೆ ಅಲರಂತೆ ಎಲರಂತೆ ಅರಿಲಂತೆ
ಜೇನಂತೆ ಹಾಲಂತೆ ಪೀಯೂಷವೆಂತಂತೆ
ನಿನ್ನ ನುಡಿ ನಿನ್ನ ನಡೆ ಮಂಗಳ ಮನೋಹರಂ
ಸಾನಂದ ಸುಂದರಂ ಸಂಪೂರ್ಣ ಶಂಕರಂ
ಅಂತೆಯೆ ಮಹಾತ್ಮನೆಂದಂಜಲೀಕೃತನಾಗಿ
ನಿನ್ನ ಪದ ಪಂಕಜಕೆ ಮಣಿಯುವೆ ಶಿರಂ ಬಾಗಿ.
ಸತ್ಯಮನಹಿಂಸೆಯಂ ಸ್ವಾತಂತ್ರ್ಯ ಪ್ರೀತಿಯಂ
ಭಾರತೀಯರಿಗಿತ್ತೆ ಶಾಂತಿಯಂ ದಾಂತಿಯಂ.
ದುಷ್ಟ ಜನ ಶಿಕ್ಷಣಕ್ಕೆ ಶಿಷ್ಟ ಜನ ರಕ್ಷಣಕೆ
ಮೇಣೀ ಧರಿತ್ರಿಯಲಿ ಧರ್ಮಸಂಸ್ಥಾಪನಕೆ
ಶ್ರೀಕೃಷ್ಣ ಜರತುಷ್ಟಜಿನ ಮಹಮ್ಮದ ಬುದ್ಧ
ಕ್ರಿಸ್ತರಂತವತಾರ ತಾಳಿರುವ ನಿನಗಿದೋ
ಜಯಮಕ್ಕೆ ಒಳಿತಕ್ಕೆ ಮೇಣ್ ನಿತ್ಯ ಶುಭಮಕ್ಕೆ.

— ಎಸ್.ವಿ. ಪರಮೇಶ್ವರ ಭಟ್ಟ

ದಿವ್ಯಜ್ಯೋತಿ

ತಿಳಿನೀಲದಲ್ಲಿ ನೀಲವಾಗಿ ಅವ ಹೋದ ದೂರ ದೂರ
ಬೆಳಗಿಹುದು ಇಲ್ಲಿ ಅವ ಬಿಟ್ಟಬೆಳಕು; ಇನ್ನೊಮ್ಮೆ ಏಕೆಬಾರ?
ಅಂದು ಸಂಜೆ ಪ್ರಾರ್ಥನೆಗೆ ದೇವಮಂದಿರದ ದಾರಿಯಲ್ಲಿ
ಆಚೆ ಈಚೆ ಮೊಮ್ಮಕ್ಕಳಿಬ್ಬರ ಮೈಯ ಭಾರ ಚೆಲ್ಲಿ
ಜಗವ ಕರುಣೆ ನಡೆವಂತೆ ನಡೆದು ಮಂದಿರದ ಪೀಠವೇರಿ
ನಿಂದನಲ್ಲೊ ಜಡವುಳಿದು ಜೀವವೊಂದಾಯ್ತು ದೇವನಲ್ಲಿ.

ಎಸೆದ ಗುಂಡಿಗಾ ಕುಸಿದ ದೇಹದಲಿ ವಿಮಲರಕ್ತ ಚೆಲ್ಲಿ
ಮೀಯಿಸಿತ್ತು ಈ ಜಗದ ಮನವನೇ ಶೋಕಜಲಧಿಯಲ್ಲಿ
ಮುಗಿದ ಕೈಯು ಮುಗಿದಂತೆ ಇತ್ತು; ನೆಲಸಿತ್ತು ಕ್ಷಮೆಯು ಮೊಗದಿ
ಎದೆಯೊಳೆಂಥ ತಿಳಿಭಾವವಿತ್ತು! ಅದನಾವ ಬಲ್ಲ ಜಗದಿ ?

ಹೋದ ಹೋದನವ ತ್ಯಾಗಜೀವನದ ತುತ್ತ ತುದಿಯನೇರಿ
ಏರಿ ಏರಿದೊಲು ಅಂತರಂಗವೈಸಿರಿಯ ಜಗಕೆ ತೂರಿ
ಸತ್ಯ-ಪ್ರೇಮಿಗಳ ಸತ್ವವನ್ನೆ ಕಣ್ಣೆದುರು ಎತ್ತಿ ತೋರಿ
ಬೇರೆ ಲೋಕದನುಭಾವ ಬೀರಿ ಅವ ಹೋದನಾವ ದಾರಿ ?

ಎನಿತುಸರಳ ನುಡಿ, ಎಷ್ಟು ಸಹಜನಡೆ,ಮನದ ಮಹತಿಯೇನು?
ಅವನ ಎದೆಯ ಉನ್ನತಿಯ ನಿಲುಕುವುದು ಯಾವಗಿರಿಯ ಸಾನು?
ಇಹುದೆ ಅವನ ಕರುಣೆಯನು ಧರೆಗೆ ಕರೆವಂಥ ಕಾಮಧೇನು
ಅವನು ಗೈದ ಲೀಲೆಯಲಿ ಲಯಿಸಿತೆಂಥವರ 'ನಾನು-ನಾನು'

ತಿಳಿದಿಪುದು ಚಿತ್ತ ; ಹರಿದಿಹುದು ನೋಟ ಮೇಲಕ್ಕೆ ಬಾನಿನೆಡೆಗೆ
ಆ ಜಾಡ ಹಿಡಿದು ಇಳಿವಂತೆ ಇಹುದು ಬೆಳಕಂದು ಕೆಳಗೆ ಇಳೆಗೆ
'ಏನೆಷ್ಟು ಭ್ರಾಂತಿ? ಕಾಣದೆಯ ಜ್ಯೋತಿ?' ಎಂಬರುಹು
ಮೂಡಲೊಡನೆ
ಆ ಬೆಳಕ ನಂಬಿ ನಿಂದಿಹರು ಧೀರರೆದೆತೆರೆದು ನಾಡ ಕರೆಗ.

– ಡಿ.ಎಸ್. ಕರ್ಕಿ

ನಮನ ನಿನಗೆ

ಮುಕ್ತಳಾದಳೋ ಭಾರತ ಮಾತಾ ಇದು ಗಾಂಧೀಗೀತಾ
ಜಯಜಯ ಭಾರತ ಜಯಜಯ ಜಾಗ್ರತ ಜಯ ನವಯುಗಜನತಾ

ನಮನ ನಿನಗೆ, ನಿಃಸ್ವಾರ್ಥದಸೀಮಾ
ಬಡವರ, ದುಡಿವರ ಪ್ರೇಮಾ
ಭಾರತ ಬಾವುಟ ವಿಶ್ವದಿ ಮೆರೆಸಿದ
ವಿಶ್ವ ಬಂಧು ಜಯ ವಿಶ್ವಾತ್ಮಾ॥ ಇದು ಗಾಂಧೀ ಗೀತಾ

ನಿನ್ನ ಸತ್ವ ತತ್ವಗಳಲಿ ನೆಲಸಿದೆ
ಸತ್ಯವು, ನೀನೇ ಸಾಕಾರಾ
ಪ್ರೀತಿ ಅಹಿಂಸೆಗಳಲಿ ಜೀವಂತನು
ನೀನು ಚಿರಶಾಂತಾಕಾರಾ॥ ಇದು ಗಾಂಧೀಗೀತಾ

ನಿನ್ನನು ಕಾಣದ ಯುವ ಜನಜಗಕೆ
ನೀನಾಗಿಹೆ ತಾತ್ವಿಕ ಕಾಯಾ
ಇಂದಿಗೆ ನಾಳೆಗೆ ಮುಂದಿನ ಪೀಳಿಗೆ
ನೆನೆವುದು ನಿನ್ನಯ ಗುರಿ ಧ್ಯೇಯಾ॥ ಇದು ಗಾಂಧೀಗೀತಾ

ತ್ರಸ್ತ ಲೋಕಕಿದೊ ನಿನ್ನ ಅಸ್ತ್ರವಿದೆ
ನಿಃಸ್ಪೃಹತೆಯ ಅಣು- ಮಹಮಂತ್ರಾ
ಅನ್ನ ವಸ್ತ್ರಗಳ ಬನ್ನಬವಣೆಗಿದೆ
ಒಂದೇ ತಾರಕ ತಂತ್ರಾ॥ ಇದು ಗಾಂಧೀಗೀತಾ

ಸಿರಿ ಅಧಿಕಾರದ ಸೊತ್ತು ನಿನಗೆ ತೃಣ
ಸುಳಿಯಲಿಲ್ಲ ಅವು ಒಂದು ಕ್ಷಣ
ಮೋಹನದಾಸನೆ ನಿರ್ಮೋಹಿಯು ನೀ
ನಿಃಸ್ವಾರ್ಥವೆ ನಿನ್ನಧಿಕ ಗುಣ॥ ಇದು ಗಾಂಧೀಗೀತಾ

ಎಲ್ಲಿದೆ ಧರ್ಮವು ಅಲ್ಲಿದೆ ದೈವ
ದೈವವೆಲ್ಲಿಹುದು ಅಲ್ಲಿ ಜಯ
ಎಂಬ ಗುಟ್ಟನರುಹಿದ ನಡೆ
ನುಡಿಗಳ ವ್ಯಕ್ತಿಗೆ ಎಲ್ಲಿ ಭಯ॥ ಇದು ಗಾಂಧೀಗೀತಾ

ಮುಡಿಸುವೆ ನಿನಗೀ ಗೀತಮಾಲೆಯ
ರಾಜಕಾರ್ಯ ಯೋಗಿವರನೆ
ನಿನ್ನ ಜೀವನವು ನಮಗೆ ದರುಶನವು
ಒಳ್ನುಡಿಗಳೆ ನಡೆಯಾದವನೆ॥ ಇದು ಗಾಂಧೀಗೀತಾ

- ಎನ್ಕೆ

ಬೀಸುವ ಹಾಡು

ಮುಕ್ತ ಮೋಹನದಾಸ ಸೂಕ್ತ ಬೀರಿದ ಮಾತ!
ಅಕ್ಕರದಿಂದಲಿ ಬಾಳಿದನ ಸ್ವಾರಾಜ್ಯವ ಉಳಿಸಿದನ।
ಅರ್ಥವ ತಿಳಿಸಿದನ ಸ್ವಾರ್ಥವ ಬಿಡಿಸಿದನ।
ನಿಸ್ವಾರ್ಥ ಪ್ರೇಮ ತೋರಿದನ ಸ್ವಾತಂತ್ರ್ಯವ ಗಳಿಸಿದನ ॥ ೧ ॥

ಸತ್ಯವೇ ನುಡಿದಿಹನ ನಿತ್ಯವೂ ದುಡಿದಿಹನ।
ಪಾತಕರ ಗೆಳೆತಾನ ಬಿಡಿಸಿದನ ನಿಜತತ್ವವ ತೋರಿದನ।
ರಾಮನ ವನವಾಸ ಮೋಹನ ಭೋಗಿಸಿದ!
ವಿಮಲ ಶಾಂತಿ ನೆಲೆ ಮಾಡಿದನ ಸಮತೆಯ ನೀಡಿದನ ॥ ೨ ॥

ಸಣ್ಣಾಗಿ ನುಡಿದಾನ ಹಣ್ಣಾಗಿ ತೋರಿಹನ।
ಕಣ್ಣೀಗಿ ಕನ್ನಡಿ ಇಟ್ಟಿಹನ ಜನ ಸೇವೆಗೆ ಮಡಿದಿಹನ।
ನೋಡಿ ನೋಡಧಾಂಗ ಮಾಡಿ ಮಾಡಧಾಂಗ।
ರೂಢಿಯ ತಾಪಕ ಬಾಡಿದನ ದುಡಿಮೆಯ ಕಲಿಸಿದನ ॥ ೩ ॥

ಬೀದಿಯ ತಿರುಗಿದನ ಹಾದಿಯ ಉಡುಗಿದನ।
ಭಿದ್ದ ಸಮಾಜವ ಎತ್ತಿದನ ಸನ್ಮಾರ್ಗವ ತೋರಿದನ।
ಗುಡಿಯ ಕಟ್ಟಿದಾತ ನಮ್ಮ ಒಡೆಯ ಗಾಂಧಿ ತಾತ।
ನಾಡ ದೇಶ ಸುಖ ಬಯಸಿದನ ಶಾಂತಿಯ ನೆಲೆಸಿದನ ॥ ೪ ॥

ಚಳವಳಿ ಮಾಡಿದನ ಕಳವಳ ಕಳೆದಿಹನ!
ಒಳಿತಾಗಿ ದಾರಿಯ ತೋರಿದನ ಮುಕ್ತಿಯ ಗಳಿಸಿದನ।
ವೇಶವ ತಿರುಗಿದನ ಶಾಂತಿಯ ಬೆಳಗಿದನ ।
ಈಶ ಮಹಾತ್ಮಾನ ನೆನಿಬೇಕ ನಿಜ ಮುಕ್ತಿಯ ಪಡಿಬೇಕ ॥ ೫ ॥

- ಆರ್.ಡಿ. ಹಲಸಂಗಿ

ಬಾಷ್ಪ - ಪುಷ್ಪ

೧

ಏನಿದೇ ದುರ್ವಾರ್ತೆ! ಮೈ ನಿಮಿರಿ ನಡುಗಿಹುದು
ವಿಶ್ವದಾದ್ಯಂತವೂ! ಕಣಕಣದೊಳಿಡುಗಿದುದು
ಪ್ರಳಯ-ದುಃಖ-ಜ್ವಾಲೆ! ನೆಲ ಮುಗಿಲ ಪರ್ವಿಹುದು
ಕಣ್ಣೀರ ಕಡಲುಕ್ಕಿ! ಒಳಗೊಳಗೆ ಕೊರ್ವಿಹುದು
ಶೂನ್ಯತಮಶೂನ್ಯ! ಹಾ! ಗಾಂಧೀಜಿ ಮಡಿದನೇ
ಗುಂಡಿಗಾಹುತಿಯಾಗಿ! ಸತ್ಯವನಹಿಂಸೆಯನು
ಶಾಂತಿ-ಕರುಣಾ-ಕ್ಷಮಾ-ಶುಭ್ರಾಭ್ರ-ಹಾಸಿಯನು
ತಾನೇರ್ದ ನರ-ಬ್ರಹ್ಮ ಮೈಗರೆದು ನಡೆದನೇ?
ನಾನಾ ಪ್ರಯೋಗಗಳ ಭವರಂಗದಲಿ ಗೈದು
ತ್ಯಾಗಪಥದಲಿ ದಿವ್ಯಮಾನವತೆಯನೆ ನೇಯ್ದು
ದೆಸೆದೆಸೆಗೆ ಪಸರಿಸಿತೆ, ಹೃದಯಗಳ ಕುಸುರಿಸುತೆ
ಲೋಕಸೇವಾಭಾವ ದೀಪ್ತಿಯನ್ನೊಸರುಸುತೆ
ಆ ಮಹಾಮಾನವತೆಯಂಬರಕೆ ತಾನೇರಿ
ಹೋದ! ಹಾ! ಹೃತ್ತಪಸ್ಸಂಪದವನೆಲೆ ಬೀರಿ!

೨

ವ್ಯವಹಾರ-ವೇದಾಂತ-ರಾಜಕಾರಣಗಳನು
ನೆರೆ ತೂಗಿ ಸಮ್ಯಕ್-ಸಮನ್ವಯ-ಸುದೃಷ್ಟಿಯಲಿ
ಸ್ವಾತಂತ್ರ್ಯ-ಸಾಮ್ಯ-ಸುಖ-ಶಾಂತಿ-ತಾರಣಗಳನು

ನಾಳ-ನಾಳದಿ ತುಂಬುತಾದರ್ಶ-ಪುಷ್ಟಿಯಲಿ
ಯುಗಯುಗಾನಂತರದಿ ಮಾರ್ಪೊಳೆವ ಸೃಷ್ಟಿಯನು
ವಿರಚಿಸಲು ಯತ್ನಿಸಿದ ವ್ಯವಹಾರಯೋಗಿಯೇ,
ಪೋದೆಯಾ? ಇನ್ನೆಲ್ಲಿ? ಅನುಕಂಪವೃಷ್ಟಿಯನು
ಕರೆವ ಆ ಸೊಲ್ಲೆಲ್ಲಿ? ಸರ್ವಸ್ವತ್ಯಾಗಿಯೇ!
ದಲಿತ-ಜನ-ಹೃದಯವೇ, ವಿಶ್ವಧರ್ಮೋದಯವೆ,
ಸರ್ವಾತ್ಮ! ಸಕಲಾತ್ಮ! ವಿಮಲಾತ್ಮ! ಪ್ರೇಮಾತ್ಮ!
ಸರಳಾತ್ಮ! ಸುಭಗಾತ್ಮ! ವಿಶ್ವಾತ್ಮ! ದೇವಾತ್ಮ!
ಓ, ಮಹಾತ್ಮಾಜಿಯೇ, ಬಾಪೂಜಿ, ಸದಯವೇ!
ನೀನು ಅಂಬರಕೇರೆ, ಭೂತಳದ ಭಾರತಿಯು
ಕಂಗೆಟ್ಟು ನಿಂತಿಹಳು, ತೀಕ್ಷ್ಣ ದುಃಖಾಹತೆಯು!

೩

ನೀನು ಸಾಧಿಸಿದತುಲ ದೇವಮಾನವ ಪದಕೆ
ಉತ್ತುಂಗ-ಗಿರಿ-ಶ್ರೇಣಿ-ಸಾನುಗಳು ಬಾಗಿಹವು!
ನಕ್ಷತ್ರ-ಗ್ರಹ-ಕೋಟಿ-ಭಾನುಗಳು ತೂಗಿಹವು!
ಕಡಲಾಳ, ಮುಗಿಲಗಲು ನಾಚಿ ಕಳೆನೀಗಿಹವು!
ಕಲ್ಪತರು-ಕಾಮಧೇನುಗಳು ಬರಡಾಗಿಹವು,
ವಜ್ರಬಂಧನದಲ್ಲಿ ಮುಕ್ತಿ ಸಂಚರಿಸಿಹುದು!
ಕತ್ತಲೆಯು ಬಗೆಗರಗಿ ಬೆಳಕನೇ ವರಿಸಿಹುದು
ನೀ ಪಡೆದ ನಿಸ್ಸೀಮಹೃದಯಘನಸಂಪದಕೆ!
ತೆರೆಮರೆಯೊಳಿಹ ಗಾಯಕನ ನಿತ್ಯ-ಗೀತದೊಲು,
ದೂರಸ್ಥ ಮುರಲಿಯಾ ಮಧುರಸಂಗೀತದೊಲು,
ತಾಯಿಯೆದೆಮರೆಯೊಳಿಹ ಪ್ರೇಮ-ನವನೀತದೊಲು,
ಬಾನುಲಿಯ ಕೇಂದ್ರದಿಂ ಹರಿವ ಸ್ವರಸ್ರೋತದೊಲು,
ನೀ ನಡೆದು ತೋರ್ದ ಘನ-ತತ್ವಗಳ ಬೆಳ್ವೆಳಗು
ಆಶರೀರ ವಾಣಿಯಲಿ ಹರಿಯುತಿಹುದೆಲ್ಲೆಡೆಗು!

೪

ಬಹುದು! ಇರಬಹುದು! ಅತಿಮಾನವಾರ್ಹತೆ?
ಕಟು-ಕಠಿಣ-ಬಹುಜಟಿಲ ಪಾವಕಪರೀಕ್ಷೆಯದು!
ಶಿಲುಬೆಯಾ ನಂಜಿನಾ ಗುಂಡಿನಾ ದೀಕ್ಷೆಯದು!
ಹಾ! ಹಾ! ಅಹಿಂಸೆಯನೆ ಸಾಧಿಸಿದ ಸನ್ಮತಿಗೆ
ಲೋಕೋತ್ತರಂಗೆ ಹಾ! ಗುಂಡಿನಾಘಾತವೆ?
ಕುಸುಮ-ಹೃದಯಕೆ ಕೊನೆಗೆ ವಜ್ರಸಂಪಾತವೇ?
ಸಂಕುಚಿತ ದೃಷ್ಟಿಯಲಿ ಆವುದಿದೆ ಮರಣವೋ
ಅದು ಊರ್ಧ್ವಗತಿಗೊಯ್ವ ಬೆಳಕಿನಾವರಣವೋ!
ಇಂತಿರಲು, ಗಾಂಧಿತಂದೆಯು ಮಡಿವನೆಂಬರೇ?
ಅಗ್ನಿದೀಕ್ಷೆಗೆ ಸಂದು ಪರಿಪೂತಜಯಶಾಲಿ-
ಯಾಗಿರಲು, ಸಂತತಂ ಕಣ್ಣೀರಸುಂಬರೇ?
ಓರ್ವನಿದ್ದಿಹ ಗಾಂಧಿ ಮುಂದಿನ್ನು ಸಲ್ಲೀಲೆ-
ಯನು ಮೆರೆವ ಶತಕೋಟಿ ಗಾಂಧಿಯಲಿ ಪರಿಣಮಿಸಿ
ಕಣ-ಕಣದಿ-ಮನ-ಮನದಿ ಮೂಡುವನು ಸಂಭ್ರಮಿಸಿ

೫

ಘನ-ವಸ್ತು! ಘನ-ಕೃತಿಯು! ಘನ-ದೃಷ್ಟಿ! ಘನ-ಸೃಷ್ಟಿ!
ಘನ-ತ್ಯಾಗ! ಘನ-ಯೋಗ! ಘನ-ತತ್ವ-ಸಂತುಷ್ಟಿ!
ಆಕಾಶಲೀಲೆಗಿದೋ ಪರಿಮಿತದ ಸೀಮೆಯೇ?
ಕಡಲಾಳದುಬ್ಬರಕೆ ಸಂಕುಚಿತದ ಭೂಮಿಯೇ?
ಧವಳಗೌರೀಶಂಕರೋತ್ತುಂಗ ಶಿಖರಕ್ಕೆ
ಹಿಮಗಿರಿಯನುಳಿದಾವ ದಿಙ್ನಗಗಳ ಆಧಾರ?
ಧವಳಿಮಾಜಾಹ್ನವಿಯ ತೀವ್ರಗತಿ ಪ್ರಖರಕ್ಕೆ
ಹರಿ-ಹರ-ಭಗೀರಥರನುಳಿದಾವ ನಿರ್ಧಾರ!
ಲೋಕ-ವಿಸ್ತಾರವೇ ಗಾಂಧಿ-ಲೀಲಾ ರಂಗ!
ಆಕಾಶದಾತ್ಮದಲಿ ಬಹುಮುಖದ ಮೇಲೇಳ್ದು
ಬಗೆಬಗೆಯ ದೃಶ್ಯ-ಪ್ರಯೋಗಗಳ ತಾ ಸಮೆದು

ಚಿರ ಯೋಗ-ನಿದ್ರೆಯಲಿ ಮಲಗಿಹನು ಘನಸಂಗ!
ಓ, ಅಹಿಂಸಾ-ಸತ್ಯ-ಶಾಂತಿ-ಚಂದನ ಜ್ಯೋತಿ
ಕಂಪಿಟ್ಟು ಬೆಳಗುತಿದೆ ಬಾಂಬರಂ ಚಿರಖ್ಯಾತಿ!

೬

ಆ ಕಂಪ ಬೆಳಕಿನಲಿ ಹೂವರಳಿ ಮೆರೆಯುತಿವೆ!
ಹೊಳೆಹಳ್ಳ ಕಡಲುಗಳು ಕುಡಿಕುಡಿದು ಮೊರೆಯುತಿವೆ?
ಗಾಳಿಯಾಸ್ವಾದಿಸುತೆ ಕಮ್ಮನೇ ತೀಡುತಿದೆ
ಬಿಸಿಲದರೊಳೊಂದಾಗಿ ಲೀಲೆಯಲಿ ಆಡುತಿದೆ
ಘಟ್ಟಗಳು ಬೆಟ್ಟಗಳು ದರಿಕೊಳ್ಳ ನಿಟ್ಟುಗಳು
ಅದನೆ ಪಡಿನುಡಿನುಡಿಯುತಿವೆ ತಪದ ಮೆಟ್ಟುಗಳು
ಬುವಿಯ ಜಡದಲಿ ಜೀವವಾಡಿ ಕಣ್ ಹರಿಸುತಿದೆ
ಆಕಾಶಮೌನದಲಿ ಪರಮಾತ್ಮ ಸ್ಫುರಿಸುತಿದೆ
ಚಿದ್ದೃಷ್ಟಿ-ಆತ್ಮದೃಷ್ಟಿಗೆ ಇದರ ಪ್ರತ್ಯಯವು
ಕಣ್ಣಿರ್ದು ಕುರುಡ ಜನಕೆಲ್ಲ ಬರಿ ವ್ಯತ್ಯಯವು
ಹೃದಯಶುದ್ಧಿಯ ಮೇಲೆ ಸರ್ವಸಾಧನೆ ಸಿದ್ಧಿ
ಇದನುಳಿದ ಸಾಧನೆಗಳೆಲ್ಲವೂ ಬರಿ ಗುದ್ದಿ
ವಿಮಲಾತ್ಮನಿರ್ಪೆಯಾ? ಅಂತಾದೊಡಿಲ್ಲಿ ಬಾ
ಬಾಷ್ಪ ಪುಷ್ಪವ ಸಲಿಸಿ ಧನ್ಯತೆಯ ಹೊಂದ ಬಾ!

– **ಈಶ್ವರ ಸಣಕಲ್ಲ**

ಭಾಗ - ೨ : ಸಮನ್ವಯ

ಗಾಂಧೀಜಿ

ಅಹುದಿಳೆಯ ಪರಮಾಭಿಮಾನಿಯಿವ, ಇಳೆಯಣುಗನು.
ಬಾನ್ ನೋಡುತಿರಲು
ಬಂದಿಲ್ಲಿ ಪ್ರಾರಂಭಿಸಿದ ತನ್ನ ಬಾಳ ಯಾತ್ರೆ,
ಧ್ರುವತಾರೆ ಮೂಡುತಿರಲು.

ಹಾಳಾದ ನಂದನಕೆ ಆದಮನುಬಂದೊದಗಿದ
ಗೆಯ್ಯುತ ಪುನರ್‌ನಾಮಕರಣ
ವಸ್ತುಗಳಿಗೆಲ್ಲ ಹೊಸ ಚಂದವನು ತಂದನವನು
ಬೆರಗುಬಡುತಿರಲು ಹರಣ.

ನಿಶಾಚರರ ಮಧ್ಯದಲಿ ಎಳೆಯವನಿವ ದೇವಕುವರ,
ಕಿರುಬೆರಳಿನಿಂದೆತ್ತಿದ
ಬೆಳಕಿನಾ ಬುಗ್ಗೆಗಳ ಮೇಲ್ ಬಿದ್ದ ಪರ್ವತವನು,
ಅಮೃತಬೀಜವ ಬಿತ್ತಿದ.

ಜಡಜೀವವ್ಯೂಹ ಸುತ್ತಿರುವೀ ಪ್ರಪಂಚದಲ್ಲಿ
ತೂರಿದನು ಚೈತನ್ಯವ.
ಉದಿಸಿತ್ತು ನಕ್ಷತ್ರದೊಲು ವಕ್ಷವಿರುವ ಶಾಂತಿ,
ಅನಂತ ಪ್ರೀತಿಯ ವೈಭವ.

ಬೇಕಾರಿ. ಬರಿ ಚರ್ಮ. ಬರಿ ಎಲುಬು, ಆದರಿವನು
ರಾಷ್ಟ್ರರುಧಿರವ ಆಗರ.
ಪಂಜೆಯುಟ್ಟಿಹ ರೈತ, ನಮ್ಮ ತಲೆಮಾರಿಗಿವನು
ಬುದ್ಧ, ಕೃಪಾಸಾಗರ.

ಸಪ್ತರ್ಷಿಮಂಡಳಗಳಾಚೆ ದಾಂಡೀಯಾತ್ರೆಗೆ
ಕೇಳಿ ನಕ್ಷತ್ರಗಾನ,
ನಡೆದಿರುವ ಹಿರಿಯನಿವ ವ್ಯಾಧನನು ಸಾಮಗೊಳಿಸಿ,
ಮುಗಿಲ ಗಂಗೆಯಲಿ ಸ್ನಾನ.

ಕಾಲಲವಣಾಂಬುಧಿಯ ಕ್ಷಾರ ಜಲ ಗೆಯ್ಯುತುಪ್ಪು
ದೇವಗಣದೂಟಕೆಂದು
ಒಯ್ವನಮರಾವತಿಗೆ ಜೀವಿತದ ಸಾರವಂತೆ
ಋಷಿ, ಕ್ರಾಂತಿಪುರುಷನಿಂದು.

ಕರೆಯವನ ಓ ತಮ್ಮ! ಓ ಅಣ್ಣ! ಕರೆ ಅವನನು!
ತವಕಿಸಿದೆ ಲೋಕವಿಲ್ಲಿ!
ನಮಗಿರುವದವನಾಚು. ಸೃಷ್ಟಿಗೇ ಬಂತು ಪೇಚು.
ಹೋದರೇನಾಯ್ತು ಮೈ ಚೆಲ್ಲಿ?

ಕರೆ! ನಮ್ಮ ಶಿಲಾಹೃದಯಗಳು; ಸೂರ್ಯಕಾಂತದಂತೆ
ಅವನುದಯವಿರೆ ದ್ರವಿಸಲಿ!
ಜ್ಯೋತಿಧೂಮ್ರದ ವಲಯ ನಕ್ಷತ್ರವಾಗುವಂತೆ
ಪುಣ್ಯವಿದು ಪಲ್ಲವಿಸಲಿ!

ಕರೆಯವನ ಓ ತಮ್ಮ! ಓ! ಅಣ್ಣ! ಕರೆ ಅವನನು!
ಕಣ್ತುಂಬ ನಮ್ಮ ನಡುವೆ.
ಸುರುಳಿ ಸುತ್ತಿಡಬೇಡ ಬರಿ ದಂತ ಕಥೆಯ ಮಾಡಿ,
ಬರಿ ನಾಮಶೇಷದೊಡವೆ.

– ವಿನಾಯಕ

೧

ಗಾಂಧಿ, ಗಾಂಧಿ, ಗಾಂಧಿ!
ಈ ಬಚ್ಚಲ ಕಗ್ಗವಿಯಲಿ
ತಮದ ಸಂತೆ ಗದ್ದಲದಲಿ
ಬಂತೆಲ್ಲಿಂದೆಂತು ಹೇಳು
ಈ ಅಮೂಲ್ಯ ಮಾಲು-
ನಾಲಗೆಗುಡಿ ಚೆಂಬೆಳಕುಲಿ
ಕುಡಿದೀಪದ ಸಾಲು?

ಬಾನ ಕರುಳು ಕರಗಿತೋ,
ಮುಗಿಲ ಕಣ್ಣು ಹನಿಯಿತೋ,
ಬೀದಿಯಲ್ಲಿ ಬಿಂದು ಬಿಂದು
ಬೆಳಕು ಬಂದು ಕುಣಿಯಿತೋ!

ಇಲ್ಲ? ನೋಡು ಸುತ್ತಲೂ:
ಒಳಗೆ ಕಾಳ ಕತ್ತಲು.
ಅವಳೆ ಬೆಳಕ ಹೆತ್ತಳೋ,
ನಾಲಗೆಗದನಿತ್ತಳೋ,
ಹೆತ್ತು ಅದನು ತುತ್ತಲು
ಹೊತ್ತೆಯಲ್ಲಿ ಹೊತ್ತಳೋ!

ಬಚ್ಚಲಲ್ಲಿ ಬೆಳೆವ ಕೊಳೆ
ಬಗೆವುದೇನೊ ಇಂತು:

ಈ ಸೊಸನರುಗಂಪು, ಸೊಂಪು,
ಈ ಪದಂಪು, ಈ ತಂಪು

ದೂರದ ದಿವಮಂದಾರದ ಗಂಧದ ಗಣೆಯಿಂದ
ಬಂತು. ಬಂತೆ? ಬಂದಿತ್ತೆ?
ಕೊಳೆ ಕಂಪನು ಬಯಸಿತ್ತೇ?
ಓವೋ, ಬರಿ ಕನಸು ಮತ್ತೆ!
ಬಚ್ಚಲಲ್ಲಿ ಕೊಚ್ಚೆಯು,
ರೊಚ್ಚೆಯೋ ರೊಚ್ಚೆಯು!

೨

ಕಾಡನಲೆವ ನರಪಶುಮನ
ಮಿಡುಕಿತೊಮ್ಮೆ, ಪುಡುಕಿತು:
ಹೃದಯತಳದ ಗೂಢನಿಧಿಯ
ನೆನಪು ಮನಕೆ ದುಡುಕಿತು.
ರಕ್ತ ಬಸಿವ ಹಸಿಮಾಂಸವ
ನೆಕ್ಕುತಿರುವ ನಾಲಗೆ,
ತೊಗಲುಚೀಲದಾವೇಶಕೆ
ಒತ್ತುತಿರುವ ಒಳಬಗೆ;
ತೊಡೆಯೆದೆಗಳ ರೋಮಾಂಚಕ
ಬೀದಿವರಿವ ಬೆಳ್ಳಗೆ;
ಇಂದು ಏಕೆ ಭಣ ಭಣ?
ಏಕೆ, ಏನು ಕಾರಣ?

ಬೇಸರೋ ಬೇಸರು;
ಒಳಗೆ ಯಾಕೊ ಆಸರು.
ಕತ್ತಲಲ್ಲಿ ಮಿಂಚಿನ ಮರಿ
ತಿವಿವುದಹಾ ಗರಿ ಕೆದರಿ,
ಬೀಳುತಿದೆ ಜೇನ ಸರಿ:
ಒಲವು, ಒಲವು, ಒಲವು!
ಎಂಥ ಸೆಳವು, ಏನು ನೋವು!

ಬಾನ ತುಟಿಯು ಬುವಿಯ ತುಟಿಯ
ಮೀಟಿ ಹೋಯಿತೋ.
ಕನಸನೀಟಿ ಮನವ ನಾಟಿ
ದಾಟಿ ಹೋಯಿತೋ;
ಒಳವ ತಳದ ಮುದ್ರೆಯೊಡೆದು
ಚಿಲುಮೆ ಚಿಮ್ಮಿತ್ತೋ,
ಹೃದಯ ತಾನೆ ಕಡೆದ ಜೇನೆ
ಬೆಣ್ಣೆ ತೇಲಿತೋ-

ಒಳ ಹೊರಗೂ ದಿಗಿಲು, ಬೆರಗು;
ಕಲ್ಲಿನಂಥ ಮನ ಮುಗುಳು;
ಕಾಣಲಿಲ್ಲ ಈವರೆಗೂ
ಇದು ಏನಪ ಯಾವ ಪಿಡುಗು;
ಭೋಂಕನೆದೆಯ ಅವುಂಕುತಿರುವ
ಯಾವ ತಟಿತ್‌ಸ್ಪಂದವು
ಇದೆಂಥ ದಿಗ್ಬಂಧವು!

ಬೇರೆತನವ ಗೋರಿಯೋ.
ಇದೇನೆ ಬಾಳ ದಾರಿಯೋ.
ಮರದೊಳೆಲ್ಲೊ ಅರಗಿವಂಥ ಅಗ್ನಿಸಾರವೋ,
ಮೊಗ್ಗೆಯಲ್ಲಿ ಮಲಗಿವಂಥ ಗಂಧಭಾರವೋ!

ತಡೆಯಲಾರೆ-ಸಾಕು ಬಿಡು
ಓ ಕತ್ತಲೆ, ತೊಡೆದು ಕೊಡು;
ಕಟ್ಟೊಲುಮೆಯ ತೊಟ್ಟಿನಲ್ಲಿ
ಕಟ್ಟಾಡಿಸಿ ತೂಗು;

ತೊಡೆದು ಬಿಡು; ತೊಡೆದು ಬಿಡು
ಮಿಂಚಿನ ನೆನಪ;
ಹೀರಿಬಿಡು, ಹೀರಿಬಿಡು
ಒಲಪಿನ ಅನುಪ!

ಹಾದರಕೇ ಹುಟ್ಟಿದಂಥ ಮಗುವದು,
ಏನು ವಿಕಟ, ಎಂಥ ವಿಕೃತ ನಗುವದು;
ನಮ್ಮ ನಲವನುಣಲು ಬಂದ ಹಗೆಯದು!
ಹೂಳು, ಹೂಳು, ಹೂಳು!
ಬಚ್ಚಲಾಳದಲ್ಲಿ ಕುಣಿಯ ತೋಡು
ಅಲ್ಲಿ ಹುಗಿದು ಬಿಡು,
ಮೇಲೆ ನಾಸುತನದ ಮುದ್ರೆ
ಭದ್ರವಾಗಿ ಒತ್ತಿಬಿಡು;
ನಲವಿಗೊಂದೆ ಮೈ ಕೊಡು:

ಬಳಿಯ ಹೆಣ್ಣ ಮೊಲೆ ತುಟಿ ಮೈ
ದಿಂಡು ತೊಡೆಯು-ಸೈ, ಸೈ, ಸೈ!
ಥೈ, ಥೈ, ಥೈ, -ತಕ ಥೈ ಥೈ......
ನಡೆಯಲಿನ್ನು ನಾಟ್ಯ ಕಾಳಕತ್ತಲಲ್ಲೇ,
ನಾಲ್ಕು ಗೋಡೆ ನಡುವಣ ಕಿರುಕೋಣೆಯಲ್ಲೇ

ಕೊಲ್ಲುವಾಟ (ಬಂದಳಿಕೆ!)-
ಅದೇ ಬೆಳೆಯು, ಅದೆ ಗಳಿಕೆ!
ಕೊಂಚ ನಯ, ಕೊಂಚ ನುಣುಪು,
ಏನೊ ಭಯ, ಕೊಂಚ ದಯ,
ಕಾಡ ಪಶುವ ಬೀಸವಂದ,
ನಾಡಿನೊಡೆಯ ನರ ಬಂದ!

೩

ಕೊಲ್ಲುವಾಟ ಮುಗಿದ ಮೇಲೆ
ಬಾಳಿನ ನೊರೆ ರಾಸಲೀಲೆ:
ಚೆಲುವೊಲವೋ, ನಲವೊ ತಿಳಿವೊ
ನಯಜೇಡದ ಭಯಜಾಲವೊ
ಕವಿಋಷಿಗಳ ರಸವು ಜಸವು
ದಿನದಿನಕ್ಕೂ ಹೊಸವು ಹೊಸವು.
ಕೊಲೆಬಿದ್ದಿಗೆ ಬಾಯ್ಕಟ್ಟಲು

ನಡುವೆಬೇಕು ನಂಜಿಕೊಳಲು
ಈ ಸಂಸ್ಕೃತಿಲೀಲೆಯು;
ನೆತ್ತರ ಕಡಲಲ್ಲು ಬೇಕು
ಜೀವರಸದ ಗಣಿಗಳು,
ಕೊರಳ ರುಂಡಮಾಲೆಯಲ್ಲು
ಕಂಬನಿಗಳ ಮಣಿಗಳು.

ನೆಲವು ಬೆಂಕಿ ನೀರು ಗಾಳಿ
ಮನೆಯ ತೊತ್ತುಗೆಲಸಕೆ;
ಗಂಧವನ್ನು ಬಳಿದಾಯ್ತು
ಒಳಗಿನೆಲ್ಲ ಹೊಲಸಿಗೆ-
ಇದೇ ದಿವ್ಯ ಜೀವನ
ಆತ್ಮರಸದ ದೋಹನ!
ನರಿಯು, ನಾಯಿ, ಹುಲಿ, ತೋಳ
ಕೆಲವು ಹೊತ್ತು ಆಸತ್ತು
ಬಯಲ ಬಿಟ್ಟು ಮುಸುಕು ತೊಟ್ಟು
ಗವಿಯೊಳವಿತುಕೊಂಡುವು;
ಹಸುವು, ಹುಲ್ಲೆ, ಚಿಗರೆ, ಕಡವೆ,
ಕಲಕೋಕಿಲ, ಗೊರವಂಕ,
ಗಿಳಿ ಅಳಿಗಳು ನಿಶ್ಶಂಕ
ನಂದನದಲಿ ಒಂದೆ ನಿಮಿಷ
ಬಿಟ್ಟು ಎಲ್ಲ ತಳ್ಳಂಕ
ಆಡುವಂತೆ ಕಂಡುವು
ಆರಿದಂತೆ ತೋರುವಂಥ ಅಗ್ನಿಗಿರಿಯ ಮುಖದಲಿ.
ಬೆಳಕೆ ಪಟ್ಟವೇರಿತೇನೊ ಎನ್ನುವಂಥ ಸುಖದಲಿ!

ಮರು ನಿಮಿಷವೆ ಬಂತು, ಪಾಪ!-
ಭೂಕಂಪದ ಅಪಲಾಪ,
ಅಗ್ನಿಮುಖಿಯ ವಿಪ್ರಲಾಪ;
ಕತ್ತಲೆಂಬ ಪ್ರಳಯಕಾಲವಾರಿನಿಧಿಯ ನಾಲಗೆ
ಕಿತ್ತು ಬಿಸುಟಿತಲ್ಲ , ನೋಡು, ಬೆಳಕಿನೆಲ್ಲ ಪೀಳಿಗೆ

ಒಂದೊ ಎರಡೊ ಮರಿಗಳು
ತಪ್ಪಿ ಜಾರಿ ಜಗುಳಲು
ನೋನುತಿರುವ ನೋಹನೆಂಬ ಗಾಂಧಿಯೆಂಬ ದುರ್ಗಕೆ,
ಅಲ್ಲಿ ತಪೋಮಾರ್ಗಕೆ-
ನಡೆಯಲಿನ್ನು ನಾಟ್ಯ ಕಾಳಕತ್ತಲಲ್ಲೇ,
ನಾಲ್ಕು ಗೋಡೆ ನಡುವಣ ಕಿರುಕೋಣೆಯಲ್ಲೇ!

೪

ಗಾಂಧಿ, ಗಾಂಧಿ, ಗಾಂಧಿ!
ಮರೆವುದೆಂತು ಹೇಳು, ಒಳಗೆ
ಹೂತ ಮಗುವನು;
ತೊಡೆವುದೆಂತು ಆ ಅಪೂರ್ವ
ನೋವು ನಗುವನು?

ಅತ್ತಲಿತ್ತಲೆತ್ತಲೂ
ಮಿಂಚು ಗೊಂಚಲೆರಚಲು;
ಕೃತಿಕೃತಿತಳಪಾಯ ಬಾಯ
ತೆರೆಯೆ ಮಿಂಚು ಹೊಂಚಲು;

ಈ ಮಿಂಚಿಗೆ ಬೇರೆ ಏನು ಕೆಲಸ ಬೇಡವೇ?
ಎದೆಯಂಚಿಗೆ ಉರಿಯನೆರಚಿ ನೋಡುವಾಟವೇ?
ಕತ್ತಲನ್ನು ಕೆಣಕಲೇಕೆ?
ಇಲ್ಲದ ಭಯ ತಿಣುಕಲೇಕೆ?
ಅದರ ಪಾಡ ನೋಡೆವೆ?

ಪರದೇಶಿಯ ಹಾಗೆ ಬಂದು ತೊಳಲುತಿರುವ ಪಾತಕಿ,
ನಮ್ಮ ಸೊಗವ ಕೊಲ್ಲ ಬಗೆವ ಕಳ್ಳನಗೆಯ ಘಾತಕಿ!
ಕತ್ತಲ ಹೊಟ್ಟೆಯೊಳ್ಳಲ್ಲವೆ ಅದರ ಹುಟ್ಟು-ಸಾವು?
ಅದನು ಬಿಟ್ಟರಿದಕೆಲ್ಲಿದೆ ಇಲ್ಲಿ ಬೇರೆ ಠಾವು?
ಏಳುಸುತ್ತು ಕೋಟೆಯೊಳಗೆ
ಒಳಗೆ ರಂಗಮಹಲಿನೊಳಗೆ

ಸ್ಪರ್ಶ, ರೂಪ, ರಸ, ಗಂಧ!
ನೀರಿಳಿಯದೆ ಬಾಯಿಂದ?
ಆನಂದ, ಆನಂದ!

ಅದು ಅಹ ಕತ್ತಲ ಕಂದ:
ಎದೆಗವಚಿಕೊ, ಮುತ್ತು ಕೊಡು;
ನಿನ್ನನದಕೆ ತೆತ್ತು ಬಿಡು;
ಕೊಲ್ಲು,ಕೊಲ್ಲು-ಹಗೆ ಬಂದ!
ಗಾಂಧಿ-ಗಾಂಧಿ ಅದೊ ನಿಂದ!

೫

ಮರುಧರೆ, ಕುದಿಕುದಿವ ಮರಳು;
ತಿವಿಯುತಲಿದೆ ಬಿಸಿಲ ಸರಳು-
ಓಯಸ್ಸಿಸ್ಸೋ, ಓಯಸಿಸ್ಸು!
ಅಹಾ ಸರಸ್ಸು ರಸಸದಸ್ಸು!

ಅಲ್ಲೆ, ಅಲ್ಲೆ-ಓ ಅಲ್ಲೇ-
ಆ ದಿಗಂತದತಿ ಸಮೀಪ
ಹೊಸ ನೀರಿನ ರಸಾಲಾಪ;
ನಡೆ, ನಡೆ, ನಡೆ, ಅಣ್ಣ
ನಂಬು ನಿನ್ನ ಕಣ್ಣ.

ಎಲ್ಲಿ, ಎಲ್ಲಿ, ಎಲ್ಲಿ?
ಎಲೆ ಮರುಳೆ, ಮರಳೆ ಮರಳು!

ಹತ್ತಿರಲ್ಲಿ , ದೂರದಲ್ಲಿ
ಆ ದಿಗಂತರೇಖೆಯಲ್ಲಿ
ಸುತ್ತಲೂ ಅಪಾರದಲ್ಲಿ
ಎಲ್ಲಿದೆ ಆ ಓಯಸಿಸ್ಸು,
ಆ ಬಾಳ್ನೆಲ, ಆ ಸರಸ್ಸು?

ಕಂಡು ಕೂಡ ಕಾಣದಂತೆ
ಕರಗಿತಲ್ಲ, ಅರಗಿತು;

ಮನಕೆ ತಂಪು ತಟ್ಟಿ ಕೂಡ
ಮುಟ್ಟದೆ ಮೈಗರೆಯಿತು:
ಆ ಅನಂತಮನದ ಗೊರಸು
ಗೀರಿದಂತೆ ತೋರಿತಲ್ಲ,
ದೇವನದಿಯ ನಲ್ಮೆಸೆಳಲು
ಸಾಟಿದಂತೆ ತೋರಿತಲ್ಲ,
ಮಂದಾರದ ಗಂಧಗೀತ
ಸ್ಪಂದಿಸಿದೊಲು ತೋರಿತಲ್ಲ,
ಆಲದೆಲೆಯ ಜೀವಶಿಶುವೆ
ತೇಂಕಿದಂತೆ ತೋರಿತಲ್ಲ!
ಎಲಾ ಇದೇನು, ಎಂಥ ಕನಸು!
ಕನಸೊ, ನನಸೊ? ಎಂಥ ಮರಸು!
ಅಯ್ಯೊ, ಅಯ್ಯೊ; ಎಲ್ಲರಸಲಿ-
ಯಾವ ಮರಳ ಭಾರದಲ್ಲಿ?
ಯಾವ ದಿಗ್ದ್ವಾರದಲ್ಲಿ?
ಯಾವ ರವಿವಿಹಾರದಲ್ಲಿ?
ಯಾವ ಶರಧಿತೀರದಲ್ಲಿ?
ಸೋತೆನಯ್ಯ, ಸೋತೆನು!
ಓ, ಓ, ಓ ಮರುಭೂಮಿಯೆ,
ನಮ್ಮ ತಾಯಿ ಭೂದೇವಿಯೆ,

ನೀನೆ ಶರಣು, ಶರಣು;
ಶುಷ್ಕ ಶೂನ್ಯ ಶರಣು!
ಇಲ್ಲಿ ನಿನ್ನ ತೊಡೆಯ ಮೇಲೆ
ನಾನು ಸತತ ಬಂದಿ;
ಅಲ್ಲಿ ಕುಳಿತು ಕನವರಿಸುವೆ;
'ಗಾಂಧಿ, ಗಾಂಧಿ, ಗಾಂಧಿ!'

- ಗೋಪಾಲಕೃಷ್ಣ ಅಡಿಗ

ಗಾಂಧೀಸ್ತವನ

ಮನೆಗೆ ಬಂದವನೆ ದೀಪವ ಹುಡುಕಿದೆ,
ಕಣ್ಣ ಮುಚ್ಚಿದೆ, ಎದೆಯಲಿ ಮುಳುಗಿದೆ.
ಹಾರಿ ತೇಲಿ ಬಂತು ಬಿಳಿಯ ರೆಕ್ಕೆಯ ಹಕ್ಕಿ;

ಮೀನಿಗೆ ಕಷ್ಟ ಬಂತು ಅದರ ಸೊಕ್ಕಿಗೆ ಸಿಕ್ಕಿ.
ನೀರ ಮೇಲಿನ ಹಲಗೆ ನಕ್ಕು ಕನವರಿಸಿತು,
'ಗಾಂಧಿ' ಎನ್ನುವ ನೆರಳು ಅವತರಿಸಿತು.
ತೆಂಗು ಗರಿ, ತಂತಿ, ಕಿಡಿ, ನೀವದನು ನೋಡಿ, ಬಿಡಿ:
ಹೊಗೆಯಾಡಿದರೆ ಕೆಂಡ, ಕೆಂಡ ಬೆಳೆದರೆ ಬೆಂಕಿ,
ಬೆಳಕು ಬೆಂಕಿಯ ನಾಲಗೆ.
ನಡೆದಿವೆ ಒಂದು ಸಾಲಿಗೆ

ಮೂರು ಬೆಟ್ಟಗಳು;
ವಿಷವೆಲ್ಲ ಅಮೃತ ಒಂದರ ಪಾಲಿಗೆ;
ಇನ್ನೊಂದು ಶಿಲುಬೆಗಳ ಬೆಳ್ದಿಂಗಳು;
ಕಡೆಯ ಬೆಟ್ಟದ ಮೇಲೆ ಮೂರನೆಯ ನೆರಳು
ಹೆಬ್ಬಾವಿನೂರೆಗೂಲನು ಹಿಡಿದು, ಹೆಬ್ಬುಲಿಯ
ಹೆಜ್ಜೆಯನ್ನು ಹಿಡಿದು ನಡೆಯುತಿದೆ
ಎಲ್ಲಿಗಾದರಲ್ಲಿಗೆ!

ಅಲ್ಲಿ ಕಬ್ಬಿ ಕರಗಿ ಹೊಳೆಯಾಗಿ ಹರಿದಿತ್ತು,
ಸುಡದ ಸೂರ್ಯನ ಸೀಮೆ ಬಾಗಿಲನು ತೆರೆದಿತ್ತು.

"ಯಾರು ಹಿತವರು ನಿನಗೆ ಈ ಮೂವರೊಳಗೆ?"
ಮೂವರೂ ಹಿತವರೆ ನನಗೆ!

ಕೈಮುಗಿದು ನಡೆದಿತ್ತು ಕಡೆಯ ನೆರಳು;
ನಡೆದಂತೆ ಬೆಟ್ಟಗಳು ಕರಗಿ ಬಂಡೆಗಳಾಗಿ,
ಬಂಡೆಗಳು ಕರಗಿ ಕಲ್ಮಣ್ಣೆಯಾಗಿ, ಮಣೆ ಕರಗಿ
ಕಣವಾಗಿ ಅಣುವಾಗಿ ಮುಗಿದಿತ್ತು, ಮಿಂಚಿನಲಿ,
ಭೂಮಿಯಂಚಿನಲಿ
ಕಾಲದಾಚೆಗೆ ತೆರೆದ ಕಡೆಯ ಬಾಗಿಲ ತಳ್ಳಿ
ನೆಲದ ಬದುಕಿನ ನೆರಳು ಮುನ್ನುಗ್ಗುತಿಹುದು.
ದೀಪವಿತ್ತು, ದೀಪವಿಲ್ಲ
ದೀಪವಿತ್ತು, ದೀಪವಿಲ್ಲ.
"This body has been given to us
only in order that we may serve
all creation with it."

ಲೋಕಸೇವೆಗೆ ಮುಡಿಪು ದೇಹವೆಂದರೆ, ಲೋಕ
ನುಡಿದವನ ದೇಹವನೆ ಬಲಿಗೊಂಡಿತು.
ನೆಲದ ನೋವನು ಅರಿತು ಅಮೃತಪಾತ್ರೆಯ ತಂದ
ದಾನಿಯನೆ ಕೈಯಾರ ಕೊಂದರಿವರು.

"ಸಿಡಿಮದ್ದು ಗುಂಡುಗಳ ಸಡಗರದ ಸಮಯದಲಿ
ಬರಿಗೈಲಿ ಹೊರಟವನು ಬದುಕಿ ಬಂದೆ.
ನೀನೆ ಬೆಳಸಿದ ಧನ್ಯ ದರ್ಶನದ ಯಜ್ಞದಲಿ
ಸರ್ವಬಲಿ ನೀನಾಗಿ ಮುಗಿದೆ, ತಂದೆ."
ದೀಪವಿತ್ತು, ದೀಪವಿಲ್ಲ;
ದೀಪವಿತ್ತು ದೀಪವಿಲ್ಲ.

ನಿನ್ನ ಹೆಸರಿಡಬಹುದು ಬೀದಿ ಬೀದಿಗೆ ಸುಲಭ;
ನಿನ್ನಂತೆ ಬದುಕುವುದು ದುರ್ಲಭ.
ನಿನ್ನ ಹೆಸರೆತ್ತಿದರೆ, ನಿನ್ನ ಮಾತಾಡಿದರೆ
ನಿನ್ನ ವೈರಿಗೆ ಕೂಡ ಲಾಭ.

ಲೋಕವನೆ ಎದುರಿಸಿದ ನಿನಗೆ ತಿಳಿಯದೆ, ತಂದೆ.
ನಿನ್ನ ಬಾನಿಗೆ ಕರೆದ ಗೆಳೆಯರಾರು?
'ಮಾನವತೆಯಿಂದ ಅಂಬರವ ತುಂಬಿದ ಉಸಿರೆ'
ನಿನ್ನ ಬಾಳಿನ ಚೆಲುವ ನೀನೆ ಸಾರು.

ಹಿಂದೊಂದು ಕಾಲದಲಿ ಮುದಿಸಿಂಹ ಮುನಿದಿತ್ತು:
ಗಾಂಧಿಯೊಬ್ಬ ಮನುಷ್ಯನೇ?
ಭಾರತದ ಬಿಡುಗಡೆಯೆ ಬೆರಗಾಗಿ ನುಡಿದಿತ್ತು:
ಗಾಂಧಿಯೊಬ್ಬ ಮನುಷ್ಯನೇ!
ಹುಟ್ಟು ಸಾವುಗಳಾಚೆ ಭರವಸೆಯ ನೆರಳಿತ್ತು:
ಗಾಂಧಿಯೊಬ್ಬ ಮನುಷ್ಯನೇ.

- ಕೆ.ಎಸ್. ನರಸಿಂಹಸ್ವಾಮಿ

ಗಾಂಧಿ

ನೀನೊಬ್ಬ ವಿಚಿತ್ರ ಮನುಷ್ಯ
ಎಲ್ಲವನ್ನೂ ಅಂಗಡಿ ತೆರೆದು
ಬೆಲೆ ಕಟ್ಟ ಬರದ ಈ ಮಂದಿಯ ಮುಂದೆ
ಹರಾಜಿಗಿಟ್ಟೆ.

ಕಾಸಿಗೆ ಕಾಸು, ಬಡ್ಡಿಗೆ ಬಡ್ಡಿ
ಸೇರಿಸುತ್ತಾ,
ಕತ್ತಲ ಮೂಲೆಯಲ್ಲಿ ದಿನವೂ
ಇಲಿ ಹೆಗ್ಗಣಗಳೊಡನೆ
ತೂತು ಕೊರೆಯುತ್ತಾ,
ಬ್ಯಾಂಕಿನಲ್ಲಿ ಬೆಳೆವ ಬಡ್ಡಿಗೆ
ರೋಮಾಂಚನಗೊಳ್ಳುತ್ತಾ
ಕೂತವರ ನಡುವೆ
ನೀನು ಎಲ್ಲಿಂದ ಬಂದೆಯೋ
ಮಹರಾಯ!

ಉತ್ತ ಹೊಲ; ತೆರೆದ ಪುಸ್ತಕ
ಗಾಜು ಮೈ ಗಡಿಯಾರ;
ನಿನ್ನ ಬದುಕು.
ಕಾವಿಯುಡಲಿಲ್ಲ , ಹೆಣ್ಣ ಬಿಡಲಿಲ್ಲ ;
ಎಲ್ಲೋ ಮಠದೊಳಗೆ ಕೂತು ರಹಸ್ಯವಾಗಿ
ಜಪಮಣಿ ಎಣಿಸಿ ಸಮಾಧಿಸ್ಥನಾಗಲಿಲ್ಲ ;

ತೆರೆದ ಬಯಲಿನ ಕೆಳಗೆ ಎಲ್ಲರ ಜೊತೆಗೂಕೂತು
ಪ್ರಾರ್ಥಿಸಿದೆ:
ಸಬಕೋ ಸನ್ಮತಿ ದೇ ಭಗವಾನ್.
ಪವಾಡಗಳನ್ನು ತೋರಿಸಿ ಯಾರನ್ನು ಮರುಳು ಮಾಡಲಿಲ್ಲ
ಮಾಡಿದ್ದೇ ಪವಾಡದ ತಲೆ ಮೆಟ್ಟಿತು.

ಕತ್ತಿ-ಕೋವಿ ಹಿಡಿಯಲಿಲ್ಲ
ಆದರೂ ಯುದ್ಧ ಮಾಡಿದೆ.
ತುಟಿ ಬಿಗಿಯಲಿಲ್ಲ. ಹಲ್ಲು ಕಚ್ಚಲಿಲ್ಲ ,
ಕಣ್ಣು ಕೆಂಪಗೆ ಮಾಡಲಿಲ್ಲ ,
ನಗು ನಗುತ್ತಲೇ ಎದುರಾಳಿಗಳ ಮೇಲೆ
ಮುನ್ನುಗ್ಗಿದೆ
ಗೆದ್ದೆ.

ಎಲ್ಲವನ್ನೂ ಕಟ್ಟಿಕೊಂಡೆ,
ಆದರೂ ಏಕಾಂಗಿಯೇ ತೋರಿದೆ.
ನೋಡುವುದಕ್ಕೆ ಏಕಾಂಗಿಯಾದರೂ
ಜನಗಣಮನದ ಅಧಿನಾಯಕನಾಗಿ
ನಡೆದೆ.

ಕಡೆಗೆ ಬಾವುಟವನ್ನು ಮುಗಿಲಿಗೇರಿಸಿ
ಸಿಡಿಗುಂಡುಗಳ ಹಾಸಿಗೆಯ ಮೇಲೆ
ನಿನಗೆ ತಣ್ಣಗೆ ನಿದ್ದೆ.

ನಮಗೂ ನಿದ್ದೆ.
ಒಮ್ಮೊಮ್ಮೆ ಎಚ್ಚರ.
ಯಾರ್ಯಾರೊ ಬರುತ್ತಾರೆ, ಹೋಗುತ್ತಾರೆ.
ತುಂಬಿರುವ ಜಂಕ್ಷನ್ನಿನಲ್ಲೇ
ರೈಲಿಗೆ ಟಿಕೇಟು ಕೊಂಡೂ ಕೂಡ
ವೆಯಿಟಿಂಗ್ ರೂಮಿನಲ್ಲಿ ಗೊರಕೆ.
ಬರುತ್ತವೆ, ಹೋಗುತ್ತವೆ ರೈಲು,

ಹತ್ತುತ್ತಾರೆ ಇಳಿಯುತ್ತಾರೆ ಜನ;
ಕಡೆಗೆ ಕಸಗುಡಿಸುವಾತನೇ ಬಂದು
ಎಚ್ಚರಿಸಿದಾಗ ದಿಗಿಲು,
ಸುತ್ತಲೂ ಕೆಂಪಗೆ ಕೆಂಡ ಕಾರುವ ಹಗಲು.
ನೀ ಬಂದು ಹೋದಾಮೇಲೆ
ಏನೇನಾಗಿದೆ ಎಂದು ಹೇಳಲಾರೆ.
ನಿನ್ನೆದೆಗೆ ತಾಕಿದ ಗುಂಡು ನಮ್ಮೆದೆಗೂ ತಾಕಿದ್ದರೆ.....
ಆ ಮಾತೆ ಬೇರೆ.

ನೀನಿದ್ದೆ ಎಂಬುದಕ್ಕೆ ಸ್ಮಾರಕ ನಿರ್ಮಿಸುವುದನ್ನು
ನಾವು ಮರೆತಿಲ್ಲ.
ಇಗೊ ಈ ಚೌಕದಲ್ಲಿ , ಆ ಮಹಲಿನಲ್ಲಿ
ಈ ಪಾರ್ಕಿನಲ್ಲಿ ನಿನ್ನ ವಿಗ್ರಹವನ್ನು ಸ್ಥಾಪಿಸಿ
ವರ್ಷ ವರ್ಷವೂ ನಿನ್ನ ನೆನಪುಗಳಲ್ಲಿ
ಕೈ ತೊಳೆದುಕೊಳ್ಳುತಿದ್ದೇವೆ.
ಆದರೂ ಕೈಗಂಟಿಕೊಂಡಿರುವ ನಿನ್ನ ರಕ್ತದ ಗುರುತು
ಇನ್ನೂ ಹೋಗುತ್ತಿಲ್ಲ.

ಸಂಜೆ ಪಾರ್ಕಿನಲ್ಲಿ
ನಿನ್ನ ವಿಗ್ರಹದ ಮೇಲೆ ಹಕ್ಕಿಗಳು ಗಲೀಜು ಮಾಡಿರುವಲ್ಲಿ
ಜನ ಬರುತ್ತಾರೆ, ಹೋಗುತ್ತಾರೆ.
ನಿನಗೆ ಪ್ರಿಯವಾದ ಕಡಲೇಕಾಯಿ ತಿಂದು
ಸಿಪ್ಪೆಯನ್ನಲ್ಲೇ ನಿನ್ನ ಪಾದಕ್ಕೆ ಸುರಿದು
ನಡೆಯುತ್ತಾರೆ.

ವಾಕಿಂಗ್ ಬಂದ ತರುಣ ದಂಪತಿಗಳು
'ಪಾಪ ಯಾರದೋ ಮುದುಕನದು ಈ ಪ್ರತಿಮೆ'
ಎಂದುಕೊಳ್ಳುತ್ತಾರೆ.
ಅಜ್ಜ ಹೇಳುತ್ತಾರೆ ಮೊಮ್ಮಗನಿಗೆ:
'ಇದು ಗಾಂಧೀ'

‘ಗಾಂಧಿ! ಹಾಗೆಂದರೇನಜ್ಜ’ ಅನ್ನುತ್ತದೆ ಮಗು
ಅಜ್ಜ ಹೇಳುತ್ತಾನೆ, ‘ಅವನೊಬ್ಬ ಹುಚ್ಚ.....
ಬ್ರಿಟಿಷರಿದ್ದಾಗಲೇ ಚೆನ್ನಾಗಿತ್ತು’ ಎಂದು ಗೊಣಗುತ್ತ
ತನ್ನ ಕಳೆದ ಕಾಲದ ಸಾಹೇಬಗಿರಿಯ ನೆನಪು ಕುಟ್ಟುತ್ತಾ
ಮುಂದೆ ಹೋಗುತ್ತಾನೆ.
ಇದನ್ನೆಲ್ಲ ನೋಡುತ್ತ ನಿದ್ದೆಯೊಳಗೆ ನಾನು
ಕುಮಟಿ ಬೀಳುತ್ತೇನೆ.
ಗಾಳಿ ಬೀಸುತ್ತದೆ
ಎಲೆ ಉದುರುತ್ತವೆ
ಭದ್ರವಿರದ ಈ ಮನೆಯ ಕಿಟಕಿ ಕದಗಳು
ಗಾಳಿಗೆ ಹೊಯ್ದಾಡುತ್ತವೆ.
ನಿನ್ನ ನೆನಪನ್ನೆ ಹೊದ್ದು ನಿಟ್ಟುಸಿರು ಬಿಡುತ್ತಾ
ಎಂದಾದರೂ ನೀನುತ್ತು ಬಿತ್ತಿದ ಬೀಜ
ಮೊಳೆತಾವೇ ಎಂದು ಕೊರಗುತ್ತೇನೆ.

– ಜಿ.ಎಸ್. ಶಿವರುದ್ರಪ್ಪ

ಆದರೂ ಅವನ ನೆನಪು

ಗಾಂಧೀಜಿಯ ಬಗ್ಗೆ ಈ ಕವಿತೆ ಬರೆದು
ಗೆದ್ದೆ
ಎಂದು ಭಾವಿಸಿದ್ದೆ.
ಆದರೆ ಈಗ
ಶಬ್ದಗಳಿಗೆ ಸಿಲುಕದೆ, ಅರ್ಥಕ್ಕೂ ನಿಲುಕದೆ
ಬರಿಯ ಧ್ವನಿಯಾಗಿ ಬಿಟ್ಟಿದ್ದಾನೆ.

ಆದರೂ ಅವನ ನೆನಪು ಪದೇ ಪದೇ
ಕಾಡುತ್ತದೆ.
ನಮ್ಮ ಸೊಕ್ಕು-ಸೋಲು ಕ್ರೂರವಾಗಿ
ಬಿಚ್ಚಿಕೊಳ್ಳುತ್ತದೆ.
ಅವನೇ ತಂದುಕೊಟ್ಟ ಸ್ವಾತಂತ್ರ್ಯವನ್ನು
ಯಾರೋ ಕಸಿದು ತಮ್ಮ ಕಿಸೆಗೆ ತುಂಬಿ
ಕೊಳ್ಳುತ್ತಿರುವಂತೆ ಭಾಸವಾಗುತ್ತದೆ.

ನಾವು ಖಾಲಿ ಮೋಜು ಮಾಡುತ್ತಿರುವಾಗ
ನವಖಾಲಿ ಚಿತ್ರ
ಗಾಜು ಒಡೆದು ಹೊರಬರುತ್ತದೆ
ದಿಲ್ಲಿಯ ಸಂದಿ-ಗೊಂದಿಗಳನ್ನು ಸುತ್ತಿ
ಮಂತ್ರಿ-ಮಹಲು-ದರಬಾರುಗಳಿಗೆ ಬೆನ್ನು ತಿರುಗಿಸಿ,
ಹೊಟ್ಟೆಯ ಮೇಲೆ

ಹಸಿಮಣ್ಣಿನ ಮುದ್ದೆಯಿಟ್ಟುಕೊಂಡು
ದೂರದ ಹಳ್ಳಿಯ ಹೊಲಗೇರಿಯಲ್ಲಿ
ಮರೆಯಾಗಿ ಬಿಡುತ್ತದೆ.
ಹುಚ್ಚ-ಮಹಾತ್ಮ ಎಂದು ಶಿಫಾರಸು ಕೊಟ್ಟು
ಕೇವಲ ಮನುಷ್ಯರಾದ ನಾವು
ಸೆರೆ-
ಮನೆಗೆ ಮರಳುತ್ತೇವೆ.
ಈಗಲೂ
ಅದರ ಬಾಗಿಲುಗಳು ತೆರೆದೇ ಇವೆ.

– ಚೆನ್ನವೀರ ಕಣವಿ

ಗಾಂಧಿ ಎಂಬುವ ಹೆಸರು

೧

ನೂರು ವರ್ಷದ ಹಿಂದೆ; ಕಡಲ ಹಾಲುಕ್ಕಿತ್ತು
ಗಾಳಿ ಸಚರಾಚರಕೆ ಶ್ರೀಗಂಧ ಬಳಿದಿತ್ತು
ಬಯಲು ನಕ್ಷತ್ರಗಳ ನಗೆಯ ಚಿಮ್ಮಿತ್ತು
ಗಿರಿಗಳಿಗೆ ತರುಗಳಿಗೆ ನವಿರು ಮೂಡಿತ್ತು

೨

ಕತ್ತಲೆಗೆ ಸಿರಿವೆಳಗ ಕನಸು ಬಿದ್ದಿತ್ತು
ಪಾಪಕ್ಕೆ ಪುಣ್ಯದಾ ನೆನಹು ತೀಡಿತ್ತು
ಮಣ್ಣು ಕಣ್ ಪಡೆದಿತ್ತು ಕಲ್ಲು ಮಿದುವಾಗಿತ್ತು
ವಿಕೃತಕೆ ಚೆಲುವಿನಾ ಹಸಿವೆಯಾಗಿತ್ತು

೩

ಆಗ:
ಇಳೆಯ ಬಸಿರಿನ ಚಿಪ್ಪು ಬಾಯ್ದೆರೆದಿತು
ದಿವ್ಯಚೇತನವೊಂದು ಪುಟನೆಗೆದು ಬಂತು
ಬಾನಿಳಿದು ಬಂದದಕೆ ದೇಹವಾಯ್ತು
ಗಾಂಧಿ ಎನ್ನುವ ಹೆಸರು ಮೊದಲಾಯಿತು

೪

ಗಳಿಗೆ ಸಂಖ್ಯೆಗೆ ಬೆಳೆದ ವಿಶ್ವರೂಪವ ತಳೆದ
ನೆಲಮುಗಿಲ ತಟ್ಟಿದನು ಒಲುಮೆಗೈಚಾಚಿ

ಈತನಡಿಯಿಟ್ಟಲ್ಲಿ ಜಾತಿ-ಮತ ದೇಶಗಳ
ಬಿದ್ದು ಹೋದವು ಸಕಲ ಬಂಧನವು ಕಳಚಿ

೫

ಎಲ್ಲಿ ನೋವಿದ್ದಲ್ಲಿ ದುಃಖವಿದ್ದೆಡೆಯಲ್ಲಿ
ಕಣ್ಣೀರು ಹರಿವಲ್ಲಿ ಪ್ರತ್ಯಕ್ಷ ನೀತ
ಎದೆಗುದಿಯ ಮೈದಡವಿ ಸಂಕಟದ ತಲೆಸವರಿ
ಕಳವಳದ ಜೀವಕ್ಕೆ ತಂಪೆರೆದನೀತ

೬

ಯಾರ ಪಾಪವೆ ಇರಲಿ ತನಗೆ ಪ್ರಾಯಶ್ಚಿತ್ತ
ಸರ್ವ ಜೀವದ ಶುದ್ಧಿಗಾಗಿ ಉಪವಾಸ
ಬಂಧನದ ಸೆರೆಯಿಂದ 'ಬಿಡುಗಡೆ'ಯ ಬಿಡಿಸಲಿಕೆ
ಏಸೊ ವರ್ಷವು ತನಗೆ ಜೇಲುವಾಸ

೭

ಹರಿಜನರು ಗಿರಿಜನರು ಎಲ್ಲ ಜಾತಿಯ ಜನರು
ಎಲ್ಲರಿಗು ಆವನಿಂದ ಸಮತೆ ಪಾಠ
ಸತ್ಯಕ್ಕೆ ಉಂಟಾದ ಯುಗಯುಗದ ಹಸಿವನ್ನು
ನಡೆನುಡಿಯ ಸುಧೆಯಿಂದ ಕಳೆದನಧಟ

೮

ಕೆಟ್ಟುದನು ಕಂಡರಿಯ ಒಳಿತೊಂದನೇ ಬಲ್ಲ
ಲೇಸಗ್ಗೆಯುತ ಸವೆದು ಶ್ರೀಗಂಧವಾದ
How dangerous it is to be too good
ಜ್ಞಾನಿಯೊಬ್ಬನು ಹೀಗೆ ಮನಗರಗಿ ನುಡಿದ

೯

ಅನೃತವನ್ಯಾಯಗಳ ಜೊತೆಜಗಳ ಕಾದಾಗ
ಚಂಡಮಾರುತವಾಗಿ ದೇಶದಲಿ ಸುಳಿದ

“ರಾಮ ರಹೀಮರು ಒಂದೆ” ಎಂಬ ನುಡಿ ಬಂದಾಗ
ಹೃದಯ ಹೃದಯದ ನಾದದೆಳೆಯಾಗಿ ಬಿಗಿದ

೧೦

ಭಾರತದ ಹಣೆಯಲ್ಲಿ ಬರೆದ ದುರ್ಲಿಖಿತವನು
ತೊಡೆದುಹಾಕಿದ ಧೀರ ವೀರ ಸಂತ
ಸಂಸಾರ ಸನ್ಯಾಸ ಎರಡಕ್ಕೂ ಅವನಿಂದ
ಬೆಲೆ ಬಂತು ಅವನೆಂಥ ಪುಣ್ಯವಂತ

೧೧

ಬಿಡುಗಡೆಯ ಮನೆಕಟ್ಟಿ ಸುಣ್ಣಬಣ್ಣವ ಬಳಿದು
ರಂಗವಲ್ಲಿಯನಿಕ್ಕಿ ಹೊಂದೀಪ ಬೆಳಗಿ
ಜ್ಞಾನ-ಸಂಪದ-ಸಿದ್ಧಿ ಗಂಗಾವತರಣಕ್ಕೆ
ಕೈಮುಗಿದು ಪ್ರಾರ್ಥನೆಗೆ ನಿಂತ ಮಹ ತ್ಯಾಗಿ

೧೨

ಎದೆಗೆ ಬಡಿಯಿತು ಗುಂಡು “ಹಾ ರಾಮ ಹಾ ರಾಮ”
ಹಿಂಸೆಯೆದೆಯಲಿ ಬರೆದ ರಾಮನಾಮವನು
ತನ್ನ ಅಜ್ಞಾನಕ್ಕೆ ಬಲಿಕೊಟ್ಟಿತೀ ವಿಶ್ವ
ಮತ್ತೊಮ್ಮೆ: ಆ ಕ್ರೈಸ್ತಬಸವ ಬುದ್ಧರನು

- **ಶಾಂತರಸ**

ಮಹಾತ್ಮಾ ಗಾಂಧಿಗೆ

೧

ಹತ್ತು ಶತಮಾನಗಳ ದಾಸ್ಯಭಾರವ ಹೊತ್ತು
ಕತ್ತು ಬಗ್ಗಿಸಿ ಮಾತೆ ನಿಂತಿರುವಳೀ ಹೊತ್ತು!
ಹೆತ್ತ ಮಕ್ಕಳು ಹಸಿದು ಹಲಬುತಿರಲಜ್ಞಾನ
ಕತ್ತಲೆಯ ಕಾರೊಡ್ಡು ದಾರಿಗಟ್ಟಿರೆ, ಮಾನ
ಎತ್ತೆತ್ತಲೋ ಹಾರಿ ಮಾಯವಾಗಿರೆ ತೀರ,
ಹೆತ್ತಬ್ಬೆ ಹಾರೈಸಲುದಿಸಿ ಬಂದನು ಧೀರ!
ಸತ್ಯ, ಶಾಂತಿ, ಅಹಿಂಸೆ-ಸತ್ಯಲೋಕದ ಬಿತ್ತು-
ಮರ್ತ್ಯ ಭುವಿಯೊಳಗರಳಿ ಸೂಸೆ ಸುಮನೋಗಂಧ
ಭಾರತಾಂಬೆಯ ಮಡಿಲೊಳಿಟ್ಟೆಯಲೆ ಜಸವೆತ್ತು!
ಕರ್ಮವೀರನುದಾರ ಕರ್ಮಚಂದ ಕುಮಾರ
ಮೋಹನನು ಮೋಹನನೆ ದೀನ ಸೇವಾನಂದ
ದಾಸ ರತ್ನನು; ಗಾಂಧಿಯೆಂಬ ಸುಂದರ ನಾಮ
ಮಹಿಮೆ ಮಂಗಳಧಾಮ! ದಿನ ದಿನಂ ಪಸರಿಸುವ
ಕೀರ್ತಿಯಿಂದಿನಿದಾಯ್ತು; ದೀರ್ಘಾಯುಮಸ್ತು!

೨

ಸತ್ಯದ ಹಿಮಾದ್ರಿ ಶಿಖರದೊಳಚಲ ಮಾನಸದೆ
ನಿತ್ಯ ನಿರ್ಮಲ ವಿಪುಲ ಪ್ರೇಮಗಂಗೆಯೊಳೆಸೆದೆ.
ಕೊಲೆ, ಸುಲಿಗೆ, ಕಳುವು, ಕಾಳಗವೆಂಬ ಕಾರಿರುಳು

ಇಳೆಯ ನುಂಗಿರೆ, ನಿನ್ನ ಬಾಳ ಮಿಂಚಿನ ಸರಳು
ನೆತ್ತರಿನ ನದಿ ದಾಂಟಿ, ಅಮೃತತ್ವಮನ್ನೀಂಟಿ,
ಹತ್ತು ಶತಮಾನದಾಯಸವನಿದೊ ತರಿದೊಟ್ಟಿ,

ಭೂವ್ಯೋಮಗಳನೊಂದೆ ಹಿಡಿತದಲಿ ಹಿಡಿವಂತೆ,
ದಿವ್ಯ ಪ್ರಭಾವಳಿಯ ನಡುವಿನಲಿ ನೀನಿಂತೆ!
ಪರತಂತ್ರಕಿದೊ ಕುಣಿವ ಸೂತ್ರಗೊಂಬೆಗಳಂತೆ,
ಹಿರಿಯ ಹಿಂದಿನ ಜನದ ಸೂತ್ರಗಳ ಮರೆದಂತೆ,
ಬದ್ಧವಾಯಿತು ಜನತೆ, ಬಿದ್ದುಹೋಯಿತು ಘನತೆ,
ಉದ್ಧರಿಪರಾರೆನಲ್ ಬೆನ್ನೊಳೆತ್ತಿದೆ ಸಮತೆ!
ಹಲವುಗಾಲದ ಹಳೆಯ ಶಸ್ತ್ರ, ಶಾಸ್ತ್ರಚ್ಛಿದ್ರ!
ನಲವಿಂದ ಗೆಲವಿಂದ ಗೆದ್ದೆ, ಭಾರತಭದ್ರ!
ನಿನ್ನ ಹೊರತಾರುಂಟು ಗಾಂಧಿ ನಮಗಿಂದು?
ನಿನ್ನ ಜೀವನ ಭಾರತವ್ರಜದ ಮುಂದು!

- ಪಾಂಡೇಶ್ವರ ಗಣಪತಿರಾವ್

ಗಾಂಧಿಯವರ ಸ್ಮಾರಕ!

ನಿನ್ನ ಪ್ರತಿಮೆಯ ನಿಲಿಸಿ
ನಾವು ಮೆರೆವುದು- ವ್ಯರ್ಥ
ನಮ್ಮ ಹೃದಯದೊಳಿರಲಿ
ನಿನ್ನ ಮರಣದ ಅರ್ಥ.
ನಿನ್ನ ಭಸ್ಮಕೆ ಕಾಶಿ
ಗೋಕರ್ಣ ಬೇಕಿಲ್ಲ.
ನಿನ್ನ ಬೂದಿಯ ತ್ರಾಣ
ಪುಣ್ಯಕ್ಷೇತ್ರಕ್ಕಿಲ್ಲ.

ನಿನ್ನ ಕರ್ಮದ ಕಲ್ಪ
ವೃಕ್ಷ ಅಜರಾಮರವು
ನಿನಗೇಕ ಪುಣ್ಯ ತಿಥಿ
ಗಳ ಬಾಹ್ಯ ಜಂಜಡವು?
ಹುಟ್ಟಿದವರಿಗೆ ಹಬ್ಬ,
ಸತ್ತವರಿಗೇ ತಿಥಿಯು.
ನಿನಗೆ ಎರಡೂ ಇಲ್ಲ,
ಯಾವುದೂ ಇತಿಮಿತಿಯು.

ನಿನಗೇಕ ಸ್ಮಾರಕವು?
ಶಿಲ್ಪಕೃತಿ, ಹೂಮಾಲೆ?
ಲೋಕವನೆ ಬೆಳಗುತಿಧೆ
ನಿನ್ನ ಎಲುಬಿನ ಜ್ವಾಲೆ.

– ದಿನಕರ ದೇಸಾಯಿ

ಮಹಾತ್ಮ

ನಿನ್ನ ನೆತ್ತರು ನೆಲಕೆ ಚೆಲ್ಲಿದಂದು
ಮಣ್ಣು ನಡುಗಿತು, ಹಗಲಹೂ ಬಾಡಿತು.
ನರನು ಕೆರಳುವ ಹುಂಬ, ಬಾಳು ಯೂಪಸ್ತಂಭ
ಉತ್ತಮರ ಬಲಿ ಇಲ್ಲಿ-ಬಾನಾಡಿತು.
ಮನುಕುಲದ ರಕ್ತಮಯ ಇತಿಹಾಸ ಕೂಗಿತ್ತು-
ನೆಲವು ನಂದನವಾಗಲೇನು ಬೇಕು?
-ತಿಳುವು ತುಂಬಿದ ಕಣ್ಣು, ಒಲವು ತುಂಬಿದ ಎದೆಯು,
ಛಲವನರಿಯದ ಬದುಕು- ಇಷ್ಟೆ ಸಾಕು.
ಅಂತೆ ತವಕದಿ ಬಂದೆ, ಮನದ ಮಮತೆಯ ತಂದೆ
ಹಗೆಯ ಕಾಳೋರಗವ ತವಿಪೆನೆಂದೆ.
ಇತ್ತ ಹಾಲಾಹಲವು, ಅತ್ತ ಕೋಲಾಹಲವು-
ಅಮೃತಹಾಸವ ಬೀರಿ ನಡೆದೆ ಮುಂದೆ.
ಬತ್ತಿದೆದೆಗಳಲು ತಿಳಿವಿನ ತೇವು ಒಡೆದಿತ್ತು.
ಶಾಂತಿ ಸಮರಸಕೆ ಇದು ಮೊದಲೆನಿಸಿತು.
ಕಲ್ಲೆದೆಯ ಸೀಮೆಯಲು ಹೂ-ಕುಸುರು-ಆಹಾ ಇದು
ಬರುವ ಭಾಗ್ಯದ ಯುಗದ ತೊದಲೆನಿಸಿತು.
ನರನ ಕಾಡಿನ ನಡತೆ ಇನ್ನು ಮುಗಿದಿರಲಿಲ್ಲ-
ನಿನ್ನ ಬೇಟೆಗೆ ತಾಯಿ-ಮಣ್ ನಡುಗಿತು.
ನರನು ಕೆರಳುವ ಹುಂಬ, ಬಾಳು ಯೂಪಸ್ತಂಭ
ಇಂಥಬಲಿ ಇನ್ನೇಸೊ! -ಬಾನ್ ಗುಡುಗಿತು.

- ಗಂಗಾಧರ ಚಿತ್ತಾಲ

ಇಂದಿಲ್ಲವೇ ಆ ದೇವಮಾನವ

ಜ್ಞಾನಭಾನುವು ಮುಳುಗಿ ಕಾವಳವು ಸುತ್ತಿರಲು,
ದ್ವೇಷ ಸಾರಥಿಯಾಗಿ ಜಗರಥವ ಹತ್ತಿರಲು,
ತುಂಬು ಬೆಳಕನು ತಂದೆ, ದಾರಿ ತೋರಿದೆ, ತಂದೆ!
ಜಗದ ಬಾಳೊಳು ಬೆರೆತು, ನಾನು ಎಂಬುದ ಕೊಂದೆ.
ನೊಂದವರ ಬಂಧು, ನೀ ಕಣ್ಣೀರ ಮಳೆಗರೆದೆ,
ಲೋಕದಪರಾಧಗಳ ನೀ ಮನ್ನಿಸಿದೆ, ಮರೆತೆ.
ಸುಗ್ಗಿ ಚಂದಿರನಂತೆ, ಜನಕೆ ಹಿಗ್ಗನು ತಂದೆ.
ದೀನ ದಲಿತರ ಸೇವೆಯೊಳು ಸ್ವರ್ಗಸುಖವೆಂದೆ,
ಜಗಹಿತಕೆ ದುಡಿದೆ. ಜನ ನಿನಗಿತ್ತ ಫಲವೇನು?
ತುಂಬೊಲವ ತೋರ್ದವಗೆ ಇಳೆ ತೋರಿದೊಲವೇನು?
ಹಿಂಸೆ ಬೇಡೆಂದವಗೆ, ಹಿಂಸೆಯೊಳೆ ಮರಣವೇ?
ಕಟು ನುಡಿಯದವನೆದೆಗೆ ಕಠಿಣತಮಕಬ್ಬಿಣವೆ!

ಬರದೆ ಮಾನವದೇವರಿಳೆಯೊಳುಳಿಯುವ ಕಾಲ?
ಅಥವ ಬಂದಿದೆಯೇನೊ, ಈ ಲೋಕದಳಿಗಾಲ!

– ರಾಮಚಂದ್ರ ಶರ್ಮಾ

ಶುಭೋದಯ

(ಅಕ್ಟೋಬರ ಎರಡು)

೧

ಮುಂಜಾವು ಮುಗಿಲು ಹೊಗರೇರಿತು
ಆಕಾಶ ಮಂಟಪಕೆ ಕಿರಣ ತೋರಣ ಕಟ್ಟಿ
ಉದಯ ರವಿ ತೇಜಸ್ವಿ ಮೇಲೇರಿದ
ಸುತ್ತು ಭೂಮಂಡಲಕೆ ದಯೆದೋರಿದ.
ನಸುಕಿನಲ್ಲಿಯೆ ಎದ್ದು ಹಕ್ಕಿ ಹಾಡನು ಕಟ್ಟಿ
ಶಕುನ ಹೇಳುವ ಕೊರವಿ ಹಾಡುತಿತ್ತು
ನಿದ್ದೆ ಮಂಪರು ಕವಿದು ಮಲಗಿದ್ದ ಜಗಕೆಲ್ಲ
ಉದಯರಾಗವ ಮಾಡಿ ಎಬ್ಬಿಸಿತ್ತು.
ಏಳೊ ಗೆಳೆಯ,
ಇದೊ ನಿನಗೆ ಶುಭೋದಯ
ನೆಲದ ನರನಾಡಿಯಲಿ ಸಂತೋಷಮುದಯ!

೨

ಈ ನಾಡ ಕಥೆಯಲ್ಲಿ ಇದು ಒಂದು ಹೊಸ ಹಗಲು
ಪುಣ್ಯ ಪ್ರವಾಹದುಗಮ.
ಜನಮನದ ಜೀವನದ ಸಂಜೀವನ
ಮಳೆ ಹೋಗಿ ಬೆಳೆ ಹೋಗಿ ಇರುವ ನೆಲ ಹಾಳಾಗಿ
ಭೂಮಿ ತಳಮಳಿಸುತಿತ್ತು
ಒಂದೊಂದೆ ಹನಿಗಾಗಿ

ಮಣ್ಣು ಕಣ ಬಿಕ್ಕುತಿತ್ತು.
ಆ ಹಿಮಗಿರಿಯೆ ಕರಗಿ ನೀರಾಗಿ
ಸಮತಳಕೆ ಇಳಿದು ಬಂತು
ಮನೆಮನೆಯ ಹೊಸತಿಲಕೆ ಹರಿದು ಬಂತು.
ಅಲ್ಲಲ್ಲಿ ಕೂಡಿ ಕೊಳೆಯೇರಿ ಬಿದ್ದಿದ್ದ
ಕಸ ಕೊಳಚೆ ಇದರಲ್ಲಿ ಕೊಚ್ಚಿ ಹೋಯ್ತು
ಅವರ ಭವ್ಯತೆಗೆ
ಧೀರ ಗಂಭೀರತೆಗೆ
ಈ ಮನಸು ಮಾರು ಹೋಯ್ತು!

೩

ಬೆಳಕಿಲ್ಲದೀ ಮನೆಗೆ ಬೆಳಕಾಗಿ ಬಂದನಿವ
ಚಿಕ್ಕೆಯಂಗಳದಿ ಚಂದ್ರಾಮ ಚೆಲುವ!
ದಳವಳವೇರಿ ಕಳೆಯೇರಿ
ಇರುಳ ಮಲ್ಲಿಗೆಯರಳು ಬೆಳುದಿಂಗಳು.
ಅವನೊಂದು ಕಣ್ಣಿನಲಿ ಆ ಪ್ರಶಾಂತ ಪ್ಯಾಸಿಫಿಕ
ಇನ್ನೊಂದು ತುಂಬಿತ್ತು ಅಟಲಾಂಟಿಕ
ಜನಸಮುದ್ರದ ಹರ್ಷ ಉಕ್ಕೇರಿ ನಿಂತಿತೋ
ಧವಳಗಿರಿ ಕೀರ್ತಿ ಕಳಸ
ನಮ್ಮ ಉದ್ಧಾರಕ್ಕೆ ದೇಹ ಸವೆಸಿದನಿವನು
ಸ್ಥಿತಪ್ರಜ್ಞ, ಓ ಪುಣ್ಯಪುರುಷ.
ದೀನ ದಲಿತರ ಎದೆಯ ಮಾನಸದಿ ವಿಹರಿಸುವ
ಶ್ವೇತ ಪದಸ್ನೇಹಿ ರಾಜಹಂಸ
ಅವನ ಸಹವಾಸವೋ.....
ಅಸಿಧಾರಾವ್ರತ!
ಹಿಂದಿನವರಿಗೂ ಅವನ ಒಂದೊಂದು ಹೆಜ್ಜೆಗಳು
ಸುವಿಶಾಲ ರಾಜಮಾರ್ಗ.
ನಡುಹಗಲ ದೀವಟಿಗೆ ಹಿಡಿದು ನಡೆದವನಿವನು
ಕಣ್ಣಿನಲಿ ಕಂಡಿತ್ತು ಮುಂದೆ ಸ್ವರ್ಗ.

– ಸಿದ್ದಣ್ಣ ಮಸಳಿ

ಗಾಂಧಿ

'ಇವನೊಬ್ಬ ಎದ್ದ':
ಮುಗಿಲುದ್ದ ನಿಮಿರಿ ಬೆಳೆದ.
ನೆಲದ ನೆಲಗಟ್ಟನೊದೆದೆಲ್ಲೊ ಮುಗಿಲ ಮರೆ ಬಿದ್ದ
ಆಕಾಶ ಕ್ಷಿಪಣಿಯಂತಲ್ಲ ;
ಪಾತಾಳದಿಂದೆದ್ದು ನೆಲದೊಳಕ್ಕೆ ಕಾಲೂರಿ
ಬಾನ ಮುಡಿಯೊಳು ಧರಿಸಿ ನಿಂತಂತೆ ಮಂದರಾದ್ರಿ.

ಈ ಹಿಮಾಲಯ ಕಲ್ಪವೃಕ್ಷಕ್ಕೆ
ಮೇಲೆಷ್ಟೊ
ಅದಕ್ಕೂ ಸರಿಮಿಗಿಲು ಬೇರುಂಟು ಕೆಳಗೆ.
ದೇವರ ಮೊಗಕ್ಕೆ ಮೊಗವಿಟ್ಟು ನೋಡಿದ ನೆಲದಮಗ,
ಇವನಿಗೂ ಉಂಟು ರತಿ ಕಾಮ ಮೈಥುನವೆಲ್ಲ
ಅಷ್ಟೆ ಇವನಿಗೂ ನಮಗು ಸಾಮ!
ಹಾಗೆ ನೋಡಿದರೆ ನಾವೇ ಮೇಲು:
ಅಪ್ಪ ಸಾಯುವವೇಳೆ ಸತಿಯಪ್ಪಿದ್ದನಿವ -ಹದಿನಾಲ್ಕರಲ್ಲೆ.
ನಾವೊ ಮುವ್ವತ್ತರಲ್ಲೂ ಬಾಲಬ್ರಹ್ಮಚಾರಿಗಳು, ಸದಾ
ಆತ್ಮರತರು!

ಮಹಲುಗಳ ಸೂರಲ್ಲಿ ತೂಗಿಬಿಟ್ಟಂಥ
ಕುಂಡದ ಕಲ್ಪವಲ್ಲರಿಗಳು!
ನಮಗಿಲ್ಲ ನೆಲದಂಟು, ನಾವು ಊರ್ಧ್ವಮೂಲ!
ಹಾಗೆ ನೋಡಿದರೆ ಇವಗಿಂತ ನಾವೆ ಮೇಲು!

ಅಂಬರತಲಕ್ಕಗರಿದರೂ,
ಸಾಗರವ ದಾಟ ಬಂದರೂ
ಈ ಕಪಿಗೆ ಬಾಲವೊಂದುಂಟು ಇನ್ನೂ.
ಅದನ್ನಿವ ಮುಚ್ಚಿಕೊಳ್ಳಬೇಕೆಂಬ ನಾಗರಿಕ ಬುದ್ಧಿಯೂ ಇಲ್ಲ ;
ಅಲ್ಲಿ, ಸಾಗರದಾಚೆ ದೈತ್ಯಸಭೆಯಲ್ಲದನ್ನೆ ಬೆಳಸಿದನಿವನು.
ಸಿಂಬೆ ಸುರುಳಿಯ ಸುತ್ತಿ ಮೇಲೆಗರಿ ಕುಳಿತ
ತನ್ನ ಬಾಲದ ಉದ್ದ ಕೆಣಕಲವರು
ಊರೆಲ್ಲ ಉರಿಯಿಂದ ಬೆಳಗಿದನು.
ಬಾಲಸುಟ್ಟಿತೆ?
ಏನೊ!
ಆದರೂ ಎಗ್ಗಿಲ್ಲ ಇವಗೆ;
ಅದ ಕಳಚಿಬಿಡಲೂ ಇಲ್ಲ.
ಬೆಣೆ ಕಳಚ ಹೋಗಿ ಬಾಲ ಮೋಟಾದ
ನಾವೆ, ಮೇಲಿವಗಿಂತ!

ನಮ್ಮಲ್ಲಿ ಕೆಲವರಿಗೆ,
ಲಂಕೆ ಅಯೋಧ್ಯೆಗಳ ನಾಗರಿಕ ಮಂದಿ ಕಂಡು
ಬೆಳೆದುಕೊಂಡಿದೆ ಪ್ರಬಲೇಚ್ಛೆಯೊಂದು:

ನಾವೂ.
ನಾವೂ, ಅವರಂತೆ ಬಟ್ಟೆಬರೆ ಪೋಷಾಕ ಧರಿಸಿದರೆ
ಬಾಲ ಮರೆಸಿಕೊಳ್ಳಬಹುದಲ್ಲ!
ಅಹುದಲ್ಲ! ಸರಿಯಲ್ಲ!
ಅದರಿವನೊಬ್ಬ ಮುದಿಕಪಿ ಒಪ್ಪನಲ್ಲ!
ಇವನಿಂದ ನಮಗೆ ಪ್ರಗತಿಯೆ ಇಲ್ಲ!
ತಥ್! ಹಾಳು ಶನಿ!!
ಇದನ್ನೆ ಪೂರೈಸಿಬಿಡುವ?
ಅಹುದು, ಅದೂ ಸರಿಯೆ!.......

ಏನಾದರೂ ಸರಿ, ನಮ್ಮಂಥ ಬಾಲರಿಗೆ
ಇವನಿಂದ ಸ್ಫೂರ್ತಿ:
ನಾವೂ ಸಹ ಬಾಲ ಬಿಡಬಹುದು
ಮೈಲು ಮೈಲುದ್ದ ಬಿಟ್ಟೆಳೆದಾಡಬಹುದು.
ಇವನಿಂದ, ನಮ್ಮ ಕುಲಕ್ಕೆಲ್ಲ ಒಂದು
ವಿನಾಯಿತಿ, ರಹದಾರಿ, ಮಾಫಿ.
ನಾವೆಲ್ಲೆ ಜಿಗಿದರೂ, ಯಾವ ಮರ ಮುರಿದರೂ
ಯಾರ ಮನೆ ಹೆಂಚನಿಳುಕಿದರೂ ನಮಗಿಲ್ಲ ಭೀತಿ!

\- ಸುಜನಾ

ಗಾಂಧೀಜಿ-ಲಾರ್ಡ್ ಬಾಟವ್ಸ್‌ಲೇಗೆ ಹೇಳಿದ್ದು

(ಸಂದರ್ಭ: ದುಂಡು ಮೇಜಿನ ಪರಿಷತ್ತು ೧೯೩೦)

ದೇವರಿಗಾಗಿ ಹುಡುಕಾಡಿದೆ
ಅವನು ಎಲ್ಲೂ ಸಿಗಲಿಲ್ಲ.
ಆತ್ಮಕ್ಕಾಗಿ ತಡಕಾಡಿದೆ
ಅದು ಎಲ್ಲೂ ಕಾಣಲಿಲ್ಲ.
ಕೊನೆಗೊಬ್ಬ ಸೋದರನಿಗಾಗಿ ಅರಸಾಡಿದೆ
ಅವನಲ್ಲಿ ಎಲ್ಲ ಸಿಕ್ಕವು-
ದೇವರು, ಆತ್ಮ ಹಾಗೂ ಸ್ವತಃ ಅವನು.

(ಕನ್ನಡ ಕವಿತಾ ರೂಪ) - ಶಾ. ಬಾಲುರಾವ್

ಜಗದ ಕಣ್ಣು -ಗಾಂಧಿ

೧

ಹೊಮ್ಮಿಸುತ ವಿಶ್ವವೀಣಾಗಾನ ಮಂದ್ರ-ಮಂದ್ರ,
ಇರುಳ್ಗಡಲ ಒಡಲಿಂದ ಮೂಡಿ ಬಂದಿತು ಅಣ್ಣ ಈ ಕಣ್ಣು-ಚಂದ್ರ!
ತಾನಾಗಿ ರಾಮ-ಚಂದ್ರ!

ಯಾರದೋ ಶಾಪಕ್ಕೆ
ಯಾವುದೋ ಪಾಪಕ್ಕೆ
ಎಂಥದೋ ತಾಪಕ್ಕೆ
ಕಲ್ಲಾಗಿ ಬಿದ್ದು ನವೆ-ನವೆಯುತ್ತಿದ್ದಾ ಹೆಣ್ಣು
ಈ ಇವನ
ಈ ಪತಿತೋದ್ಧಾರಕ ಮಹಾತ್ಮನ
ಮೆಲ್ಲಡಿಯ ಮರುಜೀವಣೆಯ ಸೋಂಕಿಗೆ ಚೇತರಿಸಿ
ಮೆಲ್ಲನೆಯೆ ಮೇಲೆದ್ದಳ್ಳೆ ತೆರೆದು ಕಣ್ಣು!-
ಮಣ್ಣ ಹೊನ್ನಾಗಿಸುತ!
ಕೊರಡ ಕೊನರಾಗಿಸುತ!
ಬರಡ ಹಯನಾಗಿಸುತ!

೨

ಏನೆಂಥ ಕಣ್ಣು!
ನೆಲ-ಮುಗಿಲು ಎವೆಯಾಗಿ ತೆರೆದ ಅದ್ಭುತ ಕಣ್ಣು!
ಭಾರತದ ಮಾನಸದಿ ಮಿಂದು ಮೆರೆಯಲು ಬಂದ ಹಂಸ ತಾನು!

ನಡೆ-ನುಡಿಯ ಬೆಳ್ಳಿಯನು ಬೆಳಬೆಳಗಿಸಿ
ಮನದ ಬಂಗಾರವನು ತೊಳತೊಳಗಿಸಿ
ಗಾಳಿ-ತೇರನ್ನೇರಿ
ಬೆಳಕು-ಲೋಕವ ಸಾರಿ
ನನ್ನಿ-ನೇಹದ ರೆಕ್ಕೆ ಜಗದಗಲ ಹರಹುತ್ತೆ
ಮೇಲುಮೇಲಕೆ ಏರಿ, ದೂರದೂರಕೆ ಸಾಗಿ,
ಗೌರಿಶಂಕರವಾಗಿ,
ಕೊನೆಯಲ್ಲಿ ನಿಂದಿತ್ತೈ, ಸಂದಿತ್ತೈ
ಈ ಯುಗದ, ಈ ಒಳುಮನದ
ಧ್ರುವತಾರೆಯಾಗಿ!-
ಆಕಾಶದಲಿ ತೂಗಿ!

- ಎಂ. ಅಕಬರ ಅಲಿ

ಗಾಂಧಿಗೆ

ಎಲ್ಲಾರು ನಿನ್ನನ್ನ ದೇವರು ಮಾಡಬೇಕೆಂ-
ದಿದ್ದಾಗ್ಗೆ ನೀನೊಬ್ಬ ಪಟಮಾರಿಯ ಹಾಗೆ
ಮಾನುಷರ ಮಧ್ಯೇ ಮನುಷ್ಯನಾಗಿರುವ
ಅಮಾನುಷೀ ಒಂಟಿದಾರಿಯಲ್ಲಿ ನಡೆದೆ.

ನಾವು ಮಾನವರು ಮಲಗಿ ರೊಜ್ಜಿನಲ್ಲೇ
ಕನವರಿಸುತ್ತೇವೆ ಮಾನಸ ಸರಸ್ಸನ್ನು.
ಉಡಿಯಲ್ಲಿಟ್ಟುಕೊಂಡು ಹಳೇ ದೈತ್ಯರನ್ನು
ಹುಡುಕುತ್ತೇವೆ ಹೊಸ ಹೊಸಾ ದೇವರನ್ನು.

ಅವತಾರಕ್ಕಾಗಿ ಕಾಯುತ್ತಿರಲು ನಾವು
ಉದ್ಧಾರ ಮಾಡೋಣವೆಂದು ನೀ ಹೊರಟೆ ಮುಂದೆ.
ಮನುಷ್ಯರನ್ನ ಕೊಂದೇ ದೇವರು ಮಾಡಬೇಕು.
ಈ ಹಳೇ ಸತ್ಯಕ್ಕೆ ನೀ ಹೊಸಾ ದೃಷ್ಟಾಂತವಾದೆ.

- ಪಾ.ವೆಂ. ಆಚಾರ್ಯ

ಗಾಂಧಿ ಇದ್ದನೆ?

ನಾನು ಗಾಂಧಿಯನ್ನು ನೋಡಿಲ್ಲ
ನೋಡದಿದ್ದುದನ್ನೆಲ್ಲ ಇಲ್ಲ, ಇರುವುದಿಲ್ಲ
ಎನ್ನಲು ಬರುವುದಿಲ್ಲ
ನಾನು ಓದಿದ್ದು ಕೇಳಿದ್ದು
ನನ್ನಲ್ಲಿ ಬೇರಿಡುವ ಮೊದಲೆ
ಏನೇನೊ ಆಗಿ ಹೋಯಿತು ಇಲ್ಲಿ

ಇವನ ಸಮಾಧಿಯ ಬಗೆದು
ಎಳೆದು ತಂದರು
ಯಾರೊ ದುಶ್ಯಾಸನರು
ಉಟ್ಟಿದ್ದ ತುಂಡು ಲಂಗೋಟಿ
ಹರಿದು ಬತ್ತಲೆಗೊಳಿಸಿದರು
ಅಸ್ಥಿ ಪಂಜರದೊಳಗೆ
ಜೀವ ತಡಕಾಡಿದರು
ಕುರುಡರು
ಕತ್ತಲೆ ಕೋಣೆಯಲ್ಲಿ ಕರಿಬೆಕ್ಕ ಹುಡುಕಿದರು
ಮೆದುಳನ್ನು ಬೆದಕಿ
ಬ್ರೈನ್‌ವಾಶ್ ಮಾಡಿ
ಫೂ ಫೂ ಉಗುಳಿದರು
ಕಿಸಕ್ಕನೆ ನಕ್ಕರು
ಕೆಫೆಟೇರಿಯಾದಲ್ಲಿ ಕೇಕೆ ಹಾಕಿ

ಗಾಂಧಿ ಎಂಬುವ ಹೆಸರು / ೮೫

ಲಿಲ್ಲಿಯ ಬೆಲ್ಲಿ ತಬ್ಬಿ ಕುಣಿದಾಡಿದರು
ಇವ ಮಲಗಿದ ಮನೆಯಲ್ಲಿ
ಕಾಕ್‌ಟೇಲ್ ಹೊಳೆ ಹರಿಸಿದರು
ಇವನ ಗುಡಿಯಲ್ಲಿ
ಮಾಂಸಪೂಜೆಯ ಪಣತೆ ಹಚ್ಚಿದರು
ತೊಗಲ ಬೊಂಬೆಯಾಟ ಆಡಿದರು
ಬೆಳಕು ಒಳ ಸರಿದೀತೆಂದು
ಕಿಟಕಿಗಳ ಮುಚ್ಚಿದರು
ಇವನ ಬಚ್ಚಲ ಕಗ್ಗವಿಗೆ ಮೂಡಿ
ತಾವು ದಾರಿ ತಪ್ಪಿ ಕಾಡೆಲ್ಲ ಅಂಡಲೆದರು.

ಕೊನೆಗೆ
ಪಾಚಿಗಟ್ಟಿದ ರಾಡಿಗಳಲ್ಲಿ
ಹಾವಸೆ ಜಾರಿ ಹೊರಳಾಡಿದರು
ಅರಗಿಸಲಾರದೆ ವಾಂತಿ ಮಾಡಿದರು
ಅಜೀರ್ಣವೆಂದು ನರಳಾಡಿದರು

ಇವರ ನಗ್ನ ತಾಂಡವಕೆ
ಇವನ ಮೇರುಗಿರಿ ಅದುರಿತು
ಒಲವಿನ ಗುಡಿ ನೆಲವನಪ್ಪಿತು
ನಮ್ಮ ಮುಗಿಲಿನಾಸೆ ನೆಲ ಮೂಸಿತು

– ಎಂ. ಗಂಗಾಧರ ಭಟ್ಟ

ನಾವೂ ನಿನ್ನವರು

ಗಾಂಧೀ ನಮ್ಮಪ್ಪಾ,
ನಾವೂ ನಿನ್ನವರು!
ನೀನುದಿಸಿದೀ ಮಣ್ಣಿನ ಮೇಲೆಯೇ ಬೆಳೆದವರು
ನಾವೂ ನಿನ್ನವರು!
ಇಲ್ಲದಿರೆ,
'ಮಹಾತ್ಮಾ ಗಾಂಧೀಜೀಕೀ ಜಯ್'
ಎಂದು ಎಲ್ಲರಿಗಿಂತ ಮುಂದಾಗಿ ಘೋಷಿಸಲು
ದೊರೆಯುತ್ತಿತ್ತೇ ನಮಗೆ ಮೊದಲ ಹಕ್ಕು?
ಈ ಬಯಲು ಮಂಟಪದ ಮೇಲೆಲ್ಲ ಕುಣಿವವರ
ನೋಡುತ್ತ ತಣಿವವರ ತಂಪು ನೆನಪಿಗೆ, ನಾಳೆ
ನೀನಲ್ಲ, ನಿನ್ನ ಹೆಸರಲ್ಲದಿನ್ನಾರ ದಿಕ್ಕು?

ಬೀದಿಯುದ್ದಕು ಮೆರೆವ ದೀಪಗಂಬದ ಜೊತೆಗೆ
ಸ್ನೇಹದಲಿ ನಿಂದಿರುವ ಸಾಲು ತೆಂಗಿನ ಗರಿಗೆ
ವಿಶ್ವಪ್ರೇಮದ ಮೇಳಗಾನ ಕಲಿಸಿ
ಪೂರ್ವಪಶ್ಚಿಮಗಳನು ಒಂದುಗೂಡಿಸಬಲ್ಲ
ಒಸಗೆ ಹೊತ್ತೈತಂದ ಗಾಳಿಯಲೆಯಲೆಗಳಿಗೆ
ಸತ್ಯ-ಶಾಂತಿಯ ನಿನ್ನ ಸಂದೇಶಗಳ ತಿಳಿಸಿ
ನೀನೊಮ್ಮೆ ಕಟ್ಟಿಟ್ಟ ಪ್ಯಾಕುಗಳ ತೆರೆತೆರೆದು
ಸಿಹಿತತ್ವಗಳ ತುಣುಕುಗಳ ಜಗಕೆಲ್ಲ ತಿನಿಸಿ
ಬರಿಹೊಟ್ಟೆಯೊಳಗಿರುವ ಆತ್ಮಬಲ ಪಡೆದವರು
ನಾವೂ ನಿನ್ನವರು!

ಕಾಲ ಕೆಟ್ಟಿತು ಗೊತ್ತೇ,
ಅವರವರ ಕಾಯಕದಿ ಶ್ರದ್ಧೆಯೆಂಬುವುದಿಲ್ಲ
ಶಾಲೆಯಲಿ ಶಿಕ್ಷಕರು ನಮ್ಮ ಮಕ್ಕಳಿಗೆಲ್ಲ
ತೀಡಿಸುವರ ಇಲ್ಲವೋ ನಿನ್ನ ಕಿತ್ತೆ!
ಏನು ಕೇಳಿದರೂನು ಬಾಯಿ ತೆರೆಯುವುದಿಲ್ಲ ಈ ಮಕ್ಕಳು.!
ಆ ನಮ್ಮ ಬಾಲ್ಯದಲಿ
ಕಲಿತ ಮಾತುಗಳೆಲ್ಲ ಇಂದಿಗೂ ನೆನಪಿಹವು
ನಿನ್ನ ಘನ ತತ್ವಗಳ ಕನಸಿನೊಳಗೂ ಕೇಳು
ಚಾಚು ತಪ್ಪದೆ ಪಾಠ ಒಪ್ಪಿಸುವೆವು.
ಸರಳ ಬದುಕಿನ ನೀತಿ-ನಿಯಮಗಳ ತೋರಣವ
ನಮ್ಮ ಬಂಗಲೆಯ ಬಾಗಿಲಿಗೆ ಕಟ್ಟಿರುವೆವು
ಸತ್ಯ ಸತ್ಯಾಗ್ರಹಕೆ ನೀತಿ ನಿಮಯಾವಳಿಗೆ
ಹೊತ್ತು ಬಂದಾಗೆಲ್ಲ ಬಳಸಲಿಕೆ ಸಂಗ್ರಹಿಸಿ ಇಟ್ಟಿರುವೆವು.
ಇನ್ನೇನು ಗೈವುದಿದೆ, ಹೇಳಬಲ್ಲೆಯಾ ತಂದೆ,
'ಕರುಣಾಳು ಬಾ ಬೆಳಕೆ, ಮುಸುಕಿದೀ ಮಬ್ಬಿನಲಿ
ಕೈ ಹಿಡಿದು ನಡೆಸೆ'ಂದು ಗೋಳ್ಗರೆವ ಜನಗಳಿಗೆ
ಜನ್ಮ ಜನ್ಮಾಂತರದ ದಾರಿ ತೋರಿಸಿ, ಕೊನೆಗು
ನಿಂದಲ್ಲಿಯೆ ನಿಂದು ನಿನ್ನನ್ನು ನೆನೆವವರು
ನಂಬು ನಮ್ಮಪ್ಪಾ, ನಾವೂ ನಿನ್ನವರು!

– ಬಿ.ಎ. ಸನದಿ

ಗಾಂಧಿ

೧

ಇವನೊಬ್ಬ ಬೈರಾಗಿ!
ತುಂಬು ಹರೆಯದ ಮಾಗಿ ಇವನ ದೇಹ!
ಥೇಟು ತಟ್ಟಿಗೆ-ಅಲ್ಲ-ಉಣ್ಣೆಗೊರವನ ಗೂಡು!!
ತಲೆ ಬೋಳು, ಬಾಯ್ ಬಚ್ಚು
ಹರುಕು ಗಡ್ಡದ ಮೇಲೆ ಮುರುಕು ಮೀಸೆ
ಕಣ್ಣೆರೆಡು ಮೂಸೆ!
ಸಣ್ಣ ಸೋರೆಯ ಬುರುಡೆಗಂಟಿಸಿದ ರೆಕ್ಕೆಗಿವಿ
ಇವನ ಮೈ ಬಳಿದವಗೆ ಸಿಗಬಹುದು ಮಾಂಸ ಒಂದೇ
ಒಂದು ಕೆ.ಜಿ!
ಹೀರಿದರೆ ಬರಬಹುದು ಕಾಲು ಲೀಟರು ರಕ್ತ!
ಆದರೂ ಈತ ಬಹು ಶಕ್ತ!
ಈ ಬಡಜೋಗಿ ತೂಗುವೊಡೆ ಶೆಟ್ಟಿಯಂಗಡಿಯಲ್ಲಿ ಕಲ್ಲುಗಳೇ
ಇಲ್ಲ!
ಕೊಳ್ಳುವೆಡೆ ಬ್ಯಾಂಕಿನಲಿ ಹಣವಿಲ್ಲ!
ಇಲ್ಲಾ..... ಇಲ್ಲಾ...... ಇಲ್ಲಾ......
ಇವನಿಗೊಂದೂ ಇಂದು ಸಾಟಿಯಿಲ್ಲ!

೨

ಇವನೊಬ್ಬ ಮಾಯವಿ!
ಗುಟ್ಟರಿತ ಗಾರುಡಿಗ!!

ನೋಡಿ, ದೊಡ್ಡ ಪುಂಗಿಯನ್ನೊಮ್ಮೆ ಊದಿಯೇ ಊದಿದ,
"ಹಲ್ಲ ಕಳಿದು ಹಾವನಾಡಿಸಬಲ್ಲಡೆ
ಆ ಹಾವಿನ ಸಂಗವೇ ಲೇಸು ಕಂಡಯ್ಯ" ಎಂದು
ಹಾವನಾಲಂಗಿಸಿದ, ವಿಷವನ್ನು ದ್ವೇಷಿಸಿದ,
ಅಷ್ಟೇಕೆ? ಮಂತ್ರಾಣಿತನ್ನಯನಿಗೆ-
-ಅದೆ ಅಂಗುಲೀಮಾಲನಿಗೆ-
ಮಲ್ಲಿಗೆಯ ಹಾರವನು ಹಾಕಿಯೇ ಬಿಟ್ಟ!
ಜಗದ ಮಾನಸದಲ್ಲಿ ವಿಹರಿಸಿದ ಈ ಅಗ್ನಿಹಂಸಕ್ಕೆ
ಮುಗಿಲ ಕೆಚ್ಚಲನೆಲ್ಲ ಕಚ್ಚಿ ಹೀರುವ ದಾಹ!
ಆದರೂ ಬತ್ತಿಲ್ಲ ಮಣ್ಣಮೋಹ!!
ಬಯಲು ಬತ್ತಲೆಯೆಂದು ಬಟ್ಟೆಯುಡಿಸಲು ಹೋಗಿ
ತಾನು ಬತ್ತಲೆನಿಂದ, ಕಡೆಗೆ ಬಯಲಾದ!

೩

ಇವನೊಬ್ಬ ಕಾರಣಿಕ,
ಮೇಲಿಂದ ಇಳಿದು ಬಂದವನಲ್ಲ ,
ಇಲ್ಲಿಂದಲೇ ಬೆಳೆದು ಮೇಲೇರಿದಾತ
ಬೆಳೆದ,
ಇವನು ಬೆಳೆದೇ ಬೆಳೆದ ಬಾನೆತ್ತರ!
ಕಾಲು ಕಡಲಾಳದಲ್ಲಿ,
ತೋಳು ದಿಕ್ಕು ದಿಕ್ಕುಗಳಲ್ಲಿ,
ಆದನಿವ ಸೂಕ್ತಪುರುಷ!
ಎಣಿಸಲೇತಕೆ ಹೇಳು ಸತ್ತ ವರುಷ!
ಅಂದಿಂದು ಎಂದಿಗೂ ಇವನದೊಂದೇ ನಿಲವು,
ಬದಲು ಕಾಣದ ಭಂಗಿ!
ಅಯ್ಯೋ ಪಾಪ!
ನಮ್ಮ ಟೈಲರಿಗಂತೂ, ಟೇಪು ಸಾಲದೆ ಬಂತು
ಹೊಲಿದು ಕೊಡಲೇ ಇಲ್ಲ, ಇವಗೆ ಅಂಗಿ!!

ಇವನೊಬ್ಬ ಬ್ರಹ್ಮಚಾರಿ,
ಒಬ್ಬಳೇ ಹೆಂಡತಿ, ನಾಲ್ಕು ಜನ ಮಕ್ಕಳು!
ಇದ್ದದ್ದೇ ಬಿಡಿ ಇವನ ಗೋಳು!!
'ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿ'
ಮಾತೆತ್ತಿದರೆ ಸಾಕು-
ಇವನು ಹಾಕಿದ್ದೇ ಹಾಕಿದ್ದು ಹೈಡ್ರಾಲಿಕ್ಕು ಬ್ರೇಕು!!

ಆದರೂ ಈ ಮುದುಕ ಕಸ್ತೂರೀ ಪ್ರಿಯ!
ಮೈಯೆಲ್ಲ ಕಸ್ತೂರಿ, ಮನವೆಲ್ಲ ಕಸ್ತೂರಿ,
ಮನೆಯ ಮುಡುಕಿನೊಳಲ್ಲೂ ತುಂಬಿದ್ದ ಕಸ್ತೂರಿ!
ಶುದ್ಧ ಸೌರಭ ಅಷ್ಟೆ!
ಕಪ್ಪುಕಲೆ ಇಲ್ಲವೇ ಇಲ್ಲ!!
ಪಾಂಡುವಿನ ಪರ್ಣಕುಟಿ, ಯಯಾತಿಯುದ್ಯಾನ,
ದೇವೇಂದ್ರನಾಸ್ಥಾನ ಯಾವುದೂ ಅಲ್ಲ,
ಇವನ ನೆಲೆ ಸಾಬರಮತಿ.
ಇವನೋ ಶೃಂಗಾರಗೊಂಡ ಯತಿ

- ಸಾ.ಶಿ. ಮರುಳಯ್ಯ

ಗಾಂಧೀಜಿ ಕಂಡ ಕನಸು

ಏದುತ್ತಲಿದೆ ಗಾಳಿ

ನೆಲದೆದೆಯ ಇದ್ದ ಹನಿ ಹಸಿಯನ್ನೂ, ಹೀರಿ
ಹುಟ್ಟಿ ಬೆಳೆದಂತೆ ಕಲ್ಲು.

ನಡೆದಾನೆ ಅಜ್ಜ
ತನ್ನ ಅಂಗಾಂಗವನು ರೂಪಿಸಿದ
ನರ, ರಕ್ತ, ಮಜ್ಜೆ ; ಎಲ್ಲವೂ ಸುಕ್ಕಿ
ಎಲುಬೆಲ್ಲ ಉದುರಿಲ್ಲ ಇನ್ನುವರೆಗೂ
ಉದುರದೊಲು ಬಿಗಿದಿಹುದು ಇನ್ನೂ ಹಳೇ ಚರ್ಮ
ಹೊಲಿಗೆಯೊಂದೂ ಇಲ್ಲ-
ಅಡಿಯಿಂದ ಮುಡಿವರೆಗು ಮುದುಡು ಹಾಳಿ
ಬೋಳು ತಲೆ, ಕೈಯಲ್ಲಿ ಬೆತ್ತ ಹಿಡಿದು
ನಾಡನೆಲ್ಲಾ ಸುತ್ತಿ
ನಡೆದಾನೆ ಅಜ್ಜ ;
ದೂರದಾ ದಾರಿ-ಆ ದಾರಿ.....
-ಅಜ್ಜ ನಿನ್ನ ನೋಡಿದೊಡನೆ ನಗೆಯು ಬರುವುದು-
ಆ ದಾರಿ,
ಬಾಲ್ಯದಿಂದಲು ತಾನು ನಡೆದ ದಾರಿ
ಅಲ್ಲಲ್ಲಿ ಬರುತ್ತಿದ್ದ

ರಿ
ವಿ
ಆ
ಆ
ಇ
ಳು
ವು
ಅದ ಹತ್ತಿ ಇಳಿದಾಗ ಅಲ್ಲಿಯೇ ಕೈಮಾಡಿ
ಕರೆವ ಮರ, ಕೆರೆಯ, ಕೆರೆ ದಂಡೆ
ಹೊಂಗೆ ಹಾಸಿದ ತಂಪು
ಇದು ಎಲ್ಲ ಆಗ-
ಈಗ?
ಈಗಲೋ ಎಲ್ಲವೂ ಮಟಾಮಾಯ
'ಮಾಯದೆಲ್ಲವ್ವ ನಿನ್ನಾಟ ಬಲ್ಲವರಾರು?'
ದೂರದಾ ದಾರಿ......
ಆ ದಾರಿ ಇದ್ದಕಿದ್ದಂತೆಯೇ
ಕರಿ ಬಣ್ಣ ಬಳಿದುಕೊಂಡಿದೆ ಮೈಗೆ;
ಹೆಬ್ಬಾವಿನಂತೆಯೆ ಹಬ್ಬಿ ಮಿಸುಕಾಡುತಿದೆ
ಮುದುಕನಂಗಾಲ ಕೆಳಗೆ.
ಆತನೊಳಗೆ?
ಕಳಕಳನೆ ಕುದಿವ ಅವನೊಡಲಿನೊಳಗೆ,
ಜಳಕ್ಕೆಂದೊಳಕ್ಕೆ
ಬೆಂಕಿರಸ ತಳಕ್ಕೆ
ಕುಪ್ಪಳಿಸೆ ನೂರಾರು ಪ್ರಶ್ನೆಮೀನು
ಏನು? ಏನು? ಏನು?
ನೆಲದ ಪ್ರಾಣ ಹೀರಿ
ಈ ಬೆಂಕಿ ತಳಮಳವ ತಣಿಸಬೇಕು
ಬೇಕು..... ಬೇಕು..... ಬೇಕು

ರಾಷ್ಟ್ರೀಯ ಹೆದ್ದಾರಿ
ಕಟ್ಟಿಗೆಯ ತುಂಡಿಗೂ ಒಂದು ಮೊಳ ನಾಲಗೆ.

ರಾಷ್ಟ್ರೀಯ ಹೆದ್ದಾರಿಯಲಿ, ಬಚ್ಚ ಬರಿ ಬಾಯ
ಈ ಮುದುಕ, ನಡುಗುತ್ತ ಜೋಲುತ್ತ ನಡೆದಾನೆ
ದೂರದಾ ದಾರಿ;
ಏನಾಯಿತೋ ಹಾಗೆ ನಡೆನಡೆಯುವಂತೆಯೇ
ನಿಂತು ಬಿಟ್ಟ!
ನಟ್ಟ ನಡುವೆಯೆ ತನ್ನ ಕೋಲು ನೆಟ್ಟ;
ಇಷ್ಟೊಂದು ಉದ್ದಗಲದೀ ದಾರಿಯಲಿ ಅಷ್ಟು,
ತನಗಷ್ಟು ದೊರೆತೀತು ವಿಶ್ರಾಂತಿ; ಶಾಂತಿ.

ಕಾವ ಕಣ್ಣಲಿ ಸುಣ್ಣ ಹೊಯ್ದು
ಬಲೆ ಬೀಸಿ, ಕಂಡ ಕಂಡವರ ಹೊಲ ಮೆಯ್ದು
ಕೊಬ್ಬಿದ ಕಪ್ಪು ಕಾರುಗೂಳಿ,
ಸೊಕ್ಕಿಗೇರಿದೆ, ಕಣ್ಣೆ ಕಿತ್ತು ಎಬ್ಬಿಸಿ ಧೂಳಿ
ಸ್ವಚ್ಛಂದ ವೇಗದಲಿ ಓಡುತ್ತಿರೆ
ಅಜ್ಜ ನೋಡುತ್ತಿರೆ-
ರಾಷ್ಟ್ರೀಯ ಹೆದ್ದಾರಿ ಹಿಡಿದು ಹೊರಟಿರುವಾಗ
ಬಿತ್ತು ಬ್ರೇಕು;
ಚಣ ಮಾತ್ರ ತಡೆದಿತ್ತು ಹಾಕಿ ಡಿರಿಕಿ
ಮತ್ತೆ ಸುತ್ತೂ ಧೂಳಿ.

ನಟ್ಟನಡುದಾರಿಯಲಿ
ಹಾಗೆಯೇ ನಿಂತಾನೆ ಇವನಾರೊ ಇರಬೇಕು
"ಅಪ್ಪಟ ಅರಾಷ್ಟ್ರೀಯ."

— ದೇವೇಂದ್ರಕುಮಾರ ಹಕಾರಿ

ಓ ಅದ್ಭುತ ಸನ್ಯಾಸಿ!

ಓ ಅದ್ಭುತ ಸನ್ಯಾಸಿ! ಸತ್ಯಾಗ್ರಹ ಸಮರ ವಿನ್ಯಾಸಿ!
ದೇಹದ ಅರಿಗಳನೋಡಿಸಿದುದಲ್ಲದೆ
ದೇಶದ ಅರಿಗಳನೂ ಹೊರಗಟ್ಟಿದ
ಓ ಯುಗಪುರುಷ ಮಹಾತ್ಮ! ನೀನೇ ಭಾರತದ ಆತ್ಮ

ನೀನು
ಜನಮನೋಮಂಥನದ ನವನೀತ
ದಾಸ್ಯದೊಳಗಿದ್ದ ಜನಜಲಧಿಯಿಂದೆದ್ದ
ಇತಿಹಾಸದೊಂದಪೂರ್ವ ದಿವ್ಯಾಮೃತ
ನೀನು
ಸೃಷ್ಟಿಸಿದೆ ಚರಿತ್ರೆಯನು, ಅಪೂರ್ವ ರೀತಿಯಲ್ಲಿ.
ಸತ್ಯಾಸತ್ಯದ ಸಮರ ನೀತಿಯಲ್ಲಿ.

ಉಪ್ಪೇ ನಿನ್ನ ಶಸ್ತ್ರಾಸ್ತ್ರ, ವೈರಿಗಳ ಗುಂಡಿಗೆ ಪ್ರತ್ಯಸ್ತ್ರ
ಕರಾಳ ಶಾಸನಕೆ ಸತ್ಯ ನಿಷ್ಠೆಯೇ ನಿನ್ನ ಪ್ರತಿಬಲ
ರಾಷ್ಟ್ರಪ್ರೇಮಿ ಹೃದಯಗಳ ಮಹಾಪೂರವೇ
ನಿನ್ನ ಚತುರಂಗಬಲ.

ನಿನ್ನ ಸೇವಾಜೀರ್ಣ ದೇಹದೊಳಗಿನ ಅಸ್ಥಿಗಳು
ದಧೀಚಿಯ ಎಲುಬುಗಳಂತೆ, ಜನಶಕ್ತಿಯ
ಇಂದ್ರನ ಕೈಯೊಳಗೆ ವಜ್ರಾಯುಧವಾದುದೊಂದು
ಈ ಯುಗದ ಮಹಾಶ್ಚರ್ಯ.

ನಿನ್ನ ಕೈಯೊಳಗಿನ ಊರುಗೋಲು,
ಸತ್ಯ ಧರ್ಮ ನಿಷ್ಕಾಮಕರ್ಮಗಳ ಕಾಲು
ಸುಟ್ಟುಹಾಕಲಿಲ್ಲ ನೀನು ವೈರಿಗಳ
ಆದರೆ ಭಸ್ಮಮಾಡಿದೆಯಲ್ಲ. ಅವರನೆಲ್ಲ!
ನೀನವರನಟ್ಟಿಸಿಕೊಂಡು ಹೋಗಲಿಲ್ಲ.
ಆದರೆ ಅಟ್ಟಿದೆ ನಾಡಗಡಿಯ ಹೊರಗೆ ಅವರನೆಲ್ಲ
ಅಣುವಾಗಿ ನಿನ್ನೆಣಿಸಿಕೊಂಡವನು, ವಿಶ್ವವನೆ ವ್ಯಾಪಿಸಿದೆ
ಮಹತ್ತಾಗಿ ಮಹಾತ್ಮನಾದೆ
ಮತ್ತೆ ತ್ರಿವಿಕ್ರಮ ವಾಮನನಾದೆ, ಆದರೆ ಬಲಿಯಾದೆ
ನಿರ್ದಯಿಯೊಬ್ಬನ ಗುಂಡಿಗೆ.

ಹಿಂಸೆಗೆದುರು ಅಹಿಂಸೆಯನಿಟ್ಟೆ
ಜಗವ ಜಯಿಸಿದೆ ನಿಶ್ಯಸ್ತ್ರನಾಗಿ
ಎತ್ತಿ ನಿಲ್ಲಿಸಿದೆ ನಾಡ ಒಂದೇ ವ್ಯಕ್ತಿಯಂತೆ ಸಮಷ್ಟಿಯ
ಶಕ್ತಿಯಂತೆ.

ಕೋಟಿಕೋಟಿ ಜನರ ವಿಮುಕ್ತಿಗೊಳಿಸಿಯೆ
ನೀ ಮುಕ್ತಿ ಪಡೆದೆ

ಓ ಅದ್ಭುತ ಸನ್ಯಾಸಿ! ಸತ್ಯಾಗ್ರಹ ಸಮರ ವಿನ್ಯಾಸಿ!
ದೇಹದ ಅರಿಗಳನೋಡಿಸಿದುದಲ್ಲದೆ
ದೇಶದ ಅರಿಗಳಿಗೂ ಹೊರಗಟ್ಟಿದ
ಓ ಯುಗಪುರುಷ ಮಹಾತ್ಮ! ನೀನೇ ಭಾರತದ ಆತ್ಮ

– ಡಾ. ಪಿ.ಎಸ್. ರಾಮಾನುಜಂ

ಗಾಂಧೀಜಿ

೧

ಎರಡೂವರೆ ಶತಮಾನಕೆ
ದಬ್ಬಾಳಿಕೆ ಯಜಮಾನಿಕೆ
ದುರ್ದೆಸೆಗಳ ದಿನಮಾನಕೆ
ಉಸಿರಾಡಿಸಲನುಮಾನಿಕೆ
ಈ ದೇಶದ ಸಂತಾನಕೆ
ಉಸಿರೇ ಬರಲಿಲ್ಲ
ಹೆಸರೇ ಇರಲಿಲ್ಲ.

೨

ಪರದಾಸ್ಯದ ನೊಗಭಾರಕೆ
ಕುತ್ತಿಗೆಯುರುಲಿನ ಹಾರಕೆ
ಅರೆಮರಣದ ಸಂಸಾರಕೆ
ಬೇಸತ್ತ ಎದೆಯಾರಿಕೆ
ಈ ದೇಶದೊಳೆದೆಯಾರಿಕೆ
ಉಸಿರೇ ಬರಲಿಲ್ಲ
ಹೆಸರೇ ಇರಲಿಲ್ಲ.

೩

ಒಡಲುರಿದವು ಒಳಗೊಳಗೆ
ತಲೆಕುಸಿದವು ಕೆಳಕೆಳಗೆ

ದುಃಖೋದಯ ದಿನಬೆಳಗೆ
ಹೊಲೆಬಾಳಿನ ವಿಷಗಳಿಗೆ,
ದೇಶದ ಪೀಳಿಗೆಗಳಿಗೆ
ಉಸಿರೇ ಬರಲಿಲ್ಲ
ಹೆಸರೇ ಇರಲಿಲ್ಲ.

೪

ಹಿಮವಲಯದ ಪುಣ್ಯಾಚಲ
ಋಷಿತರ್ಪಣ ಗಂಗಾಜಲ
-ಮೈವೆತ್ತಿತು ನಮ್ಮೀನೆಲ
ಮಾನವ ಬಲಿದಾನದ ಫಲ
ತಲೆಯೆತ್ತಿತು ಭಾರತಕುಲ
ಅಮೃತರಾಳಾಳ್ಗೆ
ನೆಲ ಮಂಗಳ ಬಾಳ್ಗೆ.

೫

ಹಗೆತನಗಳ ಹೊಗೆ ಹಾರಿಸಿ
ನೊಂದವರೆದೆಯುರಿ ಆರಿಸಿ
ದೇಶದ ಕಣ್ಣೀರೊರಸಿ
ರಾಷ್ಟ್ರಧ್ವಜ ಕೈಗಿರಿಸಿ
ಬೀಳ್ಕೊಂಡರು. ಪಡೆವೆರಿಸಿ
ಅಮೃತರಾಳಾಳ್ಗೆ
ನೆಲಮಂಗಳ ಬಾಳ್ಗೆ.

೬

ಸ್ವಾತಂತ್ರ್ಯಕೆ ಸರ್ವಾರ್ಪಣಾ
ಸತ್ಯಾಗ್ರಹ ಬಲಿತರ್ಪಣ
ನಾಡಿನ ನೆಲ ಸಮರಾಂಗಣ
ಕಡಿದೊಗೆದೆವು ದಾಸ್ಯದ ಋಣ

ತೊಟ್ಟೆವು ಎದೆಯೊಲವಿನ ಪಣ
ಅಮೃತರಾಳಾಳ್ಗೆ
ನೆಲಮಂಗಳ ಬಾಳ್ಗೆ.

೭

ಹೇ ಭಾರತ ಪುಣ್ಯವ್ರತ
ಧೀಶಕ್ತಿಯ ದೇವವ್ರತ!
ಸ್ವಾತಂತ್ರ್ಯದ ಸತ್ಯವ್ರತ
ಗಾಂಧೀಜೀ ಗೆಲ್ಗೆ!
ಬರಬಾರದ್ದೇ ಬಂದಿತು!
ಸೆರೆಬಿಡಿಸಿದ ಕೈ ಕೊಂದಿತು!
ಈ ರಾಷ್ಟ್ರದ ಋಣ ಸಂದಿತು
ನೆಲ ಮಂಗಳ ಬಾಳ್ಗೆ!

– ಸು.ರಂ. ಎಕ್ಕುಂಡಿ

ನಾಲ್ಕು ಧ್ವನಿ

ಧ್ವನಿ ಒಂದು:

ಗಾಂಧಿ-ಯುಗವೆಂದರೆ-
ಸೃಜನಶೀಲತೆ ಸತ್ತುಹೋದ ಯುಗ,
ಅವನ ಮಾತು-ಕೃತಿ-ಪ್ರಭಾವದ ಕೆಳಗೆ
ಕವಿಗಳಾದರು ನಾಯಿ-ಛತ್ತರಿಗೆ
ಭರತ-ವರ್ಷದ ಸತ್ವ ಹೀರಿರುವ ನವ-ಬುದ್ಧ
ಸಪ್ತ-ಸಾಗರ ಕುಡಿದ ನವ-ಅಗಸ್ತ್ಯ

ದೊಡ್ಡ ಆಲದ ಗಿಡದ ಕೆಳಗೆ ಬಿತ್ತೆ
ಬೆಳೆಯಬಹುದೇನು? ಬರಿ ಹುಲ್ಲು ಮತ್ತೆ!
ಟೊಂಗೆಯಲಿ ಬೇರಿಳಿಸಿ ನೆಲವನಪ್ಪಿದ ವೃಕ್ಷ
ಗಿಡವು ಇಂದಿಲ್ಲ, ಬೇರು ನೆಲ ಬಿಟ್ಟಿಲ್ಲ
ನೆಲ ರೆಂಟೆ ಹೊಡೆಯದೆ ಹೊಸ ಸೃಷ್ಟಿಯಿಲ್ಲ

ತರುಣ ಕವಿಗಳನೆಲ್ಲ ನಿರ್ವೀರ್ಯ ಮಾಡಿದನು
ಪ್ರತಿಭೆಯ ಕೊರಳಿಗೇ ನೇಣು ಹಾಕಿದನು
ಕೈಯಲ್ಲಿ ರಾಮ-ಜಪ-ಮಾಲೆ ಕೊಡಿಸಿದನು.

ಧ್ವನಿ ಎರಡು:

ಗಾಂಧೀಜೀ ಹರಿಜನರ ಶೃಂಖಲಯ ಬಿಡಿಸಿ
ಕುಡಿವ ನೀರನು ನಮಗೆ ಸೇದಗೊಡಿಸಿದನು
ಪೂಜಿಸುವ ದೇವರನು ನೋಡಗೊಡಿಸಿದನು.

ತಾನು ಕೈಯಲಿ ಹಿಡಿದು ದಿವ್ಯ-ಕಸಬರಿಗೆ
ಉಡುಗಿದನು ನಮ್ಮ ಜನತೆಯ ತಲೆಯ-ಹೊಲಸು,
ಬರಿ ಮಾತು ನುಡಿದಿಲ್ಲ, ಕೃತಿಯಲ್ಲೂ ಇಳಿಸಿದನು.

'ಲಕ್ಷ್ಮಿ'-ಎಂಬುವಳನ್ನು ಮಗಳಂತೆ ಸಾಕಿದನು
ಇಂಗ್ಲಂಡ ವಾಸದಲಿ, ಗಾಂಧಿ ವಸತಿಯು ಎಲ್ಲಿ?
ಕೂಲಿಗಳ ಮಧ್ಯದಲಿ, ಭಂಗಿಗಳ ಚಾಳಿನಲಿ-
ಮಾನವನು ಮಾನವನ ಶೋಷಣೆಯ ನಡೆಸಿರಲು
ಅವನ ಶೃಂಖಲೆ- ಸರ್ಪಕೆರಗಿದನು. ಗರುಡ
ಅಮೃತ- ಕುಂಭವ ತಂದು ಶಪಿತರಿಗೆ ಹಂಚಿ
ಉದ್ಧರಿಸಿ ಮುನ್ನಡೆದ ದೇವದೂತ!

ಮಾನವನ ಇತಿಹಾಸ ತಿಳಿಸುವುದು: ಹಿಂದಕ್ಕೆ
ಬುದ್ಧ ಮಾಡಿದ ಕಾರ್ಯ; ಕ್ರಿಸ್ತ ಮಾಡಿದ ಕಾರ್ಯ
ಮತ್ತೆ ನಡೆಸಿದನೊಬ್ಬ ಭರತ ಭೂಮಿಯಲಿ
ಮೃಣ್ಮಯದ ದೇಹದಲಿ, ಚಿನ್ಮಯದ ದೀಪವನು
ಹೊತ್ತಿಸಿದ ಅವತಾರಿ, ಅವನೆ ಗಾಂಧೀಜಿ.

ಧ್ವನಿ ಮೂರು:

ಇವನೊಬ್ಬ ಮಾಂತ್ರಿಕನು ಯುಗಕೊಮ್ಮೆ ಬರುವವನು
ಕೊಳಲೂದಿ ದನಗಳನು ಕಾಯ್ದಿದ್ದನೊಮ್ಮೆ
ಪಾರ್ಥನಿಗೆ ಸಾರಥಿಯು ಆಗಿದ್ದನೊಮ್ಮೆ
ಇವನ ಕತೆಯೇ ಇಂದು ದೇಶದ್ದೆ ಕತೆಯಾಯ್ತು
ಇವನ ಚರಿತೆಯೆ ಇಂದು ಇತಿಹಾಸವಾಯ್ತು.

ಹಿಂಸೆಯನು ಗೆಲಲಿಕ್ಕೆ ಅಹಿಂಸೆಯದೆ ಅಸ್ತ್ರ!
ದ್ವೇಷವನು ತೊಲಗಿಸಲು ಪ್ರೀತಿಯದೆ ಶಸ್ತ್ರ!
ದರ್ಪವನು ತೊಲಗಿಸಲು ಸತ್ಯಾಗ್ರಹ ಮಂತ್ರ!
ಲೋಕೋತ್ತರ ಚರಿತ! ಪುಣ್ಯ-ಶ್ಲೋಕ
ಇವನ ಚಿತ್ತದ ಆಳ ಬಲ್ಲವರು ಯಾರು?

ಮಾರ್ಕ್ಸ್-ಲೆನಿನ್ನರ 'ಕ್ರಾಂತಿವಾದ'
ರುಸೋ ಬೀರಿರುವ 'ಮರಳಿ-ಪ್ರಕೃತಿಗೆ ವಾದ'

ನೀಟ್ಸೇನ 'ಅತಿ ಮಾನವ' ತತ್ತ್ವವಾದ
ಇವನೆಲ್ಲ ಮೀರಿ ನಿಂತಿತು ಇವನ 'ಅಹಿಂಸಾವಾದ'!
ಇವನ ಶಿಷ್ಯ, ಏಕಲವ್ಯ- ಮಾರ್ಟಿನ ಲೂಥರ್‌ಕಿಂಗ್
ಇವನ ದಾರಿಯ ಹಿಡಿದ, -ಗುಂಡಿಗೂ ಎದೆಕೊಟ್ಟ!
ಮುಂಬರುವ ಪೀಳಿಗೆಯು ಅಂದೀತು-
'ಇಂಥೊಬ್ಬ ವ್ಯಕ್ತಿ- ರಕ್ತ ಮಾಂಸವ ಪಡೆದು
ನಡೆದಾಡಿ ಹೋಯಿತೇ ಈ ನೆಲದ ಮೇಲೆ' -ಎಂದು

ಸಿಂಹ- ಮುಖಕ್ಕೆ ಇತ್ತು ನವಿಲಿನ ಛತ್ರ
ರಾಜಕಾರಣೆಯ ಒಳಗಿತ್ತು ಯೋಗಿಯ ಚಿತ್ರ!
ಯೋಗಿಗಳ ವೇಷದಲಿ ರಾಜಕಾರಣೆಯೊಬ್ಬ
ವಿಶ್ವ-ಧರ್ಮದ ಸಭೆಯ ಚಕಿತಗೊಳಿಸಿದ್ದ
ರಾಜ-ಕಾರಣೆ ವೇಷ ತೊಟ್ಟಿರುವ ಈ ಯೋಗಿ
ರಕ್ತ-ರಹಿತ ಕ್ರಾಂತಿ ಮಾಡಿಬಿಟ್ಟಿದ್ದ!

ಪ್ರಾರ್ಥನೆಯ ಮಹಿಮೆಯನು ಅರಿತಿದ್ದನಿವನು
ಅಂತರಂಗದ ಸ್ವರವ ಕೇಳಿದ್ದನಿವನು
ದಂಡಿಯಾತ್ರೆಯ ಗೈದು ದೇಶ ಎಚ್ಚರಿಸಿದ್ದ
ದೇಶದ ಅನಭಿಷಿಕ್ತ ದೊರೆಯೆ ಆಗಿದ್ದ
ಮೂಲೆಗುಂಪಾಗಿದ್ದ ರಾಟಿಯನು ತಿರುಗಿಸುತ
ದೇಶದ- ಹಣೆಬರಹ ಚಕ್ರ ತಿರುಗಿಸುತ
ಹಿಂದೆ- ದೇಶದ ಜನದ ಹೃದಯ ಹತ್ತಿಯ ಹಿಂಜಿ
ತನ್ನ ತಕಲಿಯ ಮೊನೆಗೆ ಎಳೆಯುತಿದ್ದ
ನೂಲನ್ನು ನೇಯುತ್ತ, ತ್ರಿವರ್ಣ ವಸ್ತ್ರವ ಹಾಸಿ
ಸ್ವಾತಂತ್ರ್ಯ ದೇವಿಯನು ಆಹ್ವಾನಿಸಿದ್ದ!

ಆದರೆ.......
ಜೀವನದ ನಾಟಕದ ಕೊನೆಯ ದೃಶ್ಯ?
ಪ್ರತಿ ಯುಗವು ಕಂಡಿರುವ ಅದೆ ದುರಂತ!
ಏಸುವಿಗೆ ಶೂಲ, ಸುಕರಾತನಿಗೆ ವಿಷ- ದೊನ್ನೆ,
ಕೃಷ್ಣನಿಗೆ ವ್ಯಾಧನ ಆ ಕಪ್ಪು- ಬಾಣ, ಕಾಯ್ದಂತೆ

ಇವನಿಗೋ ಕಾಯ್ದಿತ್ತು ಕಪ್ಪು- ಗುಂಡು.
ಇವನ ನಮಿಸಲು ಬಂದ ನಥೂ-ರಾಮ
ಗುಂಡಿಡಲು ಇವನೆಂದ 'ಹೇ ರಾಮ-ರಾಮ'!
ಅದೇ ನಾಟಕಕಾಯ್ತು ಪೂರ್ಣವಿರಾಮ!!

ಧ್ವನಿ ನಾಲ್ಕು :

ಇವನೇನು ಪೈಲ್ವಾನನಲ್ಲ ಗಾಂಧೀಜಿ
ಆದರೆಂತಹ ಪೇಚು ಹಾಕಿ ತೋರಿಸಿದ!
ಬಡಕಲಾಗಿಹ ದೇಹದಲ್ಲಿ ಕೂಡ
ಜಗವ ನಡುಗಿಪ ಶಕ್ತಿ ಇರುವದೆಂದ
ಸತ್ಯದಲಿ ದೇವನನು ಇವನು ಕಂಡ
ನುಡಿದಂತೆ ನಡೆದ, ನಡೆದಂತೆ ನುಡಿದ
ಮನೆ-ಮಠವ ತೊರೆಯುತ್ತ ಆಶ್ರಮವ ತೆರೆದ
ಎಲ್ಲವನು ತೊರೆದರೂ; ಏನು ವಿರೋಧಾಭಾಸ
ಎಲ್ಲದರ ಒಡೆಯನೇ ಇವನಾಗಿಬಿಟ್ಟ!
ಇವನ ಬೆರಳಿನ ಸನ್ನೆ ನೋಡಿ ಕುಣಿಯಿತು ದೇಶ
ಇವನು 'ಧನ'- ಎಂದರೋ, ಸ್ವತಃ ಕುಬೇರನೇ
'ಬ್ಲ್ಯಾಂಕ-ಚೆಕ್' ಕೊಡುತ್ತಿದ್ದ!
ಸಂಸಾರಿಯಾಗಿಯೂ ಬ್ರಹ್ಮಚರ್ಯವ ನಡೆಸಿ
ಮೌನಾಗ್ನಿಯಿಂದಲೇ ಜನರ ಬೇಯಿಸಿದ.
ತಿನ್ನುವ ಬಕಾಸುರ ಶಕ್ತಿಗಿಂತ
ಉಪವಾಸದ ಭೀಮ- ಶಕ್ತಿಯ ಮಹಿಮೆ
ಜಗಕೆ ತೋರಿಸಿದ.

ತನ್ನ ಅನುಯಾಯಿಗಳ ಅಲ್ಪ ತಪ್ಪೂ ಕೂಡ
ತನ್ನದೆಂದೇ ಬಗೆದು, ತಾನೆ ಶಿಕ್ಷಿಸಿಕೊಂಡು
ದೇಹ-ದಂಡಿಸಿಕೊಂಡ; ಎಂಥ ಚೋದ್ಯ!
ಮಾನವನ ಇತಿಹಾಸ ಸಾರಿ ಹೇಳುವದಿಂತು
ಇವಗೆ ಜನ್ಮವನಿತ್ತ ಮಣ್ಣು ವಂದ್ಯ!!

– 'ಜೀವಿ' ಕುಲಕರ್ಣಿ

ನಾನು ಮತ್ತು ಗಾಂಧಿ

ಎಂಥ ಹಾಳು ಕನಸು:
ನಾ ಹೊರಟ ಹಾದಿಯ ತುಂಬ
ಕಾರು ಬಸ್ಸು ರಿಕ್ಷಾ ಇತ್ಯಾದಿ ಕೂಡೆ ನೂಕು ನುಗ್ಗಲು
ಮುರಿದು ಬೀಳುವ ಹಾಗೆ ಮಗ್ಗುಲು
ಚಿಳ್ಳೆಪಿಳ್ಳೆಯಿಂದ ಆಧುನಿಕ ಕುಂಟಣಿಯವರೆಗೆ ಮುಂದೆ
ಮಂದೆಯಲ್ಲೂ ಹಲವು ಜರತಾರಿ ಪೇಟ
ಒಬ್ಬೊಬ್ಬನೂ ನಿನ್ನ ಕಲ್ಪನೆಯ ಬಂಟ
ಹಾವು ಹರಿದಂತೆ ಹರಿದು ಮೀನು ಸುಳಿದಂತೆ ಸುಳಿದು
ಹಕ್ಕಿಯಾದವರೆಲ್ಲ ನೇರ
ಯಾವುದಷ್ಟೆಂದರೂ
ಗೆದ್ದವನು ನೀನೊಬ್ಬನೇ ಧೀರ.

ಹಲವು ಯುಗಗಳ ರೇಸು ಮುಗಿಯಿತು ಮೊನ್ನೆ
ಎಂಥ ಮೆರವಣಿಗೆಯಾದರೂ ಚೆನ್ನೆ
ಕೊನೆಗೊಂದು ಶತಮಾನವಷ್ಟು ಉದ್ದನೆಯ ಮೆರವಣಿಗೆ ಹೊರಟು
ಧಗಧಗೆನ್ನುವ ಬದುಕು ಕುಣಿಕುಣಿದು ತಣಿವ ಲೀಲೆ
ಮನ ಸೆಳೆವ ಹೂವುಗಳ ಸಮಾಧಿ, ನದಿಯ ದಂಡೆಯ ಮೇಲೆ.

ನಾನು ನಿನ್ನಂತಲ್ಲ
ನನ್ನ ಪಾಲಿನ ಸಾವು ಹಲವು ಬಾರಿ
ಆದರೂ ನನ್ನೊಳಗೆ ನೀನಿರುವೆ
ನನ್ನ ಪುಸ್ತಕವಿಟ್ಟ ಕಪಾಟಿನೊಳಗೆ

– ಕ.ವೆಂ. ರಾಜಗೋಪಾಲ

ಪಾಶ್ಚಾತ್ಯರ ಧರ್ಮದೈವ ಕ್ರಿಸ್ತನ ದಯೆ ಎತ್ತಿಕೊಂಡು
ಅವನ ನಡತೆ ಎತ್ತಿ ಹಿಡಿದ ಅವರ ಎದುರಿಗೆ;
ಆಳುವವರ ಹೃದಯ ಕಲಕಿ ಅಸಹಾಯರ ಮಾಡಿಬಿಟ್ಟ
ಕೈಮುಗಿವುದ ಕಲಿಸಿಕೊಟ್ಟ ಬಿಳಿಯ ಜನರಿಗೆ.

ಪುರೋಹಿತ ಶಾಹಿ ಎದುರು
ಬಂಡವಾಳಶಾಹಿಗೆ ಪ್ರತಿ, •
ಸಾಮ್ರಾಜ್ಯಶಾಹಿ ಎದುರು ಏಕಕಾಲಕೆ
ಶ್ರೀಕೃಷ್ಣನ ಚಕ್ರದಂತೆ ಚರಕಚಕ್ರ ತಿರುಗಿಸಿದ
ನಮ್ಮ ಧ್ವಜದಲಿಟ್ಟುಹೋದ ನಾಳೆ ನೆನಪಿಗೆ.

ಸ್ವಂತಿಕೆಯೇ ಸ್ವಾಭಿಮಾನ, ಸ್ವಾಭಿಮಾನ ಸ್ವಾತಂತ್ರ್ಯ,
ಸ್ವರಾಜ್ಯಕ್ಕೆ ಮುಖ್ಯವೆಂದ ಸ್ವಾವಲಂಬನೆ,
ಸಶಸ್ತ್ರರಾದ ಬ್ರಿಟಿಷರೆದುರು ಅಸಹಾಯರು ನಿಲ್ಲಲಿಕ್ಕೆ
ಅಹಿಂಸೆ ಅಸ್ತ್ರವನ್ನು ಕೊಟ್ಟು ಧೈರ್ಯ ತುಂಬಿದ.

ಅಸ್ಪೃಶ್ಯರು ಹರಿಜನರು, ಸ್ತ್ರೀಯರಲ್ಲ ಅಬಲೆಯರು,
ಎಲ್ಲ ಕೂಡಿ ಹೋರಾಡಲು ಸತ್ಯಗೆಲುವುದೆಂದ;
ಮಕ್ಕಳೋ ದೊಡ್ಡವರೋ ಯಾರೇ ಪತ್ರ ಬರೆದರೂ
ಉತ್ತರಿಸಿದ, ಒಲಿಸಿಕೊಂಡ ತನ್ನ ಧ್ಯೇಯಕೆ.

ಉಪ್ಪೇ ಇರಲಿ, ಊಟವಿರಲಿ, ಒಡವೆ ವಸ್ತ್ರ ಏನೇ ಇರಲಿ,
ಪ್ರತಿಯೊಂದೂ ಅಸ್ತ್ರವಾಗಿ ಬಿಡಲು ಕಲಿಸಿದ,

ಪರದೇಶದ ವಸ್ತ್ರ ಸುಟ್ಟು, ತೊಟ್ಟ ಒಡವೆ ಬಿಚ್ಚಿಕೊಟ್ಟು,
ಗುರಿಯನೊಂದೆ ನೆಚ್ಚುವಂಥ ಸ್ಥೈರ್ಯ ಕಲಿಸಿದ.

ಸುಧಾರಣೆ ಸ್ವದೇಶಿ ಒಂದೇ, ಧರ್ಮ ರಾಜಕೀಯ ಒಂದೇ,
ರಹೀಮ, ರಾಮ, ಕ್ರಿಸ್ತ ಒಂದೆ- ಅದೇ ಅವನ ಅಸ್ತ್ರ ;
ಜನಾರ್ದನನ ಜನತೆಯಲ್ಲಿ ತನ್ನಲ್ಲೂ ಕಾಣಲೆಂದು,
ಮೂಳೆಮೈಗೆ ಸುತ್ತಿಕೊಂಡ ಒಂದು ತುಂಡು ವಸ್ತ್ರ.

ಗುರುವಿನಂತೆ ನಡೆದುಕೊಂಡ, ತಂದೆಯೆಂದು ಕರೆಸಿಕೊಂಡ,
ಅಸಾಮಾನ್ಯನಾಗಿ ಕಂಡ ಸಾಮಾನ್ಯರ ಬದುಕಿಗೆ;
ಇದು ಅವನಿಗೆ ಸಹಜವೋ, ಇದೂ ಒಂದುಪಾಯವೋ,
ತನ್ನ ಸ್ವಂತ ದಾರಿನಡೆದ ದೇಶದುದ್ದಕೆ.

- ಸುಮತೀಂದ್ರ ನಾಡಿಗ್

ಗಾಂಧಿ ಗಾಥಾ

ನಿನ್ನ ಹುಟ್ಟು ಹಬ್ಬದಂದು
ಕವನ ಕಟ್ಟಿ ಹಾಡಲೆಂದು
ಅವಸರದಲಿವೊಪ್ಪಿದೆ;
ನೀಲ ಜಲಧಿ ನೀರನೆಲ್ಲ
ಬೋಗುಣಿಯಲಿ ತುಂಬಬಲ್ಲ
ಸಾಹಸದಲಿ-ತಪ್ಪಿದೆ!
ನಿನ್ನಂತಹ ಪುಣ್ಯವಂತ
ತುಳಿದ ದಾರಿ ಧೂಳಿಕಣ
ನಖಶಿಖಾಂತ ಮುಚ್ಚಿದೆ;
ಅದೇಎನಗೆ ಶಿರಸ್ತ್ರಾಣ
ಅದೇ ತ್ರಾಣ, ಅದೇ ಪ್ರಾಣ,
ಕಲ್ಪನೆ ಗರಿ ಬಿಚ್ಚಿದೆ.

* * *

ಅದೊ ನೋಡು-
ಎಪ್ಪತ್ತು ವರ್ಷಗಳ ತೆರೆ ಸರಿಯೆ:
ಗಗನದ ವಿಶಾಲದಂಗಣದಲ್ಲಿ ಸುತ್ತಲಲಿ,
ದೇವದೂತರುಯೆಲ್ಲ ಕಿಕ್ಕಿರಿದು ನಿಂದಿರ್ದು
ಅನಿಮಿಷೋನ್ಮೇಷದಲಿ ನೆರೆ ನಿರೀಕ್ಷಿಸುತಿರುವ
ದಿವ್ಯದೃಶ್ಯವ ನೋಡು- ಜನ್ಮಸಾರ್ಥಕ ಮಾಡು!
ಆತ್ಮಶಕ್ತಿಯ ತೇಜ ಪ್ರಜ್ವಲಿಸಿ.ಚಲಿಸುತಿಹ
ವಜ್ರವೀರ್ಯದ ಕ್ಷೀಣ ದೇಹಿಯನು ನೀ ನೋಡು!

ಇರುಳೆದೆಯ ಸೀಳಿನಡೆಯುವ ಸೊಡರ ಕುಡಿಯಂತೆ
ಊರುಗೋಲಾಧಾರವಾಗಿ ಸಾಗುವಮುಂತೆ-
ಮುನ್ನಡೆಸುತಿಹನು-ಜನಗಣವ ಮಾಂತ್ರಿಕನಂತೆ

ಉದ್ಘೋಷ ಹರ್ಷದಿಂ ಪಾರ್ಥಿವೊಳಗುವ ತೆರದಿ
ಜಯತು ಜಯವೆಂದು ಜನಕೋಟಿಬೆಂಬಳಿವಿಡಿದು,
ಲೋಹ ಚುಂಬಕ ಶಕ್ತಿಯಾಕರ್ಷಿಸುವ ಭರದಿ-
ಸಾತ್ವಿಕಾವೇಷದಲಿ ಸಾಗುತಿದೆ ಬೆಂಕಿಯಲಿ
ಬಿದ್ದರೂ-ಶತಶತಘ್ನಿಯ ಬಾಯ್ಗೆ ಸಿದ್ದರು

* * *

ಕುಂಟನೂ ಕೈಲಾಸವೇರಿದನು, ರಣಹೇಡಿ
ನರಸಿಂಹನಾದ, ಮಾಮೂಗನೂ ವಾಚಾಳಿ-
ಹಸುಳೆ ಹೆಂಗುಸು ಹರೆಯದವರೆಲ್ಲ ಕೆರಳಿದರು
ಸಿಡಿಗುಂಡ ಮಲ್ಲಿಗೆಯ ದಂಡೆಯನೆ ಧೈರ್ಯದಲಿ
ಕೊರಳನರ್ಪಿಸಿ- ತಾಯ್ಗೆ ಜಯವೆಂದು ತೆರಳಿದರು!

ಸೂರ್ಯ ಮುಳುಗದ ಮಹಾಸಾಮ್ರಾಜ್ಯಪೀಠವನು
ನಡುಗಿಸಿತ್ತವನೊಂದು ಶಾಂತಿಮಂತ್ರ ಸ್ಫೂರ್ತಿ!
ಬಿಗಿದ ಸಂಕಲೆಯ ಬಂಧನ ಕಳಚಿ ಮೈ ಕೊಡಹಿ,
ಏಳುತಿರುವಳು ತಾಯಿ ಭುವನೇಶ್ವರಿಯು, ಮರಳಿ-
ಎದ್ದೇಳುವಳು.....

* * *

ಅಯ್ಯೋ! ಬಿದ್ದೇಳುವಳು ಹೊರಳಿ,
ಮೈಯೆಲ್ಲ ಗಾಯಗೊಂಡಿಹುದು, ಕೈಕಾಲುಗಳ
ಸಂಕಲೆಯ ಗೊಣಸು ಮುರಿದಿದ್ದರೂ ತಾಯೊಡಲ
ಸಿಗಿವರೋ ಗರಗಸದಿಮಕ್ಕಳೇ ಮರುಳುಗಳು!

ಏಕಾಕಿ-ಆ ಕ್ಷೀಣದೇಹಿ ಧಾವಿಸುತಿಹನು:
ನೆತ್ತರೋಕುಳಿ ತುಳಿದು, ನವಕಾಳಿ ನರ್ತಿಸುವ,

ಸೋದರನು ಸೋದರನ ಕೊರಳ ಹಿಸುಕುತಲಿರುವ
ಪೈಶಾಚ ತಾಂಡವದ ರುದ್ರಭೂಮಿಯ ಕಡೆಗೆ-
ತಾಯ ಮೈಮೆಲ್ಲವರಿ- ಹಾ! ಎಂದ, ಮಾ! ಎಂದ,
ಶಾಂತಿ ಶಾಂತಿಯು ಶಾಂತಿ ಎಂದ ನಲ್ನುಡಿಯಿಂದ.

* * *

ಹೇರಾಮ! ಹೇರಾಮ! ಪ್ರೇಮಕ್ಕೆ ವಿದ್ವೇಷ
ಗುಂಡಿಕ್ಕಿಕೊಂದಿತೊ! ಸೋದರ ಕುಡಿ ನಂದಿತೊ;
ಸತ್ಯದಲಿ ಶಾಂತಿಯಲಿ ಪ್ರೇಮದಲಿ ಧರ್ಮದಲಿ
ಜಗವನೆತ್ತಿದ ಲೋಕವಂದ್ಯ ಗಾಂಧಿಯ ಕೊಂದು
ನಾವು ಸತ್ತೆವು!

ಪಾಪಭಾರ ಹೊತ್ತೆವು ಮುಂದು
ಬಿಡುಗಡೆಯ ತುತ್ತು ನೆತ್ತರಿನಿಂದ ತೊಯ್ದಿತ್ತು ;
ನಮ್ಮನೆತ್ತಿಗೆ ಜಗದಶಾಪ ಸುತ್ತಿಗೆ ಬಿತ್ತು.

* * *

ಮತ್ತೆ-
ಐವತ್ತು ವರ್ಷಗಳ ತೆರೆ ಸರಿಯೆ:
ಸ್ವಾತಂತ್ರ್ಯ ಸ್ವರ್ಣೋತ್ಸವದ ಥಳಕು ಬೆಳಕಿನಲಿ
ಎಲ್ಲ ಕಡೆಗೂ ಒಮ್ಮೆ ದಿಟ್ಟಿ ಹರಿಯಿಸಿ ನೋಡು:
ಅದೊ-
ಚರಂಡಿಯ ಬದಿಗೆ ಕುಳಿತು ಕಣ್ಣೀರ್ಗರೆವ
ಭಾರತದ ನಿರ್ಭಾಗ್ಯ ಮಾತೆಯೊಬ್ಬಳ ನೋಡು:
ಐದುಸಲ ಜವಳಿ ಮಕ್ಕಳ ಪಡೆದ ಮಾತಾಯಿ,
ಹತ್ತು ಮಕ್ಕಳ ತಾಯಿ.-

ಆ ಮಹಡಿ ಮೇಲಿಂದ
ಎಸೆದಯೆಂಜಲ ಹೆಕ್ಕಿ ಮುಕ್ಕುವಳು, ಚೀರಿಡುತ
ಸುತ್ತಲೆತ್ತಲು ಮುತ್ತಿಬಹ ಕ್ಷೀಣ ಶಿಶುಗಳನು
ದೂರ ದೂರಕೆ ದೂಡಿ, ತಾನೆ ಎಂಜಲಿನೆಲೆಯ
ಬಳಿ ಸೆಳೆದುನೆಕ್ಕುವಳು ನಡುಬೀದಿ ನಿಲ್ಲಿಸಿದ

ಕಲ್ಲಿನ ಮಹಾಶಿಲ್ಪ - ಆ ಮಹಾತ್ಮನ ಪ್ರತಿಮೆ-
ಆ ದರಿದ್ರನಾರಾಯಣನ ನಿಜರೂಪ-ಬೆರಗಾಗಿ
ನಿಂತು ನೋಡುತಲಿತ್ತು ಕಂಬನಿಯ ಸುರಿಸಿತ್ತು!
ಚಿನ್ನ ಹಬ್ಬದ ನೋಟ ಕಲ್ಲನ್ನು ಕರಗಿಸಿತು!

* * *

ಉನ್ನತೋನ್ನತ ಮಹೋನ್ನತದ ಸೌಧದ ಮೇಲೆ
ಸ್ಥೂಲ ದೇಹದ ದೇಶಭಕ್ತ ಗಾಂಧೀದೂತ
ತಿಂದ ಮಾಂಸದ ಜತೆಗೆ ಕುಡಿದ ದಾಕ್ಷಾರಸವು
ಹೊಟ್ಟೆಯಲಿ ಹೊರಳಾಡಿ ಮಥಿಸುತಿರೆ, ಹುಳಿತೇಗು
ಎಡೆಬಿಡದೆ ಮರುಕೊಳಿಸುತಿರಲು, ತಡೆಯಲು ಸಲ್ಲ
ಕಕ್ಕಿದರ ಸ್ಫೋದರದಿನುಕ್ಕಿದ ದ್ರವದಿಂದ
ಸಜ್ಜವನೆ ಬಟ್ಟಲಿಗು ಕಡೆಯಾಗೆ-ನೋಡಲ್ಲಿ-
ಮಿಸುನಿಚೌಕಟ್ಟಿನಲಿ ಬಿಗಿದು ಕುಳ್ಳಿರಿಸಿರ್ದ
ಮೇಲೆ ಕೆಳಗೂ ಮತ್ತೆ ಇಬ್ಬದಿಗು ಮೊಳೆ ಹೊಡೆದು
ನೇತಾಡಿಸಿರ್ದ ಗುರು ಗಾಂಧಿ ದೇವರ ಚಿತ್ರ,
ಸಾವಿರ ಹೆಡೆಯ ಕುಪಿತ ಸರ್ಪ ಬುಸುಗುಟ್ಟುತಲಿ
ಸಾವಿರಬಾರಿ ಕಚ್ಚಿ ಚುಚ್ಚುತ್ತಿರುವ ನೋವನ್ನು
ಏಗ್ಗೆದು ತಪ್ಪಿಸಲು ಸಾಧ್ಯವಾಗದೆ ಸಂಕಟಪಡುತ
ಸಹಿಪ ಕುರಿ ಮರಿಯಂತೆ ನಡುಗಿತ್ತು! ನಡುಗಿತ್ತು!!

* * *

ಅವಜ್ಞಾನವೃದ್ಧ - ಹರೆಯದೊಳಂತೆ ಹಿರಿಯವನು,
ವೇದ ವೇದಾಂಗಗಳನೋದಿರುವ ಪ್ರಾಚಾರ್ಯ,
ವಿಶ್ವವಿದ್ಯಾಲಯ ಸಭಾಂಗಣದಿ ಶಿಷ್ಯರಿಗೆ
ಉಪನಿಷನ್ಮಂತ್ರವನು ವ್ಯಾಖ್ಯಾನಿಸುತ್ತಿಹನು
"ಓಂ ಸಹನಾವವತು, ಸಹನೌಭುನಕ್ತು,
ಸಹವೀರ್ಯಂಕರವಾವಹೈ
ತೇಜಸ್ವಿನಾವಧೀತಮಸ್ತು, ಮಾವಿದ್ವಿಷಾವಹೈ, ಓಂ ಶಾಂತಿ
ಶಾಂತಿ...."

ಶಾಂತಿ ಮಂತ್ರವು ಮೂರನೆಯ ಬಾರಿ ಕಿವಿದೆರೆಗೆ
ಬೀಳುವುದ ಮುನ್ನ -ಹಾ! ಮೊಡೆಯಿತೋ ಕಲ್ಗುಂಡು!
ಸ್ವಚ್ಛ ಖಲ್ವಲಲಾಟಪುಟಕೆ, ಚಿರಿ ಚಿಮ್ಮುತಲಿ
ನೆತ್ತರಿನ ಕಾರಂಜಿ ಸುತ್ತಲೂ ಸಿಡಿಯುತಿರೆ
ರಕ್ತಾರ್ದ್ರವಾಯ್ತು ಹೋ ಶುಭ್ರ ಶ್ವೇತಾಂಬರವು;
ಉಪನಿಷನ್ಮಂತ್ರ ದೇವತೆಗಿಂತು ಪ್ರಾಣಬಲಿ
ತೆತ್ತು, ಚಿರಶಾಂತಿಯಲ್ಲೊರಗಿದನೊ ಪ್ರಾಚಾರ್ಯ;
ನಡೆದುದ್ದೈ-

ಶಿಷ್ಯಕೋಟಿಯು ಘೋಷಯಾತ್ರೆಯಲಿ
ಕ್ಯಾಬರೆ ದಿಗಂಬರೆ ಕುಣಿವ ಮೋಹಮಹಲಿನೆಡೆ-
ನಿರ್ಜನ ಸಭಾಂಗಣದ ನಡುವೆ ತೂಗಾಡಿಸಿದ
ಆ ಅಹಿಂಸಾ ಮೂರ್ತಿ ಚಿತ್ರ ಕಂಪಿಸುತ್ತಿತ್ತು!
ಕಣ್ಣೀರ ಕಿಡಿಯನುರುಳಿಸಿತು! ಧರೆ ನಡುಗಿತ್ತು!!

* * *

ತೆರೆ ಹಾರಿತಹ!
ಭವಿಷ್ಯದ ದೃಶ್ಯಕಂಡೆಯಾ?
ಗಡಗಡನೆ ಪೊಡವಿ ನಡುಗಿತು, ಪ್ರಳಯ ಕಾಲವೆನೆ,
ಕ್ರಾಂತಿಸ್ಫುಲಿಂಗದಿಂ ಸ್ಥಿರೆಯು ಸೀಕರಿ ಹೋಯ್ತು
ಬುಡಕಿತ್ತು ಹಾರಿ ಹೋದುವು ದುಷ್ಟ ಶಕ್ತಿಗಳು,
ಸುಟ್ಟುರೆಗೆ ಸಿಲುಕಿ ಘೂರ್ಮಿಸುವ ತರಗೆಲೆಯಂತೆ
ಉಲ್ಲೋಲ ಕಲ್ಲೋಲವಾಯ್ತು ವಿಪ್ಲವವಾರ್ಧಿ;
ಆಲದಯೆಲೆ ಮೇಲೆ ಆಡುತಿಹ ಶಿಶುವಂತೆ
ಉಳಿದಿತೋ ಸಚ್ಛಕ್ತಿ, ಜನನದ ಶಿವಶಕ್ತಿ.

* * *

ಮರಳಿ ಹೊಸಸೃಷ್ಟಿ ಸರ್ವರು ಸರಿ ಸಮಾನರೆನೆ-
ಸರ್ವೋದಯವ ಸಾರುತಿಹ ವಿನೂತನ ಸೃಷ್ಟಿ,
ಸರ್ವರಿಗೂ ಸಂತುಷ್ಟಿ, ಕುರುಡಿಗಂಜನ ದೃಷ್ಟಿ
ಅಲ್ಲಿ-

ಭಯವಿಲ್ಲ , ದಯೆಯೇ ಎಲ್ಲ, ಶೋಷಣೆಯ
ಘರ್ಷಣೆಯ ಸುಳಿವಿಲ್ಲ, ಎಲ್ಲವು ನಿರಾತಂಕ,
ಎಲ್ಲೆಲ್ಲು ನಿಶ್ಶಂಕ, ಸಮಸುಖಿಗಳೆಲ್ಲರೂ,
ಎಲ್ಲರುಪಕಾರಿಗಳು, ಎಲ್ಲರು ಉದಾರಿಗಳು,
ಸಕಲರೂ ಸಹಕಾರ ನೀಡುವರು, ನೋಡುವರು
ತನ್ನಂತೆ ಪರರ, ಸಾಂತ್ವನದಿ ಮಾತಾಡುವರು,
ಭ್ರಾತೃತ್ವ ಮಿತ್ರತ್ವದಿಂದ ಜತೆಗೂಡುವರು,
ಸತ್ಯಕ್ಕೆ ಧರ್ಮಕ್ಕೆ ದೇಶಕ್ಕೆ ದುಡಿಯುವರು,
ದುಡಿತದೊಳೆ ದೇವರನುಕಾಂಬ ಸತ್ಕರ್ಮಿಗಳು,
ಹಿಡಿಮಣ್ಣ ಹುಡಿಯಲ್ಲಿ ಸ್ವರ್ಣ ಪರ್ವತ ಪಂಕ್ತಿ
ಕಡೆವಮರ ಶಿಲ್ಪಿಗಳು ತ್ಯಾಗದೊಳೆ ಭೋಗಿಗಳು.

* * *

ದೇವ ಸಾಯುಜ್ಯ ಸನ್ನಿಧಿಯ ಪಡೆದ ಮಹಾತ್ಮ
ಕಣ್ಣಾರೆ ಕಾಣುತಿಹನೆಲ್ಲವನು ದಿವದಿಂದ,
ಹರ್ಷಾಶ್ರುವರ್ಷಧಾರಾಕಾರ ಸುರಿಸುತಲಿ,
ತಂಪಾಯಿತ್ತೈ ನೆಲವು, ನೆಲದ ಮಾನವ ಕುಲವು
ಚಿಗುರಿತು ಪುನಶ್ಶಾಂತಿ, ಸಸ್ಯಶ್ಯಾಮಲೆಯಾಯ್ತು
ಧರಣಿ, ಸಜ್ಜನರು ಸಂತೃಪ್ತಿಯಲಿ ಬಾಳಿದರು,
ಮಳೆ ಬಂದು ಹೊಳೆ ತುಂಬಿ ಹರಿಯತೊಡಗಿತು
ಗಾಂಧಿ-
ದಿವದೊಳಿದ್ದೇ ಇಳೆಯನಾಳಿದನು-ಬಾಳಿದನು;
ಚಂದ್ರಾರ್ಕತಾರಾಳಿ ಪ್ರಜ್ವಲಿಸುವನಿತು ಕಾಲ,
ಸಾಹಸ್ರ ಸಾಹಸ್ರ ವರ್ಷ ತುಂಬಿದ ಕಾಲ,
ಚಿರಕಾಲ, ಭದ್ರಶುಭ ಮಂಗಳ ಮೆರೆವ ಕಾಲ;
ಕಸ್ತೂರಿ ಗಂಧವೆನೆ ಜಸದ ಪರಿಮಳ ಸುತ್ತು
ಪಸರಿಸಿತು- ಷಟ್‌ಖಂಡ ಧರಣಿ ಮಂಡಳದಲ್ಲಿ.
ಬುದ್ಧ ಮಹಮ್ಮದ ಕ್ರಿಸ್ತ ಜರತುಷ್ಟ ಜಿನದೇವ
ಸಾಕ್ರಟಿಸ್ ಪ್ಲೇಟೊ, ಟಾಲಸ್ಟಾಯ್ ಮುಂತಾದ
ಸಂತರೆಲ್ಲರು ಸೇರಿರುವ ದಿವ್ಯ ಸಭೆಯಲ್ಲಿ

ಅಧ್ಯಕ್ಷತೆಯ ಪೀಠ ಗಾಂಧಿಯೇರಿರೆ-ಘೋಷ
ಕೇಳಿಸಿತು- ಮರ್ತ್ಯದಿಂ ಮೊಳಗಿ ಮಾರ್ಮೊಳಗುತಲಿ:
"ರಘುಪತಿ ರಾಘವ ರಾಜಾರಾಮ್, ಪತಿತಪಾವನ
ಸೀತಾರಾಮ್
ಈಶ್ವರ ಅಲ್ಲಾ ತೇರೇನಾಮ್ ಸಬ್‌ಕೋಸನ್ಮತಿ ದೇ ಭಗವಾನ್"

* * *

ನಾ ನೋಡಿದೆ-
ನಿನ್ನಯ ಶುಭದವತಾರವ ತಂದೆ,
ನಾ ಕೇಳಿದೆ-
ಕಹಳಾರವ ನಿನ್ನಯ ಮುಖದಿಂದೆ,
ನಾ ಬೇಡಿದೆ-
ಬಿಡುಗಡೆಯನು ನಿನ್ನಯ ದಯೆಯಿಂದೆ,
ನಾ ಕಾದಿದೆ-
ಸ್ವಾತಂತ್ರ್ಯಕೆ ನಿನ್ನಯ ಬಲದಿಂದೆ,
ನಾ ತಾಳಿದೆ-
ಸಂತೋಷವ ನಿನ್ನಯ ನೆನಹಿಂದೆ,
ನಾ ಬಾಳಿದೆ-
ಮನುಜತ್ವದಿ ನಿನ್ನಯ ವರದಿಂದೆ,
ನಾ ಹಾಡಿದೆ-
ಕವನವನಿದೊ ನಿನ್ನಯ ಹೆಸರಿಂದೆ.
ನಿನ್ನಂತಹ ಗುಣವಂತನು
ನಿನ್ನಂತಹ ಘನವಂತನು
ನಿನ್ನಂತಹ ಸರಿ ಸಂತನು
ನೀನೊಬ್ಬನೆ ತಂದೆ.
ನಿನ್ನಯ ಹೆಸರೆತ್ತುತಲಿ
ಕವಿಪೀಠವ ಪತ್ತುತಲಿ
ಹಾಡಿದೆ ನಾ ಹಿಗ್ಗುತಲಿ
ಕರುಣೆಯ ಶಿಶುವೆಂದೆ.
ಈ ಲೋಕವನೆಬ್ಬಿಸಿದೆ,

ಆ ಲೋಕವ ತಬ್ಬುತಿದೆ,
ಮೂಲೋಕದಿ ಹಬ್ಬುವುದೆ,
ನಿನ್ನಯ ಹೆಸರೊಂದೆ
ಅವಿನಾಶವು ತವನಾಮ,
ಅಸಮಾನದ ಗುಣಧಾಮ!
ಕಲ್ಪಿತವೀ ಕವಿ ಕರ್ಮ
ಸೂರ್ಯಗೆ ಸೊಡರೆಂದೆ.!

- ಕಯ್ಯಾರ ಕಿಞ್ಞಣ್ಣ ರೈ

ಗಾಂಧೀಸ್ಮರಣೆ

ಖಾಲೀ ಗದ್ದಲದ ಈ ನಾಡಿನ ಉದ್ದಗಲಕ್ಕೂ
ಈಗ ಶಾಂತಿ ನೆಲೆಸಿದೆ.
ನರನಾಡಿಯೆಲ್ಲ ನಿಂತೇ ಹೋದಂತಾಗಿ
ನಾವೆಲ್ಲ ಯೋಗಿಗಳಾಗಿದ್ದೇವೆ.
ಹಾದಿ ಮಾತು, ಬೀದಿ ಭಾಷಣಗಳ ಸದ್ದಡಗಿ
ಕಿವಿ ತುಂಬ ಹುಲುಸಾಗಿ ಕೂದಲು ಬೆಳೆಯುತ್ತಿದೆ.

ಅನಾಚಾರ ಅತ್ಯಾಚಾರ ಭ್ರಷ್ಟಾಚಾರಗಳ ಬದಲು
ಪತ್ರಿಕೆಗಳ ತುಂಬ ಶುದ್ಧ ಸಮಾಚಾರ ತುಂಬಿದೆ,
ಎಲ್ಲಾ ಸಾಮಾನುಗಳ ಬೆಲೆ ಇಳಿದೂ ಇಳಿದೂ
ಈಗ ಕೈಗೆ ಸಿಗದಂತಾಗಿವೆ.
ಬಿಡಾಡಿ ನಾಯಿಗಳ ನಿರ್ಬೀಜೀಕರಣವಾಗಿದೆ.
ಭಾರತದ ಜನಸಂಖ್ಯೆ ಇಳಿಯುತ್ತಿದೆ.

ನಾಳಿನ ನಾಗರಿಕರಾದ ಇಂದಿನ ಮಕ್ಕಳೆಲ್ಲ
ಸರಿಯಾಗಿ ಸಾಲೆಗೆ ಹೋಗಿ
ಒಂದು ಎರಡು ಬಾಳೆಲೆ ಹರಡು
ಕಲಿಯುತ್ತಿದ್ದಾರೆ.
ಹಸಗಂಡು ಮನೆಗೆ ಬಂದು
ಮಣ್ಣಿನ ವಾಸನೆಯ ತಾಜಾ ಊಟ ಮಾಡುತ್ತಾರೆ.
ಜಾಣ ಬಾಬಾಗಳಿಗೆ ಪುಟ್ಟಗೌಡರ ಬೆನ್ನುಸಿಕ್ಕು

ಧರ್ಮೋದ್ಧಾರದ ಸವಾರಿ ಮುನ್ನಡೆದಿವೆ.
ಅಸ್ಪೃಶ್ಯದೇವರಿಗೆ ಹರಿಜನರ ದರ್ಶನವಾಗಿ
ಅವರ ಉದ್ಧಾರವೂ ಆಗುತ್ತಿದೆ.
ಸರಕಾರದ ಕೆಲಸ ದೇವರ ಕೆಲಸವಾಗಿ
ತುಪ್ಪದ ದೀಪ ಥಾಳಾಗಿ ಉರಿಯುತ್ತಿವೆ
ವಿಶೇಷ ಪ್ರಾರ್ಥನೆಗಳಿಂದಾಗಿ ದೇಶದ ತುಂಬ
ಜಿಟಿ ಜಿಟಿ ಮಳೆ ಹಿಡಿದಿದೆ.
ನಮ್ಮ ತ್ರಿವರ್ಣ ಧ್ವಜ ತೊಯ್ದು ತಪ್ಪಡಿಯಾಗಿ
ಅಶೋಕ ಚಕ್ರ ಸ್ಥಿರವಾಗಿದೆ.

ಹೆದ್ದಾರಿಯ ಮೇಲೆ ಕೆಟ್ಟುನಿಂತ ಟ್ರಕ್ಕು ಕೂಡ
ನಾಡು ಮುನ್ನಡೆದಿದೆ- ಎಂಬ ಸಂದೇಶ ಹೊತ್ತಿದೆ.
ರೇಡಿಯೋದ ಗಿಳಿವಿಂಡು, ಅದೋ,
ಒಕ್ಕೊರಲಿಂದ ಅದೇ ಹಾಡು ಹಾಡುತ್ತಿದೆ.

ಧನ್ಯತೆಯ ಈ ಕ್ಷಣದಿ, ಓ ಮುದ್ದುರಂಗ,
ಕಿವಿ ಮುಚ್ಚಿ, ಕಣ್ಣು ಮುಚ್ಚಿ,
ನೆನೆ ನೆನೆ ಗಾಂಧಿಯನು.
(ಯಾವ ಗಾಂಧಿ? ಅಂತ ತಿಳಿಯದೇ ಪೆದ್ದಲಿಂಗ?)
ಬಾಯಿ ಮುಚ್ಚಿ,
ನೆನೆ ನೆನೆ ಗಾಂಧಿಯನು.

- ಚಂದ್ರಶೇಖರ ಪಾಟೀಲ

ಬಾಪೂ

೧

ಹಣ್ಣು ಹುಳಿಯೊ ಸಿಹಿಯೊ ರುಚಿಯ ನೋಡುವ ಮೊದಲೆ
ಯಾರನ್ನೊ ಅನುಕರಿಸಿ ಮಾಡಿದ್ದೆ ನಾನಾಗ ಮರದ ಗುಣಗಾನ;
ಅರ್ಜೆಂಟಿನಲಿ ಹೊರಟಾಗ ಅಂಗಿ ತೊಟ್ಟಿದ್ದಷ್ಟೆ
ಇಲ್ಲ ದೊಗಳೆಯೊ ಬಿಗಿಯೊ ಎನುವ ಅನುಮಾನ.
ಬಾಪೂ
ಬೆರಗಬಣ್ಣದ ಬುದ್ಧಿ ಮೊನೆಯಿಂದ ಕೆರೆದು
ಸ್ವಾನುಭವದಲಿ ಅರೆದು ಒರೆಯ ಹಚ್ಚಿದ್ದೇನೆ.

ಲೋಕಕೇ ಕಣ್ಣಾದ ಬೆಳುದಿಂಗಳು
ಮನೆಯ ಬೆಳಗಿಲ್ಲೆಂದು ಕೂಗಾಡಲೆ,
ಹೊತ್ತಿಸದೆ ದೀಪ?
ಮೇರೆಯಿಲ್ಲದ ಕಡಲು ನನ್ನ ಬಾಯಾರಿಕೆಯ
ತಣಿಸಲಿಲ್ಲೆಂದು ರೇಗಾಡಲೆ,
ತೋಡದೆಯೆ ಕೂಪ
ವ್ಯಕ್ತಿ ಬದುಕಿನ ಕಿರಿಯ ಪಾತ್ರವೆ ನಿನ್ನದು?
ಒಂಟಿಯೇ ನೀನು?
ಎಲ್ಲವೂ ನಿಸ್ಸೀಮ ಸ್ವಾತಂತ್ರ್ಯ ಉದ್ಧಾರ ಕ್ರಿಯೆ ಸರ್ವಭ್ರಾತೃತ್ವ
ಹಿರಿದು ಬದುಕಿನ ತತ್ತ್ವ.
ಕೊನೆತನಕ ದೇಶವೇ ನಿನ್ನ ಜೊತೆಯಲ್ಲಿ
ಬೆಟ್ಟವೇರಿದ ಹಾಗೆ ನಟ್ಟಿರುಳಿನಲ್ಲಿ.

ಹೆಳವ ನಡಿಗೆಯ ಹೊಳೆಗೆ ಇದ್ದಕಿದ್ದಂತೆ ಮಳೆ ಹೊಯ್ದು
ಮನೆಮಠಗಳೆಲ್ಲ ತೆಪ್ಪ ತೇಲುತ್ತವೆ.
ನಸುಕಿನ ಮುಸುಕಿನಲ್ಲಿ ತಣ್ಣಗೆ ಒರಗಿದ್ದಾಗ
ಭೂಮಿ ಮೈಮುರಿದೊ ಅಣ್ವಸ್ತ್ರ ಸಿಡಿದೊ
ನಂಬಿಕೆಯ ಬೇರುಗಳು ಸಡಿಲುತ್ತವೆ.
ಒಟ್ಟುಬದುಕಿನ ಸಾಫುಹಾದಿಯಲ್ಲಿ
ಸಲೀಸು ಸಾಗುವ ಚಕ್ರ
ಬೆಟ್ಟ ಕೊರಕಲಿನಲ್ಲಿ ಮುಗ್ಗರಿಸದೆ
ವ್ಯಕ್ತಿ ವ್ಯಕ್ತಿಗೆ ಒಡಿವ ಹಠಾತ್ತನೆಯ ಘಟನೆಯಲಿ
ನಿನ್ನ ಅನುಭವ ಬಾಳ ಬಗ್ಗಡಿಸದೆ?

ಬಾಪೂ
ಜಿಂಕೆ ಮೊಲ ನವಿಲೊಡನೆ ಇವೆ ಹಾವು ಹುಲಿ ಹಂದಿ
ಪ್ರಕೃತಿಯ ದ್ವಂದ್ವಕ್ಕೆ ಯಾವ ಬಟ್ಟೆ?
ಬರೀ ಹೃದಯ ಕರುಳಷ್ಟೆ ಇದ್ದಿದ್ದರಿವಕೆಲ್ಲ!
ಕೂಡಿಕೊಂಡಿವೆ ಹಾಳು ಹಲ್ಲು ಹೊಟ್ಟೆ.

ಇದಕ್ಕೇನನ್ನುವುದು ಹೇಳು:
ಅರಿವೆ ಇಲ್ಲದೆ ನಿತ್ಯ ಹಿಂಸೆಯಲೆ ಹಿಗ್ಗುತಿದೆ ಜಗದ ಬಾಳು.
ನೋಡಿವನ್ನು- ಹಿತ್ತಲಿನ ಈ ಬಳ್ಳಿ ಮರವನ್ನು
ಹೂವಿಂದ ಹೆರಳು ಚೆನ್ನು
ನಾಲಗೆಯ ನಲಿಸುವುದು ಹಣ್ಣುಕಾಯಿ
ಕೊಂಬೆ ಕಡಿದೊಟ್ಟಿರಲು ಒಲೆಯಲ್ಲಿ ತಣಿಯುವುದು ಹಸಿವು-
ನಾಯಿ

ಮೊನ್ನೆ ಲಕ್ವಾಹೊಡೆದ ನೆರೆಯಾತ ನರಳುತ್ತ
ಪಾರಿವಾಳವ ಕೊಯ್ದು ರಕ್ತಹೀರದೆ ಸತ್ತ
ಮಡದಿ ಮಕ್ಕಳಿಗಾರು ಗತಿಯೊ ತಂದೆ?

"ಸತ್ತರೆ ಗಾಂಧಿ" ಎಂದತ್ತ ಅಪ್ಪನ ಜೊತೆಯೆ
ಹಂಚಿ ಸಕ್ಕರೆ ಬೂಂದಿ ಸಂತೋಷಪಟ್ಟವರ
ಸಭೆಯಲ್ಲಿ ಕೈಕುಲುಕಿ ಸಮಾನತ್ವ ನಟಿಸಿ
ಮನೆಯಲ್ಲಿ ನೀರೆರೆದುಕೊಂಡು ಮಡಿಯಾದವರ
ಹಡಾಸುಬಂಡಿಯಾಚಾರಕ್ಕೆ ಜೆಟ್‌ಬುದ್ಧಿ ಹೊಂದಿಸಿ
ಪ್ರಗತಿ ಕನಸುತ್ತಿರುವ ಮಹಾನುಭಾವರ
ನೆರೆಯವನ ಬಂದೂಕುತುದಿ ಬೆನ್ನಿಗೊತ್ತಿರಲು
ಅಹಿಂಸೆಯ ಬೋಧಿಸಲೆಂದು ತವಕಿಸಿದ ಪ್ರೇತಾತ್ಮಗುಣದವರ
ನಮ್ಮದೆನ್ನುವುದಕ್ಕೆ ಕಾವುಕೂತಿಹ ಹಾವ
ದಾಟಿ ಮಾನವ್ಯದೆಡೆ ಕಾಲುಹಾಯಿಸದವರ
ದೇವರೆಂದೇ ಭ್ರಮಿಸಿ ದೂಡಿ ಸೆರೆಯಲಿ ನಮಿಸಿ
ನಿನ್ನ ಮರೆತಿರುವವರ ನಡುವೆ ಏಗುವ ನಾನು
ಅಪ್ಪ ಕಲಿಸಿದ್ದನ್ನೆ ನನ್ನ ಮೊಮ್ಮಕ್ಕಳಿಗೆ ಮಗ್ಗಿಯೊಪ್ಪಿಸಲೇನು?
ಗತಕಾಲಸೂಚಿ ಹಳೆಯುಳಿಕೆ ನಾಣ್ಯದ ಬಳಕೆ
ಏಕಾಗಲಿಲ್ಲೆಂದು ಸವಾಲೆತ್ತಿದರೆ ಏನು ಹೇಳಲಿ ಬಾಪೂ?

ಭವಿಷ್ಯತ್ತಿಗೂ ನಿನಗು ಕಟ್ಟಾಗಿ ಹೊಕ್ಕುಳಳಿ
ತಲೆಕೆರೆಯುತಿರುವಾಗ ಎಲ್ಲಿ ಹುಡುಕಲಿ ನಿನ್ನ?
ಎಲ್ಲಿ ಹುಡುಕಲಿ ಮಹಾತ್ಮ? ಎಲ್ಲಿ?
ಹೆಸರಲ್ಲೆ? ಸಮಾಧಿ ಪಾರ್ಕಿನ ಪ್ರತಿಮೆಯಲ್ಲೆ?
ಭಕ್ತರಲ್ಲೆ?
ಜಾತ್ರೆಜಂಗುಳಿಯಲ್ಲಿ ಕ್ಷೀಣಿಸಿದ ನಿನ್ನ ಲೆಫ್ಟರೈಟು ಸನ್ನೆಯಲ್ಲೆ?
ಸತ್ಯಾಗ್ರಹ ಉಪವಾಸ ಮುಷ್ಕರದ ಮರೆಯಲ್ಲೆ?
ಪಡಖಾನೆಯಲ್ಲೆ? ಕಾಲಧರ್ಮವಾಗಿರುವ ದುರಭಿಲಾಷೆಯಲ್ಲೆ?
ತಿಕ್ಕಾಡಿರುವ ಭಾಷೆಯಲ್ಲೆ?
ಅಥವಾ ತಕ್ಕಲಿಯಲ್ಲಿ? ಫ್ಯಾಕ್ಟರಿಯಲ್ಲಿ?
ಕಛೇರಿಗಳ ಐಲುಫೈಲಾದ ಫೈಲುಫೈಲುಗಳ ಕಪಾಟಿನಲ್ಲಿ?

ಖೋಟ ನೋಟಿನಲ್ಲಿ?
-ಎಲ್ಲಿ ಹುಡುಕಲಿ ಮಹಾತ್ಮ? ಎಲ್ಲಿ ಹುಡುಕಲಿ ನಿನ್ನ?

೪

ತೊರೆ ಮೊರೆಯುತ್ತದೆ ಬಾಪೂ ತೊರೆ ಮೊರೆಯುತ್ತದೆ
ಕಣ್ಮುಚ್ಚಿ ಬಿಡುವಷ್ಟರಲ್ಲೇ ಮೈಗರೆಯುತ್ತದೆ
ಮೊರೆದಾಗ ತಾನೇ ಎಲ್ಲವಾಗಿ ಜೀಗಿ ದಡಕ್ಕೆ ತಾಗಿ
ಮೊರೆಯುತ್ತದೆ- ಆಗ ಕಣ್ಣಿಗದೆ ಅಚ್ಚು
ಎದೆಗದರದೇ ಹುಚ್ಚು ;
ಅಪ್ಪಳಿಸಿ ಹಿಂದೆಯೇ ಸೊಕ್ಕುವ ಹೆದ್ದೆರೆಗಳಟ್ಟಹಾಸದಲಿ
ತೆರೆ ಮೈಗರೆಯುತ್ತದೆ.

ಕಾಲಸೃಷ್ಟಿಯ ದಿನದಿನದ ಸನ್ನಿವೇಶದಲಿ
ನಿನ್ನ ನಿರುಪಮ ಚಿತ್ರ ಚಲಚ್ಚಿತ್ರದಲ್ಲಿನ ಜಲಪಾತವಾಗಿ
ಕ್ಯಾಲೆಂಡರಿನ ಸಿಂಹವಾಗಿ
ಸಾಮಾನ್ಯತೆಯ ಸೌಮ್ಯತೆಯ ತಾಳುತ್ತದೆ
ಗೊಮ್ಮಟನ ಠೀವಿಯಲಿ ಮೌನ ಸಾಮ್ರಾಜ್ಯವನು ಆಳುತ್ತದೆ;
ಆಳುತ್ತದೆ ಆಳುತ್ತದೆ ಮಾಹಾತ್ಮ ಆಳುತ್ತದೆ
ಪ್ರಕೃತಿಯಂತೆ ಅಥವಾ
ಗತಸಂಸ್ಕೃತಿಯ ಸತ್ಕೃತಿಯಂತೆ ಅಥವಾ
ಮಧ್ಯರಾತ್ರಿಯ ಸ್ವರ್ಶಾತೀತ ರಾಜಸಾಕೃತಿಯಂತೆ
ನಿನಗಿಂತ ಹಿರಿಯರನು ಕಾಣೆ ಮಹಾತ್ಮ
ಮಿತಿಮೀರಿ ಏರಿರುವೆ, ಬಾಳಿಗೆ ದಕ್ಕದೆ ಮೀರಿರುವೆ
ವಾಸ್ತವತೆ ನಾನು ಆದರ್ಶನೀನು.

ಲೋಕವನೆ ದಹಿಸಿರುವ ಸೂರ್ಯನಿಗೆ ತಡೆಯಾಗಿ
ನಿನ್ನ ಕೊಡೆ ನೆತ್ತಿಯನು ಕಾಯುತಿರಲಿ;
ಕಾದ ಹಾದಿಯ ನಡೆಯೆ ಸ್ವಾನುಭವಕೆರವಾಗಿ
ಸ್ವಂತ ಜೀವನದೊಡನೆ ತೇಯುತಿರಲಿ.

- ಕೆ.ಎಸ್. ನಿಸಾರ್ ಅಹಮದ್

ಗಾಂಧೀಜಿಯ ಕೋತಿಗಳು

ಮಹಾತ್ಮರ ಅಚ್ಚುಕಟ್ಟು ಬರವಣಿಗೆ
ಮೇಜನ್ನು ಅಟ್ಟಹಾಸದಿಂದ ಅಲಂಕರಿಸಿ ಹೆಸರುವಾಸಿ
ಯಾಗಿದ್ದ ಮೂರು ಪಿಂಗಾಣಿ ಮಂಗಗಳಲ್ಲಿ
ಒಂದು ಕಣ್ಣನ್ನು, ಇನ್ನೊಂದು ಕಿವಿಯನ್ನು, ಮತ್ತೊಂದು
ಬಾಯನ್ನು ಭದ್ರ ಮುಚ್ಚಿಕೊಂಡಿತ್ತು,
ಕಾಲು ಮಡಚಿ, ನಿರಾತಂಕ ಪಿರ್ರೆಗಳ ಮೇಲೆ
ಭಾರ ಬಿಟ್ಟು ಕುಕ್ಕರಿಸಿಕೊಂಡು.

ಕೆಟ್ಟದ್ದ ಕಾಣಲೊಪ್ಪದ, ಕೇಳಲೊಪ್ಪದ, ತಪ್ಪಿಯೂ
ನುಡಿಯದ ಮಹಾ ಮೌನ ವ್ರತದ ಪಾಲನೆಗೆ
ಕುಮ್ಮಕ್ಕು ಕೊಟ್ಟ ಮೂರು ಕೈ ಜೋಡಿಗೆ
ಅಷ್ಟಿಷ್ಟು ಅವಕಾಶ ಕೊಟ್ಟಿದ್ದಲ್ಲಿ
ಒಂದಷ್ಟು ಒಳ್ಳೆಯದನ್ನು ಮಾಡಬಹುದಾಗಿದ್ದ ಹಸ್ತದ್ವಯಕ್ಕೆ
ಕೆಡಕಿನ ನೆರಳೂ ಹತ್ತಿರ ಸುಳಿಯದ ಹಾಗೆ
ದೂರ ತಳ್ಳುವ ಕೆಲಸ ಕೊಟ್ಟಿದ್ದವು ಕೋತಿಗಳು,
ಕೈಗಳಿದ್ದು ಇಷ್ಟಕ್ಕೆ ಸಾರ್ಥಕವಾಯಿತೆಂದ
ಸ್ಥಿತಿ ಸಿದ್ಧಾಂತವಾದಿಗಳು, ಇನ್ನೂ
ಮಿಗಿಲಾಗಿ ನೂರಕ್ಕೆ ನೂರು ಗಾಂಧೀವಾದಿಗಳು.

ಈಗ ಗಾಂಧೀಜಿ ಸತ್ತು ಎಷ್ಟೋ ಕಾಲವಾಗಿದ್ದು ,
ಅವರ ಮೆಚ್ಚಿನ ಕೋತಿಗಳು ಮಾತ್ರ
ಆ ಮನುಷ್ಯ ಇದ್ದಾಗ ಹೇಗಿದ್ದವೋ ಹಾಗೇ ಇವೆ-

ನೋಡಿ ಸವೆಯದ ಆತನ ಕನ್ನಡಕ, ನಡೆದು
ದಣಿಯದ ಚಪ್ಪಲಿ ಜೋಡಿ, ಅಜ್ಜನ
ಹುಡುಗು ಚೇಷ್ಟೆಯೆಂಬಂತೆ ಆತ ಸೆಪಕ್ಕೆಂದು
ಬಳಸುತ್ತಿದ್ದ ಊರುಗೋಲು, ಮೈಗಂಟಿರುವ
ಚರ್ಮಕ್ಕಿಂತ ಉಟ್ಟ ಬಟ್ಟೆ ದಪ್ಪವಾಗಿರಲೆಂದು ಖಾದಿಯ
ನೂಲು ತೆಗೆದ ಆತನ ಚರಕಾ, ಈಗ
ಆತನಂತೇ ಕಾಲಾತೀತವಾದಂಥ ಸೊಂಟದ ತಟಸ್ಥ
ಗಡಿಯಾರ ಇತ್ಯಾದಿಗಳ ಜತೆ-
ಕೇಳಿಸಿಕೊಳ್ಳದೆ, ನೋಡದೆ, ಮಾತಾಡದೆ, ಮೈಯ
ಹೊಳಪೂ ಮಾಸದೆ, ಏನೂ
ಆಗದ ಹಾಗೆ.

ಅನಿಷ್ಟ ಕಪಿ ಜನ್ಮಕ್ಕೆ ಗಾಂಧಿಯಂತಹ
ಒಬ್ಬ ಚೊಕ್ಕ ಮನುಷ್ಯ ಎಲ್ಲರಂತೆ ಹುಟ್ಟಿದ್ದು ,
ಸತ್ತದ್ದು ಕೂಡ ತಿಳಿಯಲಿಲ್ಲ ;
ಇನ್ನು ಎಲ್ಲರಂತಲ್ಲದೆಯೂ ಎಲ್ಲರ ಹಾಗೆ ಆತ
ಬದುಕಿದ್ದ, ತಾನು ಕಂಡ ನಿಜದ ಪಿಸುಮಾತಿನ
ಸೊಲ್ಲು ಮೊರದಗಲ ಕಿವಿ ಕಿಸಿದು ಕೇಳಿಸಿಕೊಂಡ,
ಕಿವಿಯಿಂದ ಕಿವಿ ತನಕ ಅಗಲಿಸಿದ ಬಾಯಲ್ಲಿ
ಖಡಖಡ ನುಡಿದ ತಪ್ಪಿಗೆ ಪ್ರಾಣವನ್ನೂ ಕೊಟ್ಟ
ಎನ್ನುವುದು ಮಂಗಣ್ಣಗಳಿಗೆ ತಿಳಿಯುವುದು ಹೇಗೆ?

ಯಾಕೆ ಹೇಳಬೇಕಾಯಿತು ಅಂದರೆ,
ಅಸಂಬದ್ಧ ಕಿರುಚಾಟ, ಕೀಟಲೆ, ಚೇಷ್ಟೆ,
ತಿಪ್ಪರಲಾಗದಂಥ ತಮ್ಮ ಸಹಜ ವರ್ತನೆಯ ಬದಿಗಿಟ್ಟು,
ಅದಕ್ಕಿಂತ ಅಪಾಯಕಾರಿಯಾದ ಜಾಣ ಕಿವುಡು,
ಕುರುಡು, ಮೂಕತನ ಮೆರೆದ ಭಯಂಕರ ಕೋತಿಗಳ
ಸಂಗಾತದಲ್ಲಿ ತಮ್ಮ ಘನತೆಗೆ ಉಚಿತವಾದ
ಮಾತು-ಕೃತಿಯ ಕಂಡುಕೊಂಡದ್ದು ಗಾಂಧಿಯ ದೊಡ್ಡಸ್ತನ.

ಲೋಕದಲ್ಲಿ ಮನೆಮಾತಾಗಿದ್ದ ಕೆಡಕನ್ನು
ಅಲ್ಲಗಳೆಯದೆ, ವೈಭವೀಕರಿಸದೆ, ಅಥವಾ
ತೃಣೀಕರಿಸದೆ ಕೂಡ
ಒಳ್ಳೆಯವನಾಗಿರಲು ಹೆದರದಿದ್ದ ಗುಂಡಿಗೆಯ
ಪಡೆದದ್ದು ಆತನ ಸತ್ಯಶೋಧನೆಯ ಅನನ್ಯ ಪರಿಮಾಣ.
ಇನ್ನು ಎಲ್ಲಕ್ಕೆ ಮಿಗಿಲಾಗಿ,
ತನ್ನ ಮೇಜಿನ ಮೇಲೆ ಒಕ್ಕಲಾಗಿದ್ದ ವಾನರ
ಬಾಂಧವರಿಗೆ ಸುಳಿವೇ ಸಿಗದಂತೆ ಬಾಳಿ ಬದುಕಿ,
ಅವರನ್ನು ನಮ್ಮ ಒಡನಾಟಕೆಂಬಂತೆ
ಹಿಂದೆ ಬಿಟ್ಟು ಹೊರಟೇ ಹೋದದ್ದು
ಈ ಮಹಾತ್ಮನ ಎಣೆಯಿಲ್ಲದ ಕರುಣೆಯಂತಹ
ನವುರಾದ ಹಾಸ್ಯ ಪ್ರಜ್ಞೆಗೆ ನಿದರ್ಶನ!

- ಜಯಸುದರ್ಶನ

ಗಾಂಧಿ

ಒಂದು ಶತಕದ ಪೋರಬಂದ ಪೋರ
ಬಂದರುಬಂದರು ದಾಟಿ ಇನ್ನೊಂದು ಶತಕದುದ್ದ
ಬೆಳೆದು ಗೊಮ್ಮಟನಾಗಿ ನಿಂತ ಮುಗಿಲಗುಮ್ಮಟ
ತಾಗುವಂತೆ. ಪಾತಾಳಬಲಿಯ ಎಚ್ಚರಿಸಿ ನೆಲದಮೇಲೆ
ರಥೋತ್ಸವ ಮಾಡಿ ತಕ್ಕಡಿವಾಮನನ ಒದೆತಕ್ಕೆ
ಎದೆ ತೆರೆದು ನಿಂತ. ಕಪ್ಪು ಖಂಡದ ರೈಲು ನಿಲ್ದಾಣದ
ಬೋಧಿವೃಕ್ಷದಿ ಕಂಡ, ಹೊಸ ಆಯುಧ ಝಳಪಿಸಿದ
ಏಕಾಕಿ. ಜನಜನಾಂಗದ ನಡುವೆ ಗೋಡೆ ಏಕೆ
ಎಂದು ಹಚ್ಚಿದ ಬುಲ್‌ಡೋಝರು. ಬಂದೂಕು ಬಂದ್
ಆದವು, ಆಸನ ಹೂಸಿದವು, ಇವಮಾತ್ರ ಹಿಗ್ಗಿ, ಕಾಲ
ದೇಶಗಳಾಚೆ ಹತ್ತಂಗುಲವೂ ಮೀರಿ ಬೆಳೆದ. ಆದರೆ
ಈ ಮಹಾಕಾಯನನ್ನು ಪುಟಾಣಿಗುಂಡು ಮಲಗಿಸಿತು
ಎಂದರೆ ನಂಬುವರೆಷ್ಟು ಮಂದಿ? ಅವನೇ ಗಾಂಧಿ.

- ಅರವಿಂದ ನಾಡಕಣಿ

ಬಾಪೂ

೧

ಬಾಪೂ ನಿನ್ನ ಹೆಸರೆತ್ತಲೂ ನನಗೆ ಭಯವಾಗುತ್ತಿದೆ.
ಕರುಣೆಯೇ ಮೂರ್ತಿವೆತ್ತು ಬಂದವ ನೀನು,
ಕಲ್ಲುಮುಳ್ಳಿನ ಹಾದಿಬೀದಿಗಳಲ್ಲಿ ಪರರ ಹಿತಕಾಗಿ ಅಲೆದವನು
ದಿನದಿನವೂ ಕಟುಕ ಮನುಜರ ನಡುವೆ ಜೀವಿಸಿ
ಹಿಂಸೆ ಹಾಲಾಹಲಗಳ ಹಾಲೆಂದು ತಿಳಿದವನು.
ನಿನ್ನ ಹಸುಳೆಮುಖದಲ್ಲಿ ಸುಳಿದಿದ್ದ ದೇವರ ಮುಗುಳು
ನಮಗರ್ಥವಾಗದೇ, ವ್ಯಂಗ್ಯ ನಗೆ ನಕ್ಕು,
ಕೊನೆಗೆ ಗುಂಡಿಟ್ಟು ಕೊಂದು,
ನಿನ್ನ ಜಯಂತಿ ತಿಥಿಗಳನು ಆಚರಿಸಿ ಸುಖಿಸುತ್ತೇವೆ.
ನೀನಾದರೊ, ಬದುಕಿದ್ದಷ್ಟು ದಿನವೂ
ಶ್ರೇಷ್ಠತಮ ಮನುಜ ಪಾತ್ರವ ವಹಿಸಿ, ನಿಭಾಯಿಸಿ,
ಮೃತನಾಗಿ, ಮತ್ತೆ ಮೊದಲಿದ್ದಂತೆ......
ದೇವರಾದವನು.

೨

ನಿನ್ನ ಸ್ತುತಿಗಾಗಿ ನಾವು ಏನೇನು ಮಾಡಿಲ್ಲ?
ನಿನ್ನ ನುಡಿಮುತ್ತುಗಳ, ಸಂದೇಶಗಳ
ತಾಯಿತಗಳ ಮಾಡಿ, ಹಾರಗಳ ಕಟ್ಟಿ ಮಾರುತ್ತೇವೆ.
ನಿನ್ನ ಸ್ಮಾರಕಕೆಂದು, ಸಂಚಿಕೆಗೆಂದು ಚಂದಾ ಎತ್ತಿ, ಮನೆಕಟ್ಟಿ

ನಿನ್ನದೇ ಹೆಸರಿಟ್ಟು, ಪಾಪಗಳಿಗೆ ಪಾಲಿಷ್‌ಮಾಡುತ್ತೇವೆ
ನಿನ್ನ ಚಿತ್ರಗಳು ಫಲಕಗಳು ಸುತ್ತ ತೂಗುತ್ತಿರುವ
ಗುಪ್ತ ನೆಲಮಾಳಿಗೆಗಳ ಮಂದ ಬೆಳಕಲ್ಲಿ
ಖೊಟ್ಟಿ ನೋಟುಗಳ ವ್ಯವಹಾರ ನಡೆಸುತ್ತೇವೆ.
ದವಸಧಾನ್ಯಗಳಲ್ಲಿ ಕಲ್ಲುಮಣ್ಣು; ಬೆಣ್ಣೆಯಲ್ಲಿ ಬಾಳೇಹಣ್ಣು,
ಕೊಬ್ಬು;
ಸೀಮೆ ಎಣ್ಣೆಯಲ್ಲಿ ನೀರು, ಸಕ್ಕರೆಯಲಿ ಲೋಹದ ಹಿಟ್ಟು ;
ಬೆರಕೆ ಮಾಲುಗಳ ಮಾರಿ, ರಾಷ್ಟ್ರದಾರೋಗ್ಯ ಕಾಪಾಡಿ,
ಮೋಡಗಳ ಜೊತೆ ಮಾತನಾಡುವ ಮಹಲುಗಳ ಕಟ್ಟಿ,
ಗಗನಕ್ಕೇರಿಸುತ್ತೇವೆ ನಾಗರೀಕತೆಯ ಪತಾಕೆ.

೩

ನಿನ್ನ ನೆನಸುವ ಈ ಹೊತ್ತು
ನೀನಂದುಕೊಳ್ಳುತ್ತಿರಬಹುದು. "ನಾ ಸತ್ತು
ಈ ದೃಶ್ಯಗಳ ಕಣ್ಣಾರೆ ಕಾಣದಿರುವುದೇ ಒಳಿತು.
ಎಂಥ ಮಂಗಗಳಿವು?
ನನಗೆ 'ಮಹಾತ್ಮಾ' ಎಂದು ಹೆಸರಿಟ್ಟು
ನನಗವಮಾನ ಎಸಗುತ್ತಿಹರು.
ನಾನಲ್ಲ ಮಹಾತ್ಮಾ.....
ಮೂರೇ ಗುಂಡಿಗೆ ನನಗೆ ಮೋಕ್ಷ ತೋರಿಸಿದವನಲ್ಲಾ
ಅವನೇ ದೊಡ್ಡ ಪುಣ್ಯಾತ್ಮ"

ಇಲ್ಲ ಬಾಪೂ, ಇಲ್ಲ.
ಶಾಲೆ, ಕಾಲೇಜಿಗೆ, ಛತ್ರಕ್ಕೆ, ಹೋಟೆಲಿಗೆ,
ಹೂದೋಟಕ್ಕೆ, ರಸ್ತೆಗೆ, ಬಡಾವಣೆಗೆ, ಚೌಕಕ್ಕೆ
ನಿನ್ನ ಹೆಸರನ್ನೇ ಬಳಸಿದ್ದೇವೆ.
ಆದರೂ ಆಧುನಿಕ ಕೇಶಕರ್ತನಾಲಯಗಳಿಗೆ,
ಸೇಂದಿ, ಸಾರಾಯಿ, ಬ್ರಾಂದಿ ಅಂಗಡಿಗಳಿಗೆ
ನಿನ್ನ ಹೆಸರಿಡದೆ, ನಿನ್ನ-ನಮ್ಮ ಮಾನ ಉಳಿಸಿದ್ದೇವೆ!

ಇಂದು ಅಜ್ಞಾನದಮಲಿನಲ್ಲಿದ್ದೇವೆ ನಿಜ.....
ನಾಳೆ ವಾಸ್ತವದ ಬಿಸಿಲಿಗಿಳಿಯುವುದೂ ಸಹಜ.

೪

ನಿತ್ಯ ಸಂಜೆಯ ಸಮಯ, ಕತ್ತಲಿಳಿಯುವ ಹೊತ್ತು
ಚಿಟ್ಟೆ ಬಣ್ಣದ ಗಗನದಂಚಿನಲ್ಲಿ......
ಬಾಪೂ, ನಾನರಸುತ್ತೇನೆ ನಿನ್ನ ಮಂದಸ್ಮಿತವ.
ಮೈಯೆಲ್ಲ ಕಿವಿಯಾಗಿ ನಾನು ನಿರುಕಿಸಿದಾಗ
ನನಗೆ ಕೇಳಿಸುವುದು ನಿನ್ನ ನಿಟ್ಟುಸಿರು ಮಾತ್ರ.
ಆಗ ನನಗನಿಸುತ್ತದೆ
ನೀನೊಂದು ಸಲ ಮೃತನಾಗದೇ
ನಿತ್ಯ ಗುಂಡಿಗೆ ಗುರಿಯಾಗುತಿರುವೆ.

ತಾಮ್ರ ಕಿವಿಗಳ ಮೇಲೆ ಸತ್ಯ ಲಯವಾಗುತ್ತಿದೆ,
ಬಾಪೂ, ನಿನ್ನ ಹೆಸರೆತ್ತಲೂ ನನಗೆ ಭಯವಾಗುತ್ತಿದೆ.

- ಅಬ್ದುಲ್ ಮಜೀದ್‌ಖಾನ್

ಗಾಂಧೀಜಿಯ ನೆನಪು

ಇವನು ಬಂದಾಗ-
ಗಾಳಿ ಸದ್ದಿಲ್ಲ ;
ಕತ್ತಲ ರಾತ್ರಿಯಲ್ಲಿ ಎಲೆ ಅಲುಗಲಿಲ್ಲ ;
ಪಳಪಳ ಹೊಳೆವ ನಕ್ಷತ್ರರಾಸಿ ನಗಲಿಲ್ಲ.
ಎಲ್ಲರಂತೆಯೆ ಬಂದ- ಅತ್ತ-ನಕ್ಕ-ಹಟಮಾಡಿವ
ಉಂಡ- ಮಲಗಿದ-ಎದ್ದ.
ಆದರಿಷ್ಟೆ:
ಇವನು ಮರ್ತ್ಯದ ಬಾಳಿನಲ್ಲಿ ಅಮೃತತತ್ವದ ಕನಸು ಕಂಡ-
ಕಂಡ ಕಂಡುದಕ್ಕಾಗಿ ಅನವರತ ಕಷ್ಟಗಳನುಂಡ;
ಆದರೂ ಅದಕ್ಕಾಗಿಯೇ ಹಗಲಿರುಳು ಬಡಕೊಂಡ.

ನಮ್ಮ ಪಾಲಿಗೆ ಇವನು ಯಾವಾಗಲೂ ಮುದುಕ.
(ಮುದುಕನಾಗಿಯೆ ಹುಟ್ಟಿರಬಹುದೆ?)
ಇವನ ನೆನೆದಾಗೆಲ್ಲ-
ಬೊಚ್ಚ ಬಾಯಿಯ ತುಂಬ
ಪಕಳೆ ಪಕಳೆಯ ಚೆಲುವ ಬಿಚ್ಚಿಟ್ಟ ಮುಗುಳುನಗೆ;
ದಪ್ಪ ಕನ್ನಡಕಗಳ ತಡಹಾಯ್ದು ಒಳಸೇರಿ ಕೊರೆವ ಮಿಂಚಿನ
ನೋಟ;
ಊರುಗೋಲನ್ನೆತ್ತಿ ಕೈಬೀಸಿ ಕರೆದು
ಚೌಪಾಟಿಗಳ ತುಂಬ ಜನ ಸೇರಿಸಿ
ಮೈತುಂಬ ನವಿರುಗಳ ಹೊರಲಾರದ ಹೊರೆ ಹೊರೆ ಹೊರಿಸಿ
ಮನೆಗೆ ಕಳಿಸಿದ ಮೋಹನ ಮುರಳಿ.

ಇವನ ಪುಂಗಿಗೆ-

ಜವುಗು ಭೂಮಿಗು ಹೂ ಅರಳಿಸಿ ನಗುವ ಮನಸಾಯಿತು;
ಗಾಳಿಯಲೆಯಲೆಗುಂಟ ಹೊಸ ಕನಸುಗಳ ಕಂಪು ಹರಿದಾಡಿತು.

- ಗಿರಡ್ಡಿ ಗೋವಿಂದರಾಜ

ಬಾಪೂ ಜತೆ ಮಾತುಕತೆ

ನೀನು ಹುಟ್ಟಿ ಬೆಳೆದ ಎಷ್ಟೋ ವರ್ಷಗಳ ನಂತರ
ನಾನು ಹುಟ್ಟಿದೆ.
ನೀನು ಸತ್ತ ಹಲವು ವರ್ಷಗಳ ನಂತರ
ನಾನು ಬೆಳೆಯುತ್ತಿದ್ದೇನೆ.

ಸಂತನ ಹಾಗೆ ಬದುಕಿದೆ, ಪವಾಡದಂಥ ಕಾರ್ಯಗಳ ನಡೆಸಿದೆ
ದೇಶದುದ್ದಗಲಗಳ ಪಾದಗಳಲ್ಲಿ ಅಳೆದು
ಬಂಧನವ ಕಡಿಯುತ್ತ ಪ್ರಪಂಚದಾಚೆಗೂ ಬೆಳೆದೆ
ಅಂತೆಲ್ಲ ಕತೆಗಳನ್ನು ಕೇಳಿದ್ದೇನೆ
ಓದಿದ್ದೇನೆ.
ವ್ಯಕ್ತಿ ನಿಧಾನಕ್ಕೆ ಇತಿಹಾಸವಾಗುವುದನ್ನು
ಪುರಾಣವಾಗುವುದನ್ನು
ದಂತಕತೆಯಾಗುವುದನ್ನು
ಅದ್ಭುತವಾಗುತ್ತಾ ನಡುವಿನವಕಾಶ ಹಿಗ್ಗುವುದನ್ನು
ಆಶ್ಚರ್ಯದಿಂದ ಕುತೂಹಲದಿಂದ ಆತಂಕದಿಂದ
ಗಮನಿಸುತ್ತಿದ್ದೇನೆ.

ನಿನ್ನನ್ನು ಅಮರವಾಗಿಸಿದ ನಿನ್ನ ಹೆಸರಿನ ಬೀದಿಗಳಲ್ಲಿ
ಹಾದುಹೋಗುತ್ತಲೇ ಇದ್ದೇನೆ.
ನಿನ್ನ ಹೆಸರು ಹೊತ್ತ ಸಭಾಭವನಗಳನ್ನು ಶಾಲೆ ಕಾಲೇಜು ಲೈಬ್ರೆರಿ
ಆಶ್ರಮಗಳನ್ನು
ಹೊಕ್ಕು ಹೊರಡುತ್ತಲೇ ಇದ್ದೇನೆ.

ನಿನ್ನ ಮೋಹಕ ನಡೆನುಡಿಯ ಕಿಂದರಿನಾದದ ಗುಂಗಿನ ಹಿನ್ನೆಲೆಯಲ್ಲಿ
ನಿನ್ನ ಜತೆ ಜನರನ್ನೆಲ್ಲ ಒಯ್ದೆ ಬಾಪೂ,
ನಾನು ಕುಂಟ ಹುಡುಗನ ಹಾಗೆ ಇಲ್ಲೇ ಉಳಿದುಹೋದೆ.

ನೀನು ನುಗ್ಗಿದ ಅದ್ಭುತ ಲೋಕದ ಮಿಂಚಿನ ನೋಟ
ನನ್ನ ಹಳಹಳಿಕೆ ಬಾಪೂ.
ನಾನು ನಿಂತನೆಲದ, ಪರಿಸರದ
-ಸದಾ ಕಾಣುತ್ತಿದ್ದರೂ ಮರೆಯಬೇಕೆನ್ನಿಸುವ- ಶುಷ್ಕನೋಟ
ನನ್ನ ವಾಸ್ತವ-ಬಾಪೂ.

ಇದು ಗೊತ್ತೇ ನಿನಗೆ
ನೀನಿಲ್ಲಿ ನೆಲೆಯೂರಿಸಿದ ಅಹಿಂಸೆಗೆ ರಜೆ ಪ್ರಾರಂಭವಾಗಿದೆ ಬಾಪೂ
ನಿನ್ನ ಚಪ್ಪಲಿ ಊರುಗೋಲುಗಳೆ ಹೊಡೆದಾಟಕ್ಕೆ ಅಸ್ತ್ರವಾಗಿವೆ
ಬಾಪೂ

ನಿನ್ನ ಕಾನೂನು ಭಂಗ ಚಳುವಳಿಯನ್ನು ಮತ್ತೆ
ನಮ್ಮ ಮೇಲೇ ಪ್ರಯೋಗಿಸಬೇಕಾಗಿ ಬಂದಿದೆ ಬಾಪೂ
ನಿನ್ನ ಬ್ರಹ್ಮಚರ್ಯವನ್ನು ಯಶಸ್ವಿಗೊಳಿಸುವುದಕ್ಕಾಗಿಯೇ ಇಲ್ಲಿ
ಕುಟುಂಬ ಯೋಜನೆ ಜಾರಿಯಾಗಿದೆ ಬಾಪೂ
ನಿನ್ನ ಖಾದಿಗೆ ನಿನ್ನ ಅರೆ ಉಡುಪಿಗೆ
ಹೊಸರೂಪು ಹೊಸ ಹೊಳಪು ಬರುತ್ತಿದೆ ಬಾಪೂ
ಇಲ್ಲಿ ಮಾಡುತ್ತಲೇ ಇದ್ದಾರೆ
ಇಲ್ಲಿ ಮಡಿಯುತ್ತಲೇ ಇದ್ದಾರೆ.

ಹೀಗೆಯೇ ಒಂದೊಂದಾಗಿ ಒಂದೊಂದಾಗಿ ನಿನ್ನ ತತ್ವಗಳೆಲ್ಲ
ಹೊಸ ರೂಪ ಪಡೆಯುತ್ತಿವೆ ಹೊಸ ಅರ್ಥ ಪಡೆಯುತ್ತಿವೆ
ಅಥವಾ ಹೊಸ ರೂಪ, ಅರ್ಥಗಳ ಹಿಂದೆ ತಲೆ ಮರೆಸಿ ಸಾಯುತ್ತಿವೆ.

ನಿನ್ನ ಮೋಡಿಗೊಳಗಾದ ಈ ನೆಲದ ಮಕ್ಕಳನ್ನೆಲ್ಲ ನೀನೊಯ್ದ ಮೇಲೆ
ಇಲ್ಲೀಗ ಇಲಿಗಳ ಕಾಟವೇ ಕಾಟ.
ನಿನ್ನ ಕಿಂದರಿಯೀಗ ಮೂಲೆ ಹಿಡಿದಿರಬೇಕು

ಅಥವಾ ನೀನೇ ಈಗ ಮೂಲೆ ಹಿಡಿದಿರಬೇಕು
ಅಥವಾ ನಡುವಿನ ಸಂಪರ್ಕ ವ್ಯವಸ್ಥೆಯೇ ಕೆಟ್ಟಿರಬೇಕು.

ಹೀಗೇಕಾಯಿತು ಬಾಪೂ?
ಆಮೂರ್ತ ಮೌಲ್ಯಗಳಿಷ್ಟೆ ನೀನು ಹೋರಾಡಿದೆಯಾ?
ಸದ್ಯಸ್ಥಿತಿಯ ಮುತ್ಸದ್ದಿತನವನ್ನು ನೀನು ತಿರಸ್ಕರಿಸಿದೆಯಾ/
ಅಥವಾ ನಿನ್ನಂಥವರ ಕೊನೆಯೇ ಹೀಗೆಯೇ?

ನಿನ್ನಿನ ಯೋಗಿ ಇಂದು ತದ್ರೂಪಿಸಿ, ನಾಳಿನ ಈ ಜಗತ್ತಿನಲ್ಲಿ
ಬರೇ ಜೋಗಿಯಾಗಿ ಉಳಿಯುವ ಈ ಕ್ರಮದ
ಅರ್ಥವೇನು ಬಾಪೂ?
ಅಥವಾ ಈ ಕ್ರಮವೇ ಈ ಬದುಕಿನ ಅರ್ಥವೇ ಬಾಪೂ?
ಇಲ್ಲಿ ಸಂಭವಿಸುವ ನೀನು ನಾನು ಇವರು
ಬೇರ್ಪಡಿಸಲಾಗದೆ ಇದ್ದೂ
ಒಬ್ಬರಿಗೊಬ್ಬರು ಸಂಧಿಸದಿರುವುದೇ ಇಲ್ಲಿ ನಿತ್ಯವೇ?
ಬಾಪೂ,
ಪ್ರಭಾವಗಳೆಲ್ಲ ಇಲ್ಲಿ ಮಣ್ಣಾಗುತ್ತದೆಯೇ?

ಈ ಮಣ್ಣಿನ ಗುಣ ಯಾವುದು?

- ಸುಬ್ಬರಾಯ ಚೊಕ್ಕಾಡಿ

ಗಾಂಧೀಜಿಗೆ

ಯುಗ ಯುಗಗಳ ಸಾರ ಸಾಕಾರವಾದ ಹಾಗೆ
ನೀನು ಬಂದೆ;
ಬಾಗಿದ ಬೆನ್ನ ನೆಟ್ಟಗಿರಿಸಿದೆ;
ಆಗಸದ ನೀಲಿಮೆಯನ್ನು
ಕಣ್ಣುಗಳಲ್ಲಿ ತುಂಬಿದೆ!

ತೋಳ ಕುರಿಮರಿಗೆ ಸೋತು,
ಹುಲಿ ಹಸುವಿಗೆ ಸೋತು,
ಗೋವಿನ ಹಾಡು ಜೀವ ಪಡೆಯಿತು ನೋಡು!
ರಾಜ ರಾಣಿಯರೆಲ್ಲ ಇತಿಹಾಸ ಸೇರಿದರು
ಅರಮನೆಗಳು ವಸ್ತುಸಂಗ್ರಹಾಲಯಗಳಾದುವು!
ಇದನ್ನೆಲ್ಲ ಕಂಡು ಪುಣ್ಯಶಾಲಿಗಳಲ್ಲವೇ
ಈ ಯುಗದ ನಾವು?

ಕೊಡಲಿ ಕೋದಂಡ ಚಕ್ರಗಳನ್ನು ಹಿಡಿಯದೆ,
ಕಂಬವನ್ನೊಡೆದು ಮೂಡಿ ವಿಜೃಂಭಿಸದೆ,
ಭೂಮ್ಯಾಕಾಶಗಳನ್ನು ಹೆಜ್ಜೆಗಳಿಂದ ಮುಚ್ಚದೆ,
ನಟ್ಟಿರುಳಿನಲ್ಲಿ ಮಡದಿ ಮಕ್ಕಳನ್ನು ಬಿಟ್ಟೋಡದೇ,
ಅವರೆಲ್ಲರ ಹೆಗಲೇರಿ, ತಲೆ ಮೆಟ್ಟಿ,
ಮಾನವತೆಗೆ ಮಾನ ತಂದ ಮಹಿಮ ನೀನು;
ಮರ್ತ್ಯಕ್ಕೆ ಕೋಡು ಮೂಡಿಸಿದ ಮೋಡಿಕಾರ ನೀನು!

ಅಯ್ಯಾ, ನೀನು ಬಸವನ ಹಾಗೆ ಕಸ ತೆಗೆದು ಹೋದೆ;
ಮತ್ತಿಲ್ಲಿ ಬಿದ್ದಿದೆ ಕಾಣು, ತಿಪ್ಪೆ!
ನೀನು ಗಳಿಸಿಟ್ಟುದನ್ನೆಲ್ಲ ಕಳೆದು, ಮತ್ತೆ ನಮ್ಮದು
ತಿರುಪೆ!

– ಸಿ.ಪಿ.ಕೆ.

ಗಾಂಧೀಜಿ

ಗಾಂಧೀಜಿ,
ಶತಮಾನದುತ್ಸವಕೆ ಹಾಡಬೇಕು.
ಹೇಳು ಹಾಡಲಿ ಹೇಗೆ?
ಹಾಡಾಗಿ ದನಿ ಮಾರಿಕೊಂಡವನು, ದನಿಗೆ ಮಾರು
ಹೋಗಿ ಮರೆತವನು ಒಳದನಿ.

ಬೆದರಾಗಿ ಯಾವ ಮೂಲೆಗೆ ನಿಂತು
ದನಿ-ಲಾಳಿ ಎಳೆದೆಳೆದು
ರಾಗದಂಬರ ನೆಯ್ದು
ನಿನ್ನ ಗೋಣಕೆತ್ತಿ ನಿಂತಿರುವ
ಎಲುಬುಗಳಲ್ಲಿ
ಇಣಕಿ ಹಾಕುತ್ತಿರುವ ನನ್ನ ಹೆಣ-
ದಭಿಮಾನ, ಗೌರವ
ತೆರೆಮರೆಗಿಡಲಿ ಹೇಗೆ?

ಪುಣ್ಯಾತ್ಮ ನೀ
ಹುಟ್ಟಿ ಬಹಳ ತ್ರಾಸು ಮಾಡಿದಿ
ಅಲ್ಲದೆ ನಮಗೆ ಸಲ್ಲದ ಸತ್ಯ-
-ದ ಒಣ ಉಸಾಬರಿ, ಅಹಿಂಸೆಯ ಕಿತಾಪತಿ
ಇತ್ಯಾದಿ ಯಾರಿಗಯ್ಯ ಬೇಕಿದ್ದವು?
ನೀ ಹುಟ್ಟಿದ್ದು ಸತ್ತಿದ್ದು ನಮ್ಮ ಬಾಯಲ್ಲಿ

ಗಾಂಧಿ ಎಂಬುವ ಹೆಸರು / ೧೩೫

ಅರ್ಥ ಕಳಕೊಂಡದ್ದು ಕೋಶದಲ್ಲಿ, ನೀತಿ
ನಿರ್ನಾಮ. ಹೇಗೆ ಬೈಯುವುದು
ಎದುರಿಲ್ಲದವನನ್ನು ನಾವು
ಲಕ್ಷ ಕೋಟಿ ಅಬ್ಜ ದಿನ ಹುಟ್ಟಿ ಹುಳದಂತೆ
ಮಣ್ಣು ಗೂಡುವ ಹಾಗೆ ನೀನೂ
ಮೂಡಿ ಕ್ರೀಡಾಕ್ರೀಡೆಯೊಂದು
ಮುಗಿಸಿಬಿಡಬಹುದಿತ್ತು ಅವಸಾನ ಗಾಥೆ
ನಾವು
ಏರಲಾಗದ ಎತ್ತರ
ಅಳೆಯಲಾಗದ ಸಂಖ್ಯಾಗೋಪುರ
ಅರಿಯಲಾಗದ ಬದುಕಿನರ್ಥ
ಇಳಿಯಲಾಗದ ಆಳ
ಏರಿ ಇಳಿದು ಸವಿರಾಗಿ ಮೇಲೇರಿ ಕರಗಿದಿ
ಅಗ್ನಿಯಪ್ಪಿದ ಕರ್ಪೂರ ಗಿರಿ ಸದಾಕಾಲ
ನಮ್ಮನ್ನು ಸಣ್ಣ ಚಿಕ್ಕ ಅಲ್ಪ ಕುಬ್ಜರನ್ನಾಗಿಸಿದಿ
ಸ್ತಬ್ಧರನ್ನಾಗಿಸಿದಿ.

ಈಗ ಶತಮಾನದುತ್ಸವ
ನೂರು ಬಗೆ ಸಿಂಗರಿಸಿಕೊಂಡು, ಬಾಜಾ-ಬಜಂತ್ರಿ
ಊದಿ, ಹಾಡು-ಚುರಮುರಿ ತೂರಿ
ಕವಿಮೇಳ-ತಾಳಕ್ಕೆ ತಾಳ ಹಾಕುವುದಕ್ಕೆ
ಹೊರಟು ಬಂದಿದ್ದೇನೆ.

ಸತ್ತವರು ಯಾರು ಏನು ಸತ್ತದ್ದು ಹುತಾತ್ಮ?
ನಿನ್ನ ತ್ಯಾಗ- ಕಾಗದ ಮೇಲೆ ಅ-
ಹಿಂಸೆ ಹಸಿರು ಮಸಿ ಸತ್ಯ
ದನೂರು ಕವನ ಗೀಚುತ್ತಿದೆ, ನಿತ್ಯ
ಕರ್ತವ್ಯಪಥ ಕೈಮಾಡಿ ಕರೆದಲ್ಲಿ
ಕಾಲಕಥೆ ಒಡಮುರಿದು ನುಡಿದಲ್ಲಿ

ಭಾಷಣದ ಹೆದ್ದಾರಿ- ವಚನ, ಆಶ್ವಾಸನದಿ
ಗಟ್ಟಿ ಆಸನದಿ ಈ ಕವನಗಳನ್ನೇ
ಮುಕ್ಕುತ್ತೇವೆ, ಕಕ್ಕುತ್ತೇವೆ.

ಸತ್ತವರು ಯಾರು? ಒಮ್ಮೆ ನೀ-
ಸತ್ತ ನೆನಪಾಗಿ ಸಾ ನಿತ್ಯ
ಸತ್ತಂತೆ ಬಡಬಡಿಸಿ ಹಾಡಿಕೊಂಡಿದ್ದೆ:
ನಾ ಮಾತ್ರ ದಿಗ್ವಿಜಯ ಮಾಡಿರುವ ತಲೆ-
ತಲಾಂತರದ ನಿನ್ನ ವೈರಿ
ಒಮ್ಮೆ ಸತ್ತರೆ ನೂರು ಬಾರಿ ಹುಟ್ಟುವ ಕಲೆ
ಬಲ್ಲ ಭೂಪ. ಒಂದು ಕೇಳಿದರೆ ನೂರು
ಅಂದು ತೋರುವವ ಅವರವರಿಗೊಂದೊಂದು ತಕ್ಕ ರೂಪ.

ಮಿಂಚು, ಸಾವು, ಸಿಡಿಲು ಕಡಲಗರ್ಜನೆಯಾಗಿ.
ಬೆಳಕು ದಳವಾಗಿ
ನುಡಿ ಕಡೆದ ತಿಳಿವು-ಮಳೆಯಾಗಿ
ಇಳೆಗೆ ಇಳಿದಿರುವ
ಜನ್ಮಾಂತರದ ಶಾಂತ ವಸಂತ
ನೀ
ನನ್ನೊಳಗೆ ಯಾವುದೋ ಪುಣ್ಯ ಬಲದಿಂದ
ಮುಂಬರುವ ಯುಗದಲ್ಲಿ
ಮೊಳಕೆಯೊಡೆವುದಕಿರುವ ಬೀಜ.

ನಿನ್ನ ಉತ್ಸವಕೆ ಹಾಡಬೇಕು
ಏನು ಹಾಡಲಿ ಈಗ?

- ಸಿದ್ಧಲಿಂಗ ಪಟ್ಟಣಶೆಟ್ಟಿ

ನೋಡಿದರು ಗಾಂಧೀಜಿಯನ್ನು ಎಲ್ಲರೂ ಬೆಳಕಿನಲ್ಲಿ

ನೋಡಿದರು ಗಾಂಧೀಜಿಯನ್ನು ಎಲ್ಲರೂ ಬೆಳಕಿನಲ್ಲಿ
ಆ ಕಿಂಗ್‌ಸ್ಲೀ ಒಬ್ಬನನ್ನು ಬಿಟ್ಟು!
ಆತ ಸೆಲ್ಯುಲೋಯ್ಡಿನಲ್ಲಿ ಅದ್ದಿದ ಅವರನ್ನು ಕತ್ತಲೆಯಲ್ಲಿ
ಹಿಂಸೆ ಅಹಿಂಸೆಯ ಮಧ್ಯೆ ರಕ್ತದ ಸ್ಥಾನ ಎಲ್ಲಿ?

ಹೇಳುತ್ತಿದ್ದರು ಕೆಲವರು ಕವಿಯೆಂದು ನನಗೆ
ಹುತಾತ್ಮರಾದ ಮೇಲೆ ಗಾಂಧೀಜಿ ಎಂದರೆ ನೀರಿನ ಹಾಗೆ
ಕುದಿಸಿದರೆ ಕುದಿದೀತು!
ತಣಿಸಿದರೆ ತಣಿದೀತು!
ಬಣ್ಣಗಳನ್ನು ಬಳಸಿದರೆ ಬದಲಾದೀತು!
ಹಾಟ್ ಡ್ರಿಂಕ್‌ಗಳಲ್ಲಿ ಬೆರಸಿದರೆ Hot ಏ?
ಸಂಪ್ರೋಕ್ಷಿಸುವ ಭಕ್ತರ ತಲೆಗೆ ತೀರ್ಥವೆ?
ಹೊಯ್ದುಕೊಂಡರೆ ಮೈಕೈಗೆ ಎಂಥ ಸುಖವೇ?
ಹೀಗೆ ನೂರಾರು ಅನುಭವಗಳಿಗೆ ತೆರೆದರೆ
ಬಾಗಿಲು ರಾತ್ರೆಯೂ ಹಗಲೂ-ಒಂದೇ!

ಕಿಂಗ್‌ಸ್ಲಿ ನಂಬಲಿಲ್ಲ ಯಾರನ್ನೂ
ಇದ್ದಾರೆ ಗಾಂಧೀಜಿ ಎಲ್ಲಿ ಇನ್ನೂ
ಎಂದು ನಡೆದ ನದಿ ದಂಡೆಯ ಉದ್ದಕ್ಕೂ ಪ್ರತೀ ಬೆಳಗ್ಗೆ
ಮೀನುಗಳ ಕಣ್ಣುಗಳಲ್ಲಿ ಕಂಡೀತೆ ಅವರ ಬೊಚ್ಚುಬಾಯಿ ನಗೆ

ವರ್ಷಾನುಗಟ್ಟಲೆ ಕಳೆದರೂ ಕಾಣಲಿಲ್ಲ
ನಿರಾಶನಾಗದೆ ಇಳಿದು ನದಿಗೆ ಮೆಲ್ಲ
ಬೊಗಸೆ ತುಂಬಿ ನಿಂತ.

ಅವನ ಬೆರಳುಗಳ ನಡುವೆ ತೊಟ್ಟಿಕ್ಕುತ್ತಿದ್ದ ನೀರು
ಗಾಂಧೀಜಿ ಒರಸುತ್ತಿದ್ದ ಕಣ್ಣೀರು
ಎಂದು ತಿಳಿದೊಡನೆ 'ಹಾಯ್' ಎಂದ.
ಕಿಂಗ್‌ಸ್ಲಿಯ ಈ ಸಿನಿಮಾ ನೋಡಿ
ಗಾಂಧೀಜಿ ನಕ್ಕರು ಕಣ್ಣು ತುಂಬಿ
ಪ್ರತೀ ಷೋಗಳಲ್ಲೂ ಅಳುವ ಕಿಂಗ್‌ಸ್ಲೀ
ಕುಳಿತಿದ್ದರು ನಮ್ಮ ನಡುವೆ ಮುದುಡಿ
ಒರಸಬೇಕು ಕಣ್ಣೀರನ್ನು, ಇಬ್ಬರಲ್ಲಿ
ಯಾರದ್ದು ಮೊದಲು?
ತುಡಿಯುತ್ತಿದ್ದರೂ ಪಟಪಟನೆ ನನ್ನ ಕೈಬೆರಳುಗಳು
ನಿರಾಶವಾದುವು ಎಟಕದೆ ಇಬ್ಬರ ಕಣ್ಣೂ.

- ನಾ. ಮೊಗಸಾಲೆ

ಗಂಡು ಜೋಗತಿ ಗಾಂಧೀ ಸ್ಮರಣೆ

ಜೋಗುಳ್ಬಾವಿ ತಿಳಿನೀರ ತಳದಾಗೊಡ್ಡಿ ಮುಳುಮುಳು
ನಳನಳಿಸಿ ನಗಾವನ್ಯಾರೋ ಪರದೇಶಿ।
ಅಯ್ಯೋ ಗಾಂಧಿ ಇಲ್ಲ್ಯಾಕ ಬಂದ್ಯೋ ಗುಡ್ಡದ ಮಾಯಿ
ಗೌಡಕಿಯೊಳಗ
ವಡ್ಡಿಗಟ್ಟಿ ಉಳಿಯಾಕಿಲ್ಲೊ ಹೋಗುದು ವಾಸಿ।
ಗಾಂಧೀ ತಂದಿ ಇಲ್ಲ್ಯಾಕ ಬಂದ್ಯೋ ಪರದೇಶಿ॥

ಆ ಹೊಂಡಾ ಈ ಹೊಂಡಾ ಅಗ್ನಿಕುಂಡಾ ಹಾರಿಬಂದ್ರ
ತಾಯೀ ದರುಶನಾ ಆಗೂದಿಲ್ಲ ಪದ್ಧತಿ। ಬಿಟ್ಟು
ಹಾಂಗ ಹೊಕ್ರ ಆದಿಗೀದಿ ಫಜೀತಿ। ಈಗ
ಬಾರೋ ಎಪ್ಪಾ ಬರ್ತೀನ್ನಡಿ ನಿನ ಜತಿ। ಮೊದಲ
ತಗಸಬೇಕೋ ಆ ನಿನ್ನಾ ಹಳೆ ಮೀಸಿ। ಹ್ಯಾಂಗೂ
ಬಂದೀದಿ ಈ ಮೊದಲ ತೆಲಿ ಬೋಳಿಸಿ। ಆಗ
ನನ ತಾಯೀಗಾಗೂದು ಬಲು ಖುಸಿ। ನಿನ್ನ
ಅಪ್ಪಿ ಹರಸತಾಳೋ ಬಲು ಬೇಸಿ।
ರಾಮನಾಮಾ ರಾಮರಾಜ್ಯಾ ಸುದ್ದೀ ತಗದು ಆದಿ ಫಾಸಿ
ತೆಲಿಕೆಟ್ಟ ಆಕಿ ಬಾಳಾ ಬಾಳಾ ಯಾಸಿ।
ಬಾಳಾ ಬಾಳಾ ಯಾಸಿ॥

ಕಾಗಿ ಒಂದೂ ಕುಂದ್ರಾಂಗಿಲ್ಲಾ ನೊಣಾಗಿಣಾ ಹಾರಾಂಗಿಲ್ಲಾ
ಎಂಕ್ಯಾ ಸೀನ್ಯಾ ಕಲ್ಲುಕೋಳಿಗಪ್ಪ ಬಾಯಿ। ಹುಲ್ಲು

ಬೆಂಕಿಯಂಥಾ ಮಳ್ಳರಿಗಂತೂ ಬಲು ಸೋವಿ। ಹಗಲ
ಗುಡ್ಡ ಗುಡ್ಡಾ ಹಾರ್ತಾವೋ ಚಿತ್ತೀ ನಾಯಿ। ಈ
ನಾಡ ತುಂಬಾ ಸುತ್ತತಾಳೋ ಜಗಮಾಯಿ।
ಸಂದಿಗೊಂದಿ ನೆನಪೆಲ್ಲಾ ಒಂದೊಂದಾಗಿ ಬರ್ತಾವೊ
ಏನೊ ಗಾಂಧಿ ಬಂದಿ ಹ್ಯಾಂಗೊ ಏನ ಹೇಳತಿ। ನಾನು
ಅಮ್ಮನ ಕೊಡಾ ಹೊತ್ತು ತಿರುಗೂ ಗಂಡು ಜೋಗತಿ। ಹೇಳು
ನನಗ್ಯಾಕೋ ಮಾತಂಗಿಯ ಖರೆ ಭಕುತಿ। ಖಾಲಿ
ಸೀರಿಯುಟ್ಟು ಹೊಟ್ಟೆ ಹೊರಿಯೂ ಆಕಿ ಬೀಗುತಿ। ಹೀಂಗ
ಇರೂದ್ರಾಗ ಸುಖಾ ಐತಿ ಯಾಕ ನಗತಿ। ಬ್ಯಾಡಾ
ಹೋಗಪ್ಪಾ ಗಾಂದೆಪ್ಪಾ ನಿನ್ನ ಸಂಗತಿ। ನೀ
ಸತ್ಯಾ ಪತ್ಯಾ ಅಂತಾ ಖಾಲಿ ಸುಳ್ಳ ಸತ್ತೀ। ನಿನಗ
ವರ್ಷಕ್ಕೊಮ್ಮೆ ಬೀಳ್ತಾವೋ ಹೂವು ಪತ್ರೀ। ಹೋಗ್ಗೋ
ನಿನ್ನ ಕೂಡಾ ನಂದೇನೋ ಜೋಗತೀ॥

ಕಿವಿಯಿಲ್ಲೋ ಕೇಳಾಕ ಕಣ್ಣಿಲ್ಲೋ ನೋಡಾಕ ಬಾಯಿಲ್ಲೋ
ಏನೊಂದ ಹೇಳಾಕ
ಒಳಮನಸು ಮುಸುರ್ಯಾಗಿ ಹುಳಿ ಒಡದು ಕುಣಿತೇನೂ
ನಿನ್ಹಾಂಗ ನಾನೂನು ಪರದೇಶಿ। ತಂದೆ
ತಿಳಿದಾಂಗ ಖಬುರು ಹಾರಿ ಹಾಡಾಕಿ। ಮ್ಯಾಗ
ಕುಣಕುಣದು ತಾಯೀ ಸೇವಾ ಮಾಡಾಕಿ
ಹಾಡಿ ಹಾಡಿ ಹೊಗಳಿ ಮುಕ್ತೀ ಬೇಡಾಕಿ॥

- ಸೋಮಶೇಖರ ಇಮ್ರಾಪೂರ

ಗಾಂಧಿಗೆ

ಕೆಲವು ವರ್ಷಗಳ ಹಿಂದೆ ರೈಲ್ವೆಸ್ಟೇಷನಿನ ಕ್ಯಾಂಟೀನಿನಲ್ಲಿ
ಚಹಾ ಕುಡಿಯುತ್ತಿರುವಾಗ ಬಟ್ಟಲಿನಲ್ಲಿ
ಗಾಂಧಿ ಟೊಪ್ಪಿಗೆ ಕಂಡು ಚಕಿತನಾದೆ. ಆಗ
ಆ ಕುರಿತು ಆಲೋಚಿಸಲು ಸಮಯವಿರಲಿಲ್ಲ.
ಅವಸರವಸರವಾಗಿ ಮಂದಿಯ ಮಧ್ಯೆ ಓಡೋಡಿ
ಗಾಡಿ ಹತ್ತಿದೆ. ನಿಂತವರ ನಡುವೆ ನಿಂತೆ.
ಮೊದಮೊದಲು ನಿಧಾನಗತಿ
ಮತ್ತೆ ಉಕ್ಕಿಗೆ ಉಕ್ಕು ಸಂಧಾನಶ್ರುತಿ
ನನ್ನ ಮಸ್ತಿಷ್ಕಕ್ಕೆ ಹೊಕ್ಕು ಹೊರಟು ಚಕ್ರಾರಪಂಕ್ತಿ
ಯುಗ ಮಗುಚುತ್ತದೆ
ಬೆರಳುಗಳು ಬೇರುಗಳಾಗಿ ಒಡೆಯುತ್ತವೆ
ಕಣ್ಣಗುಡ್ಡೆಗಳು ನಕ್ಷತ್ರಗಳಾಗಿ ಸಿಡಿಯುತ್ತವೆ
ಎರಡೂ ಕೊನೆಗಳಲ್ಲಿ ಬಹುಶಃ ನಾವು ಸಂಧಿಸುತ್ತೇವೆ.

ಜನರ ಮತ್ತು ದೈವಗಳ ನಡುವೆ
ಆರಿಸುವುದು ಕಷ್ಟ
ನಿನಗೆ ಮನುಷ್ಯರ ಹಿಂದಿನ ದೇವರು ಬೇಕು
ನನಗೆ ದೇವರ ಮುಂದಿನ ಮನುಷ್ಯರು ಮಾತ್ರ ಸಾಕು
ನೀನು ನೋಖಾಲಿಯ ಹಿಂದೆ
ನಾನು ಢಾಕ್ಕಾದ ಮುಂದೆ
ನಿನಗೆ ರಾಮನ ಬಳಿಗೆ ಐದೇ ನಿಮಿಷ

ಗಾಂಧಿ ಎಂಬುವ ಹೆಸರು / ೧೪೨

ನನಗೆ ಅನ್ವೇಷಣೆಯ ಅನೇಕ ವರುಷ
ದೇವರನ್ನು ಕಳೆದುಕೊಂಡ ನಾನು
ಈ ಭೂಮಿಯಲ್ಲಿ ನೆಲೆಯಿಲ್ಲದೆ ಅಲೆಯುತ್ತಿದ್ದರೂ ಬಿಡದೆ
ಅಕ್ಟೋಬರ್ ಎರಡರಂತೆ ಮತ್ತೆ ಮತ್ತೆ ನನ್ನಲ್ಲಿ
ಹುಟ್ಟುತ್ತಿರುವೆಯಲ್ಲಾ, ಗಾಂಧಿ!
ಮಳೆ ಬಿಸಿಲಿಗೆ ನಿಂತ ನಿನ್ನ ನೂರಿನ್ನೂರು ಪ್ರತಿಮೆಗಳಂತೆ
ನಾನೂ ಮಾಸುತ್ತೇನೆ
ಯಥೇಚ್ಛ ಮೌನದಲ್ಲಿ
ಬುದ್ಧಭಗವಾನ್ನನ ಕಣ್ಣಿನಲ್ಲಿ

– ಕೆ.ವಿ. ತಿರುಮಲೇಶ್

ಅಪರೂಪದವನು

ಬೆಟ್ಟದ ತಪ್ಪಲಲ್ಲೇ ಹುಟ್ಟಿ ಅಲ್ಲೇ ಬಾಳು ಕಟ್ಟಿದ್ದೇವೆ,
ಕೊಪ್ಪಲು ಬಿಟ್ಟು ಬೆಟ್ಟದ ನೆತ್ತಿ ಹತ್ತಲಾರದೆ ಹೋಗಿದ್ದೇವೆ.
ಇಲ್ಲೇ ಹುಟ್ಟಿದ ನೀನು
ಅಲ್ಲಿಗೆ ಮುಟ್ಟಿದ್ದಕ್ಕೆ
ನಗಾರಿ ಬಡಿದರು ಹೊರಗೆ
ನಡುಗಿದ್ದೇವೆ ಒಳಗೆ
ಅಲ್ಲಿಗೆ ಸೇರಿದ ನೀನು ಮಲ್ಲಿಗೆ ಪರಿಮಳವಾದೆ
ಗಾಳಿಸವಾರಿ ಹೊರಟು ದಿಗಂತದಲ್ಲಿ ಲಂಗರು ನಿಂತೆ
ನಾವೋ-
ಹಿಂಡು ಹಿಂಡಾಗಿ ಮೇಪಿಗೆ
ಕಂಡ ಕಂಡಲ್ಲಿ ಅಲೆದಿದ್ದೇವೆ,
ಮುಟ್ಟಲೊಂದು ಗುರಿಯಿಲ್ಲದೆ ಉಟ್ಟಿದ್ದ ಬಿಚ್ಚಿ ಕುಣಿದಿದ್ದೇವೆ.

ಕಳೆದ ಕೆಲವು ದಿನ ಹಲವು ಸಲ ನೆನೆದಿದ್ದೇನೆ ಗಾಂಧಿ
ನನಗೆ ಏನೆಲ್ಲ ನೀನು ಎಂದು,
ಈ ಮಣ್ಣಿನ ಕುಡಿಕೆಯನ್ನ ಬಣ್ಣದ ಹೂಮಾಡಿ
ಆಕಾಶಕ್ಕೆ ಒದ್ದ ಮದ್ದು ಯಾವುದೆಂದು.
ನೀನು ಉರಿಹಗಲ ಗೆದ್ದು ಸಂಜೆ ಮುಗಿಲ ಹೊದ್ದು
ಗಿರಿ ಕಡಲುಗಳ ನುಡಿಸುವಾಗ
ನನಗೆ ಏಳರ ಬೆಳಗು
ಬೆಳೆಯದ ಒಳಗು

ಗಾಂಧಿ ಎಂಬುವ ಹೆಸರು / ೧೪೪

ತಲೆತುಂಬ ಕಪಿಗಳ ಲಾಗ.
ಆದರೂ ಆಗ ಕೈಯೆಟುಕಿಗೆ ಕಂಡ ಬಾನು
ಬರಬರುತ್ತ ಕನಸಿನ ಗಡಿಯೊಳಗೆ ಹೊರಳುತ್ತ
ಕಲ್ಪನೆಯನ್ನಷ್ಟೆ ಮುದ್ದಿಸಿದೆ,
ಮರುಳಾಗಿ ತೋಳೆತ್ತಿ ತಬ್ಬಲು ಹೋದರೆ
ಬರಿ ಬಯಲಷ್ಟೆ ಮೈಯನ್ನು ತಬ್ಬಿದೆ.
ತಪ್ಪಿದೆ ಮಹಾತ್ಮ ತಪ್ಪಿದೆ.
ಸಿಕ್ಕ ನೆಲದಲ್ಲೆಲ್ಲ ಸಂಶಯ ಬೆಳೆಯುವ ನಾನು
ಆದರ ಹೆಣವನ್ನು ಸಹ ಶ್ರದ್ಧೆಯಲ್ಲಿ ಸುಡುವ ನೀನು
ಎಲ್ಲಿಗೆ ಎಲ್ಲಿಯ ಮೇಳ?
ನಿಂತರೆ ಎದುರೆದುರು ನಾವು
ನಿಂತಂತೆ ಮುಖಮಾಡಿ ನೆಲಕ್ಕೆ ಬಾನು

೨

ಗಾಂಧಿ, ನೀನು
ಹತ್ತು ಹುತ್ತಗಳಲ್ಲಿ ಕೈಯಿಟ್ಟು ಹುಲಿಬಾಯ
ಮುತ್ತಿಟ್ಟು ಸಾಗಿದವನು,
ನಾವೆಲ್ಲ ಗೇಟಾಚೆ ಎಸೆದ ನಯನೀತಿಗಳ
ಮೈಯಲ್ಲಿ ನೆಟ್ಟು ಮರ ಬೆಳೆದು ಫಲಭಾರಕ್ಕೆ
ತಲೆಬಾಗಿದವನು;
ಸತ್ಯಶುಭಗಳ ಕಲ್ಪನೆ ಹಂಸತಲ್ಪದಲಿ
ಹೊರಳಿಯೂ ಮಣ್ಣನ್ನು ಮರೆಯದವನು;
ಗೊಬ್ಬರವಾಗಿ ಬಿದ್ದು
ಮಲ್ಲಿಗೆಯಾಗಿ ಎದ್ದು
ಹೆತ್ತ ಬಳ್ಳಿಗೆ ರತ್ನಕಿರೀಟವಾದವನು.

ನಿನ್ನ ಪ್ರಯೋಗಗಳೆಲ್ಲ ಪ್ರಾಣವಿಯೋಗದ ಜಾಡಲ್ಲೆ
ನಡೆದವಲ್ಲ!
ಸತ್ಯದ ಕಾಲರು ಹಿಡಿದು

ಕೆನ್ನೆಗೆ ಹೊಡೆದು
ಅವರ ಬಾಯಗಲಿಸಿ ಹಲ್ಲೆಣಿಸಲು ಹೋಗಿ ದಣಿದು
ಕಂಡ ಹದಿನಾಲ್ಕು ಲೋಕಕ್ಕೆ ತಲ್ಲಣಿಸಿ ಮಣಿದು
ಕಾಲಿಗೆ ಬಿದ್ದವನು,
ಬಿದ್ದ ವಿನಯಕ್ಕೆ ಗೌರೀಶಂಕರದಲ್ಲಿ ಎದ್ದವನು.

ಎಂದೂ ಬೇಕಾಗಲಿಲ್ಲ ನಿನಗೆ ಯಾರದೂ ದಯ
ಬೆತ್ತಲೆ ಇರುವವರಿಗೆ ಎತ್ತಲ ಭಯ? ಬದಲಿಗೆ
ನೀನು ನಿಂತರೆ ದೇಶ ನಿಂತಿತು-ನಿನಗೆ
ನೆಗಡಿಯಾದರೆ ಲೋಕ ಕೆಮ್ಮಿತು.
ಗೊತ್ತ ಗಾಂಧಿ ಏನಾಗಿದೆ ಈಗ?
ಒಡೆದು ಬಿದ್ದಿದೆ ಈ ಮಹಲ ಮರ್ಯಾದೆಯ ಬೀಗ,
ಹಾರು ಹೊಡೆದಿದೆ ಹೆಬ್ಬಾಗಿಲು
ಹಾಡಿದೆ ಕತ್ತಲು ರಾಗ;
ಎಲ್ಲ ರಾಣಿಯರೇ ಆಗಿ
ಬೆರಣಿ ತಟ್ಟುವರೇ ಇಲ್ಲವಾಗಿ
ಕಾಡಿದೆ ನಮ್ಮನ್ನು ಪ್ರತಿಷ್ಠೆಯ ರೋಗ.
ಕಳ್ಳ ಮುತ್ತಿಟ್ಟರೆ ಹಲ್ಲೆಣಿಸಿಕೊಳ್ಳುವ ಕಾಲ,
ನೀ ಹಚ್ಚಿದ್ದ ಭಾವದಾವೇಗದುರಿಯಲ್ಲಿ
ಹಾಲುಕ್ಕಿ ಬಂದ ಶೀಲದ ಚೆಲವು ಬತ್ತಿದೆ
ಉಳಿದಿದೆ ತಳ ಕರಿಗಟ್ಟಿದ ಖಾಲಿ ಪಾತ್ರೆ;
ಹರಿದ ಜೇಬಿಂದ ಎತ್ತಿದ ಹಣ
ಕಟ್ಟಿದ ಮಣ ಮಂಟಪದಲ್ಲಿ
ನಡೆದಿದೆ ಹೊಸಾ ಹೊಸ ದನಗಳ ಜಾತ್ರೆ.

– ಎನ್.ಎಸ್. ಲಕ್ಷ್ಮೀನಾರಾಯಣಭಟ್ಟ

ಬಾಪೂಗೆ!

ನಿನ್ನ ಬಡಕಲ ದೇಹದೆದೆ ಗೂಡಿನಲಿ
ಅದೆಂಥ ಭೋರ್ಗರೆವ ಕಡಲು
ಅಟ್ಟಹಾಸದ ಸಾಮ್ರಾಜ್ಯಶಾಹಿ ಹಡಗು
ಗುಟಕರಿಸಿ ರಸಾತಳಕ್ಕಿಳಿಯಿತು
ನಿನ್ನ ಕಂಗಳಲಿ ಅದೆಂಥ
ಸೂರ್ಯಕಾಂತಿ, ಚಂದ್ರನಮಾರ್ದವತೆ
ಅದರೊಳು ಮಿಂದು ಮಾನವತೆ.
ಬೆಳಗಿ ಪುನೀತವಾಯಿತು
ನಿನ್ನ ಬೆತ್ತದಲಿ ಅದೆಂಥ ಗಟ್ಟಿತನ
ಭುವಿಯನ್ನೇ ಸತ್ಯ ಎತ್ತಿಹಿಡಿಯಿತು
ಬಾಪೂ! ಆದರೆ ನಮಗಿಂದು ಉಳಿದದ್ದು:
ಆ ಕಡಲು- ಆ ಬೆಳಕು- ಆ ಬೆತ್ತ
ಆ ಆಧಾರ- ಬರಿಕ್ಯಾನ್ವಾಸಿನಲಿ ಬಿಡಿಸಿದ್ದು-
ಚಿತ್ರ- ಚಿತ್ತಾರ! ಇದೆಂಥ ವಿಚಿತ್ರ!

- ಡಾ. ಶ್ರೀನಿವಾಸ ಕುಲಕರ್ಣಿ

ನನ್ನ ಗಾಂಧಿ

ಮಲಗಿದ್ದೆ ಜ್ವರದಿಂದ ನಿತ್ರಾಣನಾಗಿ,
ಹಾಸಿಗೆಯಲ್ಲಿ ಕಣ್ಣು ಮುಚ್ಚಿ ;
ಯಾವುದೋ ತಂಪು ಕೈ ಹಣೆ ನೀವಿದಂತಾಗಿ,
ಕಣ್ಣು ಬಿಟ್ಟೆ ಗಕ್ಕನೆ ಬೆಚ್ಚಿ.

ನೋಡಿದರೆ, ಅರರೇ! ಸಾಕ್ಷಾತ್ ಗಾಂಧೀಜಿ!
ಏಳಲೆತ್ನಿಸಿದೆ ಸಂಭ್ರಮಿಸಿ;
ಭುಜ ಹಿಡಿದು ನನ್ನ ತಡೆದರು ಗಾಂಧೀಜಿ,
ಮತ್ತೆ ಮಲಗಿಸಿದರು ರಮಿಸಿ.

ಕೇಳಿದರು: "ಎಲ್ಲಿ ಯಾರೂ ಕಾಣ್ತಾ ಇಲ್ಲವಲ್ಲ?"
ಅಂದೆ: "ನೋಡ್ತಾ ಇರಬಹುದು ಟಿ.ವಿ"
"ಹಾಗೋ?" ಎಂದು ನಕ್ಕು ಅಡಿಗೆ ಮನೆಗೆ ಹೋದರು,
ಮಾಡಿ ತಂದರು ಸ್ವತಃ ಕಾಫಿ.

ಗಾಂಧಿ ಮಾಡಿದ ಕಾಫಿ! ಧನ್ಯತೆಯಿಂದ ಸವಿಯುತ್ತ,
ಶುರು ಮಾಡಿದೆ ನನ್ನ ವರದಿ:
"ಏನು ಹೇಳಲಿ, ಮಹಾತ್ಮ, ನೀವು ಹೋದ ಮೇಲೆ
ಈ ದೇಶದ ಪರಿಸ್ಥಿತಿ...."

ರೇಗಿದರು ಗಾಂಧಿ: "ನಿಲ್ಲಿಸು, ನಿನ್ನ ದಮ್ಮಯ್ಯ!
ಸಾಕಾಗಿದೆ ಕೇಳಿ ಕೇಳಿ;

ದೇಶದ ಪರಿಸ್ಥಿತಿಯ ಮಾತು ಹಾಗಿರಲಿ,
ಮೊದಲು ತಿಳಿಸು ನಿನ್ನ ಸ್ಥಿತಿಗತಿ.

ಏನು ಓದ್ತಾ ಇದಾನೆ ನಿನ್ನ ಮಗರಾಯ?
ಯಾವಾಗ ಮಗಳ ಮದುವೆ?
ಅಂದ ಹಾಗೆ, ನಿನ್ನ ತಂದೆ ಹೇಗಿದ್ದಾರೆ?
ವಯಸ್ಸಾಗಿರಬೇಕು ಅವರಿಗೆ.

ಅವರ ಚಿಕ್ಕಂದಿನಲ್ಲಿ ನಾನವರನ್ನು ಕಂಡದ್ದು,
ತುಂಬಾ ಕಟ್ಟುನಿಟ್ಟು ಮನುಷ್ಯ;
ಈಗಲೂ ಹಾಗೇ ನನ್ನ ಬಯ್ತಾ ಇರ್ತಾರಾ?
'ಗಾಂಧಿಯಿಂದಲೇ ಹಾಳಾದದ್ದು ಇಂಡಿಯ'

ಒಂದರ್ಥದಲ್ಲಿ ಅವರಂದದ್ದೇ ನಿಜವಾಯ್ತು,
ಅದೇ ಇಂದಿಗೂ ನನ್ನ ಕೊರಗು.
ನಾನು ಬಯಸಿದ್ದೊಂದು, ಆದದ್ದೇ ಮತ್ತೊಂದು;
ಪ್ರತಿಯೊಂದು ತಿರುಗು ಮುರುಗು.

ಅದೆಲ್ಲ ಹಾಗಿರಲಿ, ಈಗ ಹೇಳುವಂಥವನಾಗು,
ಹೇಗೆ ಸಾಗಿದೆ ಕಾವ್ಯಕೃಷಿ?
ಮೊದಲಿನಂತೆ ಈಗಲೂ ಅಲ್ಲೇ ನಿಂತಿದೆಯ,
ನೀಡುತ್ತ ಕೇವಲ ಖುಷಿ?
ಗಂಭೀರನಾಗು, ನೀ ಇನ್ನಾದರೂ ಮಾಗು,
ಈ ಚೇಷ್ಟೆ ಎಲ್ಲಿ ತನಕ?
ಏನಾದರೂ ಆಗು; ಆದರೆ, ಕೈ ಮುಗೀತೀನಿ,
ನೀನಾಗಬೇಡ ಸಿನಿಕ.

ನಾನಿನ್ನು ಬರ್ತೇನೆ, ಬೇಗ ಚೇತರಿಸಿಕೊ
ತಕ್ಕ ಔಷಧಿ ಪಥ್ಯದೊಂದಿಗೆ
ಮನೆಯಲ್ಲಿ ಎಲ್ಲರನ್ನು ಕೇಳಿದೆನೆಂದು ಹೇಳು,
ಮುಖ್ಯವಾಗಿ ನಿನ್ನ ತಂದೆಗೆ"

ಎಂದವರೇ ಕೋಲೂರುತ್ತ ಹೊರಟು ಹೋದರು ಗಾಂಧಿ,
ಮತ್ತೊಮ್ಮೆ ಹಣೆಯ ನೀವಿ.
ಇನ್ನೂ ಯಾರ್‍ಯಾರನ್ನು ಕಾಣಬೇಕಿತ್ತೋ ಏನೋ,
ಆ ಹೃದಯವಂತ ಜೀವಿ.

- ಬಿ.ಆರ್. ಲಕ್ಷ್ಮಣರಾವ್

ಮೂರಿಂಚು ಆರಿಂಚು ಮಾನವರ ಪ್ರಾರ್ಥನೆ

ನಿನ್ನ ಭುಜಕ್ಕೆ ಭುಜ ಹಚ್ಚಿ ನಿಂತವರು
ಕತ್ತಲ ಸಂದರ್ಭಗಳಿಗೆ ಹೆಗಲ ಕೊಟ್ಟವರು
ಆನೆತಲೆ, ಸೊಂಡಿಲಕ್ಕೆ ಬೀಸುತ್ತ
ಉದ್ದುದ್ದ ಬೆಳೆದೆದ್ದವರು, ಅಡ್ಡಡ್ಡ ಅಗಲಾದವರು,
ಗುಡ್ಡ ಬೆಟ್ಟಹತ್ತಿ ನೆಲಸಮ ಮಾಡಿದವರು
ಮಂಗನ ಬಾಲದ ಹಾಗೆ ಉದ್ದುದ್ದ ಬಿಚ್ಚಿಕೊಳ್ಳುತ್ತಾ
ಹುರಿಕಟ್ಟು ಮೀಸೆ, ಗಡ್ಡ, ಚಂಡಿಕೆ ಬೆಳೆಸಿ
ನಿನ್ನ ಸುತ್ತ ಉಪವಾಸ, ವನವಾಸ ಅಂಡಲೆಯುತ್ತ
ಒಣ ಉತ್ತತ್ತಿಬೇರು, ಗಡ್ಡೆ ಗೆಣಸು ತಿನ್ನುತ್ತ
ಪುಷ್ಕಳ ಸತ್ಯಾಗ್ರಹ, ಮುಷ್ಕರ ಹೂಡಿದವರು,

ಸುಟ್ಟ ಬದನೆಕಾಯಂಥ ಸೊಟ್ಟ ದೇಹದೊಳಗಿಂದ
ನಿನ್ನಾತ್ಮ ಉಳಿದದ್ದೆ ತಡ
ಜೈ ಭಜರಂಗಬಲಿ ಎಂದು ಜೈಲೊಡೆದು, ಕಂಬಿಕಿತ್ತು
ಬಂದೂಕ, ಸಿಡಿಗುಂಡ ತಿನ್ನುತ್ತ
ನುಗ್ಗು ನುಸಿಯಾಗಿ ಓಡೋಡುತ್ತ ಬಂದವರು,
ಕೈಗೆ ಕಾಲಿಗೆ ಮೈಗೆ ಬಿಗಿದಿದ್ದ ಉಕ್ಕಿನ ಸರಪಳಿಯ
ಕತ್ತರಿಸಿ, ಕಿತ್ತೊಗೆದು,
ಭಾರತಾಂಬೆಯ ಬಾಯಲ್ಲಿ ನೀರು ಬಿಟ್ಟು,
ಬದುಕಿಸಿದವರು ಕಣ್ಣು ಮೂಗು ಬಾಯಲ್ಲಿ
ಉಳ್ಳಾಗಡ್ಡಿ, ಹಸಿಮೆಣಸು, ನಿಂಬೀಹಣ್ಣು ರಸಹಿಂಡಿ

ಮೂರ್ಛೆಯಿಂದೆಚ್ಚರಿಸಿದವರು.
ಕಣ್ಬಿಟ್ಟು,
ವೀರಪುತ್ರರೆ, -ಎಂದು ತಾಯಿ ಸಂಬೋಧಿಸಿದ್ದೆ ತಡ,
ಅಚ್ಚ ಬಿಳೀ ಖಾದಿ ಸೀರೆ, ಖಾದಿ ಕುಪ್ಪಸ ತೊಡಿಸಿ
ಕೊರಳಲ್ಲಿ ಐದೆಳೆಯ ಖಾದಿಚೀಸು ಹಾಕಿ,
ಗುಳದಾಳಿ ಕರಮಣಿ ಸರ ಬಿಗಿದು,
ಜೈ ಭಾರತಾಂಬೆ ಜೈ -ಎಂದು
ಒಕ್ಕೊರಲಿಂದ ಕೂಗಿದವರು.
ಕಾಶ್ಮೀರದಿಂದ ಕನ್ಯಾಕುಮಾರಿ ತನಕ
ಎಲ್ಲರೊಟ್ಟಾಗಿ ಒಂದೇ ಪಂಕ್ತಿಯಲ್ಲಿ ಕೂತು.
ಹಸಿವಾದೊಡೆ ಭಿಕ್ಷಾನ್ನಗಳುಂಟೆಂಬ ವಚನ ಹೇಳಿ,
ಹುಗ್ಗಿಹೋಳಿಗೆಯುಂಡು, ತೇಗಿ ತೆಪ್ಪಗಾದವರು,
ಸ್ವಾತಂತ್ರ್ಯ ಬಂತೆಂದು ಹಿರಿಹಿರಿ ಹಿಗ್ಗಿ ಹೀರೆಕಾಯಾದವರು.
ನಕ್ಕು ನಕ್ಕು ಚೊಗಚೆ ಅವರಿ ಹೂ ಸುರಿದವರು:

ಈಗ ಚಂಡೆ ಕತ್ತರಿಸಲ್ಪಟ್ಟ
ಲೊಳ ಲೊಳ ಭೆಂಡೆಕಾಯಾಗಿದ್ದೇವೆ
ನಮ್ಮ ಕರ್ಮವೊ ಏನೊ ಗಾಂಧಿ ಚಂದ್ರ ಮುಳುಗಿದ ಮೇಲೆ
ಹಗಲುಕಾಣದಹಳ್ಳ ಬಿದ್ದು, ಕತ್ತಲ ಹುದಲಲ್ಲೊದ್ದಾಡುವ
ಪಂಕ ಪಶುಗಳಾಗಿದ್ದೇವೆ.
ಎಷ್ಟೊ ವರ್ಷಗಳಿಂದ
ಸೂರ್ಯ ಮೂಡುತ್ತಾನೆಂದು ಬಾಯ್ಕಿಸಿದು ಕೂತಿದ್ದೇವೆ.
ಮೂಡಲ ಗುಡ್ಡದಾಚೆ ಬಘಾಸೇಡಜಿಯ ಟ್ರಕ್ಕು ಹಾಯ್ದು
ಸೂರ್ಯನ ತಲೆಯೊಡೆದು ಬಿದ್ದಲ್ಲಿಯೇ
ರಕ್ತಕಾವಲಿ ಹರಿಯಿತೆಂದು ಕೇಳಿದ್ದೇವೆ,
ಸೂರ್ಯನ ಟಾಂಗಾಚಾಲಕ ಅಹ್ಮದನಿಗೂ ಜಖಂ ಆಗಿ,
ಸಿವಿಲ್ ಹಾಸ್ಪಿಟಲಲ್ಲಿ ಜೀವ ಗೊಟಕ್ಕೆಂದು ಅವನ
ಪೋಸ್ಟ ಮಾರ್ಟಂ ನಡೆಯಿತೆಂದು,
ಲೋಕಲ್ ಪತ್ರಿಕೆಯಲ್ಲಿ ಛಾಪಾದ ಸುದ್ದಿ.

ಯಾವುದನ್ನಂತ ನಂಬೋಣ?
ಕೊಟ್ಟ ಕೊನೆ ಗಳಿಗೆಯಲ್ಲಿ
ಶ್ರೀರಾಮ ಪ್ರಸನ್ನನಾಗಿ (ಹನಮಪ್ಪನಿರಲಿಲ್ಲ)
ಗುಂಡಿಟ್ಟ ನಿನ್ನೆದೆಗೆ ಎಂಥದೋ ಮಲಾಮು ಸವರಿ
ನರಹಿಡಿದ ಬೆನ್ನಿಗೆ ಅಂಟುಪಟ್ಟೀ ಕಟ್ಟಿ,
ಸಲೈನ್ ವಾಟರ್ ಕುಡಿಸಿ
ನಿಜ ವಿಮಾನದಲ್ಲಿ ಕೂರಿಸಿಕೊಂಡು
ಭೂರಿ ವೈಭವದೊಂದಿಗೆ ವೈಕುಂಠಕ್ಕೆ ಕರೆದೊಯ್ದು
ಊರುಗೋಲಿನ ಬದಲು ನಿನ್ನ ಕೈಯಲ್ಲಿ,
ಖಾದೀ ಕಮಲ ಕೊಟ್ಟು ನಿಲ್ಲಿಸಿದ್ದಾನೆಂದು,
ನವಲೂರಿಂದ ಸತ್ತೂರಿಂದ ಸಂತೆಗೆ ಬಂದ ಜನ
ಹೀಗೆ ಮಾತಾಡಿದ್ದನ್ನ ಕೇಳಿದ್ದೇವೆ.

ಯಾವುದನ್ನು-ನಂಬೋಣ?
ಎಲ್ಲಿ ನೀ ಎಲ್ಲಿ?
ಯಾವ ಬಸ್ಸಿನಿಂದ, ಟ್ರೇನಿನಿಂದ ಬಂದರೆ ನೀ ಸಿಗುತ್ತೀ?
ನಿನ್ನ ಹತ್ತಿರ ಕೂತು ನಮ್ಮ ಹಾಡನ್ನಷ್ಟು
ಹಿಂಜ ಬೇಕೆಂದಿದ್ದೇವೆ.
ನೀ ಎತ್ತರೆತ್ತರ ಏರೇರುತ್ತ ಗಗನದ ತುದಿ ಮುಟ್ಟಿದಿ
ಎಂದು ಕವಿ ಹಾಡಿದ್ದು,
ಕಲಕಲ ಕಲಮಲವೆಬ್ಬಿಸುವದಿನ್ನೂ.
ನಮ್ಮ ಆಕಾರವೇ ಬದಲಾದವರು ಇಂದು
ನಾಯಿಕೊಡೆಗಳ ಹಾಗೆ ನಾವು
ಮೂರಿಂಚು ಆರಿಂಚು ಕುಬ್ಜ ಮಾನವರಾಗಿ,
ಎಲ್ಲ ಕಡೆಗೂ ಓಡೋಡಿ ಪ್ರಯಾಣ ಮಾಡಿ,
ಬೆಂಕಿ ಬಿಸಿಲು ಚಳಿಗಾಳಿಗೆ ಹೆದರಿ ಸಾಯುತ್ತಿದ್ದೇವೆ.
ಕಗ್ಗತ್ತಲಲ್ಲಿ ಪಥಭ್ರಷ್ಟರಾಗಿ ಕಂಗಾಲಾಗಿದ್ದೇವೆ.
ಅಂದು ನೀ ಕೈಯಲ್ಲಿ ಹಿಡಿದಿದ್ದ ಅಲ್ಲಾವುದ್ದೀನದ ಕಂದೀಲು
ಎಲ್ಲಿ , ಎಲ್ಲಿರುವದು ತಾತ?

ಸಿಕ್ಕರೆ ಅದರೊಳಗೆ ತೈಲ ತುಂಬಿ ಕಳಿಸು.
ನಾವಿಲ್ಲಿ ಖಾದಿಯ ಹೊಸಬತ್ತಿ ಹೊಸೆದು, ಓಗಲೆ ಕಂಪನಿಯ
ಗಾಜು ಹಾಕುತ್ತೇವೆ.

ಒಂದು ವೇಳೆ ಬತ್ತಿ ಸುಟ್ಟರೆ ಅದಕ್ಕೆ
ನಾವೇ ಬತ್ತಿಯಾಗುತ್ತೇವೆ. ಕತ್ತಲನ್ನು
ನುಂಗುವ ಕಿಡಿಯಾಗುತ್ತೇವೆ ಅಥವಾ
ಉರಿಬೆಂಕಿಯ ಖಡ್ಗಗಳಾಗುತ್ತೇವೆ.

– ಬುದ್ದಣ್ಣ ಹಿಂಗಮಿರೆ

ಬಾಪು

ಕಾಮ ಕಸ್ತೂರಿಯ ತೆನೆ ಗಮಗಮಿಸುವ ಪ್ರಾಯದಲ್ಲಿ
ಅಪ್ಪ ತೀರಿದ ಸಮಯ ಎಲ್ಲರಂತಿವನು
ಮುಳುಮುಳು ಅತ್ತೂ ಕರೆದು ಸುಮ್ಮನಾದ

ಕಡಲ ಅಲೆ ಮೇಲೆ ದೂರ ಯಾನ ಈ ಪೋರ
ಅಲ್ಲಿ ಊರುಕೇರಿ ದಾರಿ ಎಲ್ಲಾ ಅಚ್ಚರಿ ಹೊಸತು
ದಿಕ್ಕು ತಪ್ಪಿದರೆ ದಿಕ್ಕಾಗಿ ಕಾಡಿದ್ದು ಉಳಿಸಿದ್ದು
ಹರಿಶ್ಚಂದ್ರ -ರಸಿಕ ಇನ್ನಿತರ ಮಾನವೀಯ ಒಳತೋಟಿ

ದಂಡಿ ಹಿಡಿದ ಸತ್ಯಾಗ್ರಹಿ ಅಚಲ ಹಿಮಾಚಲ
ಯಾವ ಕಾಣ್ಕೆಯೊ ಕಾಣೆ ಈ ನಾಡಿಗೆ ಕಡೆಗೂ ಬಿಡುಗಡೆ
ಎಚ್ಚರ ತಪ್ಪಿದ ಮಂದಿಗೆ ಸದಾ ದಾಸ್ಯ-ಎಲ್ಲಿಯ ಬಿಡುಗಡೆ!

ಕಾಲಮಾನದ ರಸ್ತೆತಿರುವಿನಲ್ಲಿ ನಿಂತುನೋಡುತ್ತೇನೆ
ಎಷ್ಟೊಂದು ಅನುಭಾವಿಗಳು ಚಿತ್ತಕ್ಕೆ ಸಲ್ಲುತ್ತಾರೆ
ಅಂತೆಯೇ ಬಾಪು- ದಯೆ ನನ್ನಿ ಅಹಿಂಸೆಯ ಸ್ವರೂಪ
ಏನಾದರು ಅನ್ನಿ ಈತ ಸತ್ಯಶೋಧನೆಯ ಒಂದು ಛಾಪು.

— ಕೆ.ಸ. ಶಿವತೀರ್ಥನ್

ನೀನುಂಟು ನಾವುಂಟು

ಗಾಂಧಿಯೆಂಬವನೊಬ್ಬನಿದ್ದ
ಅವನು ಹಾಗಿದ್ದ ಹೀಗಿದ್ದ
ಎಂಬುದು ಮರೆತೇ ಹೋಗಿತ್ತು.
ಮೊನ್ನೆ ಯಾರೋ ಮುಖಿ ಕಿವುಚಿ ಉಸುರಿದರು
ಅವನ 'ಜನ್ಮ ಶತಾಬ್ದಿ' ಎಂದು,
ಆಗ ಮರುಕಳಿಸಿತ್ತು ಹಳೆಯ ನೆನಪು.

....

'ಈಶ್ವರ ಅಲ್ಲಾ ತೇರೇನಾಮ'
ಎಂದು, ದಿನಾ ಹಾಡುತ್ತಿದ್ದೆಯಲ್ಲ
ನೀನು ಉತ್ತಮ ಹಿಂದುವೂ ಅಲ್ಲ
ಉತ್ತಮ ಮುಸಲ್ಮಾನನೂ ಅಲ್ಲ.
ನೌಖಾಲಿಯಲಿ ಕಲ್ಕತ್ತೆಯಲಿ
ದೇಶದ ನಗರನಗರಗಳಲ್ಲಿ
ಮಾರಣಹೋಮವ ಹೂಡಿ
ಹೇಗೆ ತೋರಿಸಿಕೊಟ್ಟೆವು ನಾವು
'ಈಶ್ವವ, ಅಲ್ಲಾ' ಒಂದೇ ಅಲ್ಲಾ ಎಂದು,
ಆಗ ಕೈ ಕೈ ಹಿಡಿದು ಕೈ ಕೈ ಹೊಡೆದು
ಗಹಿಗಹಿಸಿ ನಕ್ಕೆವು ನಾವು!
ನಮ್ಮ ವಿಜಯವ ನೆನೆದು.

....

ಒಮ್ಮೆ ಸೋತು ಹೋಗಿ, ಸತ್ತು ಹೋಗಿ
'ಜನ್ಮ ಶತಾಬ್ದಿ'ಯಲ್ಲಾದರೂ
ಮರೆಯಬೇಕೆಂದು ತಿಳಿದು

ಗಾಂಧಿ ಎಂಬುವ ಹೆಸರು / ೧೫೭

ಕನಸು ಕಟ್ಟಿರಬೇಕು ನೀನು
ಅಲ್ಲೇ ಕುಳಿತು.
ನಿನ್ನನ್ನು ಎದುರಿಸಲಿಕ್ಕೆ
'ನಾವಿಬ್ಬರೂ' ಸದಾ ಒಂದೇ.
ನಿನ್ನ ಗುಜರಾತದೊಳಗೇ-
'ಕೂಡಿಕೊಂಡು' ಹೇಗೆ ಹೂಡಿದ್ದೇವೆ ದೊಂಬಿ.
ಈ 'ಜನ್ಮ ಶತಾಬ್ದಿ' ಹಾಳಾಗಿ ಹೋಯ್ತು
ಕಾಯ್ಕೊಂಡು ಕೂಡಿನ್ನು
ಮತ್ತೊಂದು 'ಶತಾಬ್ದಿ'ವರೆಗೂ
ಮಾತನಾಡಿದಾಗಲೆಲ್ಲ
'ಅಹಿಂಸಾ ಅಹಿಂಸಾ' ಎಂದು ಎಷ್ಟು ಹಿಂಸಾಕೊಡುತ್ತಿದ್ದೆ?
ಹಿಂಸೆಯನ್ನು ಅಹಿಂಸೆಯಿಂದ ಎದುರಿಸಬೇಕೆಂದು
ಹೇಗೆ ಎದೆಯುಬ್ಬಿಸಿ ಹೇಳುತ್ತಿದ್ದೆ?
ನಿನ್ನದೆಲ್ಲಾ ತಪ್ಪೆಂದು
ನಮ್ಮ ಗೋಡ್ಸೆ ಹೇಗೆ ಗುಂಡಿಟ್ಟು ಹೊಡೆದ
'ಥಾಡ್ ಥಾಡ್ ಥಾಡ್' ಎಂದು
ಉಬ್ಬಿಸಿದ ನಿನ್ನ ಎದೆಗೆ.
ಹೇಗೆ ಜಯಭೇರಿ ಹೊಡೆದೆವು ನಾವು!

....

ನಿನ್ನನ್ನು ಯಾರೋ
'ಅಜಾತಶತ್ರು' ಎಂದು ಕರೆದ ನೆನಪು.
ನಾವು ಜನಿಸಿದ್ದೇವೆ ನೋಡು
ಢಾಣಾಡಂಗುರವಾಗಿ ಸಾರ್ತಾಯಿದ್ದೇವೆ ಕೇಳು
'ನಾವು ನಿನ್ನ ವೈರೀ ವೈರೀ' ಎಂದು.

'ಸಬಕೋ ಸನ್ಮತಿ ದೇ ಭಗವಾನ್'
ಕೊನೆಯವರೆಗೂ ನಡೆಯಬೇಕೇನೋ
ನಿನ್ನ ಈ ಪ್ರಾರ್ಥನೆ.
ವೀಳ್ಯ ಎತ್ತಿದ್ದೇವೆ, ನೋಡೋಣ
ನೀನುಂಟು ನಾವುಂಟು!

- ಶಿವಶರಣ ಪಾಟೀಲ ಜಾವಳ

ಗಾಂಧಿ ಎಂಬುವ ಹೆಸರು / [illegible]

ಭಾಗ - ೩ : ನವ್ಯ

ನಿನ್ನದೇನು ತಪ್ಪು

ಅಂದಿನಿಂದಲೂ ನಾವು
ಹೀಗೆಯೇ ಬಾಳಿದೆವು.
ನೀ ಬರುವ ವರೆಗೆ
ಧರ್ಮ ಮತ ಜಾತಿ ಎಂದು
ನಮ್ಮ ಮನೆಯಲ್ಲೆ
ಗೋಡೆಗಳ ಏರಿಸುತ
ಆಮೇಲೆ ಉಜ್ಜಿ ನಶಿಸಿ
ಇನ್ನೇನು ಮುಂದೇನು ಎಂದು
ಕಣ್ ಕಣ್ ಬಿಟ್ಟು
ತಲೆಯೆತ್ತಿ ತಡಕುವಾಗ
ನೀನೊಬ್ಬ ಸಿಕ್ಕಿದೆ.
ಭಾಗ್ಯವಂತರೊ ನಾವು!
ಎನ್ನುವ ಹಾರಾಡಿ ಹರಿದಾಡಿ
ನಿನ್ನ ದುಡಿತದಿ ನಾವು
ಜೀವವನು ಪೊರೆಯುತ್ತ
ಅಲ್ಲೆಲ್ಲೊ ದಿಬ್ಬಗಳ
ಅವುಕಿ ಸರಿ ಮಾಡುತ್ತ
ಕುಳಿಯನ್ನು ಮುಚ್ಚುತ್ತ
ಸೊರಗಿ ಮಲಗಿದ್ದೇವೆ
ಗಾಂಧಿ;
ಕ್ಷಮಿಸು ನಿನ್ನದೇನು ತಪ್ಪು?

- ಹೊರೆಯಾಲ ದೊರೆಸ್ವಾಮಿ

ಬಾಪೂವಿಗೆ

ಎಂಥ ಮೊಂಡನೋ ನೀನು?
ಸತ್ತು ಸುಡುಗಾಡು
ಸೇರಿದೆಯೆಂದು,
ನಿಶ್ಚಿಂತೆಯಿಂದಿದ್ದರೆ
ಗಸ್ತಿ ತಿರುಗುತ
ಮತ್ತೆ,
ಎಚ್ಚರಿಸುವೆ?
ನೀ ಸತ್ತದ್ದು ನಮಗೆ
ಗೊತ್ತಿಲ್ಲೆಂದು
ತಿಳಿದೆಯಾ?
ದಾಖಲೆ, ಇಟ್ಟಿದ್ದೇವೆ ದಾಖಲೆ,
ನಿನಗೇ ಗೊತ್ತಿಲ್ಲವೇ
ಎಷ್ಟು ಸಲ ನಿನ್ನ ಹೆಸರಿಲೆ
ಡೋಲು ಬಡಿದು,
ಡಂಬರಗಣಿನೆಟ್ಟು,
ಕಸರತ್ತು ತೋರಿಸದಿದ್ದರೂ
ಮಸಲತ್ತು ಮಾಡಿ,
ಮುಂದಿನೂರಲ್ಲಿ
ಹಾವು- ಮುಂಗುಲಿಯಾಟವೆಂದಿಲ್ಲ?
ಎಷ್ಟು ಸಲ ಕೂಟಕೂಟಿಗೂ

ಪೊಗಳ ಪೂಮಾಲೆ ಹಾಕಿ,
ಹೊನ್ನ ಶಿಲುಬೆಗೇರಿಸಿಲ್ಲ
ನಿನ್ನ?
ಏನೇ ಅನ್ನು ಸತ್ತು ಬದುಕಿದ ಬೇತಾಳ ನೀನು.
ಬಿಸಿಲ ನಡುನೆತ್ತಿಗೇರಿದಾಗಲೂ
ನೀ ಬರುವ ಭಯ
ತಪ್ಪದು ನಮಗೆ
ಯಾಕೆ ಗೊತ್ತಾ?
ಮತ್ತೆಲ್ಲಿ ಬರುತ್ತೀಯೋ
ನಮ್ಮ ಕುರುಕ್ಷೇತ್ರ ಮಧ್ಯೆ
ಗೀತೆಯ ಗಂಟು ಬಿಚ್ಚಲಿಕ್ಕೆಂದು.

- ಪ್ರಭುಸ್ವಾಮಿ ಮಠ

ಗಾಂಧಿಗೆ ಏನೂ ಅನ್ನಲಾರೆ

ನಾನು ಹುಟ್ಟುವ ಮುಂಚೆ
ಸತ್ತ ಗಾಂಧಿಗೆ ಏನೆನ್ನಲಿ?
'ನಾನು' ಹುಟ್ಟಿದೆ.

ಧಗ ಧಗಿಸುವ ಸೂರ್ಯ
ಬೋಳಾದ ಬೆಟ್ಟ
ಬತ್ತಿದ ಬಾವಿ
ಕೆಂಡ ಕೆಂಡ
ನೆಲ ಧೂಳು ಧೂಳು
ಕೆಂಪು ಸಂಜೆಯನಲ್ಲೇ ಬಿಟ್ಟು
ಗಾಂಧಿ ಸತ್ತ
'ನಾನು' ಹುಟ್ಟಿದೆ.

ಕತ್ತಲಿನ ಮಾಡು
ನಕ್ಷತ್ರ ಜಾಡೂ ಕಾಡಿ
ಕಿಚುಗುಡುವ ಜನ
ಕೂಗಿ ಕಕ್ಕುವ ಕಾರ್ಖಾನೆ
ಅತ್ತು ಸುಸ್ತಾದ ಕೊಳಕು ಮಗು
ವಯ್ಯಾರಕ್ಕೆ ಸೆರಗು ಬೀಸುವ ಹೆಣ್ಣುಗಳು
ಮತ್ತಿನಲಿ ಓಲಾಡುವ ರಸ್ತೆಗಳನಿಷ್ಟೇ ಬಿಟ್ಟು
ಗಾಂಧಿ ಸತ್ತ

'ನಾನು' ಹುಟ್ಟಿದೆ
ಮಬ್ಬು ಬೆಳಕಲ್ಲಿ
ಮೇಜಿನಡಿಯ ಕಛೇರಿಗಳು
ಬಡ್ತೀ ಮೇಷ್ಟ್ರುಗಳ ಶಾಲೆಗಳು
ಕಿಕ್ಕಾಗಿ ಕುಕ್ಕುವ ಟೋಪಿಗಳು
ಕೆಂಪಾಗಿ ತಿನ್ನುವ ಕಾವಿಗಳನಿಲ್ಲೇ ಬಿಟ್ಟು
ಗಾಂಧಿ ಸತ್ತ
'ನಾನು' ಹುಟ್ಟಿದೆ

ಬೆಳೆದೆ
ಧೂಳಡರಿದ ಬಾವುಟದಡಿಯಲ್ಲಿ
ಹಣ್ಣಾಗುವ ಮೊದಲೆ ಕಿತ್ತು ತಿನ್ನುವವಸರದಲ್ಲಿ
ಹಾಡಾಗುವ ಮೊದಲೆ ಕೂಗುವ ಸರಸದಲ್ಲಿ
ಧ್ವನಿ-ಪ್ರತಿಧ್ವನಿ ಮೂಲೆ ಮೂಲೆಗೆ ಬಡಿದು
ಸದ್ದಾದ ಸುದ್ದಿಗಳಲ್ಲಿ
ನಾನು ಕಳೆದೆ.

ನಾನು ಹುಟ್ಟುವ ಮುಂಚೆ
'ನಾನು' ಹುಟ್ಟಿದ ನಸುಕಿನಲ್ಲೆ
ಸತ್ತ ಗಾಂಧಿಗೆ ಏನೂ ಅನ್ನಲಾರೆ.

– ಚಂದ್ರಶೇಖರ ತಾಳ್ಯ

ನಾವಿನ್ನು ಕಲಿಯಲಿಲ್ಲ ಬಾಪು

ಮಾತು ಮಾತುಗಳ ನಡುವೆ ಕಂದರ
ಮಾತು 'ಮಾಡು'ಗಳ ನಡುವೆ
ಕಂದರ ಕಂದರ
ಬ್ರಿಡ್ಜು ಕಟ್ಟುವದನ್ನು ಕಲಿಯಲಿಲ್ಲ
ನಿನ್ನ ಹಾಗೆ-

ಸಾಗರ ಮೇಲಕ್ಕಾವಿ ಮತ್ತೆ ಸಾಗರವಾಗಿ
ಕೂಡುವ ಹಾಡುವ ಪರಿ
ನಾವು ಕಲಿಯಲಿಲ್ಲ
ನಾವು-
ಮಾತ ಬೆಲೂನುಗಳ ಆಕಾಶದಲ್ಲಿ ಹಾರಿಸುವವರು
ಮಿದುಳ ಬಾಂಬುಗಳ ನೆಲದಲ್ಲಿ ಸ್ಫೋಟಗೊಳಿಸುವವರು
ನಾವು!.

ತೆರೆ ಎದೆಯ ತೆರೆ
ತಗೋ ತುಬಾಕಿ
ಹಾಯ್ ರಾಮ! ಹಾಯ್ ರಾಮ! ಎನ್ನು

ಬಾಪು
ಯುಗ ಯುಗಕೆ ಪ್ರಾಣ ತೆತ್ತಿರಿ ನೀವು
ಆದರೂ ನಾವಿನ್ನು ಕಲಿಯಲಿಲ್ಲ ಬಾಪು
ನಿಮಗೆ ತುಬಾಕಿ
ಹಾರಿಸುವುದನ್ನು
ನಾವು ಬಿಟ್ಟಿಲ್ಲ.

- ಮಲ್ಲಿಕಾರ್ಜುನ ಹಿರೇಮಠ

ಅವರು

ಅವರು ಹಚ್ಚಿಟ್ಟ ದೀಪಕ್ಕೆ ಎಣ್ಣೆ ಎರೆಯುವವರಿಲ್ಲ
ಚಿವುಟುವವರಿಲ್ಲ ಕಪ್ಪು-ಕುಡಿಗೆ
ಹೊಸ ಬತ್ತಿಗಳ ಹೊಸೆದು ಹೊತ್ತಿಸುವವರಿಲ್ಲ
ಹೇಗೋ ನಡೆದಿವೆ ಕತ್ತಲೆಯ ನಡಿಗೆ

ಸರಳ ಬದುಕಿನ ಪಾಠ ಕಲಿಯುವವರೆ ಇಲ್ಲ
ಸತ್ಯವಂತೂ ಈಗ ಬೇಡವಾದ ಮಾತು
ಕೋಲೂರಿ, ನಿಧಾನ ಹೆಜ್ಜೆ ಇಡುವ ಎಚ್ಚರಧರಿವು
ಯಾರಿಗೂ ಇಲ್ಲ
ಮಾಂಸದಂಗಡಿಯಲ್ಲಿ ಕರುಣೆಯನು ಹುಡುಕುತಿದೆ ಕಟ್ಟಿರುವ
ಹೋತು

ದೇಶಪ್ರೇಮಕ್ಕೆ ಸವಿ ದಾಸ್ಯ ಉಂಡವರಿಗಷ್ಟೇ ಗೊತ್ತು
ಗುಂಡಿಗೆ-ಗುಂಡಿಗೆಯ ತೆರೆದು ಸ್ವಾಗತಿಸುವದು ವಿನೀತ ಬಲ
ಹೊಣೆಯರಿಯದವ ಉನ್ಮತ್ತನಾಗುವ ಸ್ವೈರನಾಗುವ,
ಬದುಕುವ ಪ್ರಶ್ನೆಗೆ ಕೊಲ್ಲುವುದು ಎಂದಿಗೂ
ಉತ್ತರವಾಗಲಿಲ್ಲ.

ಮತ್ತೆ ಬರಬಹುದೆ ಆ ಅಜ್ಜ ಮರುಜನ್ಮ ಪಡೆದು?
ಉಪ್ಪು ತೀರಿದ ಮನೆಯಲ್ಲಿ ಹಚ್ಚಿಡುವನೆ ಹೊಸತೊಂದು
ಅರಿವು-ದೀಪ?

ನಕ್ಷತ್ರಗಳು ಸೂರ್ಯ- ಚಂದ್ರರು, ಕಾಯುತ್ತಿರಬಹುದೆ
ನಮ್ಮಂತೆಯೇ?"
ಅನ್ನಿಸುತ್ತಿರಬಹುದೆ ಅವಕ್ಕೂ, ನಮ್ಮನ್ನು ಕಂಡು "ಅಯ್ಯೋ
ಪಾಪ?"

- ಆನಂದ ಝುಂಜರವಾಡ

ನನಗೆ ಗಾಂಧಿ ಆಗುವ ಇಚ್ಛೆ

ಬಹಳ ದಿನಗಳಿಂದಲಿ;
ನನಗೆ ಗಾಂಧಿ ಆಗುವ ಇಚ್ಛೆ.
ಮೊನ್ನೆ
ನಮ್ಮ ಕಾಲೇಜಿನ
ಗ್ಯಾದರಿಂಗ್ದಲ್ಲಿ
ಗಾಂಧಿಯಂತೆ
ಭಾಷಣ ಮಾಡುವಾಗ
ತುಂಡು ಬಟ್ಟೆ ತೊಟ್ಟು,
ತಲೆ ಬೋಳಿಸಿಕೊಂಡು,
ZERO ಕನ್ನಡಕ ಧರಿಸಿದ್ದೆ.

ಆಗ,
ಎದುರಿಗೆ ಕುಳಿತ
ಕ್ಲಾಸ್‌ಮೇಟ್ ಕಸ್ತೂರಿ
ಕಿಸ್ಸೆಂದು
ಉಳಿದವರಿಗಿಂತಲೂ
ಹೆಚ್ಚು ನಕ್ಕಾಗ
ಮನದಲ್ಲಿ ಕಸಿವಿಸಿ.

ಭಾಷಣ ಮುಗಿದಾಗ,
ಪ್ರೊಫೆಸರರೊಬ್ಬರು

"ನೀನು ಫ್ಯಾನ್ಸಿ-
ಡ್ರೆಸ್ಸಿನಲ್ಲಿ ಹೆಸರು
ಕೊಟ್ಟಿದ್ದರೆ ಚೆನ್ನಾಗಿತ್ತು."
ಎಂದರು.
ಅಂದಿನಿಂದಲೂ
ನನಗೆ ಸಾನಾಗುವ ಇಚ್ಛೆ.

- ರಂಜಾನ್ ದರ್ಗಾ

ಕಿಟ್ಟನ ಗಾಂಧೀ ಚಿತ್ರ

ಮೊನ್ನೆ ಹುಬ್ಬಳ್ಳಿಯಲ್ಲಿ ಕಿಟ್ಟನೂ
ಗಾಂಧಿ ಚಿತ್ರಕ್ಕೆ ಬಂದಿದ್ದ.
ಬೆಳಕಿನ ಪರದೆಯ ಮೇಲೆ ಗಾಂಧಿ
ಮೂಡಿದಂತೆ ಕಿಟ್ಟ ಕತ್ತಲುಬುಟ್ಟಿಯೊಳಗಿಂದ
ಹೆಡೆಯೆತ್ತಿ ಹಾಲು ಕುಡಿಯುವಂತೆ
ಅಪ್ಪಟ ಗಾಂಧಿವಾದಿಯಂತೆ
ನನ್ನ ಹಿಂದೆಯೇ ಕುಳಿತಿದ್ದ.

ಸತ್ವಪರೀಕ್ಷೆಗಳ ಮಧ್ಯೆ ಗಾಂಧಿ ಮುನ್ನುಗ್ಗಿ
ತೆರೆಗಳ ಈಸಿ ಸಾಗರದ ಆಳ ಇಳಿದು
ಮುಗುಳುನಗೆಯ ಮುತ್ತು ಎತ್ತಿಕೊಂಡು
ಹೊರಬರುತ್ತಿದ್ದಂತೆ
ಕಿಟ್ಟ ತನ್ನ ಕುರ್ಚಿಯಲ್ಲಿಯೆ ಕುಳಿತು
ಅಂಥದೇ ಪೋಜು ಕೊಟ್ಟ.

ಸಂಸಾರದಲ್ಲಿ ಸನ್ಯಾಸಿಯಾಗಿ
ಸನ್ಯಾಸದಲ್ಲಿ ಸಂಸಾರಿಯಾಗಿ
ವ್ಯಕ್ತಿಯೆ ಸಮಷ್ಟಿಯಾಗಿ
ಸಮಷ್ಟಿಯೆ ವ್ಯಕ್ತಿಯಾಗಿ
ಬದುಕು ಸಾವಿನ ಮಧ್ಯೆ
ಗಾಂಧಿ ಧೀರನಾಗುತ್ತಿದ್ದಂತೆ
ಮಂಪುಹಿಡಿದ ಕಿಟ್ಟ
ಮುಂದಿನವರ ತಲೆಯ ಮೇಲೆ

ಕಾಲು ಇಳಿಬಿಟ್ಟು ಬಾಯಲ್ಲಿ ಪಾನಪಟ್ಟಿ ಹೆಟ್ಟಿ
ಹಗ್ಗದ ಮೇಲಿನ ಡೊಂಬನಂತೆ
ನಿದ್ದಿ-ಬುದ್ಧಿಗಳ ಸಮತೋಲದಲ್ಲಿ ಒರಗಿದ್ದ.

ಘುಳುಗಳ್ಳಿ ಮಧ್ಯದ ಮಾಮರದಂತೆ
ಅಪೂರ್ವ ಆತ್ಮವಾಗಿ ಗಾಂಧಿ
ರೂಪಗೊಳ್ಳುತ್ತಿದ್ದಂತೆ
ಕಿಟ್ಟನಿಗೆ ಹಿಂದಿನ ಕತ್ತಲ ಬಾಕ್ಸಿನಲ್ಲಿ
ಝಣ ಝಣ ಬಳೆ ಸದ್ದು.
ಟಾವರ್ ಕ್ಲಾಕ್ ಸಾಯಂಕಾಲದ
ದುರ್ಗದಬೈಲ ಮಾರ್ಕೆಟನ್ನು ಪ್ರಕಟಿಸಿದಂತೆ
ಕಿಟ್ಟ ಕುಳಿತಿದ್ದ ಕೆಟ್ಟ ಕೆಮರಾದಂತೆ.

ಬಿದಿಗೆಯ ಚಂದ್ರನಂತೆ ಗಾಂಧಿ
ಅಮೋಘ ಪ್ರೇಮ ಸಾಕಾರವಾಗುತ್ತಿದ್ದಂತೆ
ಕಿಟ್ಟನಿಗೆ ನಿದ್ದೆಯೂ ಬರದೆ
ಮೆಲ್ಲಗೆ ಮೆಟ್ಟುಬಿಟ್ಟಿದ್ದ.

ಸ್ವಲ್ಪ ಹೊತ್ತಿನಲ್ಲಿ
ಚಿತ್ರ ಮಂದಿರದ ಕತ್ತಲಲ್ಲಿ
ಯಾರೋ ಚೀರಿದಂತೆ
ಒಮ್ಮೆಲೆ ಗಾಂಧಿಯ ಕೊಲೆ

ಮುಗಿಯಿತು ಚಿತ್ರ, ಹತ್ತಿತು ಲೈಟು,
ಕಿಟ್ಟನದೇ ನಾಪತ್ತೆ.

ನಾನು ಪ್ರೇರಣೆಗೊಂಡು
ಹೊರಬಂದು
ಗಾಂಧಿಯ ಆತ್ಮಚರಿತ್ರೆ ಕೊಳ್ಳಲು ಹೋದೆ.
ಆಗಿತ್ತು ನನ್ನದೂ ಪಿಕ್‌ಪಾಕೆಟ್ಟು
ಕಿಟ್ಟನದೇ ಎಲ್ಲಾ ಕರಾಮತ್ತು.

- ಎಚ್.ಎಸ್. ಭೀಮನಗೌಡರ

ಅಜ್ಜಾ ಕಂಡೆಯಾ.....!

ಅಜ್ಜಾ.....
ನಿನ್ನ ಕನ್ನಡಿ ಕಟ್ಟಿನ ಪಟದಡಿಯಲ್ಲಿ
ಗೋಡ್ಸೆಗಳು ಕುಳಿತಿದ್ದ ಕಂಡೆಯಾ-
ನೀ ಸತ್ತು-ಚಿರನಿದ್ದೆಯಲ್ಲೊರಗಿದ
ನಿನ್ನ ಸಮಾಧಿಯಲ್ಲಿ, ನಮ್ಮ ಜನ- ನಾಯಕರು
ಪ್ರಮಾಣ ವಚನ ಸ್ವೀಕರಿಸಿ
ನಿನ್ನನ್ನು ಮತ್ತೆ ಮತ್ತೆ ಕೊಲ್ಲುವುದ ಕಂಡೆಯಾ....!
ಪ್ರಚಾರ ಪ್ರತಿಷ್ಠೆ ಬಯಸದ
ಸತ್ಯ-ಶಾಂತಿ-ಅಹಿಂಸೆಯ
ನಿನ್ನ ಮೂರ್ತಿಯ ಅನಾವರಣದಲ್ಲಿ;
ಈ ಹಸಿ ಪಟಿಂಗರ, ಮೋಸ ವಂಚನೆ
ದಗಲ್ಬಾಜಿತನ ಅನಾವರಣಗೊಂಡಿದ್ದು
ಪತ್ರಿಕೆಯಲ್ಲಿ ದಪ್ಪಾಕ್ಷರಗಳಲ್ಲಿ
ಅಚ್ಚುಗೊಂಡಿದ್ದನ್ನು ಮುಖಪುಟದಲ್ಲಿ
ಕಿಸಿಬಾಯಿ ದಾಸರಂತೆ ಫೋಟೋಕ್ಕೊ
ಪೋಜು ಕೊಟ್ಟಿದ್ದನ್ನು ಕಂಡೆಯಾ....!!
ಭಾಷಣ-ಬಜೆಟ್ಟು, ಶಿಸ್ತು ಆದರ್ಶಗಳ
ಅಂದಾದುಂದಿಯಲ್ಲಿ ಈ ಖದೀಮರು
ದಿನಾ ದಿನಾ ಸತ್ತ ನಿನ್ನನ್ನು
ಮತ್ತೆ ಮತ್ತೆ ಸಾಯಿಸಿ

ಬದುಕುವುದ ಕಂಡೆಯಾ.....!!!
ಅಜ್ಜಾ....
ಗೋಡ್ಸೆ ಸಾಯಲೇ ಇಲ್ಲಾ
ಗೋಡ್ಸೆಗಳು, ಅಲ್ಲಿ-ಇಲ್ಲಿ; ಎಲ್ಲೆಲ್ಲೂ ಜೀವಂತ
ಅದಕ್ಕೇ ನನಗೆ ಈ ಕವಿತೆ ಬರೆವ ಧಾವಂತ.

- ಶ್ರೀಪಾದ ಶೆಟ್ಟಿ

ಜನಿಸಿ ಬಾ ಗಾಂಧಿ

ನೆನೆಸುವದು ಜಗವೆಲ್ಲ ಜನಿಸಿ ಬಾರಯ್ಯ ತಂದೆ
ದೀನ ದಲಿತರು ನಿನ್ನ ಬೆನ್ನ ಹಿಂದೆ
ಬಡವ ಬಲ್ಲಿದರೆಂಬ ಮೇಲು ಕೀಳುಗಳೆಂಬ
ಕೊಳೆಯ ಬೆಳಗಲು ಮುಂದೆ ಕಾತರಿಸಿ ಬಂದೆ

ಅಹಿಂಸೆ ನಿನ್ನಯ ಉಸಿರು ನ್ಯಾಯ ಅನ್ನವೇ ನೀರು
ಆತ್ಮಶುದ್ಧಿಗೆ ಸತ್ಯ ನಿತ್ಯ ದೇವರು
ಅನ್ಯಾಯ ಅಧಿಕಾರ ಸುಳ್ಳು ಆಡಂಬರ
ಕನಲಿ ಕಂಗಾಲಾದೆ ನೋಡಿ ಬಡವರ

ದಕ್ಷಿಣ ಆಫ್ರಿಕೆಯಲ್ಲಿ ದಾಸ್ಯ ದಳ್ಳುರಿಯಲ್ಲಿ
ಸುಟ್ಟು ಸುಲಿದರು ದುಷ್ಟ ಬಿಳಿಯರಲ್ಲಿ
ಸಾವಿರಾರು ಕೂಲಿ ಜನರ ಬೆನ್ನು ಕಟ್ಟಿ
ಗುಲಾಮಗಿರಿಯನು ಮೆಟ್ಟಿ ನಿಂತೆ ಎದೆತಟ್ಟಿ.

ಪಾರತಂತ್ರ್ಯದ ಬಲೆಗೆ ಸಿಲುಕಿರಲು ಭಾರತವು
ನಿನ್ನ ಬರುವನೆ ಅಹಿಂಸೆ ದಂಡವ ಪಿಡಿದು
ಸ್ವಾತಂತ್ರ್ಯವನೆ ಇತ್ತೆ ಬಾಳು ತೆತ್ತು.

ಹಿಂದು ಮುಸ್ಲೀಮರನು ಒಂದೇ ಮನೆಯವರೆಂದಿ
ಅಂತೆ ನಡೆಯಲು ನಿನ್ನ ಪ್ರಾಣ ತೆಯ್ದಿ
ಜಾತಿ ಜ್ವಾಲೆಯ ಹರಡಿ ಮುಗ್ಧ ಜನ ಹುರುಪಳಿಸೆ
ಹಗಲಿರುಳು ಬೇಯುತ್ತಾ ಶಾಂತಿ ತಂದೆ

ಪರಿಜನರ ಪಳಿಗೆಗೆ ಮುಡುಪಿಟ್ಟೆ, ನಿನ್ನ ಹರಣ
ಉಕ್ಕಿ ಬರುತಿತ್ತಯ್ಯ ಅಂತಃಕರಣ
ಜಗದಗಲ ಮುಗಿಲಗಲ ನಿನ್ನೊಲವು ಚಾಚಿರಲು
ಗೋಡ್ಸೆ ಗುಂಡಿಗೆ ಮಾತ್ರ ಬರಲಿಲ್ಲ ಕರುಣೆ

- ಎಂ.ಡಿ. ಗೋಗೇರಿ

ಕವನದಲ್ಲಿ ಬದುಕಿದ ಗಾಂಧಿ

ಎಲ್ಲರೂ ಗಾಂಧೀಜಿ ಮೇಲೆ ಬರೀ ಕವಿತೆ
ಕಟ್ಟಿ ಕೊರೆಯುತ್ತಾರೆಂದು
ನಾನಾದರೂ ಕೊನೆಗೆ ಗಾಂಧಿ-
ತತ್ವ ಪಾಲಿಸಿಯೇ ಸಾಯೋಣವೆಂದು
ಒಂದು ಖಾದಿ ಜುಬ್ಬ ಹೊಲಿಸಿದೆ,

ನಾಲ್ಕು ದಿನ ಧರಿಸಿ ಅಡ್ಡಾಡಿದ್ದೇ ತಡ
ಜನ ಗುರುತಿಸಿದರು ನನ್ನ ನೋಡಿ
ಕವಿಗಳಲ್ಲೂ ಖದೀಮರಿದ್ದಾರೆಂದು ಮಾತಾಡಿ;
ಟೋಪಿ ಹಾಕದ ಜುಬ್ಬಾ, ತಲೆಯಿಲ್ಲದ
ಮನುಷ್ಯ; ತಂದೆ ಒಂದು ಟೋಪಿ
ಗಾಂಧಿತಾತನ ಮೇಲೆ ಚಿಕ್ಕ ಭಾಷಣ
ಸಂಗಡ ನಾಲ್ಕೈದು ಚೊಕ್ಕ ಘೋಷಣೆ
ಬೀಳಬೇಕೆ ನನಗೆ ಕಲ್ಲು! ಕವಿಗಳಲ್ಲೂ
ಕಳ್ಳರಿದ್ದಾರೆಂದು ಕಳಿಸಿದರು ನನ್ನ;
ಟೋಪಿಗೂ ಒಂದು ಏಟು
ಬೀಳುವ ಮುನ್ನ

ಇದಲ್ಲ ಬಿಡಿ ಗಾಂಧೀಜಿ ದಾರಿ
ಕವನ ಭಾಷಣ ಬೇಡ ಈ ಬಾರಿ
ಎಂದವನೇ ಸೀದ ನಡೆದೆ ಗಾಂಧೀ ಥರ
ಕಾಲ್ನಡಿಗೆಯಲ್ಲೇ ಹೊಲಗೂಡಿಗೆ ಸರಸರ

"ಹರಿಜನರೇ ನೀವು ಹೊಲೆಯರಲ್ಲ-
ಹರಿಜನರು, ಮತ್ತೆ ಇದು ಭಾಷಣ ಅಲ್ಲ"
ತಡಮಾಡಲಿಲ್ಲ ಹರಿಜನರು
ಹರಿದರು ನನ್ನ ಜುಬ್ಬ ಟೋಪಿ
ಗಾಂಧೀಜಿ ಮೇಲಿನ ಹರಿಜನ ಕೋಪ!
ಹರಿಯಿತು ನನ್ನ ಜುಬ್ಬ ಪಾಪ!
ಸರಿ, ಗಾಂಧಿ ಜಯಂತಿ ದಿನವೇ
ಯಾಕಪ್ಪ ಈ ದಲಿತರ ಗೊಡವೆ?
ರಚನಾತ್ಮಕ ಕೆಲಸ ಮಾಡೋಣೆಂದು
ಹೋದೆ ನಮ್ಮ ವಿಧಾನಸೌಧಕ್ಕೆ
"ಗಾಂಧೀ ಗಾಂಧೀ" ಜಪದ ಮೋಡಿ
ಕರೆದರು ನನ್ನ ಖಾದಿ ಜುಬ್ಬ ನೋಡಿ;
ನಾನು ಒಬ್ಬ ಶಾಸಕನೆಂದು ಬಹಳ ಮಾಡಿ;
ಅಲ್ಲೆಂದಾಗ ಮೊಣಕಾಲು ಪಂಚೆ ದೊಣ್ಣೆ ಕೊಡಿಸಿ
ನಿಲ್ಲಿಸಿದರು ಬಸ್‌ಸ್ಟ್ಯಾಂಡಿನಲಿ
ಪಕ್ಕಾ ಗಾಂಧೀಜಿ ವೇಷ ತೊಡಿಸಿ
ಲಾಟರಿ ಮಾರಲಿಕ್ಕೆ ಸ್ವಲ್ಪ ಕುಡಿಸಿ

ಇನ್ನೇನು ಮಾಡಲಿ! ಹೊಸೆದೆ
ಗಾಂಧೀ ಮೇಲೆ ಇನ್ನೆರಡು ಕವನ ಬೆಸೆದೆ.

- ಜಯರಾಮ ಹೆಗಡೆ

ಗಾಂಧಿ

ಗಾದಿ ಏರುವವರಿಗೆ
ಗಾದಿ ಏರುವವರೆಗೆ
ಟೊಪ್ಪಿಗೆ ಹಾಕುವವರಿಗೆ
ಟೊಪ್ಪಿಗೆ ಹಾಕುವವರೆಗೆ
ಬೂಟಿನಿಂದ ತುಳಿಯುವವರಿಗೆ
ಬೂಟಿನಿಂದ ತುಳಿಸುವವರೆಗೆ
ಗಾಂಧಿ ಬೇಕು.

ಸುದ್ದಿ ಮಾಡುವವರಿಗೆ
ನಿದ್ದಿ ಮಾಡುವವರಿಗೆ
ಕದ್ದು ಕೇಳುವವರಿಗೆ
ಒದ್ದು ಹೇಳುವವರಿಗೆ
ಗಾಂಧಿ ಬೇಕು.

ಸಮಾಜವಾದಿಗಳಿಗೆ
ನಮಾಜುವಾದಿಗಳಿಗೆ
ಮಜಾವಾದಿಗಳಿಗೆ
ರಾಜವಾದಿಗಳಿಗೆ
ಗಾಂಧಿ ಗುಳಿಗೆ ಬೇಕು.

ಗಾಂಧಿ ಬೇಕೇ ಬೇಕು ಸ್ವಾಮಿ
ಗಾಂಧಿ ಬೇಕೇ ಬೇಕು.

ಸಂಧಿ ಸಾಧಿಸಲಿಕ್ಕೆ
ಮಂದಿ ಕೂಡಿಸಲಿಕ್ಕೆ
ಚಿತ್ರ ಮಾಡಲಿಕ್ಕೆ
ವಿಚಿತ್ರ ಮಾಡಲಿಕ್ಕೆ
ಗಾಂಧಿ ಬೇಕೇ ಬೇಕು.

ಗಾಂಧಿ ಬೇಡ
ಅಹಿಂಸೆಯ ಪುನರಾವತಾರಕ್ಕೆ.
ಪಂಚೆ ಕೋಲಿನ
ಶೇಂಗ ಆಡಿನ
ಚಳುವಳಿಯ, ಚರಕದ, ಕೈ ಎತ್ತಿದ
ಉಪ್ಪಿನ ಸತ್ಯಾಗ್ರಹದ ಗಾಂಧಿ
ಸಕ್ಕರೆ ಸತ್ಯಾಗ್ರಹಕ್ಕೆ ಬೇಡ.
ಗಾಂಧೀವಾದ ಬೇಕು
ಗ್ರಂಥಾಲಯಕ್ಕೆ
ಚೌಕಟ್ಟಿನೊಳಗಿನ ಗಾಂಧಿ ಬೇಕು
ಕಾಂಗ್ರೆಸ್ ಮಂಟಪಕ್ಕೆ
ಗಾಂಧಿ ಹೆಸರು ಬೇಕು
ಸ್ವಾಂತಂತ್ರ್ಯ ಚಳುವಳಿಯ ಪಳೆಯುಳಿಕೆಯಾಗಿ
ಆಶೀರ್ವದಿಸಲಿಕ್ಕೆ ಗಾಂಧಿ ಬೇಕು
ಪ್ರಶ್ನಿಸುವ ಗಾಂಧಿ ಬೇಡ.

ಗಾದಿಗೇರುವದೇ ಈಗ ಗಾಂಧಿವಾದ,
ಮೋಸವೋ ಪಾಸವೋ
ಹಿಂಸೆಯೋ ಅಹಿಂಸೆಯೋ
ಕಾಲು ಹಿಡಿಯುವದೋ, ಕೈ ಹಿಡಿಯುವದೋ
ತಲೆ ತುರಿಸುವದೋ, ನಾಲಿಗೆ ಕಚ್ಚುವದೋ
ಯಾವುದೋ ಬಗೆಯಿಂದ ಸೀಟು
ಹಿಡಿಯಬೇಕು. ಹೋದರೂ ಹೋದಾವು ಒಂದಿಷ್ಟು ;
ಹರಿದೀತು ಸಿಂದಿ

ಇಲ್ಲದಿದ್ದರೆ ಕಾಣೋದಿಲ್ಲ ದೆಹಲಿ
ಗಾಂಧಿ.

ಗಾಂಧಿ, ನೀನು ಬೇಕು.
ನೀನಂದರೆ ನೀನಲ್ಲ
ಅರ್ಥವಾಯಿತಲ್ಲ?

- ಅಲ್ಲಮಪ್ರಭು ಬೆಟ್ಟದೂರು

ಗಾಂಧಿ ಸಿಕ್ಕ

ಖಾದಿ ಭಂಡಾರದಿಂದ
ಹೊರ ಬರುತ್ತಿದ್ದಂತೆಯೇ
ಗಾಂಧೀ ಸಿಕ್ಕ

ಖಾದಿ ಭಂಡಾರದ
ಬಾರಾ ಭಾನಗಡಿಗಳ
ಫೈಲುಗಳನ್ನು ನಗುನಗುತ್ತ ಹೊತ್ತ
ಅವನ ಬೆರಳಿನಲ್ಲಿ ಬಂಗಾರದ ಉಂಗುರ ಮಿಂಚುತ್ತಿತ್ತು

ರಣರಣ ಮಧ್ಯಾನ್ಹ
ಎಂ.ಜಿ. ರಸ್ತೆಯಲ್ಲಿ ಹೇಮಾಮಾಲಿನಿಯ
ಚಿತ್ರ ನೋಡುತ್ತ
ಹಸ್ತ ಮೈಥುನದ
ಕ್ಲಬ್ಬಿನಲ್ಲಿ ಗಾಂಧೀ
ಸಿಕ್ಕಿದ ; ಬೀದಿ ನಾಟಕಕ್ಕೆ
ಹಿರೋಯಿನ್ ಹುಡುಕುತ್ತಿರುವೆನೆಂದು
ಟಸ್‌ಪುಸ್ ಇಂಗ್ಲೀಷಿನ
ಜೀನ್ಸ ಹುಡುಗೆಯರತ್ತ
ನೋಡುತ್ತ ಕಣ್ಣು ಮಿಟುಕಿಸಿದ

ಗಾಂಧೀ ನನಗೆ
ದಿಲ್ಲಿಯ ಸಫದರಜಂಗ ರಸ್ತೆಯಲ್ಲಿ

ಅಡ್ಡಾಡುವಾಗ ಸಿಕ್ಕ ಆ ಜನ
ಅವನನ್ನು ಹಿಡಿ ಹಿಡಿದು
ಒದ್ದಿದ್ದರು ಕುಂಟುತ್ತ
ನರಳುತ್ತ ಅವ
ಪಾರ್ಲಿಮೆಂಟ ಹಾದಿ ಹಿಡಿದ
ರಾಜಘಾಟಿನಲ್ಲಿ ಅಂದೇ ಸಿಕ್ಕ
ಗಾಂಧೀ
ನನ್ನ ಹೆಗಲಿಗೆ ಕೈ ಹಾಕಿ
ಹೇಳಿದ :

ರಾಮ ಸತ್ತಿದ್ದಾನೆ ರಾಮರಾಜ್ಯವೂ ಸತ್ತು ಹೋಗಿದೆ
ರಾವಣನ ರಾಜ್ಯದಲ್ಲಿ ಲಕ್ಷ್ಮಣ ಶೂರ್ಪನಖಿಯರದ್ದೇ
ಸಂಭೋಗ
ಕ್ರಿಯೆ : ಉತ್ತರ
ಅಲ್ಲಿದ್ದ ಸಮಾಧಿಯೆಡೆಗೆ
ನಡೆದು ಮಾಯವಾದ.

— ಸರಜೂ ಕಾಟಕರ

ರಾಷ್ಟ್ರಪಿತನೊಂದಿಗೆ

ರಾಷ್ಟ್ರಪಿತ ಗಾಂಧೀ,
ಇಕಾ,
ಕೊನೆಗೂ ನಿನ್ನ ದಿನ ಬಂತಲ್ಲ
ಒಂದು ರಜಾ ಸಿಕ್ಕಿತಲ್ಲ
ನಿನ್ನ ಹೆಸರಲ್ಲಿ ಎಷ್ಟು ಸಿಹಿ !
ಅಲ್ಲ, ಅಂದು ಉಪ್ಪು ತಯಾರಿಸಲಿಕ್ಕೆ
ನೀನೆಷ್ಟು ಉಪ್ಪು ಬೆವರು ಹರಿಸಿದ್ದು !
(ಈ ಸ್ವೀಟು ಸವಿಯುತ್ತ)
ನೆನೆದರೆ ಆ ಉಪ್ಪಿನ ರುಚಿಯೆ ಹಾಳಾಯ್ತು !
ತಾಯ್ಮಳಲಲ್ಲಿ ಗಂಧದ ಹುಡಿಯಲ್ಲಿ ಬೆರೆತು ಹೋಯ್ತು !
ಜಗತ್ತಿನ ಮೂಲೆಮೂಲೆಯಲ್ಲು
ನೆನಪು ಕೊರೆಯುವುದರಲ್ಲಿ ನೀ ಬಹು ಜಾಣ
ಬಿಟ್ಟು ಹಾಕಲಿಲ್ಲ ಅದಕೇ ನಾವು ನಿನ್ನ-
ಬೇಕಾದರೆ ನೀನೆ ಬಂದು ನೋಡಣ್ಣ :
ನಿನ್ನ ಹೆಸರು ಪಿನ್ನಿಸಿಕೊಂಡವರನೆಲ್ಲ
ನಿನ್ನಂತೇ ಕಂಡಿದ್ದೇವೆ ಪಟ್ಟ ಕಟ್ಟಿದ್ದೇವೆ
ನಿನ್ನ ಶಿಖೆಗೆ ತಾಕುವ ಹಾಗೆ
ಎತ್ತರೆತ್ತರ ಕೊರೆಯಿಸಿದ್ದೇವೆ
ನಿನ್ನ, ಅವರ ಪ್ರತಿಮೆ
ರಸ್ತೆಗಳ ಓಣಿಗಳ ಸಂದಿಗೊಂದಿಗಳಲ್ಲಿ ಚೌಕ-ವೃತ್ತಗಳಲ್ಲಿ

ನಿನ್ನ ಕರಿವಿಗ್ರಹ ನಿಲ್ಲಿಸಿ
ಕಾಗೆ ಹೊಡೆಯಲಿಕ್ಕೆ ಕೋಲು ಕೊಟ್ಟು
ನಿನ್ನ ಮುಸುಕಿದ್ದ ಪರದೆಯನ್ನ ಅನಾವರಣ ಮಾಡಿಸಿದ್ದೇವೆ,
ನಿನ್ನ ನೆನಪು ಮಾಡಿಕೊಡುವ
ಉಪಕಾರದ ನಿನ್ನವರ ಕೈಲಿ.

ಹೊಲೆಬೀದಿಗಳಿಗೆ ನಿನ್ನ ಹೆಸರಿಟ್ಟು
ಕೈ ಒರೆಸಿಕೊಂಡಿದ್ದೇವೆ (ಖಾದಿ ಟವಲಲ್ಲಿ !)
ಶಕಧಾರಿ   ನಿನ್ನ ಸರಕಾರೀ ಕಛೇರಿಗಳಲ್ಲಿ
ಸಾಗುವಾನಿ ಫ್ರೇಮಿನೊಳಗೆ ಭದ್ರವಾಗಿಟ್ಟು ಪ್ರೇಮಿಸಿದ್ದೇವೆ.
(ಮೊಳೆ ಜಡಿದು ಕನ್ನಡಿಯೊಳಗೆ ಹುಗಿದು
ಬಿರುಕು ಕಾಣದ ಹಾಗೆ ಗೋಡೆಗೆ
ಬಡಿದಿದ್ದೇವೆ; ಬಣ್ಣದ ಮಾಲೆ ಗಿಡಿದಿದ್ದೇವೆ)
ನಿನ್ನ ಹೆಸರಲ್ಲೇ ಭೋಜನಶಾಲೆ
ಮದ್ಯದಂಗಡಿ ತೆರೆದಿದ್ದೇವೆ.
ನಿನ್ನ ತಕಲಿಯ ನಕಲಿ ಮಾಡಿದ್ದೇವೆ.
ಖಾದಿಗೆ ಹಾದಿ ತೋರಿಸಿದ್ದೇವೆ
ಐದು ವರ್ಷಕ್ಕೊಮ್ಮೆ ನಿನ್ನ ಹೆಸರೆತ್ತಿ
ಭಾರೀ ನೆಲಗುಮ್ಮ ಪಟಾಕಿ-
ಹಾರಿಸುತ್ತಲಿದ್ದೇವೆ
ಜತೆಜತೆಯಾಗಿಯೆ
ಪಾದಯಾತ್ರೆ ಮಾಡುತ್ತೇವೆ.

ಆದ್ದರಿಂದ, ಹೇ ಮಹಾತ್ಮ!
ಎಲ್ಲ ಅಣಿಯಾಗಿವೆ
ಈ ವೃದ್ಧ ದಶರಥ ಈ ಸುಮಂತ್ರ
ಈ ವಸಿಷ್ಠ ಈ ವಿಶ್ವಾಮಿತ್ರ ಈ ಮಂಥರೆ ಈ ಕೈಕೆ
ಎಲ್ಲ ಕಾಯುತಿದ್ದಾರೆ
ನೀನೆ ಇಲ್ಲದ ರಾಮಾಯಣವೆಲ್ಲಿ?
ಕಲ್ಲಾದ ಅಹಲ್ಯೆ ಏಳಬೇಡವೆ?

ಮಾರುತಿ ಸಮುದ್ರ ಹಾರಬೇಡವೆ?
ರಾವಣ-ವಿಭೀಷಣಾದಿಗಳ ಗತಿ?
ಈ ಯೋಜನೆ ಈ ಯುದ್ಧ ಈ ಹಸಿರುಕ್ರಾಂತಿ
ಈ ಕಾಳಸಂತೆ ವಿಷಮತೆ ಈ ಉಪಗ್ರಹದ ಉಡ್ಡಯನ
ಈ.... ಈ.... ಈ...
ಎಲ್ಲ
ನಿನ್ನ ವನವಾಸಕ್ಕೆ
ಕೈಕೆ ಆದಾರೇ?
ಇಲ್ಲ-
ಬಾ,
ಏರು ಅಧ್ಯಕ್ಷ ಪದ
ಎತ್ತಿ ಒತ್ತು ರಬ್ಬರು ಮುದ್ರೆ.
ನೀ ಬಂದದ್ದೆ ಆದರೆ

ನಾವೆಲ್ಲ ನಿನ್ನ ಬೆನ್ನಾಗಿ ಸತ್ಯಾಗ್ರಹಿಸಬೇಕೆಂದಿದ್ದೇವೆ
ಸ್ವದೇಶೀ ಆಚರಿಸುವುದೆಂದಿದ್ದೇವೆ
ರಾಮಧುನ್ ಹಾಡಬೇಕೆಂದಿದ್ದೇವೆ
ನಿನ್ನ, ಆರ್ಯಭಟದಲ್ಲಿ ಕೂಡ್ರಿಸಿ
ಮಂಗಳಗ್ರಹಕ್ಕೆ, ಏಕೆ,

ನವಗ್ರಹಗಳಿಗೇ ಸೀದಾ
ಮೆರವಣಿಗೆ ಮಾಡಿಸಬೇಕೆಂದಿದ್ದೇವೆ-
ಅಷ್ಟರ ತನಕ ಮುಹೂರ್ತ ಕಾಯುತ್ತೇವೆ.

- ಆರ್ಕೆ ಮಣಿಪಾಲ

ಬಾಪೂಜಿ

೧

ಬಾಪ್ಪಾ
ನೀನು ಪಾಪವಿಲ್ಲದ ಪಿಂಡ
ನೀನೊಂದು ದೊಡ್ಡ ಅವತಾರದ ಗಂಡ
ನಿನ್ನ ಹೆಸರು ಕೇಳುತ್ತಲೇ
ನಮ್ಮೂರ ಮೇ ಬಿಸಿಲ ತಾಪಕ್ಕೆ ಸದಾ
ತಂಪಾಗಿರುವ ಬೇವಿನ ಮರಕ್ಕೆ ನಿನ್ನ
ಸಂಕೇತಿಸಬೇಕೆನಿಸುತ್ತದೆ-
ಬುದ್ಧಿ ಸಿದ್ಧಿಗಳಲ್ಲದೇ ಸಿದ್ಧ ಹಸ್ತರೆನ್ನುವ
ಅಪ್ರಬುದ್ಧ ಪಟ್ಟವೇರಿದ ಬುದ್ಧೂಗಳಿಗೆ ಸಂಬೋಧಿಸಲು ಬಾ
ಬೋಧಿವೃಕ್ಷ ನೀನೆಂದು ಪ್ರಮೇಯ ಸಾಧಿಸುತ್ತೇನೆ.
ಮತ್ತೆ ಉತ್ತರದ ಹೂಣ ಹೂಣಾದಿ ವೈರಿಗಣದ
ಕ್ರೌರ್ಯ ಹೆದ್ದಾರಿಯಲೊಂದು ಎದ್ದು ನಿಂತಿಹ
ನಮ್ಮ ಬಿಳಿ ಹಿಮಾಲಯಕ್ಕೆ ಪ್ರತಿಮಿಸಿ
ಸಹಸ್ರ ಶ್ವೇತ ಹಕ್ಕಿಗಳ ತೂರಿಬಿಟ್ಟಿದ್ದೇನೆ-

೨

ನಾಡವ್ವನ ಗೂಡಿಗೆ ವಲಸೆಬಂದ ಕಾಗೆ ಹದ್ದು ಗಿಡಗಗಳು
ಮುತ್ತಿಕ್ಕಿ ಸಾವಿನ ತತ್ತಿಗಳ ಹೆತ್ತುತ್ತಿರುವಾಗ
ತುಳಿದೆ ನೀ ನಿರ್ಭಯವಾಗಿ

ಮತ್ತೆ ಅವಳ ಎದೆಗೂಡಲ್ಲಿ ಅಡಗಿದ್ದ ಮುನ್ನೂರು
ವರ್ಷಗಳ ಗಾಢ ಗೂಢ ಕತ್ತಲೆಯನೆತ್ತೆತ್ತಿ
ಬಡಿಯಬೇಕೆಂದು
ಪಟ್ಟು ಹಿಡಿದು
ಅಹಿಂಸಾ ಸಾಮ್ರಾಜ್ಯ ಪಟ್ಟವೇರಿದ ನೀನು
ಸುಭದ್ರ ಸೂರ್ಯ
ಅಂತೆಯೇ ಅವಳ ಎದೆಯೆಲ್ಲಾ ಬೆಳ್ಳಂಬೆಳಕು-
ನಿನ್ನ ನೈತಿಕತೆ ಭಾರತೀಯ ಸಂಸ್ಕೃತಿಯ ಪಳಿಯುಳಿಕೆ
ಮತ್ತೆ ರಾಷ್ಟ್ರವೃಕ್ಷದ ಮೂಲ ಬೇರಾಗಿ
ಈ ಮಣ್ಣಿನಲ್ಲಿಳಿದು ಹೋಗಿರುವೆ
ತಾಯಿ ತಂತು ಬೇರು ಬೇರಾಗಿ ಆಳ ಆಳಕ್ಕೂ
ಆ ನೆಲಕೆ ನರನಾಡಿಯಾಗಿ ಸ್ಪಂದಿಸಲು.

೩

ಮಾನವತೆ ಮತ್ತು ಸ್ವರ್ಗಕ್ಕೆಂದೋ ಕಡಿದು ಹೋದ
ನಮ್ಮ ಟೆಲಿಗ್ರಾಫ್ ಟೆಲಿಫೋನ್ ಸಂಪರ್ಕಗಳ
ಮತ್ತೆ ಕಲ್ಪಿಸಿ
ಗಾಳಿಯಲ್ಲೊಂದೊಂದು ಲಾಂಚಿಂಗ್ ಉಡ್ಡಾಣಗಳ ನಿರ್ಮಿಸಿ
ಆಪರೇಟರ್ ಆಗಿ
ಕೆಲಸ ಮಾಡಿದ ನಿನಗೆ-
ಸಂಬಳ ನಮ್ಮ ಸರ್ಕಾರ ಅಥವಾ ನಾವು ಕೊಟ್ಟಿದ್ದೇನು?
ಅದೋ ನಿನ್ನ ಎದೆಗುಂಡಿಗೊಂದು
ಗೋಲಿಗುಂಡು
ಮತ್ತೊಂದು ಮಾತು ಗಾಂಧೀ
"ಸತ್ಯಹೇಳಿದರೆ ನಾಲಿಗೆ ಉರಿಯುತ್ತೆ"
ಎಂಬ ಸಿದ್ಧಾಂತದ ಹಂತಕ್ಕೇರಿದ್ದು
ನಾಲಿಗೆ ಉರಿದರೆ,
ಗ್ಲಿಸರಿನ್ ಹಚ್ಚುತ್ತೇವೆಂದು ಕರೆದು-
ಸೈನೈಡ್ ಹಚ್ಚಿ ಸೈ ಎನಿಸಿ ಕೊಳ್ಳುತ್ತಿದ್ದೇವೆ - ಸೈತಾನ
ಕುಲದವರು-

ಇದೀಗ ನಿನ್ನ ಶತಮಾನೋತ್ಸವ ಆಚರಿಸಿ
ಶತಾಬ್ದಿ ದೀಪ ಹಚ್ಚಿದ ನಾವು
ಹಂತ ಹಂತವಾಗಿ ಕಂತು ಕಂತಾಗಿ ನಿನ್ನ
ಹತಮಾಡುತ್ತಿದ್ದು 'ಹತಮಾನೋತ್ಸವ' ಎಂದು ಎಚ್ಚೆತ್ತರೂ
ನಿರುಪಾಯ

ಕತ್ತಲಿನ ಈ ಕಾಡ ನಾಡಲ್ಲಿ
ರಕ್ತಕುಂಭಗಳೇ ತುಂಬಿರುವ ಅರವಟ್ಟಿಗೆ
ಮನುಷ್ಯ ಮನುಷ್ಯ ಸರ್ಪಗಳ ಮೃತ್ಯು ಹಾಸಿಗೆಗಳು
ಮುಟ್ಟಿದರೆ ಮುನಿ ಬಳ್ಳಿ
ಬೆರಳು ತಟ್ಟಿದರೆ ವಿಷ ಬಳ್ಳಿ ಗಾಂಧೀ
ಇನ್ನೆಲ್ಲಿ ಕಲ್ಪವೃಕ್ಷ ಕಾಮಧೇನುಗಳು?
ಈ ನಿನ್ನ ಒಣ ಭಾರತದಲ್ಲಿ?
ಹಿಂಡಿ ಹಿಪ್ಪೆಯಾಗಿ ಸಪ್ಪೆಯಾದ ಕಪ್ಪು ಸಂಸ್ಕೃತಿ,
ಯಾರಿಗೆ ಬೇಕಯ್ಯ ಇಂತಪ್ಪನಾಡು
ಹೆಮ್ಮೆಯೊಂದನೇ ನಂಬಿ ಎಮ್ಮೆಗಳಾಗಿ ತಿಂದು
ತಿಂದುಕೊಬ್ಬಿದ್ದೇವೆ ಅರ್ಥ ಶೂನ್ಯರಾಗಿ

೪

ಏನು ಮಾಡಬೇಕಯ್ಯ ಗಾಂಧೀ
ನೀ ಮಾಡಿದ ಪುಣ್ಯವೋ-
ನಮ್ಮ ಪಾಪವೂ ಇನ್ನಾರ ಶಾಪವೋ
ತತ್ವಜ್ಞಾನದ ಮಾತು- ನೀ ನಿತ್ಯವೂ ಸತ್ಯ ಎನ್ನುವುದು
ವಿಜ್ಞಾನದ ಮಾತು
ನೀ ಸತ್ತೀಯೆನ್ನುವುದು ಮೂರ್ಖರ ಮಾತು
ನೀ ಇನ್ನೂ ಇರುವಿ ಎನ್ನುವುದು ಇದ್ದವರ ಮಾತು ಗಾಂಧೀ
ಏನು ಮಾತಾಡಿದರೂ ನಾವೆಲ್ಲ
ಗಂಧವಿಲ್ಲದ ಸಂಧಿವಾತದ ಮಂದಿ.

- ಗವಿಸಿದ್ಧ ಎನ್. ಬಳ್ಳಾರಿ

ಗಾಂಧೀ

ನಮ್ಮಪ್ಪನ ಕಾಲದಾಗ
ಗ್ವಾಡಿಗಿ ತೂಗ ಹಾಕಿದ
ಮುದುಕನ ಫೋಟೋ ಸುತ್ತ
ಜೇಡಿಟ್ಟು ಜೇಡರ ಹುಳಕ್ಕೆಲ್ಲ
ಆಶ್ರಯವಾದದ್ದು ನೋಡಿ
ಸಾಬರಮತಿ ನೆನಪಾಯಿತು.

ನಾ ಹುಟ್ಟುದಕ್ಕಿಂತ ಮೊದಲಽಽ
ಸತ್ತ ಹ್ವಾದ ಮುತ್ಯಾನ ಆದರ್ಶ
ಒಂದೋಂದ ಓದಿದಾಗ
ಕಣ್ಣಾಗ ನೀರ ಬರತಾವ

ಪಾಪ! ನಮ್ಮ ಸಲುವಾಗಿ ಅಂದ
ಹೊಟ್ಟಿ ತುಂಬ ಉಣಲಿಲ್ಲ
ಉಡಲಿಲ್ಲ ಅಂತ ಕೇಳಿದಾಗ
ಹಸಿವು ಹಿಂಗಿ ಹೋಗತದ

ಇವತ್ತು ಅವನ ಭಕ್ತರೆಲ್ಲ ಕೂಡಿ
ಅವನ ಹೆಸರ್ಲೆಬಟ್ಟೆ ಹಾಕಿ
ಹೊಟ್ಟಿ ಬೆಳೆಸಿದ್ದು ನೋಡಿ
ಮೈ ಉರದಂಗ ಆಗತದ
ಆ ನಮ್ಮ ತಾತ

ಸ್ವಾತಂತ್ರ್ಯ ತಂದು ಕೊಟ್ಟು
ಸುಖವಾಗಿ ಇರ್ರಿ ಅಂತ ಹೇಳಿಹ್ವಾದ

ಆದರ
ಆ ಸುಖಾ ಕನಸಿನ್ಯಾಗೂ ಬರಲಿಲ್ಲ
ಅವನ ರಾಮರಾಜ್ಯ
ರಾವಣರ ಪಾಲಾಯಿತು

ಮತ್ತ
ಆತ ಹೇಳಿದ ಮಾತ ಕೇಳಿ
ಇವರಿಗೆ ಹಿಂಸೆ ಆಗತದ
ಅವನ ಸತ್ಯ ಇವರಿಗೆಲ್ಲ
ಚುಚ್ಚು ಮುಳ್ಳ ಆಗೇದ
ಅವನ ಮಾತಂತೂ
ಗಾಳ್ಯಾಗ ತೇಲಿ ಹೋಗ್ಯಾವ
ಅವನ ಫೋಟೊ ಮಾತ್ರ
ಸೆರೆ ಸಿಂದಿ ಅಂಗಡ್ಯಾಗ ಜೋತ್ಯಾಡತಾವು
ಆ ಅಜ್ಜಅಕಸ್ಮಾತ್
ಇನ್ನೊಮ್ಮೆ ಹುಟ್ಟಿ ಬಂದ್ರ
ಅವನs ಇವರಿಗೆಲ್ಲ
ಗುಂಡ ಹಾಕತಾನಂತ
ನನಗೀಗ ಖಾತ್ರಿ ಆಗೇದ

– ಸರಸ್ವತಿ ಚಿಮ್ಮಲಗಿ

ಗಾಂಧೀಜಿಗೆ

ನಿನ್ನ ಹಿಡಿದಿಡಲು ಹೆಣಗಿದ್ದೇನೆ
ಪುಸ್ತಕಗಳ ಪುಟ ಪುಟಗಳಲ್ಲಿ ಕಣ್ಣು ಕಿತ್ತಿಟ್ಟಿದ್ದೇನೆ
ಮನಸ್ಸು ಹರಿಯಬಿಟ್ಟಿದ್ದೇನೆ- ದಕ್ಕಲಿಲ್ಲ ನೀನು-
ನನ್ನಾಲೋಚನೆ ಸುಳಿ ಜಾಡ ಹಿಡಿಯಲಿಲ್ಲವಿನ್ನೂ;

ತಳವಿರದ ಆಳದಿಂದ ತಳಮಳದೆದೆ
ನಿನ್ನ ಹೆಸರ ಹೊಸೆಯುವಲ್ಲಿ ಹರುಕಲಾಗಿದೆ;
ಆ ಚಿಂದಿಯಲ್ಲಿ ನಮ್ಮ ಬೆತ್ತಲೆ ಮಾತ್ರ ಬೆಳಕಾಗಿದೆ
ನಮ್ಮ ನಾಡಿನ ಹೊಲಸು ಮಸುಕಾಗಿದೆ.
ಮಸುಕಾದ ಹೊಲಬಿನಲ್ಲಿ
ನಿನ್ನ ತೇಜ ಗಿಳಿ ಗಾಳಿಯಲ್ಲಿ ಹಾರುತ್ತಿದೆ,
ಸುಳಿವು ಸಿಗದು ನನಗೆ-
ಆಗಾಗ್ಗೆ ನಿನ್ನ ಸಲೀಸು ನಗೆ ಮಾತ್ರ ಎಚ್ಚರಿಸಿದೆ

ಹಳಸಲು ಸ್ವತ್ತು ಕತ್ತೆತ್ತಿ
ಎಡಬಲದಲ್ಲಿ ನಿನ್ನ ಗುಣಗಾನ ಕೆತ್ತಿ
ಎಳೆದಾಡಿದ್ದೇವೆ ಬಡಿದಾಡಿದ್ದೇವೆ ನಾವು ನಾವೇ
ಮಾತೆತ್ತಿದರೆ ಸತ್ಯಾಗ್ರಹ
ಮುರುಕು ಮೆರೆವಣಿಗೆ ಮಾಡುತ್ತ
ನಿನ್ನ ನೈಜತಲೆ ಕಡಿದು ತಂದೆಯೆಂದಿದ್ದೇವೆ.

ಹೀಗೆ ನಾರುತ್ತ ನಿನ್ನ ಗದ್ದುಗೆಗೆ ಬೆಂಕಿ ಬಸೆಯುತ್ತ
ಮಸಲತ್ತು ನಡೆಸಿ ನಿನ್ನ ಹೂಳಿದ್ದೇವೆ
ನಾವು ಊಳಿಟ್ಟಿದ್ದೇವೆ,
ನಿನ್ನುಪದೇಶವೆಂದು ಬೆಳಗಿನಿಂದ ಸಂಜೆಯತನಕ
ಹಾಡಿದ್ದೇವೆ ನಿನ್ನ ಹೆಸರನ್ನು ಊರು ಕೇರಿ ಕಛೇರಿ
ಬಾರು ಸೆಲೂನಗಳಿಗಿಟ್ಟು ತುತ್ತೂರಿ ಊದಿ
ಊದುಬತ್ತಿ ಹಚ್ಚಿದ್ದೇವೆ.
ನಮ್ಮ ನಮ್ಮ ಶಾಲೆಕಾಲೇಜುಗಳಲ್ಲಿ
ಸೌಧ ವಿಧಾನಸೌಧಗಳಲ್ಲಿ
ನಿನ್ನ ತೂಗು ಹಾಕಿ ನೇತು ಬಿಗಿದ್ದೇವೆ
ನಿನ್ನ ತತ್ವಗಳಿಗೆ ನೇಣು ಕಾಣಿಸಿದ್ದೇವೆ-
ಕಣಿಯಾಗಿಸಿದ್ದೇವೆ.
ನಿನ್ನ ಪಟದೆದುರಿಗೆ ನಿನ್ನ ಬದುಕು ಬದುಕಲಾರದ ನಾವು
ಬದಿಗೆ ನಿಂತಿದ್ದೇವೆ.

ನಿನ್ನ ಮಾತುಗಳ ಮರೆತು
ನಾವೇ ಹಮ್ಮೀರರಾಗಿ ಮಾರಕವಾಗಿದ್ದೇವೆ
ನಿನ್ನ ಸತ್ಯದ ಹೆಸರ ಹೋಳಿಯಾಡಿ
ಸರಳತೆ ಧೂಳಿಪಟಮಾಡಿ
ನಿನ್ನ ಹೆಸರಿನಕ್ಷರಗಳ ಸಿಗಿದು ತೋರಣ ಕಟ್ಟಿ ನಿನಗೆ
ಗುಡಿ ಕಟ್ಟಿದ್ದೇವೆ-
ನಿನ್ನ ಮುಂದೆ ಹೊರಳುವ ಅಪಚಾರವೆಸಗುವ
ಅರಚುವ ಕರ್ತವ್ಯ ನಮಗೆ.

ಹೀಗೆ ಈ ಯುಗದ ಗಾಳಿ ಗೂಳಿಯ ಹಾಗೆ ಮೇಲೆ
ಬೀಳುತ್ತಿರುವಾಗ ಹೇಗೆ ದಕ್ಕುತ್ತೀಯಾ ನೀನು?

- ದೊಡ್ಡರಂಗೇಗೌಡ

ದೀಪ ನಂದಿದೆ

ನೀ ಸತ್ತು ದೀಪ ನಂದಿಯಾದ ಮೇಲೆ ಬಂದೆ ನಾ
ನೀ ಸತ್ತದ್ದು ಹಳೆಯ ಮಾತಾಗಿ, ಗೋಡೆ ಗೋಡೆಗೆ
ನೇತು ಬಿದ್ದ ನಿನ್ನ ಭಾವ ಚಿತ್ರಗಳ ನಗೆಯಾಗಿ
ದುಡ್ಡಿನ ಡಬ್ಬಿಗಳು ಧ್ವಜದ ಹಗ್ಗವನ್ನೆಳೆದರೆ
ಕೆಳಗೆ ರಂಗವಲ್ಲಿಯ ನಿನ್ನ ಚಿತ್ರಕ್ಕೆ ಹೂ ಮಳೆಯಾಗಿ
ನಮ್ಮ ಚಪ್ಪಾಳೆಗಳ ಸುರಿಮಳೆಯಾಗಿ
ಅಜ್ಜ ಕೈ ಮುಗಿವ ಈಶ್ವರನ ಮೂರ್ತಿಯಂತಾಗಿ ನೀ-
ನನಗೆ ಬುದ್ಧಿ ತಿಳಿದಿತ್ತು.

ಆಗ ಹಚ್ಚ ಹಸಿರು ಹುಡುಗ ಗುಂಪಿನೊಡನೆ
ನಿನ್ನ ಜಯಕಾರ ಪ್ರಭಾತಫೇರಿ, ನಿನ್ನ ಹೆಸರೆತ್ತಿದರೆ
ಎದೆಯುಬ್ಬಿ ಅಭಿಮಾನ ಸಂತಸ ಪುಳಕಗೊಳ್ಳುತ್ತ
ಅರಿತೆ ನೀ ಉರಿಸಿದ್ದ ದೀಪದ ಬೆಳಕ
ನಿನ್ನ ಕಾಣದೆಯೂ ಕಂಡಿದ್ದೆ ನಿನ್ನ ಕಥೆ ನನ್ನ ತಲೆ ಹೃದಯಗಳ
ಮೆತ್ತಿ ಮಾತು ಹಾಡು ನೋಟಗಳ ತುಂಬಿತ್ತು ನಿನ್ನ ಬಣ್ಣ
ಕಲಿತ ಹುಡುಗ ನಾನು ಬೆರಗಾದೆ
ಮಾವ ಹೊಲೆ ಯಮುನನನ್ನು ಹುಣಸೆಮರಕ್ಕೆ ಕಟ್ಟಿ
ಬಾರಕೋಲಿನಿಂದ ಬಾರಿಸಿದ್ದ
ಅವನ ಅಳುವೆ ನಾನಾಗಿ ಅತ್ತೆ
ಹುಚ್ಚನೆಂದರು ನನ್ನನ್ನು ನೆರೆದವರು

ಬಿಡಿಸಿಕೊಳ್ಳಲಿಲ್ಲ ಯಾರೂ
ಮಾನಭಂಗದ ಸಭೆಯಲ್ಲಿ ಕೌರವರೇ ಎಲ್ಲ
ಯಾವ ಕೃಷ್ಣನೂ ಕಾಯಲಿಲ್ಲ ನಿನ್ನ ರಾಮನೂ ಬರಲಿಲ್ಲ
ಬಂದವರು ಪೋಲಿಸರು ಯಮುನ ಜೈಲಿನಲ್ಲಿ
ಅವನ ಹೆಂಡತಿ ಮಾವನ ಸೂಳೆತನದಲ್ಲಿ
ಎಲ್ಲವೂ ನೀ ಬದುಕಿ ಸತ್ತ ನಾಡಿನಲ್ಲಿ.

ಕೊಲೆಯಾಯಿತು ಗಾಂಧಿ ನಿನ್ನ
ನನ್ನ ಹೂಭಾವಗಳ ಬಣ್ಣಗಳ ಕಲ್ಪನೆಗಳ
ಕನಸುಗಳ ಕೊಲೆಯಾಗುವುದು
ಕೂಗುವಾಗಲೆಲ್ಲ ನಿನ್ನ ಜಯಕಾರಗಳ.

ಹೇಳಿ ಬಿಡಲೆ ಸುದ್ದಿ?
ನಾಡಿನ ಪಂಖಗಳೆಲ್ಲ ನಿನ್ನ ಹೆಸರಿನ ಗಾಳಿಯನ್ನೇ ಬೀಸಿ
ನಿನ್ನ ಬಡ ಬೋರೆಗೌಡ ಬೆವರ ಸೂಸಿ
ನಾಡ ತೋಳ ನರಿ ಮಿಕಗಳಿಗೆಲ್ಲ ಉಣಬಡಿಸಿದ್ದು
ಐದು ವರ್ಷಗಳಿಗೊಮ್ಮೆ ಐದು ರೂಪಾಯಿಗೊಂದು ಓಟು
ಮಾರಿದ್ದು
ಉಪದೇಶಗಳ ಪ್ರಜಾಪ್ರಭುತ್ವದ ಹೊಳೆ ಹರಿದು ಅದರ
ರೇವಿನಲ್ಲೇ
ಪ್ರಜಾಪ್ರಭುತ್ವದ ಸಸಿ ಹೆಮ್ಮರವಾಗಿ ಬೆಳೆದದ್ದು.
ಯಮುನನನ್ನು ಕಟ್ಟಿದ ಹುಣಸೆಮರದ ನೆನಪಾಗುತ್ತದೆ
ಮತ್ತೆ ಹುಣಸೆಮರದಲ್ಲಿ
ಏಳು ಮಕ್ಕಳ ತಾಯಿ ವಾಸಿಸುವಳಂತೆ
ಈಗಲೋ ಮಾತು ಕಡಮೆಯಾಗಿ ಮೌನ ಹೆಚ್ಚಾಗಿ
ನಾವು ಉಚ್ಚಾರ ಮರೆತಿದ್ದೇವೆ
ಅಂತೆಯೇ ನಿನ್ನ ಅಹಿಂಸೆಗೆ ಪ್ರತಿಭಟನೆಗೆ
ಕನಸುಗಳಿಗೆ ಕಾಮಣಿಯ ಬಣ್ಣ ಬಳಿದಿದ್ದೇವೆ
ಆದರೂ ನಾವು ಅಕ್ಷರ ಕಲಿತಿದ್ದೇವೆ.

ನೀನೊಂದು ಸ್ಮೃತಿ ಮಾತ್ರವೀಗ
ಏನೆಂದು ಹೇಳಲಿ ನನ್ನ ಭಾವಗಳನ್ನು
ಹೊಗಳುವೆನು ನಿನ್ನ ಬದುಕೆಂಬ ಒಂದೇ ಒಂದು
ಪವಾಡಕ್ಕೆ ಕೊಂಡಾಡುವೆನು ಪ್ರತಿಭಟನೆ ಕಲಿಸಿದ್ದಕ್ಕೆ
ಮರುಗುವೆನು ಮಗ್ಗುಲಲ್ಲಿದ್ದವರನ್ನೂ ಬದಲಿಸದ್ದಕ್ಕೆ
ದ್ವೇಷಿಸುವೆನು ನಿನ್ನಂಥವರನ್ನು ನಂಬಿದ್ದಕ್ಕೆ.
ನಿನ್ನ ಅಹಿಂಸೆಗೆ ಕೆಂಪು ಬಳಿದು ದೀಪ ನಂದಿತು ಆಗ
ಈಗ ಕತ್ತಲ ಕೊಲೆ ಮನೆಯಲ್ಲಿ ಜೋರಾಗಿ ಅಳುವುದಿಲ್ಲ
ನಿನಗಾಗಿ ಅಳು ನಗುಗಳನ್ನು ಗುರುತಿಸಿ ಚಹರೆ ಪಟ್ಟಿ
ಕಟ್ಟುವ ಸಾಧನಗಳುಂಟು ಈ ಕತ್ತಲೆ ರಾಜ್ಯದಲ್ಲಿ.

ಆದರೂ ಒಂದು ಸಿಹಿ ಮೆತ್ತಿರುವ ಸುದ್ದಿ, ನಿನ್ನ ಹೆಸರು
ಸತ್ತಿಲ್ಲ
ಅಮರವಾಗಿದೆ ಈ ನಾಡಿನಲ್ಲಿ
ಅದನ್ನು ತಲೆ ಮೇಲೆ ಹೊತ್ತೇ ರಾಜ್ಯವಾಳುವರು
ಈಗಲೂ ಈ ಹೊತ್ತಿನಲ್ಲಿ.

– ಜಗದೀಶ ಮಂಗಳೂರಮಠ

ಕತ್ತಲ ನಡುವೆ ದೀಪ

೧

ಎಣ್ಣೆಬಸಿಯುವ ಹರಯದುಕ್ಕಿನ ಮೀಸೆ ಮುಖ ಗಾಂಧಿಗೆ
ಹೊಗೆಕಾರುವ ಉಗಿಬಂಡಿಯ ಪಯಣದುದ್ದಕೆ
ಆಫ್ರಿಕದ ಕಪ್ಪುನೆಲ ಆಕ್ರಮಿಸಿದ ಕೆಂಪು ಮೋತಿಗಳಿಂದ
ಅನಿರೀಕ್ಷಿತ ಅವಹೇಳನ, ಒದೆತ ಭರ್ತ್ಸನೆಯ
ಚಾಟಿ ತಿವಿತ, ಕಂದು ಚರ್ಮದ ಗಾಂಧಿಗೆ
ಕತ್ತಲ ಖಂಡದ ಗುಲಾಮೀ ನಾಡಿನಲ್ಲಿ
ಹೋದ ಶತಮಾನದ ಕೊನೆ ಕೊನೆಯಲ್ಲಿ.
ಬಿಳಿ ದೊಣೆಯರ ನಿರ್ಲಜ್ಜ ಚೂರಿ ನೋಟ
ಗಾಂಧಿಯ ಮೆದು ಮನಸು ತಿವಿದುದು
ಆಕಸ್ಮಿಕದ ಹೂಟವಲ್ಲ.

೨

ಕೆಂಬಣ್ಣದ ಜೀವಂತ ಭೂತಗಳ ಸ್ನಾನಕ್ಕೆ
ನಿತ್ಯಕರಿದೇಹಿಗಳ ಬೆವರ ನೀರು,
ಬೀದಿಗುಡಿಸಲಿಕ್ಕೆ ಬಿಳಿಮನೆಗಳು ಇನ್ನಷ್ಟು
ಶುಭ್ರ ತೊಳೆದಿಡಲಿಕ್ಕೆ ಬಟ್ಟೆಗಳ ಒಗೆದು
ಇಸ್ತ್ರೀ ತೀಡಿ ಇಂಗ್ಲೀಷು ದರ್ಪವ ನೀಟಡಲಿಕ್ಕೆ
ಸದಾಸಿದ್ಧ ಕರಿಮೈಗಳಿಗೆ ಮೈಮುರೀ ದುಡಿತ.

ಬಣ್ಣದಂತಸ್ತೂ ಕಡೆಗಣಿಸಿ ಮನುಷ್ಯ
ಸಹಜ ಸ್ವಾತಂತ್ರ್ಯ ಸಮತೆ ಬಂಧುತ್ವ
ಕಾಳಜಿಯ ಉಸಿರ ಹೊಮ್ಮಿಸಿದರೂ ಕಪ್ಪು ಮಂದಿ
ಭುಗಿಲೆದ್ದ ಬಿಳಿಯರ ದಮನದುರಿಯಲ್ಲಿ ಸಜೀವ ದಹನ.
ಸಭ್ಯ ಇಂಗ್ಲೀಷು ಬೆಂಕಿಯಲ್ಲಿ ಕಪ್ಪು ಮೈ
ಬೂದಿಗೊಂಡಾಗಲೇ ಕೋಪದುಪಶಮನ.

೩

ವಿಚಿತ್ರ ಬಣ್ಣ, ವಿಲಕ್ಷಣ ಮೇಲು ಕೀಳುಗಳ
ಭಾರತದಲ್ಲಿ ಹುಡುಗ ಗಾಂಧಿ
ಬಣ್ಣಗಳ ಬೆಡಗು, ಬಣ್ಣದಣ್ಣಗಳ ಬಡಿವಾರ
ವರ್ಣ ವಿವರ್ಣದ ಭೇದ ಕಂಡೂ,
ಬಣ್ಣದುರಿಯ ಬಿಸಿ ತಾಗಿಸಿಕೊಂಡಿದ್ದನೆ?
ಸ್ಪೃಶ್ಯಾಸ್ಪೃಶ್ಯತೆಯ ಅನುಭವದಲ್ಲಿ ವಿಸ್ಮಯಗೊಂಡಿದ್ದ
ವಿಷಣ್ಣತೆಯಲಿ ಕರಗಿದ್ದ ಲೊಚಗುಟ್ಟಿ ಕೊರಗಿದ್ದ.

ಅಪಮಾನ ತುಳಿತ ಚಾರಿತ್ರ್ಯ ಕೊಲೆಗಳುಲ್ಲೇಖ
ಇತಿಹಾಸದಲಿ ಓದಿದ್ದು
ಪರೀಕ್ಷೆಗೆ ಬರೆದಿದ್ದ ಪಾಠವಾಗಿತ್ತು ಗಾಂಧಿಗೆ
ಅಂತೆ ಕಂತೆಯ ಪುರಾಣವಾಗಿರಬೇಕು ಹುಡುಗ ಗಾಂಧಿಗೆ
ಆವರೆಗೆ, ಬೆಳಕಿನ ನಡುವಿದ್ದ ಕತ್ತಲೆ
ಗಾಂಧಿ: ನೀಚರ ನಡುವಿನ ಸಂತ.

೪

ಬಿಳಿಕುಲದ ಭರ್ತ್ಸನೆ ಕಿಡಿ ತಾಕಿದ ಆ ಗಳಿಗೆ
ಉಜ್ವಲ ಕ್ಷಣ ಭಾರತದ ಪಾಲಿಗೆ.
ಮುದುಡಿದ್ದ ಮಡಿಚಿದ್ದ ಗಾಂಧಿ ಸ್ವಾಭಿಮಾನದ
ಬತ್ತಿ ಸೆಟೆದದ್ದು ಚೈತನ್ಯದುರಿ ಹೊತ್ತಿ ದೀಪವಾದದ್ದು.

ಆ ದೀಪದುರಿ
ದಮನ ನೀತಿಯ ವಸಾಹತುಶಾಹೀ ಬಣವಿಗೆ
ಕೊಳ್ಳಿಯಾದದ್ದು ಶತಮಾನದಿಂಡಿಯಾ ಹಿಮಬಂಡೆಗೆ
ಬಿಸಿ ತಾಗಿಸಿದ್ದು
ಜಾಡ್ಯ ಕರಗಿ ತಲೆಮಾರಿನುದ್ದಕೂ
ಹೊತ್ತು ಉರಿದದ್ದು ಕತ್ತಲ ನಡುವಿನ ದೀಪ.
ಜಾಜ್ವಲ್ಯಮಾನ ಪುರುಷಾರ್ಥ ಗಳಿಕೆ ಭಾರತಕ್ಕೆ.

– ಶ್ಯಾಮಸುಂದರ ಬಿದರಕುಂದಿ

ಕಸ್ತೂರಿಯ ಕಂಪು

ಪ್ರೀತಿಯ ಗೆಳತೀ,
ಸಂಪಾದಕರು ಕೇಳಿದರೆಂದು
ನೀನು ಗಾಂಧೀಜಿಯ ಬಗ್ಗೆ ಬರೆಯುತ್ತಿದ್ದೀಯಲ್ಲ,
ಆದರೆ ಮೋಹಕ್ಕೆ ದಾಸಾನುದಾಸನಾಗಿದ್ದವನು
ಮಹಾತ್ಮನಾಗಿ ಮುಗಿಲುದ್ದ ಬೆಳೆದಾಗ
ಕಾಮವಳಿದ ಕಸ್ತೂರಿಯ ಕಂಪಾದೆ? ನಾನಾಗ
ಈ ಪರಿಮಳದಲ್ಲೇ ಅರಳಿ ಹೆಮ್ಮರವಾದ
ಇವನ ನೆಲದಡಿಯ ಬೇರು ನಾನಲ್ಲವೇ?
ಹಲವು ಹನ್ನೊಂದು ಪ್ರಯೋಗಗಳಿಗೆ
ಪಶುಬಲಿಯಾದವಳು ನಾನು
ಪಶುಪತಿಯಂತೆ ಪೂಜೆಗೊಂಡವನು ಅವನು
ಲಂಗದಾವಣಿಯ ನನ್ನ ನಿರಿಗೆಗಳಿಗಿನ್ನೂ
ಪುರುಷ ಸನ್ನಿಧಿಯ ಪಾರಮ್ಯದರಿವಿರಲಿಲ್ಲ
ಆಟದಂಗಳದಲ್ಲಿ ಕುಣಿದು ಕುಪ್ಪಳಿಸುತ್ತಿದ್ದ
ಎಳೆಯ ಬಾಲೆಯನ್ನೆಳೆತಂದು
ಎಡೆಬಿಡದೆ ಹಿಂಡಿ-ಹಿಪ್ಪಿ ಮಾಡಿದ ಇವನು
ಕಾಮಕಸ್ತೂರಿಯ ಕಂಪು ಕಂಪಿಸುವಾಗ ಕೈ ಬಿಟ್ಟನಲ್ಲ !
ಕರೆವಾಗಲೂ, ತೊರೆವಾಗಲೂ ನನ್ನ-
ನೊಂದು ಮಾತು ಕೇಳಿದನೇನೀ ಮಹಾತ್ಮ?
ಪುಟ ಪುಟಗಳಲ್ಲೂ ಬಿಚ್ಚಿಕೊಂಡಿದ್ದಾನೆ ಬದುಕ ಸಂಪುಟದಲ್ಲಿ

ಅಕ್ಷರಕ್ಷರವನ್ನೂ ಬಿಡದೇ ಕ್ಷಣ-ಕ್ಷಣಕೂ ಲೆಕ್ಕವಿಟ್ಟಿದ್ದಾನೆ
ನಾನು? ಈ ಕಿಕ್ಕಿರಿದ ಅಕ್ಷರಗಳ ಸಂತೆಯೊಳಗೆ
ಸ್ವರ ಸಮೇತ ಕಳೆದುಹೋಗಿದ್ದೇನೆ
ಚರಿತ್ರೆಯ ಸಾಲುಗಳಲಿ ಸಲ್ಲದೇ
ಮಾತುಕ್ಕುವ ಮೂಕಿಯಾಗುಳಿದೆನಲ್ಲ
ಇದಕ್ಕಿಂತ ಹೆಚ್ಚಿಗೇನು ಹೇಳಲಿ?

ನಿನ್ನ ಗೆಳತಿ
ಕಸ್ತೂರಿ

- ಶಶಿಕಲಾ ವೀರಯ್ಯಸ್ವಾಮಿ

ಅಲಿಖಿತ ಕಾದಂಬರಿ ನಾಯಕನ ಕವಿತೆ

ಮುಗಿಲೆತ್ತರ ಮೌನ ಪರ್ವತಗಳ ಹೊತ್ತು
ನಕ್ಷತ್ರ ರಾಜ್ಯಗಳ ಕನಸು ಕಂಡವ ನೀನು

ಬೇರು ಹಾದಿಗಳಲ್ಲಿ ಜೀವಸೆಲೆಗಳಲ್ಲಿ
ಒಡಲಾಳ ಪಾತಾಳದಲ್ಲಿ
ಭೂಕಂಪನಲೆಗಳುಂಡವನು ನೀನು
ಹೀನ ರತ್ನಪ್ರಭೆಯ
ಅಂಗೈ ಅಗಲಕ್ಕೆ ಹಿಡಿದು
ಕತ್ತಲೊಳು ಕವಲು ಕವಲು ಕಂಡವನು ನೀನು

ಪಾತ್ರ ಪಾತ್ರಕ್ಕೆ ಜೀವ
ಸಂಬಂಧ ಸ್ಪರ್ಶಕೊಟ್ಟವನು.
ಕಂಡಂತೆ ಕಾಣದಂತೆ
ಮಾತು ಮಾತಿಗೆ ಮರ್ಮಕೊಟ್ಟವನು

ಸಂಕಟಗಳ ಚಕ್ರವ್ಯೂಹದಲಿ
ಕಂಟಕಗಳ ಕಂಡವನು.
ಪ್ರತಿ ತುತ್ತ ಕುತ್ತಂತೆ
ಕಾಲ ತಟ್ಟೆಯಲ್ಲಿ ತಿಂದವನು

ಇದ್ದಂತೆ, ಇರದಂತೆ
ಹಿಂಡಾನೆ ಕಾರ್ಮೋಡಗಳು
ಅವಿತಿಟ್ಟ ಬೆಳ್ಳಿ ಬೆಳಕು ನೀನು

ಬಂಧಗಳ ನಿರ್ಬಂಧಗಳಲಿ
ಸಂಗಗಳ ನಿಸ್ಸಂಗಗಳಲಿ
ಎಚ್ಚರ ಕನವರಿಕೆ
ಕನಸು ಕಲ್ಪನೆಗಳ ಮೂರ್ತಿ ನೀನು

ಪುಟ ಪುಟಗಳಲ್ಲಿ ಹಟದ
ಮಾತಾಗಿ ಬಂದವನು.
ಮುನ್ನುಡಿಯ ಮರೆಯಲ್ಲಿ
ಹೆಸರಿಲ್ಲದೇ ನಿಂತವನು.

ತಪ್ಪುಗಳ ತಾಲೀಮು
ಮಾಡಿದವನು ನೀನು
ಒಪ್ಪುಗಳಿಗೆ ಸೊಪ್ಪು
ಹಾಕದವನು ನೀನು

ಬರೆದಿಲ್ಲ ಅಕ್ಷರಕ್ಷರಗಳಲಿ
ಮೂಡಿಲ್ಲ ; ಕಣ್ಣುಬಿಟ್ಟಿಲ್ಲ
ಸತ್ತಿಲ್ಲ, ಸದ್ದಿಲ್ಲದ
ಸತ್ಯದ ಸೂತ್ರ ನಾಯಕ ನೀನು

ವರ್ತಮಾನದ ವಾರಸುದಾರ
ಭೂತಗಳ ಅಂತಿಮ ದೊರೆ
ಭವಿಷ್ಯದ ಪ್ರಣಾಳ ಪಿಂಡ.
ಕಾಲಾತೀತ ಕನಸುಗಾರ ನೀನು.

ಹರಿವ ನದಿಯ ದಿಕ್ಕಿಲ್ಲದ ತೆಪ್ಪ
ತೇಲುತ್ತ ಮುಳುಗುತ್ತ
ಮುಟ್ಟಿಲ್ಲ, ನಿನ್ನೆದೆಯ ದರ್ಶನದ ದಿಕ್ಕು
ಆರಂಭ ಅಂತ್ಯ, ಅಗಣಿತ ಶೂನ್ಯ
ಏನೆಂದರೂ ಲೆಕ್ಕ ಹತ್ತದ
ನಿರಾಳ ನಕ್ಷ ನೀನು

– ಸತೀಶ ಕುಲಕರ್ಣಿ

ರಾಷ್ಟ್ರಪಿತನಿಗೊಂದು ಕಿವಿಮಾತು

ತಂದೆ,
ಈ ಪುಣ್ಯ ಭೂಮಿಯಲ್ಲಿದ್ದರಂತೆ
ಶ್ರೀರಾಮ, ಕೃಷ್ಣ, ಬುದ್ಧ ಶಂಕರ ಮಹಾವೀರ
ಅದಕ್ಕಾಗಿಯೇ ನಾವು ಶ್ರದ್ಧೆಯಿಂದ ಆಚರಿಸುತ್ತೇವೆ.
ಶ್ರೀರಾಮ ನವಮಿ, ಗೋಕುಲಾಷ್ಟಮಿ ಆ ಜಯಂತಿ ಈ ಜಯಂತಿ.
ಇದೀಗ ನೀನೂ ಸೇರಿದೆಯೊ 'ರಂತೆ' ಜಯಂತಿಗಳನಂತ ಮಾಲೆಗೆ
ಇನ್ನು ಭಯವಿಲ್ಲ;
ನೀನು ನೀನೇ, ನಾವು ನಾವೇ,

ನೀನು ಎಷ್ಟು ಹೊಸ ಹೆಸರುಗಳ ತುಂಬಿದೆಯಲ್ಲ ನಮ್ಮ
ಭಂಡಾರಕ್ಕೆ ಹರಿಜನೋದ್ಧಾರ, ಸರಳ ಜೀವನ ಇಚ್ಛಾ ಬಡತನ,
ದರಿದ್ರ ನಾರಾಯಣ!
ಈಚೀಚೆ, ನಮಗಿರಲಿ, ನಮ್ಮ ದೇವರುಗಳಿಗೂ
ಹರಿಜನರೆಂದರಕ್ಕರೆ
ಎಂದು ಸುದ್ದಿ ಓದಿದ್ದೇವೆ! *
ಅವರಿಗಷ್ಟಿಷ್ಟು ಸವಲತ್ತು ಸೌಲಭ್ಯಗಳ ರುಚಿ ತೋರಿಸಿದೆ ನೀನು
'ಪಾನ ನಿರೋಧ'ವೆಂಬ ತಗಡಿನ ತಳಕೆ ತೂತುಗಳಕುಟ್ಟಿ ಜರಡಿ
ಮಾಡಿ

---

* ಪದ್ಯದ ರಚನೆಯ ಕಾಲಕ್ಕೆ ಪತ್ರಿಕೆಯಲ್ಲಿ ಪ್ರಕಟವಾಗಿದ ಸುದಿ: ಹರಿಜನನೊಬ್ಬನನ್ನು ಇಷ್ಟಾರ್ಥ ಈಡೇರಿಕೆಗಾಗಿ ದೇವತೆಯೊಂದಕ್ಕೆ ಬಲಿ ಕೊಟ್ಟರೆಂದು.

ನಾವದನು ಪರಿಪೂರ್ಣಗೊಳಿಸುತ್ತೇವೆ ನೋಡುತಿರು.
ಸರಳ ಜೀವನ
ನಾನುಡುತಿಹುದು ಶುದ್ಧ ಖಾದಿ- ಸಿಲ್ಕಿನ ಧೋತ್ರ ಜುಬ್ಬ
ನನ್ನ ಮಡದಿಯೂ ಅಷ್ಟೆ ; ತೋಳಿಲ್ಲದ ಕುಪ್ಪಸ, ಬರಿ ಬೆನ್ನು,
ಬೆತ್ತಲೆಕಟಿ
ಮಗಳಿಗೆ ಬರಿಯ ಚುರಿದಾರ್ ಕಮೀಜ್
ಬೆಳೆದಾಗ ಅವಳೂ ಅವಳಮ್ಮನೇ!
ಮನೆಯಲ್ಲಿ ಅಷ್ಟೆ. ಅವಳಾಸೆಗಳು ಒಂದೊಂದೆ ಬಿಡಿ, ಬಿಡಿ:
ಇಂದು ಮಂಚ, ನಾಳೆ ಫ್ಯಾನು, ನಾಡಿದ್ದು ಸೋಫ, ಆಲ್ಮಿರಾ
ಅದರತ್ತ ಫ್ರಿಜ್ಜು ಬಣ್ಣದ ಟೆಲಿವಿಷನ್ ಇತ್ಯಾದಿ.
ಒಡವೆಗಳನಂತೂ ಆಕೆ ಕೇಳುವುದಿಲ್ಲ, ಅವರಪ್ಪ ಕೊಡಿಸಿದ್ದೆ!
ನಾನು ಒಂದು ಬೈಸಿಕಲ್ ಇಟ್ಟಿದ್ದೆ,
ಈಗಷ್ಟೆ ಸ್ಕೂಟರ್ ಮುಂದೊಂದು ಸಣ್ಣಕಾರು
ನನ್ನ ಮಗಳೂ ಅಷ್ಟೆ ಮುಂದೆ
ನಿನಗಿದ್ದಷ್ಟು ಬಿಡುವೆಲ್ಲಿದೆ ನಮಗೆ ಕಾಲ್ನಡಗೆಗೆ?
ನೀನೇನೊ ಹೇಳಿದ್ದೆ ಹೆಚ್ಚು ಓಡಾಡು, ಹೆಚ್ಚು ದುಡಿ ಎಂದು
ಅದಕಾಗಿಯೇ ನಾವು ಪರಿತಪಿಸುತ್ತೇವೆ ದೊರೆಯದ್ದದ್ದಕ್ಕೆ;
ವಿಹರಿಸುತ್ತೇವೆಎಟುಕದಿಹ ಕಾಂತೆಯರ ಕೌಂಕುಳಲ್ಲಿ
ನೀನು ಹೇಳಿದ ದರಿದ್ರ ನಾರಾಯಣರನಂತೇ ಉಳಿಸಿದ್ದೇವೆ.
ಭಯವಿಲ್ಲ; ಅವರ ತಂಟೆಗೆ ನಾವು ಹೋಗುವುದಿಲ್ಲ
ಇನ್ನು 'ಸತ್ಯಾಗ್ರಹ' ನಮ್ಮ ಹಟಮಾರಿತನಕೆಂಥ ಹೆಸರಿಟ್ಟೆ ನೀನು!
ಮೊದಲಿನಿಂದಲೂ ನಾವು ಷಂಡರೇ ಹೌದಲ್ಲವೋ? ಹಾಗೆಂದೆ
ಒಪ್ಪಿಕೊಂಡಿದ್ದೇವೆ 'ಅಹಿಂಸೆ' ಯನ್ನು ಕೂಡ
ಚಂಡಿಘಡಕಾಗಿ ಚಂಡಿ, ಬೆಳಗಾವಿಗಾಗಿ ಬೆಂಕಿ, ಎಳವಗಿ *

---

* ಮಹಾರಾಷ್ಟ್ರ ಮತ್ತು ಕರ್ನಾಟಕ ನಡುವಿನ ಗಡಿ ವಿವಾದದ ಸಂಬಂಧ ಚಳುವಳಿ ನಡೆಸಿದ ಮಹಾರಾಷ್ಟ್ರದ ಮಂದಿ ಎಳವಗಿಯ ಬಳಿಯಲ್ಲಿ ರೈಲು ಕಂಬಿ ಕಿತ್ತು ಅಪಘಾಡ ಸಂಭವಿಸಿ ಕೆಲವರು ಸತ್ತಿದ್ದರು.

ಗಡಿಯಾಚೆ ಅವನು ನಲವತ್ತೆಂಟು ದಿನ, ಗಡಿಯೀಚೆ
ಇವನು ಅರವತ್ತನಾಲ್ಕು ದಿನ ಅಖಂಡ ಉಪವಾಸ *
ಮಿತಿಮೀರಿ, ಇಬ್ಬರಲ್ಲೊಬ್ಬರು ಕೈಲಾಸಕೇರಿದರೆ
ಆಗಬಹುದಾಗ ಮತ್ತೊಂದು ಅಹಮದಾಬಾದು
(ಹಿಂಸೆಯೋ ಅಹಿಂಸೆಯೋ ಬಲ್ಲವರೆ ಎಲ್ಲ ಹೇಳಬೇಕು:)
ಈ ದಿಗಿಲಿಗೇನಾದರೂ ಸರ್ಕಾರ ಇವನಿಗೊಪ್ಪಿದರೆ ಗೆದ್ದಿತು
ಸತ್ಯಾಗ್ರಹ
ಅವನಿಗೊಪ್ಪಿದರೆ ಅಲ್ಲೂ ಗೆದ್ದಿತು.
ಅಬ್ಬ ಸತ್ಯಾಗ್ರಹವೆ! ಗಡಿಯಾಚೆ ಗಡಿಯೀಚೆ ಎಲ್ಲೆಲ್ಲೂ
ಗೆಲುವ ಅಪ್ರತಿಮ ಬ್ರಹ್ಮಾಸ್ತ್ರವೇ ನಿನಗೆ ನಮಸ್ಕಾರ.
ನೀನು ಕಲಿಸಿದ ಶಿಸ್ತು ನಿರ್ಭೀತಿಗಳು ನಮ್ಮ ಮೈತೋಡಾಗಿವೆ
ಪಕ್ಷಕ್ಕಾಗಿ, ಅದರಿಂದ ದೇಶಕ್ಕಾಗಿ ಪ್ರಾಣವನು ಕೊಂಡೇವು.
ಮಾನವನು ಬಿಟ್ಟೇವು!

ಗಾಂಧಿ,
ನೀನು ಹೇಳಿದ್ದಕ್ಕೆಲ್ಲ, ಮಾಡಿದ್ದಕ್ಕೆಲ್ಲ ಒಂದಿತ್ತು ತಳದಲ್ಲಿ
'ಭಾರತ ಭೂಮಿ', 'ಈ ಮಣ್ಣಿನಲಿ ಹುಟ್ಟಿದ ಜನ'
ನೀನು ಹೇಳಿದ್ದು ಎಲ್ಲರಿಂದೊಂದೆ ದೇಶ-
ನಾವು ಎಷ್ಟೋ ಮುಂದೆ! ಒಬ್ಬೊಬ್ಬ ಒಂದೊಂದು ರಾಜ್ಯ
ಜನ? ನಮಗದೇ ಚಿಂತೆ 'ನಮ್ಮ ಜನ ನಮ್ಮ ಕುಲ
ಈ ಅಕ್ಟೋಬರಕೆ ನಿನ್ನದೇ ಹೆಸರು ನಮ್ಮ ಕಿವಿ ತುಂಬಿ,
ಮನ ತುಂಬಿ ನಿನದಿಸುತ್ತಿರಲಿ ನಾಲಗೆಯ ತುದಿಗೆ
ಜಯತು ಜಯತು ಹೇ ಮಹಾತ್ಮ!
ಜಯತು ಹೇ ರಾಷ್ಟ್ರಪಿತ!!
ಈ ಎಲ್ಲ ತೂತು ಮಾತಿನ ತಳಕೆ ಏನುಳಿವುದೆಂದು ಹೇಳಬೇಕೇ
ತಂದೆ?

---

* ಚಂಡೀಗಢದ ಸಂಬಂಧದಲ್ಲಿ ಪಂಜಾಬಿನ ಪ್ರಸಿದ್ಧ ಮುಖಂಡರುಗಳಾದ ಸಂತರಿಬ್ಬರು ಪ್ರತ್ಯೇಕವಾಗಿ ನಡೆಸಿದ್ದ ಉಪವಾಸ ಸತ್ಯಾಗ್ರಹ ದೊಡ್ಡ ಸುದ್ದಿಯಾಗಿತ್ತು.

ಅದಕಾಗಿ, ನಿನ್ನ ಕಿವಿಯೊಳಗೊಂದು ಪಿಸು ಮಾತು, ಸಿಟ್ಟಾಗಬೇಡ:
ನೀನೇನಾದರೂ ಈ ನೆಲಕೆ ಮತ್ತೊಮ್ಮೆ ಬಂದರೆ, ಈಗಿಲ್ಲಿ ಚಳಿ
ಹೆಚ್ಚು.

ಮುಪ್ಪಟೆಯ ಬಿಟ್ಟು ಸಮವಸ್ತ್ರ ಧರಿಸಿ ಬಾ;
ಈ ಜನರ ಬೆನ್ನು ಸುಲಭ ಬಗ್ಗುವುದಿಲ್ಲ, ಕೋಲು ಸಾಲುವುದಿಲ್ಲ,
ಅದಕಾಗಿ ಕೈಲೊಂದು ಬನಿಯಾದ ಕೋವಿಯನು ಹಿಡಿದು ಬಾ,
ಮರೆಯದಿರು ತಂದೆ

– ಎಚ್.ಜಿ. ಸಣ್ಣಗುಡ್ಡಯ್ಯ

ಕಾಲಗರ್ಭದಲ್ಲಿ ಗಾಂಧಿ ಮತ್ತು ನಾನು

ಕತ್ತಲು
ನಮ್ಮೂರ ತೋಪಿನಲ್ಲಿ
ನಿನ್ನದೊಂದು ಬೃಹದಾಕೃತಿ, ಕಾಗೆಗಳ ಮಲ ಜಿಡ್ಡುಗಟ್ಟಿದೆ.
ನೀನೆನ್ನುವುದು ಗೊತ್ತಾಗುವುದೇ ಇಲ್ಲ.
ಅಲ್ಲಿ;
ಕುರುಡನ ಹೆಂಡತಿಗೆ
ಬಿಳಿಯ ಜುಬ್ಬಧಾರಿಯ ಕಾಮಸೂತ್ರದ
ಪಾಠ.

ಶಾಲೆಯೊಳಗೆ;
ಗುಬ್ಬಚ್ಚಿಗಳ ಮಲ, ಹೊಲಸು ತುಂಬಿದ ಭಾವಚಿತ್ರ
ನಿನ್ನ ಆತ್ಮಕಥೆಯ ಪಠನ,
ಮಧ್ಯೆ ಮಧ್ಯೆ ಬೋರ್ ಬೋರ್ ಎನ್ನುವ
ಮೇಷ್ಟ್ರು ಕೀರಲು ಧ್ವನಿ.
ಬೀದಿಗೆ ಬಂದರೆ
ನಿನ್ನ ಹೆಸರನ್ನು ಗುತ್ತಿಗೆ ಪಡೆದವರು
ನನ್ನ ಜನರ ರಕ್ತಾಸಕ್ತರು.
ಡೊಳ್ಳೊಟ್ಟೆಗಳು
ನಿಂತಿದ್ದೇನೆ:
ಕಾಲಿಗೆ ಕತ್ತರಿಸಿಕೊಂಡ ಮಂದಿಯ ಕ್ರೂರ ಗಂಭೀರತೆಯ ಮಧ್ಯೆ
ಕೈಯ ಕುಡಗೋಲು ಹೊಟ್ಟೆಯ ಸುತ್ತಳತೆಗೆ
ಇಂಚುಪಟ್ಟಿ.

– ಶೂದ್ರ ಶ್ರೀನಿವಾಸ

ಗಾಂಧಿ

ಜನವು ದಿಕ್ಕೆಟ್ಟಿರಲು ಹಾರಿದಿರಿ ಹಕ್ಕಿಯಂತೆ,
ಭಾರತದ ಕಡುನೀಲಿ ಗಗನದಲ್ಲಿ.
ಜೀವಚೈತನ್ಯವನು ತುಂಬಿದಿರಿ ತಾಯಿಯಂತೆ,
ಬಸವಳಿದ ಜನಮನದ ಭಾವದಲ್ಲಿ.

ಛತ್ರಿಚಾಮರವಿಲ್ಲ, ಬಹುಪರಾಕುಗಳಿಲ್ಲ
ಭಾರತದ ಬೀದಿಯಲಿ ಅರಸನಂತೆ,
ನಡೆದು ಬಂದಿರಿ ನೀವು, ನೊಂದ ಜೀವಿಯ ಕಂಡು
ತಬ್ಬಿಕೊಂಡಿರಿ ಬಾಚಿ ತಂದೆಯಂತೆ.

ಆಫ್ರಿಕದ ರೈಲಿನಲಿ ಕರಿಯನೆಂದಬ್ಬರಿಸಿ
ನೆಲಕೆ ದೂಡುತ ಕೇಕೆ ಹಾಕಿದವರ,
ಮೃಗಬಲವ ಮೆಟ್ಟಿದಿರಿ ದೇಶದಿಂದಟ್ಟಿದಿರಿ
ಬಿಳಿಯ ಸೂರ್ಯನ ನೀವು ಮುಳುಗಿಸಿದಿರಿ

ಜಾತಿಮತಗಳ ವಿಷದ, ಮಂಜು ಕರಗಲಿ ಎಂದು
ಬಿಸಿಲಿನಲಿ ತಿರುಗಿದಿರಿ ದೇಶವೆಲ್ಲ.
ಹುಲ್ಲುಗರಿಕೆಗು ಕೂಡ ಪ್ರಾಣಮಾನಗಳುಂಟು
ಎಂಬುದನು ಸಾರಿದಿರಿ ಲೋಕಕೆಲ್ಲ.

ನೀವು ಧನ್ಯರು ಗಾಂಧಿ ನೀವು ದೇವರು ಗಾಂಧಿ.
ನಾವಿಂದು ಸೈತಾನರೇಕಾದೆವು ?
ಅಂತರಂಗದ ಮಾತ ಏಕೆ ಮರೆತೆವು ನಾವು ?
ಏಕೆ ಭಾರತವನ್ನು ಬಲಿಕೊಟ್ಟೆವು ?

- ಡಾ. ಸಿದ್ಧಲಿಂಗಯ್ಯ

ಗಾಂಧೀಜಿ

ಗಾಂಧೀಜಿ ಎನ್ನುವ ಹೆಸರು
ಸ್ವಾತಂತ್ರ್ಯಕ್ಕೆ ಮೂಲಮಂತ್ರ ಮೊದಲು
ಗಾಂಧೀ ಎನ್ನುವ ಹೆಸರೇ
ಬ್ರಿಟಿಷರಿಗೆ ಬರಸಿಡಿಲು
ಆತನಿದ್ದರೂ ಈಗ ಅವಲು ಬದಲು.

ಸ್ವಾತಂತ್ರ್ಯ ಪಿಂಚಣಿಗೆ ಗಾಂಧಿ ಅರ್ಜಿಯನಿಟ್ಟು
ನಿಲ್ಲುತ್ತಿದ್ದನೋ ತಹಶೀಲದಾರ್ರ ಮುಂದೆ ಕೈ ಜೋಡಿಸಿ.

ಆಗ ಬಾ ಈಗ ಬಾ ಹೋಗಿ ಬಾ ಎನ್ನುವ
ತಹಶೀಲ್ದಾರರುಗಳೆಲ್ಲಾ ಗಾಂಧಿಯನೇ ಅಡ್ಡಾಡಿಸಿ

ತಿರುತಿರುಗಿ ಗಾಂಧಿ ಕೋಲು ಸವೆಯುವತನಕ
ಎಡೆಬಿಡದೇ ಕಡೆವರೆಗೆ ಪಿಂಚಣಿಗೆ ಹೋರಾಡಿದ.

ಬಾಡಿಗೆ ಮನೆಯೂ ಇಲ್ಲ; ಹರಿದಿದೆ ಖಾದಿಯ ಪಂಚೆ
ಬಂದೇ ಬಂದಿತು ಕೊನೆಗೆ ಒಂದು ಅಂಚೆ

ಸ್ವತಂತ್ರ ಸಮರದಲ್ಲಿ ಹೋರಾಡಿದರೆಂಬುದಕೆ
ಜೈಲು ಪತ್ರವ ನೀವು ಹಚ್ಚೆ ಇಲ್ಲ.

ಜೈಲುವಾಸದ ಪತ್ರ ಲಗತ್ತಿಸಲಾಗದಕ್ಕೆ
ಪಿಂಚಣಿ ಮಂಜೂರಾತಿ ಸಾಧ್ಯವಿಲ್ಲ
ಅಂಚೆ ಲಕೋಟೆ ಹಿಡಿದು ಗಾಂಧಿ ಕೆಳಕುಸಿದ

ಗುಂಡಿಗೆಗೆ ಗುಂಪೇಟು ಬಡಿದ ಹಾಗೆ
ಬರಸಿಡಿಲಿನಂತೆ ಬಡಿಯಿತು ಪಿಂಚಣಿ ಸುದ್ದಿ
ಹೇ ರಾಮ್ ರಾಮನೆಂದರು ಕೊನೆಗೆ ಕಣ್ಣುಮುಚ್ಚಿ

ನಮ್ಮೊಡನಿದ್ದ ತಾತ ಪಿಂಚಣಿಗೆ ಸುತ್ತಿ ಸುತ್ತಿ
ಸುಮ್ಮನಾದನು ಕೊನೆಗೆ ಸ್ವರ್ಗ ಸೇರಿ.

ಗಾಂಧೀಜಿ ಸತ್ತಂತ ಸಿಡಿಲ ಸುದ್ದಿಯ ಕೇಳಿ
ದುಃಖಿಸಿತು ಸರಕಾರ ರಜೆಯನ್ನು ನೀಡಿ
ದುಃಖದನುಕಂಪದ ತೋಪನು ಸಿಡಿಸಿ
ಭಗವದ್ಗೀತೆಯ ಪಠಿಸಿ ಬ್ಯಾಂಡನ್ನು ನುಡಿಸಿ.

ಸ್ವರ್ಗದಲ್ಲೊಮ್ಮೆ ಮೊನ್ನೆ ಗಾಂಧೀಜಿ ಸಿಕ್ಕ
ಭಾರತದಲ್ಲಿದ್ದುದ ನೆನೆದು ಭಾರದಲಿ ನಕ್ಕ

– ಹೋ.ಮ. ಪಂಡಿತಾರಾಧ್ಯ

ನಾನು ನಿನ್ನಂಗ ಅಜ್ಜ

ಥೇಟ್ ನಿನ್ನಂಗ ಅಜ್ಜಾ ನಾನೂ
ಬೋಳು ತಲಿ ಬಿಳಿದೊಗಲು
ಅಗಲ ಕಿವಿ ಕೃಷಕಾಯ
ಕಣ್ಣಿಗೆ ಹಾಕಿಹೆನು ಹೊಳೆವ ಕನ್ನಡಕ.

ದೇಶಕ್ಕಾಗಿ ದುಡಿದವ ನೀ
ವೇಷ ಬಲು ಸರಳ
ಅಹಿಂಸೆ ನಿನ್ನ ಮಂತ್ರ
ಸತ್ಯ ಭಗವಂತ.

ನನ್ನ ನಿನ್ನೊಳಗೆ ಕೂದಲೆಳೆ ಫರಕು
ಸತ್ಯದ ಜೋಡಿ ಸಂಪರ್ಕ ಬೆಳೆಸ್ಯೆತೆ
ಉಳಿದೆಲ್ಲಾ ಬಾಳಾಟ ಬರೋಬ್ಬರಿ ಸಾಗೈತೆ.

ಜಾತಿಭೇದ ತೋರಿದಳಂತ
ಹೆಂಡತಿಯ ದಂಡಿಸಿದವ ನೀ
ನಾನು ಅಷ್ಟೇ ಅಜ್ಜ
"ಅಪ್ಪನ ಮನಿಯೇ ಬೇರೆ
ತಾ ತಾ ಎಂಬುದು ತರವೇ?"

ಎಂದಾಕೆ ಒದರಾಡಿದಾಗ
ಬಾರುಕೋಲಲಿ ಬಡಿದವನು

ಪಮ್ಮಯ್ಯ ಎಂದರೂ ಬಿಡದವನು.
ಆದರೆ
'ಬಾ' ಮಂತನಸ್ಥರ ಮಗಳು
ನೀ ಹೇಳಿದಕೆ ಹೂಂ ಗುಟ್ಟಿದಳು
ನನ್ನಾಕೆ ಘನ ಬೆರಕ
ಸುಟುಗೊಂಡು ಸತ್ತಳು.

ಅದಕ್ಕೇ
ನಾನೀಗ 'ಸರಳಹಿಂದಿನ' ವಾಸಿ
ಅರೆಹೊಟ್ಟೆ ಅರೆಬಟ್ಟೆ ನಿನ್ನದೇ ರೀತಿ
ಕೈಯೊಳಗೆ ಕೊಟ್ಟವರೆ ಆಸರೆಯ ಬಡಿಗಿ
ತಲಿಮ್ಯಾಲೆ ಇಟ್ಟವರೆನಿನ್ನ ಬಿಳಿ ಟೊಪಿಗಿ.

– ಬಿ.ಟಿ. ಲಲಿತಾನಾಯಕ್

ಓ ಮೋಹನ ಮುರುಳಿ

ಓ ಮೋಹನ, ಎಲ್ಲಿ ಸಿದ್ಧ ಪಡಿಸಿಕೊಂಡೆ ನಿನ್ನ ಮುರುಳಿ?

ನಾಗರಿಕತೆಯ ಅತ್ಯುನ್ನತ ಜಾಸ್ ಗಾನ ಗರ್ಭವಲ್ಲೆ
ಈ ಅನಾದಿ ಸರಳ ನಾದವಾದ್ಯ ಹುಟ್ಟಿ ಬಂದಿತೆ?
ಕತ್ತಲು ಖಂಡದ ತೊತ್ತುಳಿತದ ಬದುಕಲ್ಲೆ
ಕಿರಣ ನಾದ ಹೊಮ್ಮಿಸುವ ಬಾಯಿ ಬಂದಿತೆ?

ಬೂಟು ಹ್ಯಾಟು ಸೂಟು ಟೈ ಬಿಸುಟಿ ಎರಡು ಪಂಚೆ
ಉಟ್ಟು ನಿಂತೆ ಅಸ್ತಮಿಸದ ಸೂರ್ಯರಾಜ್ಯದೆದುರಿಗೆ
ಕಾಡು ಇತ್ತು ಹುಲಿಗಳೂ ಸಹ ಇದ್ದವಲ್ಲಿ ಹೇರಳ
ತೆಗೆದೂದಿದೆ ನಿನ್ನ ಮುರುಳಿ ಕಾಡು ಹುಲಿಗಳೋ ಮರುಳೋ
ಮರುಳು

ಅಜ್ಜ, ಹೇಳಿರಬೇಕು ಜಾಣರು ನಿನಗೆ ಆಗಲೂ ಸಹ ಹೀಗೆ:

'ಈಗೋ, ಕಾಡಿಲ್ಲ, ಕಾಡಲ್ಲಿ ಹುಲಿಗಳಿಲ್ಲ;
ಅಷ್ಟೇ ಅಲ್ಲ, ನಿನ್ನ ಕೊಳಲಲ್ಲಿ ಮಂತ್ರ ಶಕ್ತಿ ಇಲ್ಲ
ಹುಲಿಗಳ ಹಿಂಡನೆ ಸೆಳೆದು ತರುವ ನಾದಮೋಡಿ ಇಲ್ಲ
ಕೊಳಲೂದುತ ನೀ ಕುಳಿತರೆ ಹೀಗೆ, ಏನೂ ಹುರುಳಿಲ್ಲ'
ನಿನ್ನ ಕೈಲಿರುವದು ಈಗ ಬಿದಿರು, ಮೋಹನ ಮುರುಳಿ ಅಲ್ಲ
ಪಡು ಬಿಸಿಲಿನ ಆ ಸೂರ್ಯನ ತಾಪಕೆ
ಪಸೆ ಒಣಗಿದೆ ಕಾಡು;
ಪಶ್ಚಿಮದಲ್ಲೆ ಸೂರ್ಯ ಹುಟ್ಟಿದ್ದಾನೆ

ಎಷ್ಟಂದರೂ ಕಲಿಕಾಲ ನೋಡು;
ಚಕ್ರ ಬಂದಿದೆ ಕೆಲಸಕೆ, ಕಾಲಿಗೆ
ಬದುಕೇ ಮೋಜು, ಆ ಹಾಡ ಹಾಡು."

ಆದರೆ
ಕಿಂದರಿ ಜೋಗಿಯ ಕಿನ್ನರಿಯಂತೆ
ನೀ ನುಡಿಸಲು ಮೋಹನ, ಮುರುಳಿ
ಹುಲಿಗಳೆಲ್ಲ ಸಾಲಲಿ ಬರಲು ಸಾವಿನೆದುರು ನಿಂತೂ
ಸೊಲ್ಲು ಬಿಡದೆ, ಹುಲ್ಲುಗುರು ಬಳಸದೆ ಪುಣ್ಯಕೋಟಿಯೆದುರು
ಕಾಡಲ್ಲೆ ಹುದುಗಿದ್ದ ಹೊನ್ನಾಡ ಜ್ಯೋತಿ
ಹಬ್ಬಿತ್ತು ಬೆಳಕ ಖ್ಯಾತಿ
ಸೂರ್ಯ ಅಸ್ತಮಿಸದ ನಾಡಿನಲ್ಲಿ ಸೂರ್ಯ
ಹೇಗೆ ಇಳಿದ ಕೆಳಗೆ
ಕಪಲ ತೆರೆಗಳಡಿಗೆ ಕೆಳಗೆ
ಪಾತಾಳ ದಾರಿ ಕಡೆಗೆ

ಸಾಬೀತು ಪಡಿಸಿದೆ ಸೂರ್ಯ ಹುಟ್ಟುವದು
ಪಶ್ಚಿಮದಲ್ಲಲ್ಲ ಎಂದೆಂದೂ ಪೂರ್ವದಲ್ಲಿ
ಅತ್ಯಪೂರ್ವ ರೀತಿಯಲ್ಲಿ.

ಆದರಿಂದು ನಾವು ನಿನ್ನ ಮೊಮ್ಮಕ್ಕಳು
ನಿನ್ನ ನಂಬುತ್ತಿಲ್ಲ
ನಿನ್ನ ಕೊಳಲ ಬಿಸುಟೆವಲ್ಲ
ಹಾಡೆ ಹಗಲು ಇಡಿ ಕಾಡು, ಹುಲಿಗಳು
ಕಳವು ಆದವಲ್ಲ.

– ಟಿ.ಜಿ. ಭಟ್ಟ ಹಾಸಣಗಿ

ಗಾಂಧಿ:
ನೀ ಇಲ್ಯಾಕ ಹುಟ್ಟಿ ಬಂದಿ
ಮತ್ತೆಲ್ಲೆರ ಹುಟ್ಟಿ ಬಂದಿದರ
ನಿನಗೆ ಎಂಥಾ ಮರ್ಯಾದೆ ಸಲ್ಲತ್ತಿತ್ತಲ್ಲ
ಎಂದೊ ಒಂದು ದಿನ
ಮಜಾಕಂತ ಕುರಿ ತಿಂದಿ
ಹೊಟ್ಟ್ಯಾಗ ಬ್ಯಾ ಅಂತ ಒದರುದ ಕಂಡು
ಬೆಚ್ಚಿ ಬಿದ್ದಿ
ನಾವು-
ದಿನಾ ಕುರಿಯಾಕ
ಮನುಷ್ಯಾರ್ನ ತಿಂತೀವಿ
ಇಲ್ಲಿವರಗೆ ಒಬ್ಬನೂ ಕೂಗಲಿಲ್ಲ
ಇದು ನಿನ್ನ ತಪ್ಪಲ್ಲ
ದಕ್ಕಿಸಿಕೊಳ್ಳುವ ಶಕ್ತಿ ನಿನ್ನಲ್ಲಿ ಇಲ್ಲ
ಅದಕೆ ಅಂತೀನಿ
ನೀ ಇಲ್ಯಾಕ ಹುಟ್ಟಿ ಬಂದೀ ಅಂತ.
ನೀ ಸತ್ತಾಗ
ನಿನ್ನ ಹೆಣ ಯಾರು ಹ್ಯಾಂಗ ಮೆರಸಿದರೋ
ಮೆರಸಿ ಒಯ್ದು ಎದರಾಗ ಸುಟ್ರೋ
ಸುಟ್ಟ ಬೂದಿ ಯಾ ನದ್ಯಾಗ ಚೆಲ್ಲಿ ಬಂದ್ರೊ

ನಂಗೊತ್ತಿಲ್ಲಪ್ಪ.
ಮೊನ್ನೆ
ನಿನ್ನಂಥದೇ ಒಂದು ಹೆಸರು ಸತ್ತಾಗ
ಹೆಣಕ ತುಪ್ಪ ಬರಿಕಿ
ಚಂದನ ಕಟಿಗ್ಯಾಗ ಸುಟ್ಟು
ಸುಟ್ಟ ಬೂದಿ ಬೆಳ್ಳಿ ಗುಂಡಗ್ಯಾಗ ತುಂಬಿ
ಮೆರಸಗೊಂತ ಒಯ್ದು
ಗಂಗಾ ನದ್ಯಾಗ ಚೆಲ್ಲಿ ಬಂದ್ರು
ಸಂದಿ ಗೊಂದಿಗ ಸಹಿತ ನಿನ್ನ ಹೆಸರಿಟ್ಟು
ಒಡಕ, ದೇಹ ಒಡಕು ಚಾಳೀಸ
ಬರೇ ಬತ್ಲಾ
ಕಯ್ಯಾಗೊಂದು ಮುರಕ ಕಟಗಿ ಹಿಡ್ದು ನಿಂತ
ನಿನ್ನ ಇಂಥ ಅಸಹ್ಯ ಮೂರ್ತಿ
ನಗರದ ನಡು ಮಧ್ಯೆ ಬೀದಿಯೊಳಗೆ ನಿಲ್ಲಿಸಲಕ
ನಮಗ ನಾಚಗಿ ಬಂತಪ್ಪ
ಅದೇ
ನಿನ್ನಂಥ ಹೊಸ ಹೆಸರಿಗೆ ಲಕ್ಷಗಟ್ಟಲೆ
ಹಣ ಖರ್ಚು ಮಾಡಲಿಕ ನಾವೇನು ಹೇಸಲಿಲ್ಲ
ಗಾಂಧೀ
ನಿನ್ನ ಹೆಸರೇ ಭಾಳ ಮಜಾ ಐತಿ
ಎರಡು ಅತಿರೇಕಗಳ ಅರ್ಥ ಹೊಂದೈತಿ
ಪ್ರಾರ್ಥನಾ ಮಂದಿರಕ ಹೋಗುವಾಗ
ರಾಮನಾಮ ನುಡಿಯುವಾಗ
ನಿನ್ನ ಎದಿಗಿ ಗುಂಡಿಟ್ಟು ಕೊಂದ್ರಲ್ಲ
ಅವರೇ ಈಗ ನಿನಗ ಹೆಗಲ ಮ್ಯಾಲ ಹೊತ್ತಾರಲ್ಲ
ಅದಕೇ ಅಂತೀನಿ
ನೀ ಇಲ್ಲ್ಯಾಕ ಹುಟ್ಟಿ ಬಂದಿ ಅಂತ.

– ಪ್ರಭು ಖಾನಾಪುರೆ

ಹರಿಜನ ಮೋಹನದಾಸರಿಗೆ

ನಾವೆಲ್ಲಿಯ ಹರಿಜನ
ಮೋಹನದಾಸ ದೇವರನೆಂದು ಕಂಡವರಲ್ಲಾ
ಗುಡಿಯೊಳಗೆಂದು ಸುಳಿದವರಲ್ಲಾ
ದೇವರು- ದಿಂಡಿರ ಹೆಸರನು ಉಸುರುತ
ಕೋಳಿ- ಕುರಿಯೊಡನೆ ನಮ್ಮಯ ರಕ್ತ ಕೊಟ್ಟವರು

ಬಡವ- ಬಲ್ಲಿದರೊಂದೆ ಎನ್ನುತ
ಟಾಟಾ- ಬಿರ್ಲಾರ ಮಠದೊಳ ಕೂತು
"ರಾಮಾ.... ರಾಮಾ..." ಎಂದವ ನೀನೆ
ನಮಗಿನ್ನೇತಕೆ ಬಿರುದನು ಕೊಟ್ಟೆ
ಹರಿಜನ.... ನೀವೆ.... ಬ್ರಹ್ಮಜನ!

- ಎಂ. ಲೋಕೇಶ

ನಾನು ನಿನ್ನಂತೆ ನಡೆಯುವಾಗ

ಮಹಾತ್ಮಾ
ಹೋಗುತ್ತಿವೆ ಮಾಸಿ ಈಗೀಗ
ನಿನ್ನ ಹೆಜ್ಜೆಯ ಗುರುತುಗಳು
ಕೆಂಡದಂಥ ಧೂಳು ಅಲ್ಲಲ್ಲಿ
ಕಲ್ಲು ಮುಳ್ಳುಗಳು ಹೆಜ್ಜೆಯ ಸುಳಿಯಲ್ಲಿ.

ಹೀಗಿರುವಾಗ
ನೀನಿಟ್ಟು ಹೋದ ಹೆಜ್ಜೆಗಳಲ್ಲಿ
ನನ್ನ ಹೆಜ್ಜೆ ಇಡಲು ನನಗೇ ಭಯ.

ಹಚ್ಚ ಹಸಿರಾಗಿ
ಬೆಳೆಯುತ್ತಿರುವ ಗಿಡದ
ಚಂಡಿ ಚೂರುವ ಜನ ಬಹಳ.

ಸತ್ಯ ನಡು ದಾರಿ
ತುಳಿದು ಹೋದರೆ
ವಾಹನಗಳ ಓಡಾಟ
ಅಲ್ಲಲ್ಲಿ ದನಗಳ ಕಾಟ.

ನಡೆಯಬೇಕೆನಿಸಿದರೂ
ನಾ ಹೇಗೆ ನಡೆಯಲಿ
ನೀ ತುಳಿದ ದಾರಿಯಲ್ಲಿ.

- ದಿ.ಬಿ. ಥಂಗ

ಗಾಂಧೀ ಜನ್ಮದಿನದಂದು

ಗಾಂಧೀಮಹಾತ್ಮಾ ಪುಣ್ಯಾತ್ಮಾ
ನಿನ್ನ ಹುಟ್ಟು ಹಬ್ಬ.
ಮತ್ತೊಮ್ಮೆ ಹುಟ್ಟಿಬಾ-
ಎನ್ನುತ್ತಿದ್ದಾರೆ.
ಅವರ ಮಾತು ಕೇಳಿ
ನೀನು ಗರ್ಭಸೇರಿ
ಮತ್ತೆ ಹುಟ್ಟಿ ಬಂದು
ಈ ಇಂಡಿಯಾದಲ್ಲಿ ದೊಡ್ಡವನಾಗಲು
ಇನ್ನೂ ಇಪ್ಪತ್ತೊಂದು ವರ್ಷಬೇಕು
ಅಧಿಕಾರ ಬೇಕಿದ್ದರೆ
ಅಂಥವರ ಮನೆಯಲ್ಲೇ ಹುಟ್ಟಬೇಕು.

ಅಷ್ಟು ಪುರುಸೊತ್ತಿಲ್ಲ ಎಂದು
ಒಂದು ವೇಳೆ
ಹೂವೇರಿಸುತ್ತಿದ್ದಾಗ
ರಾಜಘಾಟಿನಲ್ಲಿಯೇ
ನೀ ಎದ್ದೆ ಎಂದರೆ
ಹರಿಯಿಂದ ಗಿರಿತನಕದ ಜನ
ನಿನ್ನ ದೊಣ್ಣೆಯನ್ನೇ ಕಸಿದು
ನಿನಗೇ ಬೀಸುತ್ತಾರೆ.

– ಮಾಧವಿ ಭಂಡಾರಿ

ನಾವು ಕೊಲ್ಲಲಿಲ್ಲ.....

ನೋವಿನ ಗಡಿಗೆಯಲ್ಲಿ, ಹೆಪ್ಪುಗಟ್ಟಿದ ನಗೆಯ ಕಡೆದು,
ಭಾವೈಕ್ಯ ಬೆಣ್ಣೆಯ ಕಾಸಿ, ಸ್ವಾತಂತ್ರ ಕಂಪ ಕೊಟ್ಟ ತಾತ,
ಸತ್ಯದ ಮುಳ್ಳು- ಕಲ್ಲಿನ ದಾರಿಗುಂಟ ನಡೆದ ಬಂಟ.
ಗಟ್ಟಿ ಹೆಜ್ಜೆಗಳ ಮಾರನಿಟ್ಟ, ಸ್ವಯಂ ಶಾಂತಿದೂತ.

ದಟ್ಟ ಕತ್ತಲೆಯಲ್ಲಿ ಬಿಡುಗಡೆಯ ಬೆಳಕಿನ ಘಟ್ಟ ತಲುಪಿದ
ದಿಟ್ಟ
ಬಟ್ಟ ಬಯಲಲ್ಲಿ ಅರೆಬೆತ್ತಲೆ ನಡೆದ ಗೊಮ್ಮಟ,
ದರ್ಪಸರ್ಪಗಳ ಹುತ್ತದಲ್ಲಿ ಸೃಷ್ಟಿಸಿದನೀತ,
ಅಹಿಂಸಾತ್ಮಕ ಚಳುವಳಿಗಳ ಕಮ್ಮಟ.

ಕ್ರಾಂತಿಯ ಶಸ್ತ್ರಾಸ್ತ್ರಗಳ ಬಿಟ್ಟು ಕೊಟ್ಟು
ಚರಿತ್ರೆಯ ರಕ್ತ ಸಂಸ್ಕರಿಸಿದ ವೈದ್ಯ,
ಹುಲಿಗಳನ್ನಟ್ಟಿದರೂ, ಮುಟ್ಟಲಿಲ್ಲ ಕಿರೀಟ,
ಬೆವರಿಗೆ ಬೆಲೆ ಬಯಸದ ಆದ್ಯ.

"ಅಜಾತ ಶತ್ರು ಅಭಿಜಾತ ಮಿತ್ರ" ನಿಗೆ
ಕೊನೆಗೂ ರಕ್ತಾಭಿಷೇಕದಲಿ ಮುಕ್ತಿ
"ನಾವು ಕೊಲ್ಲಲಿಲ್ಲ, ನೀವು ಉಳಿಸಲಿಲ್ಲ"
ಅಮರವಾಯ್ತು. ಬಿಳಿಯರ ಕರಿಯ ವ್ಯಂಗೋಕ್ತಿ.

- ಬಿ.ಎಸ್. ದುಂಡರಡ್ಡಿ

ಗಾಂಧಿ ಇದ್ದಿದ್ದರೆ

ನೆಲದ ಮೇಲಿಕ್ಕಿದ ಮಲ
ಗುಡಿಸಿ ಮೋರಿಗೊತ್ತರಿಸಿ
ಕೇರಿ ಶುದ್ಧಮಾಡಿದ ಗಾಂಧಿ
ಇಂದು ನೀನಿದ್ದರೆ.
ಬೆಂಡಿಗೇರಿಯಲ್ಲಿ ನಿನ್ನ
"ಗುಂಡಿಗೆ" ವಿಲವಿಲ ಒದ್ದಾಡಿ ಚೀತ್ಕರಿಸುತ್ತಿತ್ತು
ತತ್ತೂರಿನಲ್ಲಿ ನಿನ್ನ
ಕಣ್ಣುಗಳು ನೆತ್ತರ ಕಾರಿ ಸಾವ ಕೂಗುತ್ತಿದ್ದವು
ನಿನ್ನ ಆತ್ಮ
ಈ ನರಬೇತಾಳಗಳ ಕರಾಳ ಕ್ರೌರ್ಯಕ್ಕೆ ತತ್ತರಿಸಿ
ತನ್ನ ಅಸಹಾಯಕತೆಗೆ ನೊಂದು ನೇಣು ಹಾಕಿಕೊಳ್ಳುತ್ತಿತ್ತು
ನೋಡಿದೆಯಾ ಗಾಂಧಿ
ನಿನ್ನ ತಾಯ್ನಾಡ ಸಂಜಾತ ಮಲ ತಿನ್ನಿಸುವ ಮಂದಿ?
ಜಾತಿವಿಜಾತಿ ರಾಡಿ ತಲೆಯೊಳುಕ್ಕಿ
ಮನದಂಗಳವೆಲ್ಲಾ ಮಲ- ಇದು
ನಮ್ಮ ಸನಾತನ ಸಂಸ್ಕಾರವಿಕ್ಕಿದ ಫಲ!
ಕಾಲವೂ ದಹಿಸಲಾಗದ ದೌರ್ಭಾಗ್ಯ ಇದು.

ಹೊಲಸು ಮನ ತೊಳೆಯಲು ಸಾಲದು
ಪವಿತ್ರ ಗಂಗಾಜಲ
ಉಪವಾಸ ಹೂಡು ಬಾ
ಆ ಅಗಸ್ತ್ಯನನ್ನು ಕರೆ ಮತ್ತೊಮ್ಮೆ
ಸಪ್ತ ಸಮುದ್ರಗಳ ಆಪೋಶನ ಮಾಡಿ
ಇವರ ಬುದ್ಧಿಗೆ ಉಗಿಯಲಿ
ಅರಳಲಿ ಕಮಲ
ಕೆಸರ ಮನಗಳ ಮೀಟಿ, ದಾಟಿ.

- **ಮೂಡ್ನಾಕೂಡು ಚಿನ್ನಸ್ವಾಮಿ**

ಯಾವ ಗಾಂಧಿ

ಗಾಂಧಿ ಮ್ಯಾಲ ಒಂದ ಹಾಡ ಬರಿ.
ಅಂತ ಚಂಪಾರ ಪತ್ರ.
ಯಾವ ಗಾಂಧಿ?
(ಈ ಮೂವರೊಳಗೆ)
ಮತ್ತೊಮ್ಮೆ ಪತ್ರ ಓದಿದೆ ಮಹಾತ್ಮಾ ಗಾಂಧಿ!
ಯಾಂವಗ ನೆನಪೇತಿ ಆ ಬುಡ್ಡಾನ ಕತೀ?
ಲೈಬ್ರರಿಗೆ ಹೋಗಿ ನೋಡಿದರ
ಗಾಂಧಿ ಕಪಾಟಕ್ಕೆ ಳ೭ ರಾಗ ಹಾಕಿದ್ದ
ಕೀಲಿ
ಕೈ
ಕಳದೇತಿ ೬೭ರಾಗ.
ಮನೀಗ ಹೋಗಿ ಒಂದ ಕ್ವಾರ್ಟರ ಇಳಿ
ಬರ್‍ಯಾಕ ಕುಂತೆ, ಗಾಂಧಿ ಕವಿತಾ:
"ಮೋಹನದಾಸ ಗಾಂಧಿ
ಸುಭಾಷ್ಚಂದ್ರನ ಕುರ್ಚಿ ಕಸಿದ (ಪರಾರಿ)
ಭಗತ್ ಸಿಂಗನ್ನ ಸಿಫಾರಸ ಮಾಡದ (ಫಾಂಸಿ)
ವಲ್ಲಬ್ಬಾಯಿನ್ನ ಒತ್ತಿದ ಜವಾಹರನ್ನ ಎತ್ತಿದ
ಪಾಕಿಸ್ತಾನ ಹೆಚ್ಚಿದ
ಅದಕ್ಕsss ನಾಥೂರಾಮ ಬೆಚ್ಚಿದ"
ಅಡಗಿ ಮನ್ಯಾಗಿಂದ

ಬಿರ್‍ಯಾನಿ ಪಾಸಕ್ಕ ನಿಶೆ ಕುಗ್ಗಿ:
'ಇವೊತ್ತೇನೆ ಸ್ಪೇಶಲ್ಲು?
ಜನೇವರಿ ೩೦. ಗಾಂಧಿ ತಿಥಿ?'
'ಯಾವ ಗಾಂಧೀರೀs?'
ಅಂದಳು.

– ಜನರಾಳ ಬಿ.ಕೆ. ಪಾಟೀಲ

ಲೆನಿನ್ - ಗಾಂಧಿ

ಕತ್ತಲೆಯ ಉದರಕ್ಕೆ
ಐರ್ಚೀಯ ಚುಚ್ಚಿ
ಮೂಡಣದ ದ್ವಾರಗಳ
ಬೇಡಿಗಳ ಬಿಚ್ಚಿ
ಬೆಂಕಿ ಮೈ ಜಳದಿಂದ
ಚಿಕ್ಕಿಗಳ ಸುಟ್ಟು
ಮೋಡಗಳ ರಕ್ತದಲಿ
ಮೈ ತೊಳೆದುಕೊಂಡು
ಭೂಮಿ ಬತ್ತಲೆ ನೃತ್ಯ
ರವಿ ಕಂಡು ನಕ್ಕಾಗ
ಲೆನಿನ್ ನೆನಪಾಗುತ್ತಾನೆ
ಬಾಂಬುಗಳ ಹೆಣ ಸುಟ್ಟ
ಸ್ತಬ್ಧ ನೀರವ ರಾತ್ರಿ
ತುಂಬು ಬೆಳದಿಂಗಳ
ತುಟಿಗೆ ಲೇಪಿಸಿಕೊಂಡು
ತಾರೆಗಳ ತೋಟದಲಿ
ತಂಪು ಛಾಪಿಸಿಕೊಂಡು
ಹೂವ ಹೆಜ್ಜೆಯನಿಟ್ಟು
ಚಂದ್ರ ಚಲಿಸುತ್ತಿರಲು

ಪ್ರೇಮಿಗಳ ತೋಳುಗಳು
ಭೂಮಿಯನು ಬಿಗಿದಾಗ
ಗಾಂಧಿ ನೆನಪಾಗುತ್ತಾನೆ.

- ಬಸವರಾಜ ವಕ್ಕುಂದ

ಗಾಂಧೀ ಸತ್ತದ್ದೇ ವಾಸಿ !

ಕದಲು ಬದಲು ಕತ್ತೆ....
ಇವರ ಬಿಟ್ಟು ಇವರಾರು?
ಡೊಳ್ಳು ತುಂಬುವಾಸೆಯಿಂದ ಹೊರಬಿದ್ದಿದೆ
ಬಹುರೂಪಿ ಮೇಳ.

☆

ವೇಷ, ಭಾಷೆ, ಭಿನ್ನ, ವಿಭಿನ್ನ
ಆದರೆ ಎಲ್ಲರ ನಾಲಿಗೆ ಚಪಲ
ಗಾಂಧೀನಾಮ
ಓಂ ನಮಃ ಶಿವಾಯ
ತೆರೆಯ ಹಿಂದುಗಡೆ ಅಸಲೀ
ಉದ್ದೇಶ ಸ್ವಾರ್ಥ!
ತೆರೆಯ ಮುಂದೆ ರಂಗಭೂಮಿಯ ಮೇಲೆ
ಭರ್ಜರಿ ನಕಲೀ ನಾಟಕ

☆

ಒಂದು ಮಾತು:
ಈಗ ಗಾಂಧೀ ಬದುಕಿದ್ದರೆ
ಇನ್ನೂ ಜೇಲಿನಲ್ಲಿ ವೇಳೆ ಕಳೆಯುತ್ತಿದ್ದ
ಉಪವಾಸ ಸತ್ಯಾಗ್ರಹ ಮಾಡಿ ಜನವನೆಚ್ಚರಿಸಿ
ಈ ವ್ಯವಸ್ಥೆಯನೆ ತಲೆಕೆಳಗೆ ಮಾಡುತಿದ್ದ

ಹಗಲು ತೂಗಲುಬಾವಲಿಯ ಹಸ್ಸು ಕುಕ್ಕಿದಂತ

ಇಲ್ಲವೇ:
ಬಡವರನು ಎತ್ತಿಕಟ್ಟಿದ ಆರೋಪ ಬಂದು
ದೇಶದ್ರೋಹಿಯಾಗಿ ಆಜೀವ ಪರ್ಯಂತ
ಕಾಳಾಪಾನಿ....
ಗಾಂಧೀ ಸತ್ತದ್ದೇ ವಾಸಿ!

- ಶಿವಲಿಂಗಪ್ಪ ಭಾವಿಕಟ್ಟಿ

ಗಾಂಧೀಜಿ

ನೀನು ಅಮರನಾದದ್ದೇ ತಪ್ಪು ಮಹಾತ್ಮಾ
ಒಂದೇ ಬಾರಿಗೆ ಸಾಯುತ್ತಿದ್ಯಲ್ಲೋ ಪುಣ್ಯಾತ್ಮಾ!

ಈಗ ನೋಡಿದೆಯಾ-
ನಿನ್ನ ಕೊಲೆಯಾಗಿ ಅನುದಿನವೂ
ಅನುಕ್ಷಣವೂ ನಡೆಸಿದ್ದಾರೆ
ಘೋರ ಹತ್ಯೆಯ ಸಂಚು!

- ನೀ ಸಾಯಲಾರೆ: ಅವ ಬಿಡಲಾರ

- ಪುಟ್ಟು ಪ. ಕುಲಕರ್ಣಿ

ಗಾಂಧಿ ಮಾರ್ಗ

ಜಗತ್ಪ್ರಸಿದ್ಧ ಮಹಾತ್ಮಾಗಾಂಧಿ
ರಸ್ತೆ ಹಿಡಿಮು ಬೆಂಗಳೂರಲ್ಲಿ
ಸೀದಾ ನಡೆದರೆ ಪಶ್ಚಿಮಕ್ಕೆ
ರಾಣಿ ವಿಕ್ಟೋರಿಯಾ ಸ್ಮಾರಕದ ಬಳಿಗೆ
ಹಾದಿ ನಡುವೆಯೋ ತಿರುಗಿವರೆ ಎಡಕ್ಕೆ
ಹೋಗಿ ಸೇರುತ್ತೇವೆ
ಸೂಳೆ ಸರ್ಕಲ್‌ಗೆ-
ಅಂತ ನಾನಂದರೆ ತಪ್ಪೆ?
ಇವರ‍್ಯಾಕೆ ನೋಡಬೇಕು ಹೀಗೆ:
'ಇವನಿಗೇನು ಬೆಪ್ಪೆ,?'
ಇಂದು ನಿನ್ನ ಹೆಸರೇ ಮುಂದು ಎಲ್ಲದಕ್ಕೂ ಗಾಂಧಿಯೆಂದು
ನಿನ್ನ ಹೆಸರ ಮಿೂಯಿಸುತಿಹರು ಕೊಳಚೆ ನೀರಲ್ಲಿಂದು.

ಒಮ್ಮೆಲೆ ಗುಂಡಿಟ್ಟ ಆ ನಾಥೂರಾಮ
ಕಾಯಲು ಬರಲಿಲ್ಲ ನೀ ನಂಬಿದ ರಾಮ
ದಿನದಿನವೂ ಗುಂಡಿಡುತ್ತಿದ್ದಾರೆ ನಿನಗಿಲ್ಲಿ
ಒಬ್ಬ ನಾಥೂರಾಮನನ್ನೇ ಎದುರಿಸದ ನಿನ್ನ ರಾಮನಿಗೆ
ಇವರನ್ನೆದುರಿಸುವ ಧೈರ್ಯವೆಲ್ಲಿ?

ಓ ಗಾಂಧಿ ನಿನಗೇ ವ್ಯರ್ಥವಾಯಿತೊ ಏನೋ ನಿನ್ನ ಪ್ರಾಣ
ಬೆಳಕನ್ನೆ ಶತ್ರುವೆಂದು ಭಾವಿಸುತ್ತಾರೆ ಕಾಳಗರ್ಭದ
ಶಿಶುಗಳಾದ ಈ ಜನ

ಶತ್ರುತ್ವದ ಪರಮಾವಧಿಯಾಗಲಿಲ್ಲ ನಿನ್ನ ಮರಣ
ನಿನ್ನ ಹೆಸರಿನಲ್ಲಿ ನಡೆಸುತ್ತಿರುವ ದೌರ್ಜನ್ಯವಿಂದು
ಆಗಿದೆ ನಿನ್ನ ಮರಣಕ್ಕಿಂತಲೂ ದಾರುಣ.

- ಬಂಜಗೆರೆ ಜಯಪ್ರಕಾಶ

ಪುಟ್ಟ ಪುಢಾರಿಗೊಂದು ಉಪದೇಶ

ಅಯ್ಯೋ ಮಗು
ಬಿಡ್ತು ಎನ್ನು
ಏಕೆ ಗಾಂಧಿಯಾಗಬೇಕೆನ್ನುವೆ?

ಮಗು ಆಗದಿರು ನೀನು ಗಾಂಧಿ
ಸತ್ಯ ಅಹಿಂಸೆ ಶಾಂತಿ
ಯಿಂದ ನಡೆಸುವ ಕ್ರಾಂತಿ
ಬರೀ ಭ್ರಾಂತಿ ಕಾಣಯ್ಯ
ಸತ್ಯಾಗ್ರಹ ಉಪವಾಸ
ಪ್ರಾಯಶ್ಚಿತ್ತ ಪ್ರಾಯೋಪವೇಶ
ಕೆಲಸಕ್ಕೆ ಬಾರದ್ದು ಕೇಳಯ್ಯ

ಲಾಟಿ ಏಟು ಗುಂಡಿನ ಏಟು
ಆಮರಣಾಂತ ಅನ್ನವಿಲ್ಲದ
ದೇಹದಂಡನೆಗೆ
ಆಹ್ವಾನ ಕೊಡುವೆ ಏಕಯ್ಯ
ಮಾನವ ಜನ್ಮ ದೊಡ್ಡದು
ದಾಸರ ವಾಣಿ ಕೇಳಿಲ್ಲವಾ?
ದೊಡ್ಡದನ್ನು ಸುಖ ಮಾಡಿಕೊಳ್ಳುವ
ರೀತಿರಿವಾಜು ಗೊತ್ತಿಲ್ಲವಾ?

ಹಾಗೆಂದು ಗಾಂಧಿಯಿಲ್ಲದೆ ನಿನ್ನ
ಹಾದಿ ಸುಗಮವೆಂದು ಭಾವಿಸದಿರು.
ತೊಡು ಗಾಂಧಿ ನೂತ ಖಾದಿ
ಏರಬಹುದು ವರ್ಷಗಳಲ್ಲೇ ಅಧಿಕಾರದ ಗಾದಿ
ಕೊಂಚ ಕೂಡ ಭಯ ಬೇಡ
ಬದುಕಿರುವ ಮಹಾತ್ಮರ ತತ್ತ್ವಗಳನ್ನೇ ಗಾಳಿಗೆ
ತೂರಿ ಮಾಡುವುದಿಲ್ಲವೇ ಅಪಮಾನ?
ಗಾಂಧಿಯೇನು ಬಗೆದು ಬರುವುದಿಲ್ಲ ತನ್ನ ಸಮಾಧಿ
ಇಷ್ಟಕ್ಕೆಲ್ಲ ಬರುವ ಹಾಗಿದ್ದರೆ
ಎಷ್ಟೆಷ್ಟೆಲ್ಲಾ ನಡೆದಿದ್ದರೂ ಇಲ್ಲೀತನಕ
ಇರುತ್ತಿದ್ದನ ಗಟ್ಟಿಮುದುಕ ಮೌನದಿ

ಗುಂಡಿಗೇ ಗುಂಡಿಗೆ ಕೊಟ್ಟ
ಗಂಡೆದೆಯವನಲ್ಲವೇ
ನಿನ್ನ ಹೆಂಬೇಡಿತನವನ್ನೂ
ಸಹಿಸುತ್ತದೆ ಆ ಗಟ್ಟಿ ಎದೆ.

– ಎಂ.ಎಸ್. ವೇದ

ಗಾಂಧಿ

ಗಾಂಧಿ!
ಸೇಂದಿ ಕುಡಿಬ್ಯಾಡಂದಿ!
ಮನುಷ್ಯನಾಗಿದ್ದಕ್ಕ
ಮನಸ್ಸಿನಾಗಿನ ನಿಸಿ
ಇಳಿಬೇಕು
ಅಳಿಬೇಕು
ಮರೀಬೇಕು, ಗಾಂಧಿ!
ಕತ್ತಲಿಂದ ದೂರಾಗದೆ
ಭಾರತದಿಂದ ಓಡಿ ಹೋಗದೆ
ಗತಿ ಮತಿ ಕಾಣದಾಂಗೆ
ಸೇಂದೀಲೇ ಸೇರಿಕೊಂಡೇನಿ ಗಾಂಧಿ!
ಮೂರುದಶಕ ಕಳೆದೆ
ನಿನ್ನ ದಾರಿ ತುಳಿದೆ
ಕಪ್ಪು ನೆಲದ ಕಪ್ಪು ಜನ
ಹಾಂಗಾಗಿ ಹಿಂದೆ ಬಿದ್ದೆ, ಗಾಂಧಿ!
ಬೆಳಕು ಹುಡುಕುತ್ತಾ
ನಿನ್ನ ದಾರಿಯಲ್ಲಿ
ನಿನ್ನ ಜನರಲ್ಲಿ
ನಿಂತ ನನಗೆ ಗತಿಕಾಣಲಿಲ್ಲ; ಗಾಂಧಿ!
ಗೊತ್ತಾಯ್ತು ನನ್ನ ನಿಸೆ

ಏರತಾ ಇದೆ ನಿಸೆ
ಇಳಿತಾ ಇದೆ ನಿಸ್ವಾಸೆ
ಸಿಟ್ಟಾಗಬೇಡ ನನ್ನ ಮೇಲೆ; ಗಾಂಧಿ!
ನನ್ನ ನಿಸೆ ಏರ್ತಾ ಇದೆ
ಏರು ಏರೀದಾಂಗೆ
ಒದ್ದು ಒದ್ದು ಹಾಕಿ
ಹಿಸುಕಿ ಹಿಸುಕಿ
ರಕ್ತ ರಕ್ತ ಹರಿಸಿ
ರಕ್ತಾ ಬೀಜಾಸುರರಿಗೆ
ನಿನ್ನ ಅಂಗಿ ತೊಟ್ಟ
ಗೋಸುಂಬೆಗಳಿಗೆ
ತೋರಿಸ್ತೀನಿ ಗಾಂಧಿ!
ಮತ್ತೆ ನೀ,
ಕುಡಿ ಬ್ಯಾಡಂದಿ
ಕೊಲಬ್ಯಾಡಂದಿ
ನಾವುಳಿಯಾಕಿಲ್ಲ ಗಾಂಧಿ!

– **ಡಿ.ಬಿ. ಶಂಕರಪ್ಪ**

ಶರಣು ಶರಣಾರ್ಥಿ

ತಾತ, ನೀ ಸತ್ತ ಮೂರು ವರ್ಷಕ್ಕೆ ನಾ ಹುಟ್ಟಿದ್ದು,
ಮೋನ್ಯಾ ಎಂದು ನಿನ್ನ ಹೆಸರಿನಿಂದಲೆ
ಜೋಗುಳ ಹಾಡಿಸಿಕೊಂಡದ್ದು,
ಕಲ್ಲು- ಸಕ್ಕರೆ ಆಸೆಗಾಗಿ ಜಿಗಿಜಿಗಿದು ಕೇಕೆ ಹಾಕುತ್ತ,
ನಿನ್ನ ದಿನ-
ಆಚರಿಸಿದ್ದು,
ಗಾಂಧಿ ಟೊಪ್ಪಿಗೆ ಹಾಕಿದವರ
ಭಯಂಕರ ಭಾಷಣ ಕೇಳಿ
ಬಾಲ-ಬುದ್ಧಿಗೆ ಏನೂ ತೋಚದೆ-
ಗಾಂಧಿ ಮಾರಾಜಕಿ ಜೈ ಅಂದದ್ದು-
ಏನೋ ಒಂದು ತರದ ಮಜಾ
ಎನೋ ಒಂದು ಜೀವಂತ ಉದ್ರೇಕ ಅಷ್ಟೇ.

ಆದರೆ ! ಅಜ್ಜ, ನಿನ್ನ ಪಂಚೆ ಹರಿದು
ಮಸಿ ಅರಿವೆ ಮಾಡಿದ,
ನಿನ್ನ ಕೋಲು ಮುರಿದು ಒಲೆಗೆ ಹಾಕಿದ,
ನೀ ನಡೆದ ದಾರಿಯಲ್ಲಿ ಉಚ್ಚಿ ಹೊಯ್ದು....
ಈ ಸಮಾಜದಲ್ಲಿ
ನಾನು ಬದುಕಬೇಕೆಂದರೆ
ನಿನ್ನ ರಾಮರಾಜ್ಯದ
ಕನಸಿನ ಕನ್ನಡಿ ಒಡೆದು

ಕೈಗಳಿಗೆ ಚುಚ್ಚಿಚುಚ್ಚಿ
ರಕ್ತ ಚಿಮ್ಮುತ್ತಿದೆ.

* * *

ನೀ ಶಾಂತಿ ಎಂದೆ;
ನಾ ಜಪಿಸಿದೆ, ಜಪಿಸಿ
ಸೊಂಟವ ಮುರಿದುಕೊಂಡು ಬಿದ್ದೆ.
ಒಂದು ಕೆನ್ನೆಗೆ ಹೊಡೆದರೆ
ಮತ್ತೊಂದು ಕೆನ್ನೆ ನೀಡೆಂದೆ;
ನೀಡಿದೆ, ಮತ್ತೊಂದು ಏಟು ತಿಂದೆನಲ್ಲದೆ
ಬೆನ್ನಮೇಲೊಂದು ಗುದ್ದಿಸಿಕೊಂಡು
ಬಕ್ಕಬಾರಲೇ ಬಿದ್ದೆ.

* * *

ಹಿಂಸೆ ಮಾಡಬೇಡೆಂದೆ;
ಬಿಟ್ಟು ಬಿಟ್ಟೆ, ಆದರೆ
ರಟ್ಟೆಯ ಕಸುವು ವ್ಯರ್ಥವಾಗಿ
ವ್ಯಕ್ತಿತ್ವ ಕಳೆದುಕೊಂಡೆ
ಶರೆ ಕುಡಿಯಬೇಡೆಂದೆ
ಹುಂ ಎಂದೆ, ಆದರೆ
ಸೆರೆಮನೆ ಕಂಡೆ.
ಸತ್ಯವನ್ನೇ ನುಡಿಯೆಂದೆ;
ನುಡಿದೆ.
ಸೆಟೆದು ನಾ ಬಿದ್ದೆ-
ಎಂದಾಗ ಯಾರಿಗೆಬೇಕು
ನಿನ್ನ ಈ ತತ್ವಗಳು?
ಶರಣು ಶರಣಾರ್ಥಿ.

- ಶಿವಾನಂದ ಬೆಳಕೂಡ

ಕೊಲ್ಲಲೇ ಸಾಯಲೇ

ಉಪ್ಪಿಲ್ಲದ ಸಪ್ಪಂದ ತಿಂದು
ಒಡ್ಡರಗತೇಲಿ ಜೀವನಾ ನಡಿಸಿ,
ಬಡದಾಡಿ ಸ್ವಾತಂತ್ರ್ಯಾ ದೊರಕಿಸಿ ಕೊಟ್ಟಿ.

ನಿನ್ಯಾಗ ಉದ್ದುದ್ದ ಭಾಷಣಾ ಮಾಡ್ತಾರ,
ನಿನ್ನ ಹೆಸರಲೇ ಹಾಡೇ ಹಗಲ
ಹಲಕಟ್ಟಗಿರಿ ನಡಿಸ್ಯಾರ.
ದಿಕ್ಕಿಲ್ಲದವರನ್ನು ಉದ್ಧಾರ ಮಾಡಾಕ

ಹಗಲು-ರಾತ್ರಿ ಏಕೊಪ್ರಕಾರ ಹೋರಾಡ್ದಿ.
ಇಲ್ಲಿ ಇವರನ್ನ ನೋಡು,
ಅವರ ಮ್ಯಾಲ ಬಕಪಕ್ಷಿ ಹಂಗ ನೆದರಿಟ್ಟು
ನಡು ಮದ್ಯಾಣದಾಗ ಕುತ್ಗಿ ಕೊಯ್ಯಾಕ್ಹತ್ತ್ಯಾರ.

ಅಹಿಂಸಾ! ಅಹಿಂಸಾ!
ಅಂತ ಬಾಯಿ ಬಾಯಿ ಬಡಕೊಂಡ ಸತ್ತಿ.
ಆದ್ರ ಇವರು ಹಸ್ತ ಹಕನಾಕ ಆದ ಒಡಲಿಗೆ
ಕಿಸ್ತ ಕೊಡ್ಲಿ ಇಟ್ಟಾರ.

ನಿನ್ನ ವ್ಯಕ್ತಿತ್ವಾನ
ಗುಣಿಸಿ,
ನಿನ್ನ ತತ್ತ್ವಗಳನ್ನ
ಭಾಗಿಸಿ, ಶೇಷ

ಶೂನ್ಯ ಮಾಡಾಕ್ಹತ್ತಾರ
ನಿನ್ನಂಥ ಹತ್ತು ಮಂದಿ
ಹುಟ್ಟಿ ಬಂದು ಉಪದೇಶಾ ಮಾಡಿದ್ರೂ
ಮತ್ತs ತಮ್ಮ ಹಗ್ಗಾ ತಿನ್ನೂ ಚಾಳೀ ಬಿಡೂದಿಲ್ಲ.
ಇವರ್ಗಿ ಬುದ್ಧಿ ಹೇಳೂದಂದ್ರ
ಗುಡ್ಡಕ ನಾಯಿ ಒದರಿ
ಗೂದಿ ಹಾದು ಸತ್ತಂಗ.

ಯಾರದ್ಯೋ ಗಂಟು
ಯಲ್ಲವ್ವನ ಜಾತ್ರಿ ಮಾಡುವ ಈ
ತಿರಬೋಕಿ ಸನ್ಯಾಸ್ಕಳನ್ನ
ಅಡ್ಡ ಹಿಡಿದು ಕುರಿ ಕಡದ್ಹಂಗ ಕಡೀಬೇಕಂತನಸ್ತೈತಿ,
ಆದರೇನ್ಮಾಡ್ಲೀ?
ಗಾಂಧೀ ತತ್ವಾ ಸಾರಿ ಸಾರಿ ಹೇಳಿ
ಗೋಡಸೆಯಾಗಿ ಬದುಕವರ್ನ
ನೋಡಿ ನನ್ಗ ನಾನ
ಇರಕೊಂಡು ಸಾಯಂಗ ಆಗೈತಿ.

— ಬಾಪುಗೌಡ ಪಾಟೀಲ

ಲೋಕ ನಾಯಕನಿಗೆ

ಒಂದೇ ಏಟಿಗೆ
ಗುಂಡಿಕ್ಕಿ
ಕೊಂದೆವು ಅವನ
ನಿನ್ನ
ದಿನದಿನವೂ
ಚಿತ್ರವಿಚಿತ್ರ
ಹಿಂಸೆ ಕೊಟ್ಟು
ಅಣು
ಅಣುವಾ ಕೊಂದೆವು

ತುಟಿ
ಹೊಲಿದರೂ
ಹೇಗೆ
ತೆರೆಯುವುದೆಂದು
ಕಲಿಸಿದೆ
ಜೊತೆಗೆ ನೀ
ಕಂಡ ಕನಸು
ಕಟ್ಟಿದ ಕನಸು
ಕಟ್ಟಿದ ಸೌಧ
ನಿನ್ನೆದುರೇ
ಹತ್ತಿ ಉರಿದು

ಬೂದಿಯಾದುದ
ಕಂಡೆ.
ಆ ಬೂದಿಯ ಮೇಲೂ
ಹಸಿರು ಚಿಮ್ಮಿಸುವ
ಮಾಂತ್ರಿಕ ನೀನು
ಎಂದೇ ಮತ್ತೆ
ಭಯವಾಗಿತ್ತು
ಕೆಲ ಜನಕ್ಕೆ

ಆದರೂ
ನಿನ್ನ
ನೆನಪೊಂದರಿಂದಲೇ
ನಿನ್ನ ಬೂದಿಯ ಮೇಲೂ
ಹಸಿರು ಚಿಮ್ಮಿಸುವೆವೆಂಬ
ಛಲವುಂಟು
ನನ್ನಂಥ ನೂರಾರು ಜನಕ್ಕೆ

- ಚಂದ್ರಶೇಖರ ಆಲೂರು

ಗನ್ನು ಮತ್ತು ಗಾಂಧಿ

ಬೋ ಪರಾಕು ಗಾಂಧಿ ಮಹಾತ್ಮನಿಗೆ ಶಾಂತಿ ದೂತನಿಗೆ
ಬೋ ಫರಕಿನ ಷಹೀದನಿಗೆ ಏನಿಲ್ಲದ ಫಕೀರನಿಗೆ

ಗುಂಡಿಗೂ ಗಾಂಧಿಗೂ ಎಲ್ಲಿಲ್ಲದ ನಂಟು
ಗನ್ನಿಗೂ ಗಂಟಿಗೂ ಸಂಬಂಧವುಂಟು

ಪುಟಿಪುಟಿದು ಮತ್ತೆ ಬಂದು ಬಡಿದು
ಮುಚ್ಚಿಡಲಾಗದೆ ಬಿಚ್ಚಿ ಬಯಲಾಗಿ ನಿಂದು

ತಾತನಿರಲಿ ತಾಯಿಯಿರಲಿ ಎದೆಗೆ ತಾಗಿ
ಕುಸಿದರು ಭೂಮಿಗೆ ಜೀವ ನಶ್ವರವಾಗಿ

ಇಂದಿಗೂ ಗನ್ನು ವಿವಾದಗಳ ಚೆಂಡು
ಗುಂಡು ಹಾರುವ ಮೊದಲೇ ಚೆದುರಿತು ದಂಡು

ಹಾರಾಟ ಚೀರಾಟವೆಲ್ಲ ವಿಫಲ ತಿರುಮಂತ್ರ
ತಲೆ ಉಳಿಸಿಕೊಳ್ಳಲು ಇರುವುದೊಂದೇ ತಂತ್ರ

ಗನ್ನಿರಲಿ ಗಂಟಿರಲಿ ವಿವಾದಗಳಿರಲಿ
ಗಾಂಧಿ ನಗೆ ಮಾಸದಿರಲಿ ಪರ್ಸು ತುಂಬಿ ತುಳುಕಲಿ

ಅಂದಿಗೂ ಇಂದಿಗೂ ಗಾಂಧಿರಾಜ್ಯ
ಆದರೂ ಬಗೆಹರಿದಿಲ್ಲ ವ್ಯಾಜ್ಯ

- ಪ್ರತಿಭಾ ನಂದಕುಮಾರ್

ಸತ್ತಾವಾ- ಗೆದ್ದಾವಾ

ಗಾಂಧೀ,
ನೀ
'ಸತ್ತಾವಾ- ಗೆದ್ದಾವಾ'
ಇಂದ ನೀ ಒಂದು ವ್ಯಾಳೆ ಇದ್ದಿದ್ದರ, ನಿನ್ನ ಬಾಳೆ
ಹರಕ ಹೋಳಿಗೆ ಆಗತಿತ್ತ.

ನಿನ್ನ ಚರಖಾ ದರಕಾರ ಇಲ್ಲದ ಮುರಕೊಂಡ
ಮೂಲಿಗೆ ಬೀಳತಿತ್ತ
ಯಾರ ಕೇಳತಿದ್ದರ ನಿನ್ನ ಮಾತ?
ಮತ್ತೊಂದು ಹತ್ತ ಸಲ ಉಪವಾಸ ಕುಂತು
ಉಪ್ಪಿನ್ನೀರ ಕುಡದು ಕೂಳಗೇಡಿ ಆಗಿ
ಸತ್ತ ಹೋಗತಿದ್ದಿ.

ಇಂವ ಜಗತ್ತ ಸುಧಾರಿಸೇತಪಾ ಗಾಂಧಿ.
ಕಾಲ ಬಾಳ ನಾಜೂಕ ಆಗೇತಿ.
ನೀ ಸತ್ತಿಂದ ನಿನ್ನ ರಾಟಿ ಬಂದಾಗೇತಿ,
ಹಿರಿಯರ ಮಾನ ಹುಡುಗರೊಳಗೆ ಹೋತಂತ.
ದೌಡ ಸತ್ತಿ ಅಂತ ನೀ ಗೆದ್ದೀ.
ಮರ್ಯಾದಿ ಉಳಿಸಿಕೊಂಡ ಎದ್ದೀ.
ಅದಕs ಅಂದೆನೆಲ್ಲಾ ನೀ 'ಸತ್ತಾವಾ - ಗೆದ್ದಾವಾ'

'ನೀ ಸತ್ತಾವಾ - ಗೆದ್ದಾವಾ'
ನಾವು ?

ಇದ್ದವರು ಬಿದ್ದವರು.
ನಿನ್ನ ಟೊಪ್ಪಿಗಿ ಬುಡಕ ಬಿದ್ದು ಉಸರಗಟ್ಟಿ ಒದ್ದಾಡುವವರು.
ಹೋಗ್ಬಿಟ್ಟೆಲ್ಲೋ ಮಾರಾಯಾ, ನಮ್ಮನ್ನ ಪರದೇಶಿ ಮಾಡಿ.
ಹೋಗೂ ಮುಂದ ಹೇಳಿ ಹೋಗಬಾರದಿತ್ತೇನೋ.
'ಮುಂದೆ ಬಂದರೆ ಹಾಯಬೇಡಿ
ಹಿಂದೆ ಬಂದರೆ ಒದೆಯಬೇಡಿ'

ಹಂಗ ನೋಡಿದರ
ನೀ ಸತ್ತಾವಾ, ನಾವು ಗೆದ್ದವರು,
ನೀ ಸತ್ತಿಂದ ಸ್ವರ್ಗಾ ಕಂಡರ ನಾವು ಇದ್ದಾಗs ಕಂಡ್ವಿ
ನಿನಗ ಸ್ವರ್ಗಾ ಸಿಕ್ಕೈತಂತ ಏನ ಪ್ರೂಫ್ ಐತಿ?
ಮಡಿ ಖಾದಿ ಮೈ ಮ್ಯಾಲೆ ನಿನ್ನ ಟೊಪ್ಪಿಗಿ ತಲಿಮ್ಯಾಲೆ
ಇದ್ದರ ಮುಗೀತು ನಮಗ
ಸ್ವರ್ಗ ಸಂಗಾಟ, ಬಾರಾ ಖೂನ ಮಾಫ.
ನಿನ್ನ ನಾಮದ ಬಲ ಒಂದಿದ್ದರ ಸಾಕು-
ಭೂವಿ- ಮುಗಲ ಒಂದ ಮಾಡತೀವಿ.
ಬಿಚ್ಚಿ ಹೇಳೂದಾದ್ರ
ನಿನ್ನ ಹೆಸರಷ್ಟs ನಮಗ ಸಾಕಾಗಿತ್ತ.
ಅಂತ
ನೀ ಸತ್ತೀ ನಾವು?
ಸ್ವರ್ಗ ಸೇರಿದ್ವಿ.
ಇಂದ ನೀ ಇದ್ದಿದ್ದರ ನಮ್ಮಂಥ ಹೊಸ ಹುಡುಗರಿಗೆ
ಛಾನ್ಸ ಕೊಟ್ಟೀ ಏನಪಾ ನೀ?
ಅದಕs ಅಂದೆನಲ್ಲ
ನೀ ಸತ್ತಾವಾ
ನಾವು
ಗೆದ್ದವರು.

- ವ್ಹಿ.ಎಂ. ಮೇಟಿ

ಗಾಂಧಿಗೆ

ತಲಾಂತರಗಳಿಂದ ಬಹುದೂರ ನಡೆದು ಬಂದ
ಈ ದೇಶದಲ್ಲಿ ನೀನೊಮ್ಮೆ ಹುಟ್ಟಿದೆ.
ಎಲ್ಲರಂತೆ ಅಪ್ಪ- ಅಮ್ಮಗಳ ಕಂದನಾಗಿ
೧೯೪೭ರ ಆಗಸ್ಟ್ ೧೫ರ ಸ್ವಾತಂತ್ರ್ಯ ಕೂಗಿದೆ ಪಿತೃವಾದೆ;
ರಾಷ್ಟ್ರಪಿತನಾದೆ.
ರಾಷ್ಟ್ರ ಸುತನೊಬ್ಬನ ಗುಂಡಿಗೆ ಬಲಿಯೂ ಆದೆ.
ನೀನು ಎತ್ತರದ ವೇದಿಕೆ ಏರಿದೆ ನೂರಾರು ಘೋಷಣೆ
ಸಾರಿದೆ.

ಅನುಯಾಯಿಗಳ ಹೊಗಳಿಕೆಗೆ ಬೆಚ್ಚಿನಿಂತೆ.
ನಿನ್ನಂತೆ ಆಗಬೇಕೆಂಬ ಮಂದಿ
ಕೂಗಾಡುತ್ತಾರೆ, ನಂಬಿದವರ ಕೈಯಲ್ಲಿ ಚಪ್ಪಾಳೆ ತಟ್ಟಿಸಿ,
ಕೂಗಿ ಗಲಭೆಯೆಬ್ಬಿಸಿ, ಎದ್ದ ಧೂಳಿನಲ್ಲಿ ಮರೆಯಾಗುತ್ತಾರೆ
ಕನಸುಗಳನ್ನು ಸುಂದರ ಗಾಳಿಯಲ್ಲಿ ತೇಲಿಬಿಡುತ್ತಾರೆ.

ಆದರೆ ನೀನು ಎಲ್ಲರಿಗೂ ಒಟ್ಟಿಗೆ ನಡುಬೀದಿಯಲ್ಲಿ ಕೈಬಿಟ್ಟ
ತಬ್ಬಲಿಯಾದೆ.
ಎಲ್ಲರನ್ನು ಬಿಟ್ಟು ಹದ್ದು ಕಾಗೆಗಳ ಬಂಧುವಾದೆ.
ತಾತಾ, ನಿನ್ನಂಥವರು ಇರಲಿಲ್ಲ ನಿನ್ನ ಮುನ್ನ
ನೀನಿದ್ದೆ; ಸತ್ತ ಮೇಲೂ ನೀನಿಂತೆ.
ಭೂಲೋಕ ಜೀವ; ತ್ರಿಕಾಲ ಕೂಟ; ಮುಗ್ಗಾಲು ಓಟ
ನೀನು ಬಿಟ್ಟದ್ದೂ ಅಷ್ಟೆ; ನ್ಯಾಯ ನೀತಿ ಧರ್ಮ....

ನೀನು ಹೋದ ಈ ಎಲ್ಲವನ್ನೂ ಬಿಟ್ಟು ನಮ್ಮ ಪರ್ವಕಾಲಕ್ಕೆ
ಸರ್ವಕಾಲ ನಿನ್ನ ಉಳಿಗಾಲಕ್ಕೆ
ಈಗ ನಿನ್ನ ಹೆಸರು ನಮಗೆ ಒಳ್ಳೆಯ ಜಾಹಿರಾತು,
ನಿನ್ನ ಬಿಟ್ಟರಿಲ್ಲ ನಮಗೆ ಉಳಿಗಾಲ.
ನೀನೆಟ್ಟ ಬೀಜ, ಮೊಮ್ಮಕ್ಕಳು ನಮ್ಮ ಕಾಲಕ್ಕೆ ದೊಡ್ಡ ಮರ
ನಿನ್ನ ಮರ ಕೆಡವಲು ನಮಗಿಲ್ಲ ಸಾಮರ್ಥ್ಯ. ನಾವು ಅದನ್ನೇ
ಹತ್ತಿ ಕೂರುತ್ತೇವೆ.

ಸಾಧ್ಯವಾದರೆ ಹೊತ್ತು ತಿರುಗುತ್ತೇವೆ;
ತಾತಾ, ಈಗ ನೀನಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಗೊತ್ತಾ?
ನಮ್ಮ ಶೈಶವ ಲೀಲೆಗಳನ್ನು ನೋಡಿ ನಗಬಹುದಿತ್ತು;
ನಿನ್ನ ಬೊಚ್ಚು ಬಾಯಿ ತೆರೆದು ಕೇಕೆ ಹಾಕಬಹುದಿತ್ತು;
ನಮ್ಮ ಜೊತೆ ಬೆರೆತು ನಿನ್ನ ವೃದ್ಧಾಪ್ಯ ಮರೆತು!

ತಾತಾ, ನೀನು ಮಾಡಿದ ದೇಶ ನಮ್ಮದು, ನೀನು ನಮ್ಮಪ್ಪನ
ಕಾಲಕ್ಕೆ ಸತ್ತೆ

ನಿನ್ನ ದೇಶ ನಮ್ಮ ಕಾಲಕ್ಕೆ ಸಾಯಬಾರದು.
ನೀನು ಕತ್ತಲಲ್ಲಿ ಎಲ್ಲೆಲ್ಲೋ ಒಬ್ಬನೇ ನಡೆದೆಯಂತೆ
ನಡೆದು ಎಡವಿ ಬಿದ್ದು, ಕೊಡವಿಕೊಂಡು ಎದ್ದೆಯಂತೆ;
ಹೇಗೆ ಗೊತ್ತಾಗಬೇಕು? ನಿನ್ನಲ್ಲಿನ ಜಗದ ಪ್ರೀತಿ, ನೀತಿ,
ನೀನು ಸತ್ತ ಮೇಲೆ ಹುಟ್ಟಿದ ನಮಗೆ
ನಿನ್ನ ಯಾವುದೊಂದೂ ನಮ್ಮ ಪಾಲಿಗೆ ಅಂತೆ - ಕಂತೆ.

ಅಂತೂ ಮರ್ತ್ಯವೋ, ಪಾತಾಳವೋ; ಇಲ್ಲ ತ್ರಿಶಂಕುವೋ
ಎಲ್ಲವನ್ನೂ ಅಗಲಿ ನೀನು ಅಮರನಾದೆ
ನಿನ್ನ ಹೆಸರನ್ನು ನಮಗೆ ರಾಮನಾಮ ಮಾಡಿದೆ,
"ರಘುಪತಿ ರಾಘವ ರಾಜಾರಾಮ್...." ಉಳಿಯಬೇಕು;
ಉಳಿದಿದೆ ಉಳಿದು ಬೆಳೆಯುತ್ತಿದೆ.
ವಿಪರೀತ ವಿಪರ್ಯಾಸದ ಬ್ರಾಂದಿವಾದಿಗಳ
ಉನ್ಮತ್ತ ಕೂಟದಲ್ಲಿ ಸಿಕ್ಕಿ

ಮಹರಾಯ, ನೀನು ಸತ್ತಿದ್ದೇ ಒಳ್ಳೆಯದಾಯ್ತು ಬಿಡು,
ಸೊಗಡಳಿದ ದೊಂಬರಾಟಗಳ ನೋಡುವ ಪ್ರಾರಬ್ಧ
ತಪ್ಪಿತು.
ನೀನು ಈಗ ಇದ್ದಿದ್ದರೆ ನಿನ್ನನ್ನು ತ್ರಿಶಂಕು ಸ್ವರ್ಗದಲ್ಲಿ
ನಿಲ್ಲಿಸುತ್ತಿದ್ದೆವು
ನಿಲ್ಲಿಸಿ, ಎಲ್ಲರೂ ವಿಶ್ವಾಮಿತ್ರರಾಗುತ್ತಿದ್ದೆವು.
ವಿಶ್ವಮಾನವಾ, ಸರ್ವಕಾಲ ನೀನು ಅಮರ.
ನಮ್ಮಿಂದ ಬಾರದಿರಲಿ ನಿನ್ನ ಹೆಸರಿಗೆ, ನಿನ್ನ ಹೆಸರಿನ
ಟೋಪಿಗೆ ಬಂದ ಅರ್ಥ.
ದಿಕ್ಕುದಿಕ್ಕುಗಳೆಲ್ಲಿ ದಿಟದ ನಿನ್ನ ವಿಚಾರಗಳನ್ನು
ಮಾರುತ್ತಿದ್ದೇವೆ
ಎಲ್ಲ ಕಡೆ ನಿನ್ನನ್ನು ಮೆರೆಸುತ್ತಿದ್ದೇವೆ ಎಲ್ಲರಿಂದ ನಿನ್ನನ್ನು
ಮರೆಸುತ್ತಿದ್ದೇವೆ.

ನಿನ್ನ ಆದರ್ಶ ಎಲ್ಲರಿಗೂ ಎಲ್ಲ ಕಾಲಕ್ಕೂ ಬೇಕು
ನೀನಿಲ್ಲದ, ನಿನ್ನ ಅರಿವಿಲ್ಲದ ನಾವು ಪಾಪಿಗಳು.
ಬರೀ ನಿನ್ನ ನೆನಪಿನಲ್ಲಿ ನಡೆಯಲಾಗದೆ ನರಳುತ್ತಿದ್ದೇವೆ.
ನೀನು ಹಿಡಿದೆತ್ತಿದ ಅಹಿಂಸಾತತ್ವ,
ನಿನ್ನ ನಷ್ಟದಿಂದ ಕೊಟ್ಟಿವೆ ನಮಗರ್ಥ.

ನಿನ್ನ ನೆನಪೇ ನಮಗೆ ಶಕ್ತಿ
ನಿನ್ನ ನುಡಿ, ಅದುವೇ ಗೆಲುವು ನಮಗೆ ನಿನ್ನ ಮರೆವೆ
ಅಳಿವು ನಮಗೆ
ಬಿದ್ದಿದ್ದೇವೆ ಈಜು ಬಾರದ ನಾವು, ಸಾಗರದ ನಡುವೆ
ಕನಸಾಗಿದೆ ದಡಮುಟ್ಟುವ ವಿಷಯ
ಗಾಂಧಿ, ನೀಡು ನಮಗೆ ಜಗದ ಪ್ರೀತಿ, ರೀತಿ, ನೀತಿ.

— ಮಾರ್ಕಂಡಪುರಂ ಶ್ರೀನಿವಾಸ

ಪಂಜೆಯುಡಿಗೆಯ ಮುದುಕ

೧

ಅದೇ ಪಂಚೆಯುಡುಗೆಯಲಿ
ಕೋಲ್ಹಿಡಿದು ಕೈಯಲಿ
ಈಗಲೂ ಇಲ್ಲೊಬ್ಬ ಮುದುಕ
ತಿರುಗೇ ತಿರುಗುತ್ತಾನೆ
ಈ ಮನೆಯ ದುರ್ಗತಿ ಕಂಡು
ಬೇಸತ್ತು ಬಸವಳಿದು
ಹಗಲು-ರಾತ್ರಿ ಕೊರಗೇ ಕೊರಗುತ್ತಾನೆ.

೨

ಸತ್ತನೆಂದು,
ಸಾಯಿಸಿದವರು ನಾವೇ ಎಂದು
ಮೈಮುಟ್ಟಿ ಎದೆ ತಟ್ಟಿ
ನಾಲ್ಕು ರಸ್ತೆ ಕೂಡಿದಲ್ಲಿ ಮಾಡಿದ್ದೇವೆ
'ಭೂತಾ' ರಾಧನೆ
ಕಾಡಬಾರದು ಭೂತ
ವರ್ತಮಾನದ ಸುತ್ತ ಎಂದು
'ತಿಥಿ ನಕ್ಷತ್ರಗಳ ಅಕ್ಷಮಾಲೆಯ ಹಿಡಿದು'
ಸರಕಾರಿ ರಜೆ ಕೊಟ್ಟು
ಸಮಾಧಿಗೆ ಹೂ ಇಟ್ಟು

ಮೈಕು ಒದರಿಸಿ ಜಯಂತಿ ತಪ್ಪದೇ ಮಾಡುತ್ತೇವೆ.
ಈ ಗದ್ದಲ ಕೇಳಿ ಕಪ್ಪರಿಸಿಕೊಂಡು ಎದ್ದವನು
ಅದೇ ಪಂಚೆಯುಡುಗೆಯಲಿ....

೩

ಇರುವುದೊಂದೆ ಮನೆ
ಮನೆ ತುಂಬ ಗುದ್ದು, ಜಾಳಿಗೆ ಕಟ್ಟಿ ಬಿದ್ದಿದೆ ಧೂಳು
ಜಂತಿ ಒಬ್ಬರ ಕೈಗೆ, ತೊಲೆ ಒಬ್ಬರ ಕೈಗೆ
ಬಾಗಿಲು- ಕಿಡಕಿ ಕಲ್ಲು ಒಬ್ಬೊಬ್ಬರಿಗೆ
ಬೆಂಕಿ ಹತ್ತಿದ ಮನೆಯಲ್ಲಿ ಹಿರಿದುಕೊಂಡವನೆ ಜಾಣನೆ?
ಇಲಿ ಹೆಗ್ಗಣ ನಾಯಿ ನರಿ ಹಂದಿಗಳದೇ ರಾಜ್ಯ
ಎಲ್ಲಿ ನೋಡಿದರಲ್ಲಿ ರಕ್ತ ಬೀಜಾಸುರರು
ಕಾಣಬಾರದ ಕಂಡು ಮರು-ಮರುಗಿ
ಅದೇ ಪಂಚೆಯುಡುಗೆಯಲಿ...

೪

ಜಯಂತಿ- ಉತ್ಸವ, ಜಯಂತಿ - ಉತ್ಸವ
ತಿಂದರೆಷ್ಟೋ ಬಿಟ್ಟರೆಷ್ಟೋ
ಗಟಾರಕ್ಕೆ ಬಿದ್ದವು ಪತ್ರಾವಳಿ
ನೊಣಗಳಾಗಿ ಜೊಂಯ್ ಎಂದವು
ಹಸಿದ ಹೊಟ್ಟೆಯ ಜೋಳಗಿ
ಅಲ್ಲಿಯೇ ಮೂತ್ರ ಅಲ್ಲಿಯೇ ಕಕ್ಕಸು
ತುತ್ತಿನ ಚೀಲಕ್ಕೆ ಅಲ್ಲಿಯೇ ಅನ್ನದ ಅಗಳು.

೫

ಅಗೋ ಅಲ್ಲಿ......
ಬ್ರೆಕ್ಕಿಲ್ಲದ ಕಾರು ಅವುಗಳದೇ ಕಾರುಬಾರು
ಇವುಗಳ ಮೇಲೆ ಇಲ್ಲ ಯಾರದು ದೂರು
ಅವರಪ್ಪನದೇ ಈ ದೇಶದ ಹೆದ್ದಾರಿ

ದೂರು ಕೊಟ್ಟವರು ಸೇರುವರು ಗೋರಿ
ಗಾಲಿ ಗಾಲಿಗೆ ಸಿಕ್ಕು
ಕಕ್ಕುವವು ಎಳೆ ಕರುಳು
ರಕ್ತದೋಕುಳಿ ರಸ್ತೆಯುದ್ದಕ್ಕೂ
ಕಾರು ಹೊಕ್ಕವು ಬಾರು
ಬಿತ್ತು ನೋಟಿನ ಪೆಂಡಿ, ಹೆಂಡತಿಯಾದಳು ರಂಡಿ

೬

ಇಗೋ ಇಲ್ಲಿ....
ಹರಿದ ಸೀರಿಯಲಿ ನತ್ತಿಲ್ಲದ ಮೂಗು
ಬೋಳಾದ ಹಣೆ ಬಳೆಯಿರದ ಕೈಗಳು
ಕಂಬನಿಯ ಕಣ್ಣು
ಹೊತ್ತು ನಿಂತವಳು ಹೆತ್ತಮ್ಮ ಭಾರತಿ
ಯಾರು ಎತ್ತುವರಾಕೆಗೆ ಮತ್ತೊಮ್ಮೆ ಆರತಿ
ಅದಕ್ಕಾಗಿಯೇ ಏನೋ
ಅದೇ ಪಂಜೆಯುಡುಗೆಯಲಿ
ಕೆಂಡದುಂಡಿಯ ಕಟ್ಟಿಕೊಂಡು
ತಿರುಗೇ ತಿರುಗುತ್ತಾನೆ
ತಿರುಗೇ ತಿರುಗುತ್ತಾನೆ.

– ಸತ್ಯಾನಂದ ಪಾತ್ರೋಟ್

ಬಾಪುವಿನ ಗೋರಿಯ ಸುತ್ತ

ಅಗೋ ನೋಡು ಬಾಪೂ
ನಿನ್ನ ಗೋರಿಯ ಸುತ್ತಮುತ್ತ
ಆಗೊಮ್ಮೆ ಈಗೊಮ್ಮೆ ಸತ್ಯ-ಶಾಂತಿ-ಅಹಿಂಸೆಗಳ
ಅರೆಸತ್ತ ಸುಳಿಗಾಳಿಗಳು ಮೇಲೆದ್ದು ಮುತ್ತಿಕ್ಕಿ
ಸ್ಮಶಾನಶಾಂತಿಯ ನೀರವತೆಯಲ್ಲಿ ನೀರಾಗಿ
ಕರಗಿ ಹೋಗುತ್ತಲಿವೆ.

ಮಹಾತ್ಮಾ ನಿನಗೆಲ್ಲೊ ಭ್ರಾಂತು
ನಿನ್ನೆದೆಯ ಬಿಸಿಯುಸಿರು ನಿನ್ನ ಕಣ್ಣೆದುರಲ್ಲೇ
ಭಾರತೀಯರ ಭಾಷಣದ ರಸಗವಳಕ್ಕೆ ಎಸರಾಗಿ
ಹೋದದ್ದು ನೀ ಬಲ್ಲೆಯೇನು?
ಪಾಪ, ನಿನ್ನ ಸಾಚ ಬುದ್ಧಿಗೆ ಇದೆಲ್ಲಿ ಹೊಳೆದೀತು?
ನಿನ್ನ ನೋಡಿದವರೆಷ್ಟು ಜನವೋ?
ನಿನ್ನ ಹೆಸರೇಳಿಕೊಂಡು ದೊಡ್ಡವರಾದವರೇ ಭಾಳಾ
ನಿನ್ನ ತತ್ತ್ವಗಳೋ - ಜೀವಂತವಾಗಿವೆ (ಪುಸ್ತಕಗಳಲ್ಲಿ)
ಸಾಯದಂತಿರೆ ಸತ್ತು. ಜೀವಚ್ಛವವಾಗಿ ತಿರುಗುತ್ತಲಿವೆ.
ಒಂದೇ ಸಮ ಪರಿತಪಿಸುತ್ತಲಿವೆ "ಎಲ್ಲಿ ಅವ ಮುದುಕ
ಎಲ್ಲಿಹನು!" ಎಂದು ಹುಡುಕುತ್ತಲಿದೆ ನಿನ್ನ ಹುಚ್ಚು ಹಿಡಿಮ.

ನೀನಾದರೋ ನಿರಂತರವಾಗಿರುವ ನಿನ್ನ ಆ
ಶಾಂತ ಗಂಭೀರ ರುದ್ರ ಸಮಾಧಿಯಲ್ಲಿ
ಭಾರತೀಯರ ಹಂಗು ನಿನ್ನಾ ಶಾಂತಿಗೆ

ಭಂಗ ತರುವುದೇ ಬಾಪೂ?
ಹಾಗಿದ್ದರೆ ಹೇಳು ಮತ್ತೆ
ನಿನ್ನ ಗೋರಿಯ ಮೇಲೆ ಮಾಡುತ್ತೇವೆ ಇನ್ನಷ್ಟು ಗಿಲೀಟು
ಹೀಗೇ ಚರಿತ್ರೆಯ ಗುಂಡಿಯೊಳಗಿಟ್ಟು
ಅಡಗಿಸುತ್ತೇವೆ ನಿನ್ನ ಹುಟ್ಟು
ಹೀಗೇ ನೋಡುತ್ತಲಿರು ನೀನು, ಕೊನೆಗೆ
ಮರುಗುತ್ತಲಿರಬೇಕು ಒಳಗೊಳಗೇ
ಮಿಡುಕುತ್ತಲಿರಬೇಕು ನಿನ್ನ ಅಂತರಾತ್ಮ
ಓ ನನ್ನ ಪ್ರೀತಿಯ ಮಹಾತ್ಮ

- ಈರಪ್ಪ ಎಂ. ಕಂಬಳಿ

ಗಾಂಧಿಗೊಂದು ಪ್ರಶ್ನೆ

ಗಾಂಧಿ,
ಸತ್ತು ಹೋಗಿರುವ ಗಾಂಧಿ
ನೀನೂ ಒಬ್ಬ ಮನುಷ್ಯ
ಭೇದ ಭಾವವ ಅಳಿಸಲು
ಹರಿಜನೋದ್ಧಾರದ
ಮಾತುಗಳನ್ನುದುರಿಸಿದ ಗಾಂಧಿ;
ತುಂಡುಲಂಗೋಟಿಯ ಉಟ್ಟು
ಆಸರೆಗಾಗಿ ಕೈಯಲ್ಲಿ
ಕೋಲು ಹಿಡಿದ ಗಾಂಧಿ.
ಅಸಮತೆಯ ಅಗ್ನಿಗೆ
ಆಹುತಿಯಾಗಿರುವೆವು ನಾವು
ಆ ಧಣಿಯರ ಕಾಲಿಗೆ
ಚಪ್ಪಲಿ ಮೆಟ್ಟು ಹೊಲಿದು
ಬರಿಗಾಲಿನಿಂದ
ತಿರುಗುತ್ತಿದ್ದೇವೆ ಗಾಂಧಿ;
ನಮ್ಮ ಕೆಂಪನ್ನ ರಕ್ತ ಸುಟ್ಟು
ಕಪ್ಪನ್ನ ಮೋಡವಾಗುತ್ತಿದೆ.
ಈ ದೇಶದ ಚರಿತ್ರೆಯಲಿ
ಗುಡಿಸಲುಗಳ ಸುಡಿಸಿಕೊಂಡು
ಜೀವಂತ ಬೇಯಿಸಿಕೊಂಡ!

ಗಾಂಧಿ ಎಂಬುವ ಹೆಸರು / ೨೫೬

ದುಡುಮೆಯನು ಮಾಡಿಕೊಂಡ
ಜನತೆ;
ಗಾಂಧಿ, ಗಾಂಧಿಗಳ ಬಗ್ಗೆ
ಸತ್ಯ ಅರಿಯುವದು?
ಸರಿಯಲ್ಲವೇ ಗಾಂಧಿ?

– ಕೆ. ಶರೀಫಾ

ಇಂದು ಸ್ಮರಿಸಿ ಬಿಡುತ್ತೇವೆ ಏಕೆಂದರೆ....

ಮುರಿದು ಬೀಳುವಂತಿರುವ
ನನ್ನ ಮನೆಯ ಜಂತೀ ನೋಡಿದಾಗೊಮ್ಮೆ
ಅಕ್ಟೋಬರ ಜನವರಿಗಳಲ್ಲಿ ಒಮ್ಮೊಮ್ಮೆ
ತಪ್ಪದೇ ನೆನಪಾಗುವ ಗಾಂಧೀ!
ಎಷ್ಟು ದೊಡ್ಡದಪ್ಪ ನಿನ್ನ ನಾಮದ ಬಲ.

ನಾವು ಹಸಿವಿನ ಸಾಮಾನ್ಯ ತೋಟವಾಗಿರುವ
ಈ ನೆಲದ ಜನ
ಇನ್ನೂ ಬದುಕಿದ್ದೇವೆ.
ಹಿಂದೊಮ್ಮೆ ನಿನಗೆ, ಮೊನ್ನೆ ತನಕ ಒಬ್ಬ ಗಾಂಧಿಗೆ.
ಇಂದು ಇನ್ನೊಬ್ಬ ಕಿರಿಕಿರಿ ಗಾಂಧಿಗೆ
ಗಂಟಲಾರುವ ತನಕ ಜೈ ಎನ್ನುತ್ತ
ಕೈ ಸೋಲುವ ತನಕ ಚಪ್ಪಾಳೆ ಹೊಡೆಯುತ್ತ
ಪ್ರಗತಿ ಪಥದಲ್ಲಿದ್ದೇವೆ, ಮುನ್ನಡೆದಿದ್ದೇವೆ.

ಗಾಂಧೀ-
ನೀನಾಗ ಕುಳಿತು ಗೋಣು ಹಾಕುತ್ತ ತಾಳ ತಟ್ಟುತ್ತ
ಭಜಿಸುತ್ತಿದ್ದ ಮಂದಿರದ ಬಣ್ಣ, ನೆಲ, ನಿನ್ನ ನೆನಪು
ಎಲ್ಲ ಹಳೆದಾಯಿತು
ಇನ್ನೂ ನಿನ್ನ ಭಗವಾನ
ಸಬ್‌ಕೋ ಸನ್ಮತಿ ಕೊಡಲಿಲ್ಲ

ಗಾಂಧಿ ಎಂಬುವ ಹೆಸರು / ೨೫೫

ನಾವೂ ಪ್ರಾರ್ಥನೆ ಮಾಡಬೇಕೆ?
ಹೊಟ್ಟೆಯಲ್ಲಿ ಹಸಿವು ಹುಚ್ಚೆದ್ದು ಕುಣಿಯುವಾಗ
ನಿನ್ನ ಸ್ಮರಣೆ ಮಾಡೋಣವೆ?
'ವೈಷ್ಣವ ಜನತೋ' ಹೇಳೋಣವೆ?
ವಿಕೇಂದ್ರೀಕರಣದ ಉರುಲಿಗೆ ಶಿರ ಚಾಚೋಣವೆ?
ಬೇಡ ಮಹಾಶಯ ಯಾವುದೂ ಬೇಡ.
ನಿನ್ನ ಸ್ಮರಿಸುತ್ತೇವೆ ಇಂದು.

ರಾತ್ರೋರಾತ್ರಿ ಅಧಿವೇಶನದ ವೇದಿಕೆಯೊಂದರಿಂದ
ಜಿಗಿದೆದ್ದು ಬಂದ ಅವಸರದ ನಾಯಕ ನೀನಲ್ಲದ್ದರಿಂದ
ಮತ್ತು
ಇಂದು ನೀ ಕೊಲ್ಲಿಸಿಕೊಂಡ ದಿನವಾದ್ದರಿಂದ
ನಿನ್ನ ಸ್ಮರಿಸುತ್ತೇವೆ ಇಂದು.

– ಅಶೋಕ ಶೆಟ್ಟರ

ಂಧಿ ಅಮರನಾಗಲಿ

ಗಾಂಧಿ ಸತ್ತಿಲ್ಲ.
ಅವನು ಕೊಲೆಯಾಗಿಲ್ಲ
ಗೋಡ್ಸೆ ಗುಂಡು ಹಾರಿಸಿ
ಗಾಂಧಿಯನ್ನು ಇತಿಹಾಸವಾಗಿಸಿದನೇ?
ಇಲ್ಲ. ಅದೆಲ್ಲಾ ನಿಜವಲ್ಲ
ಗೋಡ್ಸೆ ಕೇವಲ ನೆಪ.
ಗಾಂಧಿ ಇನ್ನೂ ಬದುಕಿದ್ದಾನೆ.
ಅವನ ಕಣ್ಣು, ಬಾಯಿ, ಕಿವಿಗಳಿಗೆ ಕಪ್ಪು ಬಟ್ಟೆ ಕಟ್ಟಿ
ಕೈ ಕಾಲಿಗೆ ಹಗ್ಗ ಸುತ್ತಿ
ಕತ್ತಲ ಕೋಣೆಯಲ್ಲಿ ದೂಡಿದ್ದೇವೆ.
ನಮ್ಮ ಬೇಳೆ ಬೇಯಿಸಲು
ಕಣ್ಣು ಮುಚ್ಚಿ ಬಂಧಿಸಿಟ್ಟಿದ್ದೇವೆ.
ಈಗ ಅವನಿಗೆ
ಹಸಿವು, ದುಃಖಗಳಿಂದ ಕಂಗಾಲಾದವರ ಕೂಗು ಕೇಳಿಸಲಾರದು;
ಚಿಂದಿ ಬಟ್ಟೆ ತೊಟ್ಟ ಮುರುಟಿದ ದೇಹ ಕಾಣಿಸಲಾರದು
ಸರಕಾರಿ ಕಛೇರಿಗಳಲ್ಲಿ ಹೆದರಿಸುವ ಉದ್ದುದ್ದ ಕೈ
ಮುಂಬಯಿಯ ಗಲ್ಲಿಗಳಲ್ಲಿ ಬತ್ತಲಾಗುವ ಮೈ;
ಕುರ್ಚಿಗಾಗಿ 'ಸರ್ವತ್ಯಾಗ' ಮಾಡುವವರ ದಬ್ಬಾಳಿಕೆ
ಒಂದು ಕಣ್ಣು ಮುಚ್ಚಿ ಕೊಡುತ್ತಿರುವ ಹೇಳಿಕೆ:
ಮತ್ತೆ ಮತ್ತೆ ಮರುಕಳಿಸುವ

ಸೋಡಾ ಬಾಟ್ಲಿ, ಮಚ್ಚು, ಲಾಠಿ, ಗುಂಡುಗಳ ಸದ್ದು ಇತ್ಯಾದಿ -
ಎಲ್ಲದಕ್ಕೂ ಅಸಹಾಯಕ-
ಸ್ವಾತಂತ್ರ್ಯ, ದೊರಕಿಸಿ ಕೊಟ್ಟು ತಪ್ಪು ಮಾಡಿದ ಗಟ್ಟಿ ಮುದುಕ
ಸಾವಿಲ್ಲದ, ನಿರ್ಮಲ ಗಾಂಧಿಗೇತಕೆ ಈ ಚಿತ್ರಹಿಂಸೆ?
ಅಕ್ಟೋಬರ್ ಎರಡರಂದು
ಆಗಸ್ಟ್ ಹದಿನೈದರಂದು
ಕತ್ತಲ ಸೆರೆಮನೆಯಿಂದ ಎಳೆದು ತಂದು
ಮುಳ್ಳು, ಸೂಜಿಗಳಿಂದ
ಬಹಿರಂಗವಾಗಿ ಚುಚ್ಚುತ್ತೇವೆ. ಹಿಂಸಿಸುತ್ತೇವೆ
ಇಪ್ಪತ್ತನೇ ಶತಮಾನದಲ್ಲಿ ಉಸಿರಾಟ ಕಷ್ಟವಾಗಿರುವ
ಚಿರಂಜೀವಿ ಮುದುಕನನ್ನು,.

ಅಯ್ಯೋ, ಸೋದರರೇ
ಗಾಂಧಿ ಸೊರಗಿದ್ದಾನೆ, ಕರಗಿದ್ದಾನೆ.
ಧ್ವನಿಯೆತ್ತಲು
ಭಾರತ ಸುತ್ತಿ ಬರಲು
ತ್ರಾಣವಿಲ್ಲ, ಕೈಕಾಲುಗಳಲ್ಲಿ ಶಕ್ತಿ ಇಲ್ಲ.
ಕಲ್ಲು ತೇಲುತ್ತಿದೆ
ಉಳಿದಿರುವುದು ಈಗ ಉಸಿರೊಂದೆ
ಬನ್ನಿ, ಸೋದರರೇ,
ಗಾಂಧಿಗೆ ಈಗ ಜೀವ ತುಂಬೋಣ
ಬುದ್ಧಿವಂತಿಕೆಯಿಂದ ಆಧಾರವಾಗಿ ನಿಲ್ಲೋಣ.

ಗಾಂಧಿ ನಮ್ಮೆಲ್ಲರ ನಡುವಿನ
ಅಡ್ಡ ಗೋಡೆಯ ಕೆಡವಿ ತೇಜಸ್ಸಿನಿಂದ ನಗಲಿ
ಗಾಂಧಿ ಅಮರನಾಗಲಿ!

- ಹರೀಶಕುಮಾರ ಕೆ.

ಗಾಂಧಿ ಮತ್ತು ಜಗದಂಬಾ ಕ್ಯಾಲೆಂಡರ್

ಬಾಪೂಜಿ ನೀ ಸೊನ್ನೆಯಾಗಿ ಶೂನ್ಯದಂಗಳದಲ್ಲೋ
ಫಡಫಡಿಸೋ ಯಾವುದಾದರೊಂದು ಗಿಳಿಯಾಗಿದ್ದರೆ
ಈಟೊತ್ತಿಗೆ ನಿನ್ನ ಹೆಸರಿನ ಹಿಂದ
ಏಸೊಂದು 'ಶ್ರೀ'ಗಳ ಸರವೇರುತ್ತಿತ್ತೋ ನಾ ಹೇಳ್ಲಾರೆ.

ಏಟಾದರೂ ನೀ ರಾಜ್ಯಕ್ಕ ಅದೂ ನಮ್ಮ ಸುಖದ ರಾಜ್ಯಕ್ಕ
ಹೋರಾಡಿದವ, ರಾಜಕೀಯ ಮಾಡಿದಾಂವ
ಸ್ವದೇಶ, ಸ್ವಾತಂತ್ರ್ಯ ಅಂತ ಬಡ್ಕಂಡ ಮನಸ್ಯಾ ನೀನು
ಉಪ್ಪಿಲ್ಲದ ಊಟ ಉಂಡು ಉಪ್ಪಿಗಾಗಿ ಚಳವಳಿ
ಹೂಡಿದ ಥೇಟ್ 'ಜನನಾಯಕ'.
ಸತ್ಯ ಅಹಿಂಸೆ ತ್ಯಾಗ ಅಂತ
ಪುಗಶೆಟ್ಟಿ ಚೂರುಮರಿ ತೂರಿ
ಅರ್ಧ ರಾತ್ರಿಲೇ ಕೆಂಪು ಮಾರಿ ಅಲಾಯಿ ದೇವರ್ನ
ದಫನ್ ಮಾಡ್ದಿ; ಮತ್ತ ಅದ ಕುಣಿ ಕಿಚ್ಚಿನಾಗ ಬಿದ್ದು ಉಳ್ಳಿ ಹ್ವಾದಿ
ಹೂನಪ್ಪs ಉಳ್ಳಿ ಹ್ವಾದಿ.
ಅವೊತ್ತು ನೀ ಹಂಗ ಹ್ವಾದಿ ಅಂತsನ
ಇವೊತ್ತು ನಿನ್ನ ನಾಮದ ಬಲ ಜಗತ್ತಿನ ಕುಂಡಲ್ಯಾಗ
ಗುರುವಿನ ಸ್ಥಾನದೊಳಗ ಗಟ್ಟಿಮುಟ್ಟಾಗೇತಿ
ಮತ್ತೆ ನಿನ್ನ ದೇಹದ ಬೂದಿ ಮಾತ್ರ
ಶನಿದೇವರ ಮನ್ಯಾಗ ತಣ್ಣಗೈತಿ.

ನೀ ಕಟ್ಟಿದ ರಾಮರಾಜ್ಯದ ಕನಸಿನ ಕಳಸವ ಸುತ್ತಲೂ
ಕಾಗೆ, ಹದ್ದು, ಗಿಡುಗ ಪಹರೆ ಹೊಡಿಯಾಕ ಹತ್ತಿ
ಭಾಳ ದಿವ್ಸಾತು.
ಹಾಂ ಕನಸು ಅನ್ನನ ಗಪ್ಪನ ನೆಪ್ಪಾತು ನೋಡು
ಮೊನ್ನೆ ನನಗೂ ಕನಸು ಬಿದ್ದಿತ್ತು
ಅದೆಂಥ ಕನಸು ಅಂತೀ ಯಜ್ಜಾ....
ಸುದ್ದ ನೀನು ಪಾರ್ಕಿನಾಗೀನ ತೋಳು ಕಡದು ನಿಲ್ಸಿದ್ದ
ನಿನ್ನ ಮೂರ್ತಿಗೆ ಕಾಲು- ಕೈ ಕಣ್ಣು ಮೂಡಿಧಂಗಾಗಿ
ಜೀವ ಬಂದಂಗಾಗಿ
ನೀ ಒಬ್ಬವನು ಬತ್ತಲ ಕುದುರಿ ಏರಿ ಯುದ್ಧಕ್ಕೆ ಹೊಂಟ್ಹಂಗ

ನಿನ್ನ ಕುದುರಿ ನಿನಗs ಅಸಗೊಳ್ದ
ಮುಗಿಲ ಕಡೆ ಜಿಗಿಯಾಕ ಹೋಗಿ
ನೀ ಬಿದ್ದಿ ಬಿದ್ದಿ ಅನ್ನೂದಕ ಫಕ್ಕನ ಎಚ್ಚರಾತು

ನೆಟ್ಟಗ ಕಣ್ಣು ಕಿಸ್ತು ನೋಡಿದರ
ಎದುರಿಗಿನ ಗ್ವಾಡಿಗೆ ತೂಗು ಹಾಕಿದ ಕ್ಯಾಲೆಂಡರ
ಒಳಗಿನ ಜಗದಂಬ ಕೆಕ್ಕರಿಸಿ ನಗ್ತಾಳ;
ಅವಳ ಕುಂಕುಮ ಮೆತ್ತಿದ ಹಣಿ
ರುಂಡದ ಸರ ಇಳೀಬಿಟ್ಟ ಕುತಿಗಿ
ಕೆಂಡದಂಥ ಕಣ್ಣು
ಡಬಗಳ್ಳಿ ಹಣ್ಣಿನಂಥ ಹಸೇ ನಾಲಿಗಿ
ಅಚ್ಚೀಕ- ಇಚ್ಚೀಕ ನಾಕು ಕೈ
ಮೂರು ಕೈಯಾಗ ಮೂರು ಆಯುಧ
ಒಂದ್ ಕೈಯಾಗ ನೆತ್ತರು ಸೋರೋ ರುಂಡದ ಜುಟ್ಟು.....

ನನಗ ನೋಡಾಕ ಆಗದ ಕಣ್ಮುಚ್ಚಾಕ ಹ್ವಾದರ
ಕಣ್ತುಂಬ ಎದಿತುಂಬ ಕಿವಿ ತುಂಬ
ಅವಳ್ದ ನಗೀ ರೂಪ.
ಆದರs ಒಂದ್ ಮಾತು

ಆ ಜಗದಂಬೀ ಕೈಯಾಗಿನ ರುಂಡದ ಹೋಲಿಕಿ
ನಿನ್ನಂಗs ಇತ್ತು ಅನ್ನೂದನ್ನ
ನಾ ಇನ್ನೂಮಟ ಮರಿಯಾಕಾಗಿಲ್ಲ.

- ಬಸವಲಿಂಗ ಸೊಪ್ಪಿಮಠ

ಸರ್ವೋದಯ ಮತ್ತು ಗಾಂಧೀಜಿ

ದೇಶದ ತುಂಬಾ ಉದಿಸಿ ಬಿಡುವ ಸಕಲಷ್ಟು ವೈಭವಗಳೂ
ಪುರಾತನ ಗುಡಿಗುಡಾರದ ತತ್ತ್ವ ಪ್ರಾಸಾಧನಗಳಲ್ಲಿ ನೀನು
ಮತ್ತೆ ಅವತರಿಸುವ ಸಂಗತಿ ನಮಗೇನು ಆಶ್ಚರ್ಯವಾಗಲಿಲ್ಲ
ಗಾಂಧೀಜಿ, ನಿನ್ನ ಅಸಹಕಾರದ ಮಹಿಮೆ, ಸರ್ವೋದಯದಲ್ಲಿ
ಅರಳಿದ್ದು-ಹೂಬಿಟ್ಟು ಘಮಘಮಿಸುವ ಮುನ್ನ
ಅದರ ಬೆಂಬೂದಿ ಮೂರ್ತದಿಂದ ಅಮೂರ್ತದಲ್ಲಿ ಹೊರಳಿ
ಮಣ್ಣಾಗಿರುವ ಹುಡಿಬಯಕೆ ಇನ್ನಾಲಗೆಯ ತತ್ತ್ವ ಸಾರವೇ:
ನಮಗೆ ಆಶ್ಚರ್ಯವಾಗುತ್ತದೆ ನನ್ನ ಜನರ ನೆಲದ ಸ್ವಭಾವವೇ
ಹೀಗೆ ಏನೊ ಅಂತ. ನಿನಗೆ ದಿಗ್ಭ್ರಮೆಯಾಗಬಹುದು:
ನಿನ್ನ ನೆಲದ ಬಿರಿಮುಗುಳಿಗೂ, ನಮ್ಮ ನೆಲದ ಗಾಳಿಗೂ
ಇರುವ ಅಜಗಜಾಂತರ ವ್ಯತ್ಯಾಸದ ಫಲದಲ್ಲಿ ಆದರೆ,
ಉಂಡಗಾಳಿಯ ತಂತು ಬಂಧಿಸಿರುವುದೇ ಹಾಗೆ ಏನು
ಮಾಡಲಿಕ್ಕೆ-
ಆದೀತು? 'ಆಗ್ನೇನಯ ಸಂಪಥರಾಯನ್ ಆಸ್ಮಾನ್' ಅನ್ನುವ
ವೇದಕಾಲೀನ ಮಾತು ಜಗಜ್ಜಾಹೀರಗೊಳಿಸುವ ನಿನ್ನ ಜುಜುಬಿ
ಪ್ರಸಂಗದ ತುಣುಕುಗಳು ಕಣ್ಣು, ನಾಲಿಗೆ, ಶಿರ್ಷ, ಚರ್ಮಕ್ಕೆ
ಅಂಟಿ ಬಂದೂದಲ್ಲ ಅನ್ನುವುದನ್ನು ತಿಳಿದರೆ ನಿನಗೆ
ಮೂಗಳತೆಗೂ ಕಣ್ಣಾಸರೆಯಾಗುವುದಿಲ್ಲವಷ್ಟೆ?
ಗಾಂಧೀಜಿ ನನಗೆ ಇಬ್ಬಗೆಯ ನೋವು, ನಿನಗೆ ಮೂಬಗೆಯ
ನೋವು. ನಿನ್ನ ತತ್ವಗತಿಯ ಅನುಸಂಧಾನದ ಕೊಳೆ

ಹಬ್ಬಿ ಹಸರಿಸುವ ನೀತಿಗೆ, ಹುಡುಕಬಾರದ ಸ್ಥಿತಿಯಂತೂ ಅಲ್ಲ;
ದುಡುಕಿದರೂ ಫಲವಿಲ್ಲದ ತ್ಯಾಗ ಉಪೇಕ್ಷೆಯಲಿ ಫಲಿಸುವುದೆ?
ಇಂದಿಗೂ ನಿನ್ನ ಹೆಸರಿನಲಿ ನಾವು ಹಚ್ಚುವ ಮಂತ್ರ ಪೂಜೆ
ಬಾಯಿಪಾಠ, ಕರುಳಿನ ಸಂಬಂಧ ಕಾಲ್ಗತಿ, ಬರಿ ತುಣುಕು
ತುಣುಕು ಮಾತ್ರ
ಹೊಟ್ಟೆಬಿರಿಯ ಉಂಡು ನೆಲದಲ್ಲಿ ಬೇರುಬಿಡುವ ನಮ್ಮ
ಮನಸ್ಸಿಗೆ ನೀನಿನ್ನೂ ಕೂತು ಝಗಝಗನೆ ಹೊಳೆಯಿಸುವ
ದೀಪವಾಗಿಲ್ಲದ್ದೇ ನಮ್ಮ ಈ ಸ್ಥಿತ್ಯಂತರಕ್ಕೆ ಒಂದು
ಅರ್ವಾಚೀನ ದಾಖಲೆ

ಗಾಂಧೀಜಿ ಕೊನೆಯ ಮಾತಿದು ನಿನ್ನ ಆತ್ಮಪೌರುಷದ ಮಂತ್ರ
ಸರ್ವೋದಯದಲ್ಲಿ ನಿನ್ನ ಮಾತುಗಳು ಗಟಾರದಲ್ಲಿ ಹರಿಯಿಸುವ
ನಿನ್ನವರ ಜಾಣ್ಮೆ ಮಾತ್ರ ಹೊಣೆಗೇಡಿತನದ ದ್ರೋಹದ
ಮಾತುಗಳು
ಮತ್ತೆ ನಿನ್ನ ಪುಸ್ತಕದ ಬದನೆಕಾಯಿಯ ಪಾಠಕ್ಕೆ ಮಗ್ಗುಲಾಗಿ
ರಾತ್ರೀ ಶಯನದಲ್ಲಿ ದಿಂಬಿಗೆ ಹೊರಳುವವರ ಮಂತ್ರಪಾಡು
ಮಾತ್ರ ನೀನು ಊಹಿಸಿರದ ಜಾಣ್ಮೆಯಾಗಿತ್ತು: ಆದರೆ
ಕಾಲ್ಗತಿಯ
ಬಲ್ಮೆಗೆ ಯಾರು ಮಾಡಲಿಕ್ಕಾದೀತು? ಎಂದು
ಹೇಳುವೆಯೇನೋ?

ಆದರೆ, ಇಂತಿಷ್ಟು ವಿಧದಲ್ಲೂ ನಿನ್ನ ಸ್ಥೈರ್ಯದ ತಂತು
ಕಡಿಯದೆ
ಉಳಿದದ್ದು ನನಗೆ ಮತ್ತಷ್ಟು ಆಶ್ಚರ್ಯವಾಗಿದೆ ನನ್ನ
ನಿವೇದನೆಯಲ್ಲಿ ನಿನ್ನ ನೀವೇದನೆಯಾದರೂ ಬರಲಿ- ಸರ್ವರ
ಉದಯದ
ಮಂತ್ರಕ್ಕೆ ಇಲ್ಲದಿದ್ದರೆ ತಮಗೆ ತಾವೇ ಬಲಿಬೀಳಲಿ
ಜರತ್ಕಾರುವಿನ ಪೀಳಿಗಗೆ

- ಮಲ್ಲೇಪುರಂ ಜಿ. ವೆಂಕಟೇಶ್

ಗಾಂಧಿ

ಇದ್ದಾಗಲೇ
ಯಾವುದಕ್ಕೂ
ಅಪೇಕ್ಷಿಸದ ಗಾಂಧಿಯನ್ನು
ಗಾಂಧಿ ಭವನ
ಗಾಂಧಿ ನಗರ
ಗಾಂಧಿ ಬಜಾರ
ಎಂದೆಲ್ಲ ಹೊರಗೇ
ನೇತಾಡುವ ಬಾಪೂಜಿ
ಎಂದೂ ನಮ್ಮ ಮನ ಮನೆ ಅಂಗಡಿಗಳೊಳಗೆ
ಬರಲೇ ಇಲ್ಲ
ಮನಮಂದಿರದಲ್ಲಿ ನೆಲೆಸಲೇಯಿಲ್ಲ.

– ಸರೋಜ ಇಟ್ಟಣ್ಣವರ

ಈ ದೇಶದ ಗಾಂಧೀ

ಸ್ವಾತಂತ್ರ್ಯ ತಂದವ
ಪಾಕಿಸ್ತಾನ ಕೊಟ್ಟವ
ರಾಮ ರಾಮ ಎಂದು ಸತ್ತ
ಈದೇಶದ ಗಾಂಧೀ

ಖಾದಿ, ಗಾಂಧೀ ಎಲ್ಲಾ ಒಂದೇ
ಖಾದಿ ಹೆಸರಲಿ ಮೋಸ ಮಾಡಿ
ಜನರಿಗೆಲ್ಲ ಟೊಪ್ಪಿಗೆ ಹಾಕಿದ
ಈ ದೇಶದ ಗಾಂಧೀ

ಸಂವಿಧಾನ ಶಿಲ್ಪಿ ಸಮಾನತೆ
ಕೇಳಿದಾಗ ಹಿಂದೂ ಧರ್ಮದ್ವೇಷಿ
ಎಂದು ಪಿತೂರಿ ನಡೆಸಿದ
ಈ ದೇಶದ ಗಾಂಧೀ

ಟಾಟಾ ಬಿರ್ಲಾ ಏಜಂಟಾಗಿ
ಖಾದಿ ಜನರನ್ನ ಮುಂದೆ ತಂದು
ರಾಮರಾಜ್ಯ ಕನಸು ಕಂಡ
ಈ ದೇಶದ ಗಾಂಧೀ

ಗಾಂಧೀ ಸತ್ತು, ಗಾಂಧೀ ಬಂದರು
ಬಡವರ ಕಷ್ಟ ತೀರಲಿಲ್ಲ

ಬಡಜನತೆ ನಮ್ಮ ಉಸಿರು ಎಂದು ಮೆರೆದ
ಈ ದೇಶದ ಗಾಂಧೀ

ಕೋರ್ಟು ತೀರ್ಪು ಧಿಕ್ಕರಿಸಿ
ನ್ಯಾಯಾಲಯಕ್ಕೆ ಮುತ್ತಿಗೆ ಹಾಕಿ
ತುರ್ತುಪರಿಸ್ಥಿತಿ ತಂದ
ಈ ದೇಶದ ಗಾಂಧೀ
ದೇಶವೇ ತಮದೆಂದು
ಕೋಟಿ ಕೋಟಿ ಖರ್ಚುಮಾಡಿ
ಪ್ರಚಾರ ನಡೆಸಿದ
ಈ ದೇಶದ ಗಾಂಧೀ

ಬಡತನ ಹೆಚ್ಚಾಯಿತು
ಬರಗಾಲ ಅಧಿಕವಾಗಿ
ಖಜಾನಿ ಖಾಲಿ ಮಾಡಿದ
ಈ ದೇಶದ ಗಾಂಧೀ

ಗಾಂಧೀ ಗಾಂಧೀ ಕಾಲದಲ್ಲಿ
ಕಳ್ಳಬಟ್ಟಿ ಅಧಿಕವಾಗಿ
ಮಧ್ಯಪಾನ ಬೇಕೆಂದ
ಈ ದೇಶದ ಗಾಂಧೀ

ಪೈಲಟ್ ಕೆಲಸ ಬಿಟ್ಟು
ದೇಶ ಸೇವೆ ಮುಂದು ಮಾಡಿ
ಅವ್ವನ ಚಾಳಿ ಪುಢಾರಿಯಾದ
ಈ ದೇಶದ ಗಾಂಧೀ

ರಾಜ್ಯ ಹೋಗಲಿ, ರಾಜ್ಯ ಬರಲಿ
ರಾಮ ರಾಜ್ಯ ಕನಸಿಗಾಗಿ
ಚಲನಚಿತ್ರ ನೋಡಿರೆಂದ
ಈ ದೇಶದ ಗಾಂಧಿ

ಸತ್ತ ಗಾಂಧೀ ಮತ್ತೆ ಬಂದು
ಕೋಟಿ ಕೋಟಿ ಖರ್ಚು
ಮಾಡಿಸಿ ಚಲನಚಿತ್ರದಲ್ಲಿ ನೋಡಿ
ಈ ದೇಶದ ಗಾಂಧೀ

ನಮ್ಮ ನಡುವೆ ನಿಂತ ದೀನ
ದಲಿತ ಜನರ ಹಲ್ಲೆ ಗೈದ
ಈ ದೇಶದ ಗಾಂಧೀ
ಯಥಾಸ್ಥಿತಿಗೆ ನಾಂದಿ.

– ವಿ. ಮುನಿವೆಂಕಟಪ್ಪ

ಅನಾಥ ದೇಹ ಪ್ರದರ್ಶನ

ಜೀವಿತದಲ್ಲೆ ಹುತಾತ್ಮನಾಗಿ ಹೋದ ಮೋಹನದಾಸನ
ದೇಹ ಯಾವ ಕಲಾವಿದನ ಲೆಕ್ಕಣಿಕೆ ರೇಖಿಸದಷ್ಟು
ಸೀರಾಗಿತ್ತು.
ತಾ ಬದುಕಿದ ನೆಲದಲ್ಲೇ ಅನ್ಯನಾಗಿ ಹೋದ ಗಾಂಧಿಯ
ಧ್ವನಿಪೆಟ್ಟಿಗೆಯ ದನಿ-

ಹಿಂಬಾಲಕರಿಗೆ ಕೇಳಿಸದಷ್ಟು ಕ್ಷೀಣವಾಗಿತ್ತು
ತಾ ನಂಬಿದ ಆದರ್ಶಗಳೇಕಮೇವ
ಮಾದರಿ ಮಹಾತ್ಮನ ಮಿದುಳ ಗುಂಗುರು ಬಳ್ಳಿಯ
ತಂತುಗಳಲ್ಲಿ-
ಅಡಗಿದ್ದ ಚಿಂತನೆ
ಬುದ್ದಿಜೀವಿಗಳ ತಿರಸ್ಕಾರದ ಸರಕಾಗಿತ್ತು.
ಹೀಗಾಗಬಾರದಿತ್ತು ಮಾನವೀಯತೆಯನ್ನೆಲ್ಲ
ಉಡಿಯಲ್ಲಿ ಕಟ್ಟಿಕೊಂಡು ಹಾರಿದ
ಮುದುಕನ ಸ್ಥಿತಿ - ಅನ್ನಿಸಿದ್ದು ಇತ್ತೀಚೆಗೆ.

ಆದರೆ-
ಹೀಗಾಗಬಹುದಿತ್ತೆಂದು ಇತಿಹಾಸ ಊಹಿಸಿರಲಿಲ್ಲ.
ಗಾಂಧಿ ಕನಸಿದ, ರಾಮರಾಜ್ಯದಲ್ಲಿ
ಕೋಲು ದೇಹದ, ಕ್ಷೀಣದನಿಯ ದಲಿತರನಾಥರ
ಸಮೂಹ, ಬದುಕಿಗೆ ಜೋತುಬಿದ್ದ
ಬಾವಲಿಗಳಾಗುತ್ತಿರಲಿಲ್ಲ.

ಕೆಟ್ಟದ್ದನ್ನು
ಆಡದ- ಕೇಳದ- ನೋಡದ ಪರಂಪರೆಯಲ್ಲಿ,
ದೆಹಲಿ ಸಂತಾನ ಸಿಂಹಾಸನ ಭದ್ರಪಡಿಸಲು
ನಿನ್ನ ಮುಖವನ್ನು ಾಗೆ ತಿರುಚುತ್ತಿರಲಿಲ್ಲ.
ನಾಲ್ಕೈದು ಕಾಳು ಶೇಂಗಾ, ಮೇಲೊಂದೆರಡು ಗುಟುಕು
ಮೇಕೆ ಹಾಲು ಕುಡಿದು
ಡಿಸ್ನೆ ಅಣಕ ಗೊಂಬೆಯ ತರ ಲಟ- ಪಟನೆ ಸರಿದಾಡಿ
ಈ ನೆಲದ ಮಣ್ಣನ್ನು ಮೆತ್ತಿಕೊಂಡು
'ನಿಮ್ಮ ಉಪ್ಪನೊಲ್ಲೆ, ನಿಮ್ಮ ಬಟ್ಟೆಯನೊಲ್ಲೆ,
ನಿಮ್ಮ ತಟ್ಟೆಯನೊಲ್ಲೆ' ಮೌನ ಉಪವಾಸ ಕುಳಿತ
ನಿನ್ನ ಬದುಕಿನ ತಾಕತ್ತು
ಮಾತು-ಮಂಥನ ಪೂಜೆ- ಪುನಸ್ಕಾರ ಮಾನ- ಸತ್ಕಾರ
ಪ್ರತಿಮೆ- ಅನಾವರಣ ಸಂತೆಯಲ್ಲಿ ನೀನಿದ್ದಯಾ ಎಂಬುದೆ
ನನಗೆ
ಆಶ್ಚರ್ಯ, ಜತೆಗೆ ವಿಷಾದ.
'ದುಡ್ಡು ಕೊಟ್ಟರೆ ತಾಯಿ ತಂದೆ' ಎಂದು ಹೊಟ್ಟೆ
ಬಡಿಯುತ್ತ
ಬೊಗಣೆ ಚಿಲ್ಲರೆ ಝಣ ಝಣಿಸುತ್ತ ಸಾಗಿರುವ ಕುಷ್ಠ
ಸಮೂಹ-
ಹಳ್ಳಿಯ ಮೂಲೆಯಲ್ಲಿ ಮೌನವನುಳುತ್ತ ಬೆವರ ಬಸಿರಲ್ಲಿ
ಬೆಂಡು ಒಕ್ಕುತ್ತಿರಬೇಕಾದ ರೈತ ಸಮುದ್ರ
ನಾಲ್ಕು ಗೋಡೆಯ ಮಧ್ಯೆ ಅಡಿಗೆ-ಹಾಸಿಗೆ ನರಳು
ಕೊರಳಿಗೆ
ನೇಣು ಬಿದ್ದಿರುವ ಸ್ತ್ರೀ ಬಳಗ-
ಆಚೆ ಕೇರಿಯಲ್ಲೇ ಇರುವ 'ನಿನ್ನ' ಹರಿಜನರ
ಬದುಕಿಗೆ ಆತುಕೊಳ್ಳುವ ಕನಸ ಕಂಡ ನೀನು,
ನೋಡು ಗಾಂಧೀ,
ನೀ ಮೈದಡವಿದ ಕುಷ್ಠನೊಬ್ಬ ಸತ್ತಿದ್ದಾನೆ.

ದಾರಿ ಹೆಣವಾಗಿದ್ದಾನೆ, ನಾಲ್ವರು ಕುಷ್ಠರ
ಮುಂದಿನೂಟದ ಭಿಕ್ಷೆಯ ಮೂಲವಸ್ತುವಾಗಿದ್ದಾನೆ.
ಜೀವಿತದಲ್ಲೇ ಅಸ್ಪೃಶ್ಯನಾಗಿ ಹೋದ
ಮಹಾತ್ಮನ ಅನಾಥ ದೇಹ ಪ್ರದರ್ಶನದಲ್ಲಿತ್ತು.

- ಮಹಾಬಲೇಶ್ವರ ಕಾಟ್ರಹಳ್ಳಿ

ಗಾಂಧೀ ಟೊಪ್ಪಿಗೆ

ಅಜ್ಜ;
ನಾವೆಲ್ಲ ನಿನ್ನ
ಟೊಪ್ಪಿಗೆ ಹಾಕುವ
ಮೊಮ್ಮಕ್ಕಳು.
ಕೂಟು- ಕೂಟಿನಲಿ ನಿನ್ನ ಮೂರ್ತಿ
ನಿಲ್ಲಿಸಿ
ಎಲ್ಲರಿಗೂ ಹಾಕಿದ್ದೇವೆ
ನಿನ್ನ ಹೆಸರಿನ ಟೊಪ್ಪಿಗೆ
ನಿನ್ನ ಉತ್ಸವಗಳಲ್ಲಿ
ಒಳ್ಳೆಯ ಸಮಯ
ಹಾಕಲು ಟೊಪ್ಪಿಗೆ,
ಈ ಟೊಪ್ಪಿಗೆಯ ಕೆಳಗಿರುವುದು
ನಮ್ಮ ತಲೆ
ನಿನ್ನದಲ್ಲ,
ನಿನಗಾರು ಹೇಳಿದರು
ನಮಗೆ ತಲೆಯೇ ಇಲ್ಲವೆಂದು;
ಇದೇನು ಬರಿ 'ಸ್ಟ್ಯಾಂಡು'
ಎಂದೆಯಾ?
ಮೋಸ, ಭ್ರಷ್ಟಾಚಾರ
ಕೊಳಕು ವಸ್ತುಗಳ ತುಂಬಿ

ಶರಯು ಭಟ್ಟ ತಗೆಯುವ
ಹರವಿ
ನಮ್ಮ ತಲೆ
ಅಲ್ಲೋ ಯಜ್ಞಾ!
ನೀನೂ ಒಂದು ಚೂರು ರುಚಿ ನೋಡಿ
ಜೋಲಿ ಹೊಡೆದಿದ್ದಯಾ?
ಅದಕ್ಕೂ ಬೇಕು ಬಿಡು
ನೀರು,
ನಾವೆಲ್ಲ
ಮಸ್ತಾಗಿ ಕುಡಿದು,
ಸುಸ್ತಾಗಿ ಗಟಾರದಲ್ಲಿ ಬಿದ್ದು ಸ್ವಚ್ಛ
ಮಾಡುತ್ತೇವೆ.
ನಿನ್ನ ಸಿದ್ಧಾಂತದ
ಕನಸುಗಳನ್ನೆಲ್ಲ
ನೀ ತೆಗೆದೊಗೆದ ಟೊಪ್ಪಿಗೆಯಲ್ಲೇ ಮುಚ್ಚಿ
ಇಡುತ್ತೇವೆ,
ಇನ್ನೂ
ಹತ್ತಾರು ಕವನ ಬರೆದು
ಹೊಗಳಿ ಹೊನ್ನ
ಶೂಲಕ್ಕೇರಿಸುತ್ತೇವೆ
ಬೇಕಾದರೆ ನೋಡು
ಬಂದು
ಅಷ್ಟು ಸರಳಲ್ಲ ದೇಶ
ಸೇವೆ
ಇಂದು.

– ಧರಣೇಂದ್ರ ಕುರಕುರಿ

ಎಳ್ಳಿತ್ತಿರೋ ಏನ್ ಹಾಳಾಗಿ ಹೋಗ್ತೀರೋ

"ಅಜ್ಜಾ ನೀ ಇದ್ದೆಂತ,
ಅಜಮಸ ಐವತ್ತ ಇಲ್ಲಾ ಮೂರಿಪ್ಪತ್ತ ವರಸದ ಹಿಂದ
ಕಾಕಾಗೋಳ, ಚಿಗವ್ವಗೋಳ, ಮಕ್ಳ, ಮೊಮ್ಮಕ್ಳ,
ಎಲ್ಲಾ ಕೂಡಿ ಇದ್ರಂತ ಇಪ್ಪತ್ತೈದ.
ಆಗ.
ನೀ ಆಡಿದ್ದs ವೇದ ವಾಕ್ಯಂತ
ಕಾಲಿಂದ ನೀ ತೋರ್ಸಿದ್ದನ್ನ ತಲೀಲೆ ಮಾಡ್ತಿದ್ರಂತ ಎಲ್ಲರೂ
ಹಾಲ- ಹೈನ ಮನಿ ತುಂಬ ಕಾಳ ಕಡಿ ನಿಟ್ಟs ಅಂತ.
ಹಾಡಿ ಹರ್ಸ್ತಿದ್ರಂತ ಬಂದು ತಿಂದುಂಡವ್ರು.
ಒಂದ ಕಣ್ಗ ಪೆಟ್ಟಾದ್ರ, ಮತ್ತೊಂದ ಕಣ್ಣಾಗ ನೀರಂತ.
ಹೊಂಕಳಾ ಮುಟ್ಟಿ ನೋಡಿ ಇದ್ರಂತ ಒಂದs ಮುಟಿಗ್ಯಾಗ.
ಮನಿ ಮುಂದಕ್ಕ ತಂದ್ರಂತ
ಆದರ ಈಗ,
ಹತ್ತ ಕಡಿಮಿ ನೂರ ಮಂದಿ ಮನ್ಯಾಗ.
ಹೊತ್ತೇರಿ ಏಳತಾರ, ಹಾಸಿಗ್ಯಾಗ ಕುತ್ತs ಕೇಳತಾರ....
ತಾಳಿಲ್ಲ, ತಂತಿಲ್ಲ, ಕೆಲಸಕ್ಕೆ ಬ್ಯಾಡ, ಸಿಂವಿ ಸಿಂವಿ ಬೇಕ
ಗಂಟ ಮಾಡ್ಯಾರ ಗಂಡಸೂರ, ಬಡವಿ ಮಾಡ್ಯಾರ
ಹೆಂಗಸೂರ.
ದೂರದ ಬ್ಯಾಂಕಿನಾಗ ಇಟ್ಟ ಬರತಾರ ಗಪ್‌ಚುಪ್
ಸಾಲ ಮಾಡ್ತಾರ ತೋರ್ಸಾಕ.

ಹಿಂಗ್ಯಾಕ ಅಂದ್ರ
ರಾಬ ಹೆಚ್ಚಾಗೇತಿ ಮಾಡುದೇನ ಅಂತಾರ.
ಮಾತಾಡತಾರ ಬಾಯಿಗ್ಗಿ ಬಂದ್ಹಾಂಗ
ಕಳ್ಳಾ - ಕಕಲಾತಿ ಗೊತ್ತಿಲ್ಲ ಅವರೀಗಿ.
ಜಗಳಾಡತಾರ, ಬಡದಾಡತಾರ
ನಾಚ್ಗಿ ಅಬರೂ ತಲೀಗಿ ಸುತ್ತ್ಯಾರ
ಉಳಿದಿಲ್ಲೇನು ಪುಣ್ಯ, ಮುಂದ ಹ್ಯಾಂಗ ಅಂತೀನಿ
ಅದಕ್ಕ,
ಬಾರಪಾ ಅಜ್ಜಾ ಬಡಿಗಿ ತಗೊಂಡ ನಮ್ಮ ಮನಿ ಸುದ್ದ
ಮಾಡಾಕ"
ಎಂದು ಮೊಮ್ಮಗ ಬಡಬಡಿಸುತ್ತಿದ್ದುದನ್ನು ಕೇಳಿದ ಅಜ್ಜಿ,
ಮೂದಲಿಸಿ ಮಾತನಾಡಿದಳು.
'ಆ ನಮ್ಮ ನಿಮ್ಮ ಅಜ್ಜಾ, ಬಾ ಅಂದ್ರ ಹ್ಯಾಂಗ ಬರ್ತಾನ?
ಎಲ್ಲಿಂದ ಬರ್ತಾನ?
ಇನ್ನ ಬಿಡ್ರಿ ಇಂಥಾ ದರಿದ್ರ ಶಂಕಾ ಹೊಡ್ಯ್ಯಾದ.
ಈಗ ನೀವೆಲ್ಲಾ ಎಚ್ಚತ್ತು ಅಜ್ಜಾನಾಂಗ ಆಗುದೊಂದs ಹಾದಿ
ಹೂಂ ಏಳ್ರಿ! ಏಳ್ರಿ! ತಡಾ ಮಾಡಬ್ಯಾಡ್ರಿ.
ತಗೊಳ್ರಿ ಬಡಿಗಿ
ಹಾಕ್ರಿ ಗಂಡಸರಾಂಗ ಗಂಡಗಚ್ಚಿ
ಹೂಂ! ಏಳ್ತಿರೋ ಏನ್ ಹಾಳಾಗಿ ಹೋಗ್ತೀರೋ?"

- ಬಾಲಕೃಷ್ಣ ಜಂಬಗಿ

ಗಾಂಧೀ ತಾತನಿಗೆ

ಅಪ್ಪಾ, ಗಾಂಧಿತಾತ
ನಿನ್ನ ಶತಾಬ್ದಿ ಸಮಿತಿಯ
ಪ್ರಕಟಣೆಯ ನೋಡಿದೆ
ಏಕಾದಶ ವ್ರತಪಾಲನೆಯೆ
ಉತ್ತಮ ಶ್ರದ್ಧಾಂಜಲಿ ನಿನಗಂತೆ
ರಾತ್ರಿಯೆಲ್ಲ ರಾಮಾಯಣವ ಕೇಳಿ
ಶೋಕಪಟ್ಟವಳಾರು ಎಂಬಂತೆ
ವ್ರತದ ಬೇಡಿಯ ಹಾಕಿ ಕಟ್ಟಿದ್ದೇವೆ ನಿನ್ನ
ಬುಡುಬುಡಿಕೆಯಲ್ಲಿ ಕೂಡಿ
ಕಾಡಿ ಬೇಡಿದ್ದೇವೆ
ಕಂಡ ಕಂಡವರನ್ನೆಲ್ಲ
ಉಣುವಲ್ಲಿ ಉಡುವಲ್ಲಿ ನಿನ್ನ ನೆನೆದು
ಶಾಂತಿಸತ್ಯದ ನಿನ್ನ ರೆಕ್ಕೆಗಳ ಬಿಗಿದು
ಹಣೆಗೆ ಕಟ್ಟಿದ್ದೇವೆ ರಕ್ಷೆಯಪಟ್ಟಿ
ಗಾಂಧೀಭವನದ ಗರ್ಭಗುಡಿಯೊಳಗಿಟ್ಟು
ನಿನ್ನ ಪೂಜಿಸಿ,
ದಿನವೂ ಹೇಳುತ್ತೇವೆ ಮಂತ್ರ;
'ಗಾಂಧೀ ಜೀರ್ಣೋಭವ'
ಇನ್ನೆಲ್ಲಿ ನಮ್ಮ ಪರಾಭವ.

- ಬಿ.ಎಸ್. ನಾಗರತ್ನಕುಮಾರಿ

ಗಾಂಧಿ ತಾತ, ನಾನು ಮತ್ತು ನನ್ನ ಮಗಳು

೧

ಅಲ್ಲೆಲ್ಲೊ ಫೋಟೋದಲ್ಲಿ
ಅದ್ಯಾವುದೋ ಪುಸ್ತಕದ ಕೊನೇ ಪುಟದಲ್ಲಿ
ಪೇಪರ‍್ರು ಸ್ಟಿಕ್ಕರ‍್ರುಗಳಲ್ಲಿ
ಸಿನಿಮಾ ಥಿಯೇಟರಿನಲ್ಲಿ
ಎಲ್ಲಿ
ಕಂಡರೂ ನನ್ನ ಮಗಳು
ಗಾಂಧಿ ತಾತ ಗಾಂಧಿ ತಾತ
ಅಂತ ಕೂಗುವಾಗ
ನನ್ನೊಳಗೆ ಕೊಲಗಡುಕ
ತಲೆತಪ್ಪಿಸಿ ಓಡತೊಡಗುತ್ತಾನೆ,
ಓಡೋದು ಎಲ್ಲಿಗೆ?
ನೆನಪು ಜಾಡಿಸಿ ಒದಿಯುತ್ತೆ
ಸ್ಪಷ್ಟವಾಗಿ ನೆನಪಾಗುತ್ತೆ
ನಿಜವಾಗ್ಲು ಯೋಚ್ನೆ ಶುರುವಾಗುತ್ತೆ
ಯಾವಾಗ್ಲು ಸತ್ಯವಾಗಿ ನಗೋ ಗಾಂಧಿ
ಯಾವಾಗ್ಲೂ ನಗಾಕಾಗದೇ ಇರೋ ನಾನು.

೨

ಈ ಹೊತ್ತಿಗೆ ಸರಿಯಾಗಿ
ಐವತ್ತು ವರ್ಷದ ಹಿಂದೆ ಅಲ್ಲವಾ
ಕೊಂದು ಕೂಗಿದ್ದು?

ಇದ್ದ ಬಿದ್ದ ಸೀನೀರೆಲ್ಲ ಕುಡುದು
ಭೂಮಿ ಬಗದು ಚೂರು ಮಾಡಿ
ಸಾರಾ ಎಲ್ಲ ಸೀಪಾಕಿದ,
ಬರೀಗೈಲಿದ್ದ ಜನರ ಕಣ್ಣು ಕೀಳಿಸಿ
ಬಟ್ಟೆ ನೆಯ್ಯೋ ಕೈಬೆರಳು ಕತ್ತರಿಸ್ಯಾಕಿದ
ಅನ್ನ ಕೊಡೋ ಅವ್ವನ್ನ ಬೆಂಕಿಗೆ ಎದ್ದಿದ
ನೆರಳು ಕೊಟ್ಟವರನ್ನ ನೇಣು ಎತ್ತಿದ
ಬ್ರಿಟೀಷ್ ಬ್ರಿಟೀಷ್ ಅನ್ನೊ ಬ್ರೂಟೀಷ್‌ಗಳನ್ನು
"ಚಲೇ ಜಾವ್, ಚಲೇ ಜಾವ್" ಅಂತ
ಕೂಗಿ, ಕೂಗಿಸಿ
ಭಾರತಕ್ಕೆಲ್ಲ ಜೀವಾತುಂಬಿ ಗಾಂಧಿ ಗೆದ್ದರು,
ನನ್ನ ಮಗಳಿಗೆ ಇದೆಲ್ಲಾ ಗೊತ್ತಿಲ್ಲ
ಆದರೂ ಪ್ರೀತಿ ತುಂಬಿಕೊಂಡು
ಗಾಂಧಿ ತಾತಾ, ಗಾಂಧಿ ತಾತ ಅನ್ನುತ್ತೆ,
ನಾನು ತಪ್ಪಿಸಿಕೊಂಡು ಓಡ್ತಾ ಇದ್ದೀನಿ.

೩

ಬ್ರಿಟೀಷ್ ಬ್ರಿಟೀಷ್ ಬ್ರೂಟೀಷ್‌ಗಳು
ಇವತ್ತಿಲ್ಲ
ಹಾಗೇ ಗಾಂಧಿನೂ ಇಲ್ಲ
ಬೇಳೆ ಬೇಯೋಕೆ ಗಾಂಧಿ ಬೇಕಾಗಿತ್ತು
ಬೆಂದಾದ ಮೇಲೆ ಬೂದಿಮಾಡಲಾಯ್ತು
ಧರ್ಮದ ದೆವ್ವಗಳ ಕೊಳ್ಳಿ ದೆವ್ವಗಳು
ಕುಪ್ಪಳಿಸಿ ಕುಣುದ್ವು.
ಶಾಂತಿ ಸತ್ತು ಕೊಳೀತು
ಅಹಿಂಸೆಗೆ ಬೆಂಕಿ ಬಿತ್ತು,
ಸರಳತೆ ಕುತ್ತಿಗೆಗೆ ಚಿನ್ನದ ಹಗ್ಗ ಸುತ್ತಿ
ಸಾಯಿಸಲಾಯ್ತು.
ಬಡವನ ರಕ್ತ ಬೇಗ ಬೇಗ ಖಾಲಿಯಾಯ್ತು.

ಪ್ರಜಾಪ್ರಭುತ್ವದ ಹೆಸರಲ್ಲಿ ಇಡೀ ದೇಶಾನ
ರೊಟ್ಟಿ ಮುರುದು ತಿನ್ನೋ ಹಾಗೆ ತಿನ್ನಲಾಯ್ತು
ಕರಿ ಬ್ರಿಟೀಷ್ ಬ್ರೂಟಿಷ್‌ಗಳು ಉಳಿಸಿರೋದು
ಬರೀ ಲದ್ದಿ.

ಈ ಮಧ್ಯೆ ನಾನು ನನ್ನ ಮಗಳು
ಗೋಡೇಲಿ ನಗೋ ಗಾಂಧಿ
ನೋಡೋಕು ತಾಕತ್ತಿಲ್ಲದ ಸ್ಥಿತಿ.
ಮಗಳು ಮತ್ತೆ ಕೇಳ್ತಾಳೆ
ಗಾಂಧಿ ತಾತ ಎಲ್ಲಿ?
ಸತ್ತೋಯ್ತು ಅಂದ್ರೆ ಬಿಡದೆ ಕೇಳ್ತಾಳೆ ಯಾಕೇಂತಾ?

ಆಗ ಮತಾಂಧ ಗೋಡ್ಸೆ ಗುಂಡು
ನನ್ನೆದೆಗೆ ಹೊಡೆಯುತ್ತೆ
ಈ ಸಲ ಸುಳ್ಳು ಹೇಳದೆ
ಸತ್ಯ ಹೇಳುತ್ತೇನೆ.
"ನಾವೇ ಕೊಂದು ಹಾಕಿದೆವು
ಇನ್ನೂ ಕೊಲ್ತಾನೇ ಇದ್ದೀವಿ"

ಮಗಳು ಅಳಾಕ ಸುರುಮಾಡ್ತಾಳೆ
"ಗಾಂಧಿ ತಾತ ಇರಬೇಕಾಗಿತ್ತು
ಗಾಂಧಿ ಇರಬೇಕಾಗಿತ್ತು
ನಗೋ ಈ ಗಾಂಧಿ ತಾತನ್ನ
ಇರಾಕ್ ಬಿಡ್ರಿ, ಇರಾಕ್ ಬಿಡ್ರಿ....."

— ಕೃಷ್ಣಮೂರ್ತಿ ಬಿಳಿಗೆರೆ

ಆರಾಮವಾಗಿರು ಗಾಂಧಿ

ಗಾಂಧಿ ತಾತಾ,
ಅಲ್ಲಿ ಕೂತು ಇಲ್ಲಿ ನಡೆದಿರುವ
ಭ್ರಷ್ಟರ ಹಗರಣಗಳನ್ನು
ನೋಡಿ ನಲುಗಿ ಹೋದೆಯಾ?

ಲಂಚದಿಂದ ಗಳಿಸಿದ
ವಂಚನೆಯಿಂದ ಕೂಡಿಸಿದ
ನೋಟಿನ ಕಟ್ಟುಗಳನ್ನು
ಕಂಡು ಕಣ್ಣು ಮುಚ್ಚಿದೆಯಾ?

ಜಾತಿ ಗೊಂದಲದ
ಹೀನ ಜನರ ಕರಾಳತೆಗೆ
ಕಳವಳಿಸುತ್ತಿರುವೆಯಾ?

ಕಾಶ್ಮೀರಪಂಜಾಬ-ಆಸಾಮ್
ಅತ್ತ ಇತ್ತ ದೇಶವೆಲ್ಲಾ
ಹೊತ್ತಿ ಉರಿಯುವುದನ್ನು
ಕೇಳಿ ಕಂಗೆಟ್ಟೆಯಾ?

ಗರಿಗರಿ ಖಾದಿಯ ಧರಿಸಿ
ಕಾರುಬಾರು ನಡೆಸಿರುವ
ಆಳುವವರ ಅಟ್ಟಹಾಸ
ದಿಟ್ಟಿಸಿ ದಿಗಿಲುಗೊಂಡೆಯಾ?

ಬಹುರಾಷ್ಟ್ರೀಯರು ಭಾರತಕ್ಕೆ
ಬಂದು ನೀ ತಂದು ಕೊಟ್ಟ
ಸ್ವಾತಂತ್ರ್ಯದ ಖರೀದಿ ನಡೆಸಿರುವುದನ್ನು
ನೋಡಿ ನೊಂದುಕೊಂಡೆಯಾ?

ನಿನ್ನ ಸ್ವರಾಜ್ಯ ಸುರಾರಾಜ್ಯವಾಗಿ
ತೂರಾಡುವುದನ್ನು
ಕಂಡು ಕಣ್ಣೀರು ಹಾಕುವೆಯಾ?

ಯೋಚಿಸದಿರು, ಚಿಂತಿಸದಿರು
ಆರಾಮವಾಗಿರು ಗಾಂಧಿ ತಾತ.
ಯಾಕೆಂದರೆ,
ರಿಪೇರಿ ಮಾಡಲು ಸಾಧ್ಯವಿಲ್ಲದಷ್ಟು
ನಾವು ಗಬ್ಬೆದ್ದು ಹೋಗಿದ್ದೇವೆ.
ನಮ್ಮ ಉಸಿರಿನಲಿ ನಿನ್ನ ಹೆಸರೆತ್ತಲು
ಬಾರದಷ್ಟು ನಾಲಾಯಕರಾಗಿದ್ದೇವೆ.

– ಮೃತ್ಯುಂಜಯ ಹೊರಕೇರಿ

ಗೋಡ್ಸೆ ಗಾಂಧೀಜಿ ಮತ್ತು ನಾವು

ಗೋಡ್ಸೆ ಗಾಂಧೀಜಿಯನ್ನು ಕೊಲ್ಲಲಿಲ್ಲ
ಏಕೆಂದರೆ
ಗಾಂಧೀಜಿಯನ್ನು ಕೊಲ್ಲುವುದು
ಸಾಧ್ಯವಿರಲಿಲ್ಲ
ಆದರೆ ನಾವು ಗೋಡ್ಸೆಯನ್ನು ಕೊಂದೆವು
ಕಾರಣ
ಗೋಡ್ಸೆಯನ್ನು ಕೊಲ್ಲುವುದು ಸುಲಭವಿತ್ತು
ಗೋಡ್ಸೆಯನ್ನು ಕೊಲ್ಲುವಾಗಲೇ
ನಾವು ಗಾಂಧಿಯನ್ನು ಕೊಂದೆವು
ಏಕೆಂದರೆ
ಕೇವಲ ಒಬ್ಬರಿಂದ
ಗಾಂಧೀಜಿಯನ್ನು ಕೊಲ್ಲುವುದು
ಸಾಧ್ಯವಿರಲಿಲ್ಲ
ಹೀಗೆ ನಾವೆಲ್ಲರೂ ಸೇರಿ
ಗಾಂಧೀಜಿಯನ್ನು ಕೊಂದೆವು
ಗಾಂಧೀಜಿಯನ್ನು ಕೊಂದು
ಗೋಡ್ಸೆಯನ್ನು ಮುಂದು
ಮಾಡಿ ಇಂದು
ಪಠ್ಯಪುಸ್ತಕಗಳನ್ನು ತಯಾರಿಸಿದ್ದೇವೆ
ಮಹಾತ್ಮರುಗಳೇ
ಎಚ್ಚರ.

- ಚಿಂತಾಮಣಿ ಕೊಡ್ಲೆಕೆರೆ

ಗಾಂಧಿ ಮೈದಾನ

ನಮ್ಮೂರಿನ ಸುಪ್ರಸಿದ್ಧ ಗಾಂಧಿ ಮೈದಾನಕ್ಕೆ
ಇದ್ದೇ ಇರುತ್ತದೆ ಯಾವಾಗಲೂ ಬೇಡಿಕೆ
ಭಾದ್ರಪದ ಮಾಸವಿಡೀ ಸಾರ್ವಜನಿಕ ಗಣೇಶ
ಬರುತ್ತಾನೆ ಅಯ್ಯಪ್ಪ ಗಣಪ ಹೋದ ಕೂಡಲೆ
ಜತೆಯಲ್ಲೆ ಮುಸಲ್ಮಾನ ಕ್ರಿಶ್ಚಿಯನರ ಹಬ್ಬ
ಪ್ರತೀ ವರ್ಷ ಕೋಮುಗಲಭೆ ಆಗುವುದೂ ಇಲ್ಲೇ.

ಚುನಾವಣೆ ಬಂದಾಗ ರಾಜಕೀಯ ಪಕ್ಷಗಳಿಗೆ
ಗಾಂಧಿ ಮೈದಾನವೇ ಬೇಕು ಪ್ರಚಾರ ಸಭೆಗೆ
ಅಧಿವೇಶನ, ಸಮ್ಮೇಳನ, ಪ್ರತಿಭಟನಾ ರ್‍ಯಾಲಿ
ಜರುಗುತ್ತದೆ ಆಗಾಗ ವಿವಿಧ ವಿನೋದಾವಳಿ
ನಾಟಕ, ಯಕ್ಷಗಾನ, ಸಂಗೀತ ಇತ್ಯಾದಿ
ಹೇಳುತ್ತಾ ಹೋದಷ್ಟೂ ಬೆಳೆಯುತ್ತದೆ ಯಾದಿ.
ಬಿಡುವಿಲ್ಲದ ಇಷ್ಟೆಲ್ಲ ಸಮಾರಂಭಗಳ ನಡುವೆ
ಅನಧಿಕೃತ ಕಾರ್ಯಕ್ರಮಗಳೂ ಸಾಕಷ್ಟು ಇರುತ್ತವೆ
ಬಂದು ನೋಡಿರಿ ಒಮ್ಮೆ, ಸೂರ್ಯ ಮೂಡುವ ಮೊದಲೆ
ಬಾನಲ್ಲಿ ತಾರೆಗಳು ಇನ್ನೂ ಮಿನುಗುತ್ತಿರುವಾಗಲೆ
ಕಾಣಬಹುದು ಮೈದಾನದಲ್ಲಿ ಹೊಳೆವ ಚಂಬುಗಳು
ಕುಕ್ಕುರುಗಾಲಲ್ಲಿ ಕೂತು ತಿಣುಕುವವರ ಸಾಲು.

ಸರಿಯುತ್ತದೆ ನಿವೃತ್ತ ಮುದುಕರಿಗಿಲ್ಲಿ ವೇಳೆ
ಉರಿಯುತ್ತದೆ ಮನೆಯಿಲ್ಲದ ಬಡಬಗ್ಗರ ಒಲೆ

ಗಾಂಧಿ ಎಂಬುವ ಹೆಸರು / ೨೮೨

ಹರಡುತ್ತಾನೆ ಧೋಬಿ ಬಟ್ಟೆಗಳನ್ನು ಒಣಗಲು
ಬರುತ್ತಾವೆ ಇಲ್ಲಿಗೂ ಮೇವು ಅರಸಿ ದನಗಳು
ಸೊಳ್ಳೆ ವಂಶೋತ್ಪತ್ತಿ ಕೇಂದ್ರ, ಎಮ್ಮೆಗಳ ಈಜುಕೊಳ
ಎಲ್ಲದಕ್ಕೂ ಮೈದಾನ ಸೂಕ್ತವಾದ ಸ್ಥಳ.

ಹಗಲಿಡೀ ಆಡುವ ಹುಡುಗರ ಸಡಗರ
ಭಾವೀ ಗಾವಸ್ಕರ್, ಕಪಿಲದೇವರ ಅವತಾರ
ಬೀದಿ ಸೂಳೆಯರು ಸಂಜೆ, ಬೇರೆಲ್ಲೂ ಜಾಗಸಿಗದೆ
ಮೈದಾನವೇ ಗತಿಯೆಂದು ವ್ಯವಹಾರಕ್ಕಿಳಿವುದಿದೆ
ಯಾರಪ್ಪನದೂ ಅಲ್ಲವಿದು, ಸಾರ್ವಜನಿಕರದ್ದು
ಯಾರು ಬೇಕಾದರೂ ಬಂದು ಟೆಂಟು ಹಾಕಬಹುದು.

ಅಪರೂಪಕ್ಕೆಕೆಲವು ಸಲ, ಅದೂ ರಾತ್ರಿಯ ವೇಳೆ
ಸದ್ದಿಲ್ಲದೆ ಮೈದಾನ ಬಿದ್ದುಕೊಳ್ಳುತ್ತದೆ ಬತ್ತಲೆ
ಯಾರೋ ಹಾಕಿದ ಚಪ್ಪರ ಅಥವಾ ಕಟ್ಟಿದ ವೇದಿಕೆ
ಗುರುತಿಗೋ ಎಂಬಂತೆ ಬಿಟ್ಟ ಗುಳಿಗಳು, ನೋಟಕ್ಕೆ
ಗುಂಡೇಟು ತಾಗಿದ ಮೈಯ ಹಾಗೇ ಕಾಣುತ್ತದೆ
"ಹೇ ರಾಮ್ ಹೇ ರಾಮ್" ಕೂಗಿದಂತೆ ಕೇಳುತ್ತದೆ.

– ಎಚ್. ಡುಂಡೀರಾಜ್

ಗಾಂಧಿಗೆ

ನಿನ್ನ ಕೊಂದಿದ್ದೇವೆ ಬಸ್ಸ ಬಂದಿದ್ದೇವೆ
ಹೂತಿದ್ದೇವೆ ಗೋರಿಯೊಳಗೆ
ಹುಟ್ಟಿ ಬಾ ಗಾಂಧಿ
ಇನ್ನೊಮ್ಮೆ ಹುಟ್ಟಿ ಬಾ!

ನಿನ್ನ ಕೊಂದದ್ದಕ್ಕೆ ತುಸುತುಸುವೆ ತೆತ್ತಿದ್ದೇವೆ
ಕಳಚಿದಂಗಿಯ ತೊಟ್ಟು ಬೆತ್ತಲಾಗಿದ್ದೇವೆ
ಮರಳಲಾಗದ ಹಾದಿ ಸವೆಸಿ ನಲುಗಿದ್ದೇವೆ
ಕೈಕಾಲು ಸೋತಿದೆ
ತಾತಾ
ನಮಗೆ ಬಾಯಾರಿದೆ

ನಿನ್ನ ಮರೆತಿಲ್ಲ ನಾವು, ತಂದೆ!
ಬುದ್ಧ ಬಸವನ ಹಾಗೆ
ಚಿನ್ನದ ಚೌಕಟ್ಟು ಹಾಕಿ ಕೂರಿಸಿದ್ದೇವೆ
ದಿನವೂ ತಪ್ಪದೆ ಊದುಬತ್ತಿ ಹಚ್ಚುತ್ತೇವೆ
ವರ್ಷಕ್ಕೆರಡು ಬಾರಿ ವಿಶೇಷ ಪೂಜೆ ಸಲ್ಲಿಸಿ
ಶಕ್ತ್ಯಾನುಸಾರ ಎರೆಯುತ್ತೇವೆ
ಬೀದಿ ಬದಿ ಪೋರ್ಟಿಕೋ ಲಾನ್‌ಗಳಲ್ಲಿ ಮೂರ್ತಿ ಕೆತ್ತಿಟ್ಟು
ಚಿರಸ್ಥಾಯಿ ಮಾಡಿದ್ದೇವೆ
ರಸ್ತೆ, ಪಾರ್ಕು ಬಾರು ಬೀರಂಗಡಿಗಳಿಗೆ ನಿನ್ನ ಹೆಸರಿಟ್ಟು
ಬಣ್ಣ ಬಣ್ಣದ ಬಲ್ಬುಗಳಿಂದ ಅಲಂಕರಿಸುತ್ತೇವೆ

ನೀನು ಮರೆಯುತ್ತೀಯ
ಥಳಥಳ ಹೊಳೆಯುತ್ತೀಯ!
ಮಹಾತ್ಮಾ
ವೃತ್ತ ಚೌಕಗಳ ಜೊತೆಗೆ
ನಮ್ಮ ಮಕ್ಕಳಿಗೂ ಹೆಸರಿಟ್ಟಿದ್ದೇವೆ
ಗಾಂಧಿಯೆಂದು!
ಅವರ ಹೆಸರೂ ಉಳಿಯಲಿ ಪಾಪ, ನಾಲ್ಕು ಕಾಲ
ಮುಚ್ಚಿ ಕಣ್ಣು, ಕಿವಿ, ಬಾಯಿ
ನಲಿಯುತ್ತಿರಲಿ ದೇಶದುದ್ದಗಲ

ಸರಳತೆಯ ಸರದಾರ,
ನಿನ್ನ ನೆನಪಲ್ಲಿ ಮಜಬೂತು ಹೊಲಿಸಿಕೊಳ್ಳುತ್ತೇವೆಪ್ಯಾಂಟು,
ಶರಟು, ತರತರದ ನೈಟಿ, ಚೂಡಿದಾರ
ಪೊಲಿಯೆಸ್ಟರ್ ಖಾದಿಯಿಂದ
ಚಮುಕಿಸಿಕೊಳ್ಳುತ್ತೇವೆ ಅತ್ತರು ಸುಗಂಧ
ಮೂಗಿಗಡರುತ್ತಿದೆ ಒಳಗೊಳಗೇ ಕೊಳೆತನಾತ

ಹೂತ ಶವ ಪೆಟ್ಟಿಗೆ ದಾಟಿ
ತಲೆಯೆತ್ತುತ್ತಾನೆ ನಿಧಾನ
ಬಾಟಲಿಯೊಳಗಿನ ರಕ್ಕಸ
ಚಾಚುತ್ತಾನೆ ಕಬಂಧ ಬಾಹು
ತುಂಬಿಕೊಳ್ಳುತ್ತದೆ ಹೊಗೆ
ಕಣ್ಣು ಮೂಗಿನಲ್ಲಿ ನೀರು
ಎಲ್ಲೆಲ್ಲು ಯಾದವರ ಅಮಲು

ತೇಲುಗಣ್ಣಿನ ಹುಚ್ಚುವಾಳಿ
ಕತ್ತಲೆಯಲ್ಲಿ ಇವನು ಅವನ
ಅವನು ಇವನ ಇರಿಯುತ್ತಾನೆ
ನೋಡನೋಡುತ್ತಿದ್ದಂತೆ ಕುಸಿಯುತ್ತದೆ
'ಹೇ ರಾಮಾ!' ಎಂದು ಪ್ರಾರ್ಥಿಸುವ ಹಾಗೆ

ತಲೆಮೇಲೆ ಹೊಡೆಯುವ ಹಿಂಸೆ
ತುಟಿಯಂಚಿನಲ್ಲಿ ನಗುತ್ತಿದೆ ಗೂಟದಲ್ಲಿರುವ ಅಹಿಂಸೆ

ಹುಟ್ಟಿ ಬಾ ಗಾಂಧಿ
ಇನ್ನೊಮ್ಮೆ ಹುಟ್ಟಿ ಬಾ
ಕಡುಕಷ್ಟ ಬನ್ನಗಳ ನೀಗು ಬಾ!

ಬಾರದಿದ್ದರೆ ಬೇಡ ಬಿಡು
ಅಲ್ಲಿಂದಲೇ ಹಾರೈಸು
ಹೊಸ ಬದುಕ ನಾಕ
ಎದೆತುಂಬ ಹಚ್ಚು
ಹೊಚ್ಚಹೊಸ ಬೆಳಕ
ಮತ್ತದರ ನೆರಳಲ್ಲಿಕೊಡು
ನಿನ್ನ ನಿನ್ನಂತೆ ಕಾಣುವ ವಿವೇಕ

- ವಸಂತಕುಮಾರ ಪೆರ್ಲ

ಶೇಷಪ್ರಶ್ನೆ

ರಾತ್ರೆಲ್ಲ ರಾಮಾಯಣ ಕೇಳಿ
ಬೆಳಗಾ ರಾಮನಿಗೆ ಸೀತೆ
ಏನಾಗಬೇಕಂತ ಕೇಳಿದಂತೆ

ಗಾಂಧೀ ಜಯಂತಿ ಭಾಷಣ ಕೇಳಿ
ಮಕ್ಕಳು ಕೇಳಿದ ಪ್ರಶ್ನೆ-
ಗಾಂಧೀ ಅಂದರೆ ಏನು ಹೇಳಿ ಸಾರ್,

ಗಾಂಧೀಗೆ ಟಿಪ್ಪಣಿ ಬರೆಸೋ ಹಾಗೆ
ಗಾಂಧೀ ಅಂದರೆ ಸತ್ಯಾ-
ಗ್ರಹದ ಹಟಾ ಅಂದೆ

ಹಾಗಾದರೆ ಗಾಂಧಿ ಅಂದರೆ
ವ್ಯಕ್ತಿ ಅಲ್ಲವಾ?
ಕೇಳಿದನಲ್ಲ ಉದ್ದಾಲಕ!

ಗಾಂಧೀಗೆ ಸಾರಾಂಶ ಬರೆಸೋ ಹಾಗೆ
ಗಾಂಧಿ ಅಂದರೆ ಮಾನವ
ಶಕ್ತಿ ಅಂದೆ.

ಹಾಗಾದರೆ ಗಾಂಧಿ ಹೋದ
ದ್ದೆಲ್ಲಿಗೆ? ಪ್ರಶ್ನೆ
ಒಗೆದ ನಚಿಕೇತ.

ಇಲ್ಲೆ ಎಲ್ಲೋ ಇದ್ದಾನೆ
ಹುಡುಕುವ ಸಿಕ್ಕರೆ
ಸಿಗಬಹುದು.

ಕೇಳಿಯೇ ಬಿಟ್ಟ ಸತ್ಯಕಾಮ
ಯಾಕೆ ಸಾರ್, ಗಾಂಧಿ
ನಿಮ್ಮಲ್ಲಿ ಇಲ್ಲವಾ?

- ಸ. ರಘುನಾಥ್

ಗಾಂಧಿ ಹುಟ್ಟಿದ್ದು.......

ಗಾಂಧಿ ಹುಟ್ಟಿದ್ದು
ನೆಟಾಲಿನ ರಾಜಧಾನಿಯಾದ
ಮೆರಿಟ್ಸ್‌ಬರ್ಗ್‌ನಲ್ಲಿ
ರೈಲ್ವೆ ಪ್ಲಾಟ್‌ಫಾರಂನಲ್ಲಿ
ಚೆಲ್ಲಾಪಿಲ್ಲಿಯಾದ
ಹಾಸಿಗೆಪೆಟ್ಟಿಗೆ ಕಾಗದಗಳ ನಡುವೆ!!

ಅಪರಾತ್ರಿ
ಹೊರಗೆ ಅಸಾಧ್ಯ ಚಳಿ
ಒಳಗೆ ಜ್ವಾಲಾಮುಖಿ.
ನೋವಿನಿಂದ ಒದ್ದೆಯಾದ ಕಣ್ಣುಗಳು
ಮೈತುಂಬಾ ಅಸಮಾಧಾನದ ಮುಳ್ಳುಗಳು.

ಚಳಿಗೆ ಸೆಟೆದ ಕಾಲುಗಳು
ದಂಡಿಗೆ ಸಿದ್ಧವಾದದ್ದು
ಬೆಂಕಿ ಬೆಳದಿಂಗಳಾದದ್ದು
ಸತ್ಯ ಪ್ರೇಮ ಅಹಿಂಸೆಯ
ದೀಕ್ಷೆ ಪಡೆದದ್ದು
ಎಲ್ಲಾ ಆ ಕ್ಷಣದಲ್ಲಿ ....

– ಸವಿತಾ ನಾಗಭೂಷಣ

ಗಾಂಧಿ

ಶತ ಶತಮಾನಗಳ
ದಾಸ್ಯ ಯುದ್ಧ
ಹೋರಾಟಗಳ ನಡುವೆ
ಹೂತು ಹೋಗಿದ್ದ
ಶಾಂತಿ, ಸ್ವಾತಂತ್ರ್ಯ
ಸತ್ಯಾಗ್ರಹಗಳ ನಿಧಿ
ಹೊರ ತೆಗೆದ ಪ್ರವಾದಿ

ಕಪ್ಪು ಕತ್ತಲ
ಬಯಲಲ್ಲಿ ಬೆತ್ತಲಾಗಿ
ಬೈರಾಗಿ
ಬೆಳಕ ಬಗೆದು
ಸ್ವಾಭಿಮಾನದ
ಬೀಜ ಬಿತ್ತಿ ಪೊರೆದು
ಚಿಗುರಿ ಆಶಾಕಿರಣ
ಬಿಸಿಲ ಭೂಮಂಡಲಕ್ಕೆ
ಕಪ್ಪಿನೊಳಗಡಗಿರುವ
ನೆರಳ ಬೆಲೆ
ಸಾರಿದ ನೆಮ್ಮದಿ

ಹೆಳವಾಗಿ ಬಿದ್ದುಕೊಂಡಿದ್ದ
ಹಿಮ ಬಂಡೆಗಳಿಗೆ

ಬಂಧನ ಬಿಡಿಸಿ
ಮೈಯೆಲ್ಲ ಕಾಲು ಬರಿಸಿ
ಹರಿಯಲು ತೋರಿ ಹಾದಿ
ಪ್ರವಾಹವಾಗಿ ಮಹಾನದಿ
ಮಿಂದವರಿಗೆಲ್ಲ
ಪುಣ್ಯಪಾವನ
ಸ್ವಾತಂತ್ರ್ಯ ಸಿದ್ಧಿ

ಕಾಲದ ವೇಗದ
ಜೊತೆ ಜೊತೆಗೆ
ಕೂಡಿ ನಡೆದ
ಸರಿಸಾಟಿಯಿಲ್ಲದ ಸ್ಪರ್ಧಿ
ಹೆಜ್ಜೆ ಗುರುತುಗಳ
ಹಿಂಬಾಲಿಸಲಾಗದ
ಹೇಡಿ ಹಂತಕರ
ಹೀನ ಕೃತ್ಯಕ್ಕೆ
ಈ ನೆಲದ ಮೇಲೆ
ಸಾಕ್ಷಿಯಾಗಿ
ಒಂದು ಸಮಾಧಿ

- ಜರಗನಹಳ್ಳಿ ಶಿವಶಂಕರ್

ಬೆಂಕ್ಯಾಗ ಹೂವು ಅರಳ್ಯಾವ

ಗುಜರಾತ ನಾಡೊಳಗ ಪೋರಬಂದರದಾಗ
ಮನೆ ಮನೆಗೆ ಬೆಳಕು ಮೂಡ್ಯಾವ । ಮೋಹನನ
ಮುರಳಿ ಗಾನವು ಅಲ್ಲಿ ಕೇಳ್ಯಾವ ॥

ಮೋಹನ ದಾಸನು ಮೋಹಕ- ನಗೆಯವನು
ಸಿಹಿ-ಕಹಿ ಸಮಮಾಡಿ ಉಂಡಾನು । ಆ ಯುವಕ
ಬೇವು ಬೆಲ್ಲವ ಬೆರಸಿ ತಿಂದಾನು ॥

ದಕ್ಷಿಣಾಫ್ರಿಕದಾಗ ಬಿಳಿಯರ ನಾಡೊಳಗ
ಬೆಂಕಿ ಚೆಂಡಾಗಿ ಸಿಡಿದಾನ । ಗಾಂಧೀಜಿ
ಬಡವರ ಕಣ್ಣೀರು ಒರಸ್ಯಾನ ॥

ಗಾಂಧೀಜಿ ನಡೆವಾಗ ಕಲ್ಲರಳಿ ನಿಂತಾವ
ಕರಿಯರ ಮುಖವೆಲ್ಲ ಮಲ್ಲೀಗಿ । ಆಗ್ಯಾವ
ಬೆಂಕ್ಯಾಗ ಹೂವು ಅರಳ್ಯಾವ ॥

ಭಾರತಕ್ಕೆ ಬಂದಾನ ಬಿಳಿಯರನ ಕಂಡಾನ
ಮೈಮನದ ತುಂಬೆಲ್ಲ ಕಾಳ್ಗಿಚ್ಚು । ತುಂಬ್ಯಾವ
ಮೌನಕ್ಕೆ ಮಾತು ಬಂದಾವ ॥

ಸತ್ಯ ನೀತಿಲಿ ನಡೆದ ಸ್ವಾತಂತ್ರ್ಯ ಚಳವಳಿ
ಸಹನೆಯ ಒಡಲೊಳಗ ಹುಟ್ಯಾದ । ನಾಡೊಳಗ
ಶಾಂತಿಯ ಕಿರಣ ಬೆಳಗ್ಯಾದ ॥

ಅಹಿಂಸೆಯಿಂದಾಲೆ ಹಿಂಸೆಯ ತಡದಾನ
ಪ್ರೀತ್ಯಾಗ ದ್ವೇಷ ಮರತಾನ । ಮಹಾತ್ಮ
ಧ್ವಜ ಹೊತ್ತು ಹಾರ್‍ಯಾವ ಪಾರ್‍ವಾಳ ॥

ಸ್ವಾತಂತ್ರ್ಯ ಕೊಟ್ಟಂಥ ಬೆಳಕಿನ ಕಿರಣಕ್ಕೆ
ಗುಂಡಿಟ್ಟು ಕೊಂದಾರೊ ನಾಡೊಳಗ । ಗಾಂಧಿಗೆ
ಹೆತ್ತವಳ ಹಾಲು ವಿಷವಾಯ್ತು ॥

ಮುಗಿಲೆಲ್ಲ ಅತ್ತಾವ ಕಣ್ಣೀರ ಸುರಸ್ಯಾವ
ಮೋಡಾಗಿ ನೆಲಕ ಇಳದಾವ । ಜಗದಾಗ
ರಕತsದ ಕಾಲಿವಿ ಹರದಾವ॥

- ಬಸವರಾಜ ಸಬರದ

ನಮ್ಮೊಳಗಿನ ಗಾಂಧಿಗೆ

ಗಾಂಧಿ ನೀನೇತಕಾದರೂ ಹುಟ್ಟಿ ಬಂದೆಯೊ
ಏರಲಾಗದೆತ್ತರದ ಕನಸನೇತಕೆ ತಂದೆಯೊ!
ಎಷ್ಟು ಮಜವಾಗಿದ್ದೆವು ನೀ ಬರುವ ಮುನ್ನ
ಸೆಗಣಿ ಹುಳುವಿನ ಹಾಗೆ, ಜಿಗಣಿ ತಗಣಿಯ ಹಾಗೆ

ಉಟ್ಟವರನ್ನು ಬಿಟ್ಟವರನ್ನು ಬೆತ್ತಲೆ ನೋಡುವ
ನಮ್ಮೀ ಮನಸ್ಸು ಸದಾ ಚಂದ್ರಗುತ್ತಿ,
ಅರಬೆತ್ತಲೆಯ ಫಕೀರನಾಗಿ ನಮ್ಮೆದುರು ನಿಂತು
ಅನುದಿನವೂ ಹೀಗೇಕೆ ಸತಾಯಿಸುತ್ತಿ ?

ನೀನೂರಿ ಹೋದ ಕೋಲಗುಳಿಗಳ ಒಳಗೆ
ಊರಲು ಹವಣಿಸುತ್ತಿದ್ದೇವೆ ಮಿಸ್ಸೈಲು ಬೀಜಗಳ,
ನಿತ್ಯ ಹರಿತ ನಮ್ಮ ಮನದ ಕೊಡಲಿ, ಚಾಕು ಚೂರಿ
ಒತ್ತಬೇಕಿದೆ ಕುದುರೆ, ನಿಲ್ಲಬೇಡ ಬೆರಳ ಮಧ್ಯ ತೂರಿ

ನೋಡು ಬೇಕಾದರೆ, ನಿನ್ನ ಪಾದುಕೆಗಳ
ತಲೆಮೇಲೆ ಹೊತ್ತು ಪೂಜೆ ಮಾಡುತ್ತೇವೆ,
ನೀ ನಡೆದ ಅವಸರದ ಹೆಜ್ಜೆಯಲಿ
ಹೆಜ್ಜೆಯನಿಟ್ಟು ಬನ್ನಿರೆಂದೆಯೊ ದೂರಸರಿಯುತ್ತೇವೆ.

ನಿನ್ನ ಹೆಸರಿನಲಿ ಪಟ್ಟಿ ಎತ್ತುತ್ತೇವೆ
ಕೊಟ್ಟ ಭಾಷೆಗೆ ತಪ್ಪದೆ ಕಟ್ಟಿಸಿಕೊಡುತ್ತೇವೆ

ಭವ್ಯ ರಾಮಮಂದಿರದ ಬದಿಗೆ
ನಿನಗೊಂದು ಮುರುಕು ಗುಡಿಸಲು.

ಕಾಡಬೇಡ ನಮ್ಮೆದೆಯ ಕಾಡಸುಗ್ಗಿ
ಕನಸಖೆಡ್ಡವ ತೋಡಿ ಕೆಡವಬೇಡ;
ಬೇಡ, ಸತ್ಯದನ್ವೇಷಣೆಯ ಅಗ್ಗಿ
ಹೊಗು ಎಂದು ಪೀಡಿಸಬೇಡ.

ಮಾಡದಿರು ಜೋಕೆ ಮಲ್ಲಿಗೆ ಕಸಿಯ,
ಸದಾಸುಖಿ ನಾವು ಕ್ಯಾಕ್ಟಸ್ ಕುಂಡ;
ಇಷ್ಟುಬೇಗ ಮರೆತೆಯೇನು
ನಾವೆಂದೂ ಗೋಡ್ಸೆ ಗನ್ನಿನ ಗುಂಡ

– ಚನ್ನಪ್ಪ ಕಟ್ಟಿ

ವೇಷ

ಊರ ಹೊರಗಿನ ವೃದ್ಧಾಶ್ರಮದಲ್ಲಿ ಅಪರಾತ್ರಿ
ಧಾಂಪಲೆ ಹಾಕಿದನಂತೆ ನಾನೇಗಾಂಧಿ ನಾನೇ ಗಾಂಧಿ
ಎಂದು ಇತರ ಮುದಿಯರನ್ನೂ ಎಬ್ಬಿಸಿದನಂತೆ

ಸಿನಿಮಾ ಸೀರಿಯಲ್‌ಗಳಲ್ಲಿ ಪಾರ್ಟು ಮಾಡುವ ತಲಬು
ಮುದಿಯನಿಗೆ ಎಂದು ನಕ್ಕು ಅವನನ್ನು ರಸ್ತೆಗೆ ಬಿಟ್ಟಿದ್ದೇ
ಕಪ್ಪು ಗಿಡಗಳ ಹಿಂದೆ ರಾತ್ರಿಯಿಡೀ ಓಡಿದನಂತೆ

ಎದ್ದಾಗ ಉಪವನದಲ್ಲಿ ಧೂಳು ಉರೀತಿತ್ತು
ಒಣಗಿದ ಕಾರಂಜಿಯಡಿ ಸರ್ಕಲ್ಲಿನ ಸೂಳೆ ಸ್ನಾನದ
ಅಭಿನಯ ನಡೆಸಿದ್ದಳು. ಅವ್ವಾ ತಾಯೀ ಎಂದು
ಗೋಗರೆದು

ಅವಳ ಜತೆ ರೊಟ್ಟಿ ತಿನ್ನುವ ಅಭಿನಯ ಮಾಡಿದನಂತೆ
ಕಾವಲು ಕೂತ ವಿಚಿತ್ರ ಬಡಕಲು ಪಕ್ಕಿಗಳ ನೋಡಲಿಲ್ಲ
ಮೂರೆಲೆ ಆಡುವ ಮಕ್ಕಳ ಡಬ್ಬಿಯ ನಾಣ್ಯ ದೋಚಿ

ರಸ್ತೆಗಳು ಸೇರುವಲ್ಲಿ ಮುಗ್ಗರಿಸುತ್ತ ಓಡಿದ್ದಾನೆ
ಅಬ್ಬರಿಸುವ ವಾಹನಗಳ ಮಧ್ಯೆ ನಟರಾಜನ ಭಂಗಿಯಲ್ಲಿ
ಭಗ್ನಮೂರ್ತಿಯಂತೆ ನಿಂತುಬಿಟ್ಟಿದ್ದಾನೆ

ಅಭಯಹಸ್ತದಿಂದ ನಾಣ್ಯ ಉದರುತ್ತಿವೆ
ಕಾಜಿಲ್ಲದ ಚಸ್ಮ ನೂಲಿಲ್ಲದ ಧೋತರ

ಎರಗುವ ಹಕ್ಕಿಗಳ ಒಂದು ಕೈಯಿಂದ ಹಚಾಹಚಾ
ಓಡಿಸುತ್ತ
ನಿಂತಲ್ಲೆ ಮೆಲ್ಲಗೆ ಒಂಟಿ ಕಾಲಿಂದ ವಿಗ್ರಹವಾಗುತಿದ್ದಾನೆ
ಪೂರ್ತಿ ವಿಗ್ರಹ ಆಗಬೇಡಿ ಟೀವಿ ಕ್ಯಾಮರಾ ಬರೋತನಕ
ದಯವಿಟ್ಟು ತಾಳಿ ಎಂದು ಕಡಲೆಯವನು
ಅಂಗಲಾಚುತಿದ್ದಾನೆ

– ಜಯಂತ ಕಾಯ್ಕಿಣಿ

ಭಾಗ - ೪ : ನವ್ಯೋತ್ತರ

ಶಾಂತಿ ಸಭೆಯಲ್ಲಿ

ಗಾಂಧಿ ನೀ ತುಂಬ ಪುಣ್ಯಾತ್ಮ
ಉಗುಳು ನುಂಗಿದರೆ ಶಾಂತಿ
ಉಸಿರು ಬಿಟ್ಟರೆ ಅಹಿಂಸೆ
ಹೆಜ್ಜೆ ಮುಂದಿಟ್ಟರೆ ಧರ್ಮ
ಮಂತ್ರ ಜಪಿಸುತ್ತ ಕೊನೆಗೂ ಗಳಿಸಿದೆ
ಆಚಂದ್ರಸೂರ್ಯ ಮಹಿಮ ಪಟ್ಟವ
ನಿನ್ನ ನಿರಶನ ಉಳಿಸಿಕೊಂಡಿತ್ತು
ಅಹಿಂಸೆಯೆಂಬುದ ಬುದ್ಧ ಉಳಿಸಿಹೋಗಿದ್ದ
ನಿನ್ನ ಕಸುವು ತುಂಬಿದೆ ನಾಡಿಗೆ
ಆಸೆ ಆಮಿಷೆಗಳಿಗೆಲ್ಲ ಪೂರ್ಣ ತರ್ಪಣಬಿಡಿಸಿ
ನಾಡಿನುಳಿವಿಗೆ ನ್ಯಾಯ ಚಕ್ರದಡಿಯಲ್ಲಿ ಬಿದ್ದೆ
ಅಳುವ ನೋಯುವ ಜೀವಗಳ
ಮಾತೆಯರ ಭಗಿನಿಯರ
ಹಸುಕೂಸುಗಳ ಬಿಸಿಯುಸಿರ
ಕಂಬನಿಗಳ ಒರೆಸಿ
ಅಳುವ ತಾಯಿಯ ಗದ್ದುಗೆಗೆ ಹತ್ತಿಸಿದೆ
ಕರ್ಪೂರದಂತೆ ಸಪೂರ ಉರಿದೆ
ಪರಿ ಪೂರ್ಣ ಬೆಳಕಾಗಿ
ಗುಂಡಿನೇಟಿಗೆ ಬಲಿಯಾದೆ
ನಿಜ ನೀನೊಬ್ಬ ಕಲಿಭೀಮರಘುರಾಮ

– ಎಂ. ಸರಸ್ವತಿ ಗೌಡ

ಪ್ರಿಯ ಗಾಂಧಿ

ಇಲ್ಲಿ ಈ ಕ್ಷಣದಲ್ಲಿ ಅರಳುವ
ಮಲ್ಲಿಗೆಯ ಘಮಲಲ್ಲಿ ಸತ್ಯಕ್ಕೆ ಬೆಲೆಯಿಲ್ಲ
ಕಲ್ಲು ತುಳಿಯುತ್ತಿರುವ ಸತ್ಯ; ಬಟ್ಟೆ
ಹರವಿಕೊಂಡಂತೆ ಮೈಮೇಲೆ ಮುಳ್ಳೆದ್ದು
ಪಶ್ಚಿಮದ ಮುಗಿಲಲ್ಲಿ ಮರೆಯಾಗುತ್ತಿರುವ
ಸೂರ್ಯನ ಕಡೆಯ ಕಿರಣ;

ಕತ್ತಲ ಕುದುರೆಯನ್ನೇರಿ ಅದನ್ನು
ಬೆನ್ನತ್ತಿದ ಮೂರ್ಖಮಾತ್ರ ಸಾಯುತ್ತಾನೆ
ನಿನ್ನಂತೆ; ಅಥವಾ ಸೂಕ್ಷ್ಮತೆಯ
ಸೋಂಕತ್ತಿ ನರಳಿ ರೋಗಿಷ್ಠ ಪಾಪಾಸು ಕಳ್ಳಿ
ಯಾಗಿ ಅದ್ದೂರಿ ಆಸ್ಪತ್ರೆಗಳ ಇನ್ಸೆಂಟೀವ್ ಕೇರಿನ
ತೊಟ್ಟಿಲ ಮಂಜುಗಡ್ಡೆಗಳಲ್ಲಿ ತಣ್ಣಗೆ ಕೊಳೆಯುತ್ತಾ
ದಾದಿಯರ ಬಿಳಿ ಸೆರಗಲ್ಲಿ ಕರಗುತ್ತಾನೆ.

ಬಾಲಬಿಚ್ಚುವ ; ಸತ್ಯದ ಪರವಾಗಿ
ಗಾಂಚಾಲಿ ಮಾಡುವ ಕಾಲ ಇದಲ್ಲ;
ಬ್ರಿಟಿಷರ ಗಲ್ಲು ಗುಂಡುಗಳ ಬದಲು
ಬೆನ್ನಿಗಿರಿವ ಅಥವಾ ಕೂದಲೆಳೆಯಲಿ
ಶಿರವ ಹರಿವ ಪ್ರಾಮಾಣಿಕ ಪ್ರಪಂಚ
ತೆಂಗುಗರಿಗಳ ನಡುವೆ ಚಂದಿರನ
ತುಂಬು ಬೆಳಕು ನಯವಾಗಿ ತೂರಿ

ತೋರಿ ಬಿಡುತ್ತದೇ ನರಕದ ಹಾದಿ ಈಗ
ಪರಾಕು ಪಂಪೊತ್ತುವುದಷ್ಟೆ ನಮ್ಮ
ನಿಸ್ಸೀಮ ಕಾಯಕ ನಿಷ್ಠೆ.

ಮೂಳೆಚಕ್ಕಳದೊಳಗೆ ತಾನು ಕೊಲ್ಲಲಾರದ
ಆತ್ಮವೊಂದಿತ್ತೆಂದು ಕನಿಷ್ಠ ಆ
ಗೋಡ್ಸೆ ಮಹಾತ್ಮನಿಗಾದರೂ ತಿಳಿದಿತ್ತು
ಆ ದೇಶಭಕ್ತ ಸೂಮ ನಿನ್ನ
ಕ್ಷುದ್ರ ಆತ್ಮಕ್ಕೆ ಗುಂಡಿಕ್ಕಿರಲಿಲ್ಲ ನಿನ್ನ
ಬೀಜಾಂಕುರರೆಂದು ಬೀಗುವ
ನಾವೆಲ್ಲ ಗೋಡ್ಸೆಮಹಾತ್ಮ ಕೊಲ್ಲದೇ
ಬಿಟ್ಟಿದ್ದ ನಿನ್ನ ಆತ್ಮವನ್ನು ಎಗರಿಸಿ
ಧನ್ಯರಾಗಿಬಿಟ್ಟೆವು!

ಘಳಿಗೆ ಅರವಳಿಕೆ ಕಳೆದು
ಮತ್ತೆ ಮನಸು ಚಿಗುರಲೇ ಬೇಕಲ್ಲ;
ಸಂಜೆ ಮುಂಜಾನೆಗಳ ಪೂರಾ ಆಕಾಶ ಹರಿದು
ಮೋಡಗಳ ಕೆಡವಿಕೊಂಡು ಕಪ್ಪಗೆ ಸುರಿದ
ಈ ಮಹಾಮಳೆ ಮುಗಿಯಲೇಬೇಕಲ್ಲ
ಮಾರಾಯ? ತಾವರೆ ಎಲೆಯ
ಮೇಲಿಂದ ನೀರಹನಿ ಜಾರಲೇಬೇಕಲ್ಲ!

– ಎಲ್.ಎನ್. ಮುಕುಂದರಾಜ

ಗಾಂಧಿಗೆ ಕೊನೇ ನಮಸ್ಕಾರ

ಗಾಂಧಿ - ಏನಂದಿರಿ ಗಾಂಧಿ;
ಸತ್ಯದ ಕೋಲನು ಹಿಡಿದು,
ಬಿಳಿಯರಿಗೆ ಬಳೆ ತೊಡಿಸಿದವನೇ-
ಬರಿಯ ಅರ್ಧಬತ್ತಲೆ ಫಕೀರ,
ಪಿರಂಗಿಗಳಿಗೆ ಚಳಿ ಹಿಡಿಸಿದವನೇ-
ತುಂಡರಸರ ಇಂಡಿಯಾಕೆ
ಏಕತೆಯ ಬಳ್ಳಿ ಸುತ್ತಿದವನೇ
ಗಾಂಧಿ- ಏನಂದಿರಿ ಗಾಂಧಿ!
ಚರಕದ ಚಕ್ರದಹತ್ತಿ
ಸಾಮ್ರಾಜ್ಯಕೆ ಇಟ್ಟಿತಲ್ಲ ಬತ್ತಿ!
ಬಿಟ್ಟುಬಿಡಿ- ಊಟ, ಬಟ್ಟೆ, ಭಾಷೆ
ಬಿಟ್ಟು ಓಡುವವರು ನಮ್ಮದೇಶದಾಸೆ
ಗಾಂಧಿ- ಏನಂದಿರಿ ಗಾಂಧಿ!
ಕಾಡಿದವನು, ಕಾದಾಡಿದವನು
ಬಾಡಿದವನು, ಬಡಿದಾಡಿದವನು
ಇವನೇ ಅಲ್ಲವೇ ಗಾಂಧಿ?
ಬ್ರಿಟೀಷ್‌ರಿಂದ ಬಿಕನಾಶಿಗಳಿಗೆ ಸ್ವಾತಂತ್ರ್ಯ!
ಎಲ್ಲರಿಗೂ ಗೊತ್ತಲ್ಲ ಸರ್ವತಂತ್ರ!!
ಗಾಂಧಿ- ಏನಂದಿರೀ ಗಾಂಧಿ.

- ಜಯಪ್ರಕಾಶ ಮಾವಿನಕು

ಗಾಂಧಿ ನಾಡಿನಲ್ಲಿ

ಇಲ್ಲಿ
ಬಡವ ಬದುಕುವುದೇ ಇಲ್ಲ.

'ಆಶ್ರಯ'ದ ಅಡಿಯಲ್ಲಿ ಉಡುಗೊರೆ ಪಡೆದ
ಬಡವನ ಗೂಡಿನ ಮೇಲೆ ಹಕ್ಕಿ
ಕುಳಿತು ಹಾಡುವುದೇ ಇಲ್ಲ
(ಮೇಲೆ ಮಾಳಿಗೆ ಇಲ್ಲವೇ ಇಲ್ಲ)

ಪಟ್ಟಣಗಳ ಆಯಕಟ್ಟಿನ ನೆಲೆಗಳಲಿ
ಮಂತ್ರಿಗಳು ಕಟ್ಟುವ ಚಾಳಿ ಬಿಟ್ಟಿರುವುದೇ ಇಲ್ಲ

ನೆಳಲ ನೀಡುವ ನೆಪದಲಿ
ಕೊಂಬೆರೆಂಬೆಗಳಲ್ಲೂ
ಭ್ರಷ್ಟತೆಯ ಬೇರು ಬಿಡುವ
ಹಸಿದ ಪ್ರಭುಗಳ ನೆಲದಲಿ
ಬಾಳಸಸಿ ಚಿಗುರುವುದೇ ಇಲ್ಲ

'ಅಕ್ಷರಕ್ರಾಂತಿ' ಯಾತ್ರೆಯ ಹೆಸರಿನಲಿ
ಲಕ್ಷಗಳ ಕೊಳ್ಳೆಹೊಡೆವ
ಸೋಗಲಾಡಿಗಳ ನಾಡಿನಲಿ
ಬಡವ ಕಲಿಯುವುದೇ ಇಲ್ಲ.

ಭಾವೈಕ್ಯತೆಯ ಹಾಡುಹಾಡುತ್ತ
ಜಾತಿಪ್ರತ್ಯೇಕತೆಯ ಗುಂಡು ಹಾರಿಸುವ

ಭಯೋತ್ಪಾದಕರ ನೆಲೆಬೀಡಿನಲಿ
ಬಡವ ಉಸಿರಾಡುವುದೇ ಇಲ್ಲ.

ಕಂಡ ಕಂಡಲ್ಲಿ ಹೆಂಡದಂಗಡಿ ತೆರೆವ
ಹೆಂಡದೊರೆಗಳ ಭರತಖಂಡದಲ್ಲಿ
'ಪಾನ ನಿರೋಧ ಯಜ್ಞ' ಕುಂಡ
ಉರಿಯುವುದೇ ಇಲ್ಲ.

ದಿನದಿನವೂ ದಿನಕ್ಕನುಸಾರ
ಬಣ್ಣಬದಲಿಸುವ ಗೋಸುಂಬೆಗಳ ದೇಶದಲಿ
ಸತ್ಯ ಬೆಳಗುವುದೇ ಇಲ್ಲ.

ಮಹಾತ್ಮಾ, ನಿನ್ನನೇ ಹುತಾತ್ಮನನ್ನಾಗಿಸಿದ
ಆತ್ಮಘಾತುಕರ ಆರ್ಯಾವರ್ತದಲಿ
ಬಡವ ಬಾಳುವುದೂ ಇಲ್ಲ,
ಹೀಗೇ ಮುಂದುವರೆದರೆ
ತಾಳುವುದೂ ಇಲ್ಲ.

- ನಾಗೇಶ ರಾಂಪೂರ

ಗಾಂಧಿ ಮತ್ತು ನಿರಾವರಣ

ಸತ್ಯ ಅಗ್ನಿಯಹಾಗೆ ನಗ್ನ. ಅಂಬರವಿಲ್ಲ.
ಬೆಟ್ಟದೆತ್ತರದಲ್ಲಿ ಬಿಚ್ಚು ಬಾಳಿನ ನಿಲುವು
ಮುಖಕ್ಕಷ್ಟೇ ಅಲ್ಲ ಮರ್ಮಾಂಗಕ್ಕು ಹಿಡಿದೀಪ
ಬೀದಿಗೇ ಎಳೆತಂದ ಜೋಡಿಮಂಚದ ಜೀಕು.

ಹೆತ್ತವ್ವಗೂ ಪೂರ ತೋರಿಸದೆ ಮರೆಸಿದ್ದ
ಬೊಗಸೆಯಗಲದ ಬಟ್ಟೆ ಒಳತೊಡೆಗೆ ಕಟ್ಟಿ
ಇಲ್ಲಿ ಎಲ್ಲವು ಮುಕ್ತ- ನೀರು ಗಾಳಿಯ ಹಾಗೆ
ಅಂತವಿರದಾಕಾಶದಂತೆ, ತೇಜಸ್ಸಂತೆ.

ಪಂಚಭೂತಗಳಲ್ಲಿ ಮಣ್ಣಿಗಷ್ಟೇ ಮುಸುಕು
ಹೆಣ್ಣೆಂದು ಕೂಗಿದರು ಕಡಲುಡಿಸಿ ಪೃಥ್ವಿಗೆ
ಕೇಶರಾಶಿಯ ಹಿಂದೆ ಮಹಾದೇವಿ ಗುಡುಗುವಳು
"ನನಗಾಗಿ ಅಲ್ಲ ಮರೆ; ಉರಿವ ನಿಮಗೆ."

ಇದು ಚರ್ಮ ಇದು ಅಸ್ಥಿ ಇದು ಮಾಂಸದಂಬಾರಿ
ಎದೆ ಸೀಳಿದಾಗಲ್ಲಿ ಇತ್ತೆ ಮೂರಕ್ಷರ?
"ಹೇರಾಮ" ಎಂದು ಚಿಮ್ಮಿತ್ತು ಹರಣದ ಹಕ್ಕಿ
ಆಕಾಶವಾಸಿಯೇ ಈ ಮಣ್ಣಿನುಸಿರು?

ಎಲ್ಲೆಲ್ಲಿ ಬಯಲೊ ಅಲ್ಲೆಲ್ಲ ಗಾಂಧಿಯ ಉಸಿರು
ನೀರುಂಟೊ? ಕೆಳಗೆಲ್ಲೊ ಒಳಜಲದ ಕಣ್ಣು
ಹೂವು ಅರಳುತ್ತಿದೆಯೆ ಸರಿ ಮತ್ತೆ ಇದ್ದೆ ಇದೆ-
ಹಸಿಯ ಬೇರನ್ನಪ್ಪಿ ತಾಯ್ನೆಲದ ಮಣ್ಣು.

- ಎಚ್.ಎಸ್. ವೆಂಕಟೇಶಮೂರ್ತಿ

ಗಾಂಧಿಜಿ ನೆನಪುಗಳು

ಹೆಪ್ಪುಗಟ್ಟಿದ
ಕಾರ್ಗತ್ತಲಿನಲ್ಲಿ
ಚಂದ್ರನಂತೆ ಮೂಡಿ
ಜನಮನದಲ್ಲಿ ಬೆಳಕಾದ.

ಸತ್ಯ- ಅಹಿಂಸೆ
ಸ್ವತಂತ್ರತೆ - ಮಾನವೀಯತೆಯ
ಮಂತ್ರವ ಮೊಳಗಿಸಿ
ಶಾಂತಿ ಬೀಜವ ಬಿತ್ತಿದ

ದಾರಿಯಲ್ಲಿ ಹರಡಿದ
ಮುಳ್ಳುಗಳಿಗೆ
ಮಲ್ಲಿಗೆಯಾದ
ಪರತಂತ್ರ- ಕುತಂತ್ರಗಳಿಗೆ
ವಜ್ರಾಯುಧನಾದ.

ಬಣ್ಣ ಬಣ್ಣದ
ಹೂಗಳಿಗೆ
ಮಾಲೆಗಾರನಾದ
ಮುಸುಕಿನ
ಬಿರುಕು- ಒಡಕುಗಳ
ಮೋಡಗಳಿಗೆ
ಬೀಸುವ ಗಾಳಿಯಾದ

ಮತೀಯ ಅಮಲಿನಲ್ಲಿ
ತೇಲುವ ದೋಣಿಯಲ್ಲಿ
ರಾಮರಾಜ್ಯದ ಕನಸು ಕಂಡು
ರಾಮನಾದ - ರಹೀಮನಾದ
ಆಗ
ಭಾವೈಕ್ಯತೆಯ
ಚುಕ್ಕಾಣಿ ಹರಿಯಿತು
ದೋಣಿ ಮುಳುಗಿತು
ಚಾಳೀಸು, ಪುಸ್ತಕ, ಕೋಲು
ತೇಲುತ್ತಲೇ ಇದ್ದವು.

– ಡಾ. ವಿಜಯಶ್ರೀ ಸಬರದ

ನಾವು ಮತ್ತು ನೀನು

ನಮ್ಮೆಲ್ಲರ ಮಧ್ಯೆ ಹುಟ್ಟಿ
ನಮ್ಮ ಹಾಗೇ ಬೆಳೆದು
ನಮ್ಮೊಂದಿಗೇ ಇದ್ದೆ - ನಮ್ಮ ಮನಸ್ಸಾಕ್ಷಿಯಂತೆ.

ಎಂಥ ಸಾಧಕ ನೀನು! ದುರ್ಗಮ ಮೋಹ ಕಂದಕ ದಾಟಿ
ಅಧಿಕಾರ ಆಕಾಂಕ್ಷೆ ಚಿಲ್ಲರೆ ಸ್ವಾರ್ಥ ಕೋಟೆಗಳ ಪುಡಿಗುಟ್ಟಿ
ಜನಮನ ಮುಟ್ಟಿ ಕದತಟ್ಟಿ ಬಾಗಿಲು ತೆರೆದು ಕಸಗುಡಿಸಿ
ಜೇಡರ ಬಲೆಯ ಹರಿದ್ಹೊಗೆದು ಅಡ್ಡಗೋಡೆಗಳ ಜರಿದು
ರೂಪಿಸಿದೆ
ಶುದ್ಧ ವಾತಾಯನದ ಸ್ವಾಭಿಮಾನದ ಬದುಕು.

ಆವರಣದೊಳಗಿದ್ದ ಗಿಡಕಂಟೆಗಳ ತಂದು ಜಡಮಣ್ಣನಗೆದು
ಆತ್ಮಗೌರವದ ಬೀಜಬಿತ್ತಿದೆ. ಪ್ರೀತಿ ವಾತ್ಸಲ್ಯಗಳ
ಸಹಜ ಗೊಬ್ಬರ ಹೂಡಿ ಸಹೃದಯತೆಯ ಪಾತಿಯ ಕಟ್ಟಿ
ಸ್ನೇಹ ಧಾರೆಯನೆರೆದು ಪೋಷಿಸಿದೆ. ವಿನಯವಂತಿಕೆಯ
ಮುಗ್ಧ ಮೊಗ್ಗಾಗಿ ಸ್ನಿಗ್ಧ ಸುಂದರ ಪುಷ್ಪವರಳಿಸಿದೆ.

ಸ್ವಂತ ನೆಲದಲ್ಲಿ ನಿಂತು ತಲೆಯೆತ್ತಿ ನರುಗಂಪುಬೀರಿ
ಎಲ್ಲೆಂದರಲ್ಲಿ ವ್ಯಾಪಿಸಿದೆ ಜಗದಗಲ ನೆಲಮುಗಿಲ
ನಳೆದ ವಾಮನ ಪಾದ ಬೆಳೆಸುತ್ತ ತ್ರಿವಿಕ್ರಮನಾಗಿ
ಮಹಾಬಲಿಯ ಮೆಟ್ಟಿ ಮಹಾಬಲನಾದೆ, ಮಾನವನಾದೆ.

ನೀನು ಗುರುವಾದೆ, ನಮ್ಮ ಗುರಿಯಾದೆ, ಬಿಲ್ಲ ಕಣೆಯಾದೆ
ನಾವೊ ಹೇಡಿಗಳು ಹಿನ್ನಡೆದು ಮುಳುಗಿದೆವು
ವೈಶಂಪಾಯನದ ಮಡುವಲ್ಲಿ

ಗುಡುಗಿದಷ್ಟೂ ನೀನು ಮುದುರಿದೆವು ಆಳನೀರೊಳಗೆ
ಇನ್ನೂ ನಮಗೆ ನೆನಪಿದೆ ನೋಡು ಜಲಸ್ತಂಭನದ ವಿದ್ಯೆ
ನೀನು ಹೂವಾದೆ, ಕಾಯಾದೆ, ಹಣ್ಣಾದೆ, ಶ್ರೀಗಂಧವಾದೆ
ಬೆಳಕಾದೆ, ಉಸಿರಾದೆ, ನೆಲವಾದೆ, ಜಲವಾದೆ;
ಜೀವ ಚೈತನ್ಯವಾದೆ, ಆಕಾಶವಾದೆ, ಧ್ರುವನಕ್ಷತ್ರವಾದೆ.

ಆದರೂ ಉಳಿದೆವು ನಾವು ನಾವೇ ಆಗಿ, ಹೆಣವಾಗಿ
ನೀನು ನೀನೇ ಆಗಿ- ಇತಿಹಾಸವಾಗಿ.

- ವೇಣುಗೋಪಾಲ ಕಾಸರಗೋಡು

ಗಾಂಧಿ

ನೀನಿದ್ದಾಗ ಕೊಲ್ಲಿದೆವು
ಸತ್ತಮೇಲೆ ಹೊಗಳಿ
ಹೂಗಳ ಮಾಲೆ ಹಾಕಿ
ಈಗ ಪೂಜೆ ಮಾಡುವೆವು

ನಿನಗೆ
ಜೀವವಿರಲಾರದು
ಎಂಬುದ ಖಚಿತಪಡಿಸಿಕೊಂಡೇ
ಅಳುವೆವು.
"ಮತ್ತೊಮ್ಮೆ ಹುಟ್ಟಿ ಬಾ!"
ಉದ್ಗಾರವನೂ ತೆಗೆಯುವೆವು.

ಒಮ್ಮೆ
ಹುಟ್ಟಿ ಬಂದಾದರೂ
ನೋಡಿಬಿಡು ಗಾಂಧಿ!
ಗ್ಯಾರಂಟಿ ಮತ್ತೆ
ಗುಂಡೇ ಇಡುವೆವು
ನಿನ್ನ
ಇದ್ದಾಗ ಸಾಯಿಸಬೇಕೆನಿಸುತ್ತಿತ್ತು
ಈಗ
ಸತ್ತಾಗ ಬದುಕಿಸಬೇಕೆನಿಸುತ್ತದೆ
ಗಾಂಧಿ!

– ಅನ್ನದಾನಿ ಹಿರೇಮಠ

ಗಾಂಧಿ ನೆನಪು ಮತ್ಯಾಕ

ಸತ್ತವನು ಸತ್ತ, ಮತ್ಯಾಕವನ ಸುದ್ದಿ?
ಇದ್ದಿದ್ರ ಇರತಿದ್ದ
ಈಗವನೂ ಒಳಗ
ಅಥವಾ
ಬಂದು ಒಂದೆರಡು ದಿನ
ಆಗಿರುತಿತ್ತು
ಒಳಗಿಂದ ಹೊರಗ.

– ಸಿದ್ಧಲಿಂಗ ದೇಸಾಯಿ

ಮಹಾತ್ಮ

ಕಿರಿಯಂದು ಅರಿಯದೆ ಮಾಡಿದ ತಪ್ಪಿಗೆ
ತೀವ್ರವ್ಯಾಕುಲದ ಪರಿ,
ಮುಂದಿನ ದಿನಗಳ ನೀಲನಕ್ಷೆಯನು
ಅಂದೇ ಕಂಡುಕೊಂಡ ಅಚ್ಚರಿ

ಸಂಕಲ್ಪ, ಕ್ರಿಯೆಗಳು ಒಂದಾದ ಜಾಣ್ಮೆ
ಸಹಧರ್ಮಿಣಿಯನ್ನು ಸಹಕರ್ಮಿಣಿಯನ್ನಾಗಿಸಿಕೊಂಡ ಕೌಶಲ
ಸತ್ಯಾಗ್ರಹದ ವಿನೂತನ ಅಸ್ತ್ರಪ್ರಯೋಗದಿಂದ
ಮುನ್ನಿನೆಲ್ಲ ಶಸ್ತ್ರಗಳನ್ನು ನಿರ್ವೀರ್ಯಗೊಳಿಸಿದ ಚಾತುರ್ಯ
ನಾಡ ಬಿಡುಗಡೆಯ ನಂತರ
ವಿಭಜನೆಯ ಮೂಕನೋವನ್ನು ಸಹಿಸಿದ ನಿರ್ವಿಕಾರ
ಎದುರಾಳಿಯ ತಪ್ಪಿಗೆ ತಾನೇ ನೋಯುವ ಆತ್ಮಶಕ್ತಿ,
ವಾದ ಮಾಡಲು ಬಂದವರು ಮಾತಿಲ್ಲದೇ ಪರಾರಿ.

ಕುರಿತು ಹೇಳಿದ ಮಾತು, ಅರಿತು ಮಾಡಿದ ಕಾರ್ಯ,
ನೇರ ನಿರ್ದಿಷ್ಟ ನಿರ್ದುಷ್ಟ
ಅತಿ ದೂರದವರಿಗೂ ತೀರ ಹತ್ತಿರದವರಾಗಿಬಿಡುವ ಆಪ್ತತೆ,
ಮುಗ್ಧತೆ, ಪಕ್ವತೆಗಳ ಅಪರೂಪದ ಮಿಲನ,
ಸತ್ಯದಲಿ ಶಿವ, ಸೌಂದರ್ಯಗಳನ್ನು ಕಂಡ ಸಿದ್ಧಿ.

ಕಣ್ತುಂಬಿ ನಿಮ್ಮ ನೆನೆದಾಗ
ಮನದಾಳದಲಿ ಮೊಳೆಯುವುದು ಅಭಯ
ನಿಜದಲಿ ನೀವು ಒಂದು ಅಗಾಧ ವಿಸ್ಮಯ

- ಡಾ. ಎಚ್.ಎಸ್. ಸುಜಾತ

ಕ್ಷಮಿಸು ಗಾಂಧಿ

ಮೋಹನದಾಸ ಕರಮಚಂದ ಗಾಂಧಿ
'ಮಾನವ ಕುಲವೇ ನನ್ನ ಕುಟುಂಬ
ಜಗತ್ತೇ ನನ್ನ ಮನೆ' ಎಂಬ ತತ್ವದವ
ಗಾಂಧೀಜಿ ಎಲ್ಲರ ಹಾಗೆ ಮನುಷ್ಯ
ಅಲ್ಲದೆ ಸಹಜ ಮತ್ತು ಪ್ರತ್ಯೇಕ ಸತ್ಯದ ಚಕ್ರ
ಸೋತದ್ದನ್ನು ಒಪ್ಪಿದ ಸೋಲು
ಮೈಕಟ್ಟಿನಲ್ಲಿ ಹುರಿಕಟ್ಟು
ಮುಖದಲ್ಲಿ ಗೆಲುವಿನ ಗುಟ್ಟು
ಬಳಸಿಯೂ ಬ್ರಹ್ಮಚಾರಿ, ಸದಾ ಆಚಾರಿ ಪಾದಚಾರಿ
ನಾವು ಹೇಳುತ್ತೇವೆ
ಗಾಂಧೀಜಿ ಭೂಮಿಯ ಮೇಲಿನ ಸತ್ಯ ಮನುಷ್ಯ
ಭೂಮಿಗಾಗಿ, ರೊಟ್ಟಿಗಾಗಿ, ಬಟ್ಟೆಗಾಗಿ, ನೀರಿಗಾಗಿ
ಸ್ವಾತಂತ್ರ್ಯಕ್ಕಾಗಿ ಇದ್ದ ಅಭಾವ ನೀಗಿದ

ಆದರೂ ನಾವು ಸಂಖ್ಯೆಯಲಿ ಹೆಚ್ಚು
ಹಿಂದಕೆ ಮುಂದಕೆ ಸರದಾಡಿ
ದುಡಿಯದೇ ದುಃಖಪಡೆಯದ ತೊಗಲಬಾವಲಿ
ಲಾಟರಿ, ಲಾಳಿ, ಬತ್ತಲೆ ಕುಣಿತ ಕುಡಿತದ ಹಮಾಲಿ

ಯಾವುದೋ ಮಂತ್ರಗಂಬಳಿ ಹೊದ್ದು
ಕಥೆಗಳ ರಾಜಕುಮಾರಿಯಂತೆ
ಐದು ಮಲ್ಲಿಗೆಯ ತೂಕಾಗುತ್ತೇವೆ

ಅನಾಚಾರ ಪಟಪಟ ಪೈಯಾಗಿ
ಅತ್ಯಾಚಾರ ಕಟಕಟ ಕೈಯಾಗಿ
ಭ್ರಷ್ಟಾಚಾರ ಥಕಥಕ ಥೈದಿಂದ-
ಸ್ಪೃಶ್ಯಾ ಸ್ಪೃಶ್ಯಾ ಕುಲಕುಲವಾಗಿ
ಸಮಾಚಾರ ತೆರೆತೆರೆಯಾಗಿ ಕೇಳುವಾಗ
ನಾವೆಲ್ಲ ನಾಚಲಿಲ್ಲ! ಮಣಿಯಲಿಲ್ಲ!
ಕ್ಷಮಿಸು ಗಾಂಧಿ

– ನಿಂಗಣ್ಣಾ ಸಣ್ಣಕ್ಕಿ

ನಟ್ಟಿರುಳ ಸದ್ದು

ಎಲ್ಲೋ ಕೇಳುತ್ತಿದೆ ಸದ್ದು
ಟಕಟಕ ಟಕಟಕ.....
ಯಾರು ಕೋಲೂರಿ ನಡೆಯುತ್ತಾರೆ
ಈ ಅಪರಾತ್ರಿಯಲ್ಲಿ
ಗಡಿಯಾರದಂತೆ ನಿಖರವಾಗಿ

ಬಂತು ಹತ್ತಿರ ಹತ್ತಿರ
ಎದೆಗೇ ಒದೆಯುವ ಲಯ

ಗದಗದ ಬೆವರಿ
ಹಾಗೇ ಎದ್ದೆ
ಧೈರ್ಯ ತಂದುಕೊಂಡೆ
ಅರೇ! ಸದ್ದು ಮಟಾಮಾಯ!

ಟಾರ್ಚ್ ಬೀರಿ ನೋಡಿದೆ:
ಯಾರೂ ಇಲ್ಲ
ಸದ್ದು ಬರಿಯ ಸದ್ದೇ
ಅಥವಾ ಭ್ರಮೆಯೇ?

ಮಲಗಿದೆ
ಕೂಗಳತೆಯಲ್ಲೆ ಮತ್ತೆ ಸದ್ದು
ಟಕಟಕ ಟಕಟಕ.....
ಎಡೆಬಿಡದೆ

ನನ್ನ ಹಿಂದೆ ಮುಂದೆ
ತುಯ್ದಾಡುತ್ತಿದೆ ಸದ್ದು

ನೆನಪಿನಂಗಳ ಕೆದಕಿದೆ
ಯಾರು ಏನು ಎತ್ತ
ನೆನಪಾಗಲೊಲ್ಲದು

ಎಪ್ಪತ್ತರ ಅಪ್ಪ
ಅರವತ್ತರ ಅಮ್ಮ
ಅಥವಾ.....
ಅಥವಾ ನಾನು ಮರೆತ ಗಾಂಧಿ?
ನಿಶ್ಯಬ್ದ ತರಂಗದಲ್ಲಿ
ಮನತುಂಬ ರಿಂಗಣ ಕುಣಿತ
ಹಾಗೇ ಆವರಿಸಿತು ಜೊಂಪು....

ಎಂಥ ಆಪ್ಯಾಯ
ಆ ಕನಸು
ಬಾಲ್ಯದ ನಿರುಮ್ಮಳ ಮನಸು
ಬೆನ್ನು ಹಾಕಿ ಸಾಗುತ್ತಿದೆ ನಿಶ್ಯಬ್ಧ
ಟಕಟಕ ಟಕಟಕ!

– ಶೈಲಾ ವಸಂತ

ಯಾಕೆ ಕಂಡೆಯೋ ಮುತ್ಯಾ
ರಾಮ ರಾಜ್ಯದ ಕನಸ
ಇದ್ದೆಯಾದರೆ ಹೇಳು
ತ್ರೇತಾಯುಗದಲ್ಲೊಂದಾದರೂ ನಿಮಿಷ!!

ಯಾವ ರಾಜನ ಕನಸು ನೀನು ಕಂಡೆಯೋ ಕೇಳು
ಅಂಥವನ ತಳಿಗಳೇ ನಿನ್ನ ಕೊಂದರಲ್ಲೋ
ಕೊಂದ ತಪ್ಪಿಗೂ ಅವರೇ ನಿನ್ನ ಗೋರಿಗೂ ಮತ್ತೇ
'ಹೇ ರಾಮ' ಮಂತ್ರವನು ಕೊರೆದರಲ್ಲೊ!!

ಮಲತಾಯಿಗಂಜಿದವ, ಹೆಂಡತಿಯ ನಂಬದವ
ಅಂಥವನ ರಾಜರೇ ನಮಗ್ಯಾಕೆ ಕೇಳೋ
ನಂಬಿ ಬದುಕುವ ಬದುಕ ನಾವಿಲ್ಲಿ ಬಾಳಿರಲು
ಕಂಡ ಕನಸಿನ ಪರಿಯ ನೀ ತಿಳಿಸಿ ಹೇಳೊ"

ಅಳುವಂತೆ ನಟಿಸುತ್ತಾ ಅಳಿಸುತ್ತಲೇ ಇದ್ದಾರೆ
ಮನಸು ಮನಸಿನ ನಡುವೆ ಜಾತಿ ಬೀಜ ಬಿತ್ತಿ
ಏಕತೆಯ ಮಾತು, ಲೆಕ್ಕವಿಲ್ಲದ ತೂತು
ಹೇಳ ಹೆಸರಿಲ್ಲದೇ ಹೋಯ್ತು ಪ್ರೀತಿ ಹೂತು"

ಕನಸು - ಕಾಣಲು ಹೇಳಿ ಕಣ್ಣ ಕಳೆಯುವ ಮಂದಿ
ನಿನ್ನ ನಾಡನು ಈಗ ಆಳುತಿಹರು

ಗಾಂಧಿ ಎಂಬುವ ಹೆಸರು / ೩೧೯

ಮುತ್ತಂಥ ಮಾತಾಡಿ ಕತ್ತಲಿಗೆ ನೂಕುವರು
ಮರೆಯಲ್ಲಿ ಪರಮಾನ್ನ ಉಣ್ಣುತಿಹರು

ರಾಮರಾಜ್ಯವೇ ಬರಲಿ ಕೃಷ್ಣ ರಾಜ್ಯವೇ ಇರಲಿ
ರಾಮಕೃಷ್ಣರ ನಡುವೆ ಸಾಯಬಾರದು ನಾವು ಕೇಳು ಮುತ್ತ್ಯಾ
ಒಪ್ಪತ್ತಿನೂಟಕ್ಕೆ ಬಾಳೆಲ್ಲಾ ನೂಕಿದೆವು
ಬಿಕನೇಸಿ ಈ ಬದುಕು ಸಾಕು ಮುತ್ತ್ಯಾ

– ಪ್ರಮೋದ್ ತುರ್ವಿಹಾಳ್

ಗಾಂಧಿ ಅಜ್ಜನಿಗೆ

ಗಾಂಧೀ ಅಜ್ಜ
ನಿನಗೆ ಬರೀ 'ಗಾಂಧೀ' ಅಂತ ಕರೆಯೋಕೆ ನಂಗಿಷ್ಟವಿಲ್ಲ
ಕಾರಣ ಕೇಳಿ
ನನ್ನ ಮನಸು ಕೆದಕು ಬ್ಯಾಡ ಅಜ್ಜ.

ನಾನು ನಿನ್ನ ಬಗ್ಗೆ ಯಾವ ಕತೆ ಕವನ ಬರೆದಿಲ್ಲ
ಅದೆಲ್ಲಾ ಬರಿಯೋಕೆ ನನಗೆ ವಸ್ತುನೇ ಸಿಕ್ಕಿಲ್ಲ
ಅದ್ಕೇ ನಿನ್ನ ಬಗ್ಗೆ ನನಗೇನೂ ತಿಳಿದಿಲ್ಲ
ಅಂಬೋಣ!
ತಿಳಿದಿದ್ದರೆ ನಾನೂ ನಿನ್ನ ಬದುಕು ಅಪ್ಪುತ್ತಿದ್ದೆ
ಆಗ, ನಿನ್ನಂಗೇ ಬರೀ ಮೈಲಿ ತಿರುಗುತ್ತಿದ್ದೆ
ನೋಡು ಅಜ್ಜ, ಪರಿಸರದ ಬಿಸಿಗಾಳಿಗೆ
ನನಗೂ ಒಮ್ಮೊಮ್ಮೆ ಬೆತ್ತಲೆ ಓಡುವ ಆಸೆ

ಅಜ್ಜ,
ನಿನ್ನ ಸುಕ್ಕುಗಟ್ಟಿದ ಬೆತ್ತಲೆ ದೇಹ ನೋಡಿ
ಎಲುಬು ಮೂಳೆ ಅಸ್ತಿಪಂಜರ ಕಂಡು
ವಿದೇಶೀಯನೊಬ್ಬ ನಕ್ಕನಂತೆ!
ಏಕೆ ಗೊತ್ತಾ?
ನಮಗಿಲ್ಲಿ ಮೈತುಂಬಾ ಹೊದಿಯಲು ಬಟ್ಟೆ ಇಲ್ವಂತೆ
ತಿನ್ನಲೂ ಅನ್ನ ಸಿಕ್ತಿಲ್ವಂತೆ

ಇನ್ನೂ.....ಏನೇನೋ ಇಲ್ವಂತೆ
ಇಲ್ಲಿ ಈ ಇಂಡಿಯಾದಲ್ಲಿ.

ಅದ್ಕೇ ಅಜ್ಜ
ನಿನ್ನ ಬಡಕಲು ದೇಹ ಕಂಡು
ನಾನೂ ಅನುಕಂಪ ಸೂಚಿಸ್ತೀನಿ.

ಅಜ್ಜ,
ನನಗೂ ಹಂಗಿನ ಬದುಕು ಅಪ್ಪೋ ಆಸೆಯಿಲ್ಲ.
ನೀ ತಿಳಿದಿದ್ದ (ಹಲವು) ಸ್ವಾತಂತ್ರ್ಯದ ಅರ್ಥ ನಂಗಿನ್ನೂ
ಗೊತ್ತಿಲ್ಲ.
ಏಕೆಂದರೆ ಹಾಗೆಂದರೇನು ಅನ್ನೋದೇ ಇನ್ನೂ ತಿಳಿದಿಲ್ಲ.

ಅದ್ಕೇ ಅಜ್ಜ.
ನಿನ್ನ ಆದರ್ಶದ ಬದುಕು ನಮಗೆ ಎಟುಕ್ತ ಇಲ್ಲ
ನಿನ್ನ ಕನಸಿನ ರಾಮರಾಜ್ಯ ಎಂದೂ ಆಗೊಲ್ಲ
ನಿನ್ನ ತಿಳ್ಕೊಳ್ಳೊ ಹೊತ್ಗೆ ನಾವಿಲ್ಲೇ ಇರೊಲ್ಲ
ಅಲ್ವ ಅಜ್ಜ?

– ಆರ್.ಜಿ. ಹಳ್ಳಿ ನಾಗರಾಜ್

ಮೊಳೆಯೇ, ನೀನೇ ಧನ್ಯ

ಅಖಂಡ ಭಾರತದಲ್ಲಿ
ಯಾರಾದರು ಗಾಂಧಿಯನ್ನು
ಎತ್ತಿ ಹಿಡಿದಿದ್ದರೆ, ನೀನೊಬ್ಬನೆ
ಅದಕ್ಕೇ,
ಮೊಳೆಯೇ ನೀನೇ ಧನ್ಯ.

ಎಲ್ಲ ಸರಕಾರಿ ಕಚೇರಿಗಳಲ್ಲಿ
ಒಂದು ಗಾಂಧಿ ಫೋಟೋ ಬೇಕು.
ಅದಕ್ಕೊಂದು ಗೋಡೆಬೇಕು
ಕಟ್ಟಲೊಂದು ಹಗ್ಗಬೇಕು.
ಹಗ್ಗಕ್ಕೊಂದು ಮೊಳೆಬೇಕು.
ಮೊಳೆಯೇ ನೀನೆ ಧನ್ಯ.

ಜನನದ ದಿವಸ
ಮರಣದ ದಿವಸ
ಎರಡು ಹೊಸಮಾಲೆಗಳು
ಉಳಿದ ದಿವಸ ನಿರ್ಮಾಲ್ಯ
ಜೇಡದ ಬಲೆಯೇ ಅಲಂಕಾರ
ಮೊಳೆ ನೀನು ಮಾತ್ರ ಶಾಶ್ವತ
ಅದಕ್ಕೇ ಮೊಳೆಯೇ ನೀನೆ ಧನ್ಯ.

ದಾಸರು ಹೇಳಿದಂತೆ
"ನೀನ್ಯಾಕೊ, ನಿನ್ನ ಹಂಗ್ಯಾಕೊ

ನಿನ್ನ ನಾಮದ ಬಲ ಒಂದಿದ್ದರೆ ಸಾಕೊ"
ಅಂತೆಯೇ, ಗಾಂಧಿಯ ಹೆಸರಿನಮೇಲೆ

ಭಾರತವನ್ನೆ ನುಂಗಲು ನಿಂತಿರುವೆವು ನಾವು
ನೀನು ಹಾಗಲ್ಲ
ಮೊಳೆಯೇ ನೀನೇ ಧನ್ಯ.

ನೀನಿಲ್ಲದಿದ್ದರೆ
ಗಾಂಧಿ ಇಲ್ಲ
ನಮಗೆ ಗಾಂಧಿ ಬೇಡ
ಅವನ ಫೋಟೊ ಮಾತ್ರಬೇಕು
ನೀ ಇದ್ದರೆ ಮಾತ್ರ
ಫೋಟೊ ಉಂಟು
ಅದಕ್ಕೇ ಮೊಳೆಯೇ ನೀನೆ ಧನ್ಯ.

- ನ.ಹ. ಕಟಗೇರಿ

ಗಾಂಧಿಗೆ

ಗಾಂಧೀ
ನಿನ್ನ ಮೈದಾನದಂಚಿನಲಿ
ಆಕಾಶದೆತ್ತರಕೆ ಮೈ ಚಾಚಿ ನಿಂತ
ಕಾಂಕ್ರೀಟು ಕಾಡು
ಕೆಳಗೆ ಕಾಲ್ದಾರಿಯಲ್ಲಿ
ಸಾಲಾಗಿ ಮಲಗಿರುವ ಭಿಕ್ಷುಕರ ಹಾಡು

ಜೋತು ಬಿದ್ದ ಮೊಲೆಗಳ ಮೇಲೆ
ಆತು ಮಲಗಿದ ಕಂದ
ಸೆರಗು ನೆರಿಗೆಗಳಿಲ್ಲದ ಸೀರೆ ಹಾಸಿ
ನೆಲಕೆ ಬಿದ್ದೊಡನೆ ನಿದ್ದೆ ಬೀಸಿ
ಕೊಳಕು ಬಟ್ಟೆಯ ಗಂಟು ತಲೆದಿಂಬು
ಎದುರು ಕುಕ್ಕುರುಗಾಲಿನಲ್ಲಿ ಚೊಂಬು

ಮೇಲೆ ಬೆಳಕಿನ ಕನ್ನಡಿ ಚಂದ್ರ
ಕೆಳಗೆ ಬದುಕಿನ ಕನ್ನಡಿ ಛಿದ್ರ
ಮೇಲೆ ನಿರ್ಮಲ ಆಕಾಶ
ಕೆಳಗೆ ನರಕ ಬದುಕಿನ ಆವಾಸ

ಕನಸು ಬತ್ತಿದ ಕಣ್ಣು
ಹೊಟ್ಟೆ ಗಂಟಿದ ಹಸಿವೆ ಹುಣ್ಣು

ಮೂಳೆ ಚಕ್ಕಳ ಬಾಳು
ಸುರಿಯುತ್ತಿದೆ ಹಾಳು

ಎಲ್ಲ ಕಣ್ಣೀರು ಬತ್ತಿದೆ ಬಿಕ್ಕಿ ಬಿಕ್ಕಿ
ಸ್ವರ ಸತ್ತು ನರಳುತ್ತಿದೆ ಎದೆಯೊಳಗಿನ ಹಕ್ಕಿ

ಗಾಂಧೀ
ಎಲ್ಲಿ ಹಾಲು ಹುಣ್ಣಿಮೆ ಬೆಳಕು
ಎಲ್ಲಿ ತೊಳೆಯುವವ ಕೊಳಕು?

– ಬಿ.ಎಂ. ಹನೀಫ್

ಟೋಪಿ

ಎಂದು ಮರಣಿಸದ ಮಹಾತ್ಮಾ
ನೀ ತುಳಿದ ಹಾದಿ ತುಳಿಯಬಾರದು ನೋಡು
ತಿರುತಿರುಗಿ ನಾಟಿ ನಿಂತಲ್ಲೇ ನಿಂತಿತುನಾದ
ಬಡವ ಕಡುಬಡವನಾದ ಸಿರಿವಂತ ಅಗಾಧ ಶ್ರೀಮಂತನಾದ
ರಾಮಜಪ ಭಜನೆ ದೇಶ ವಿಭಜನೆ
ಯಾಥಾಸ್ಥಿತಿವಾದಿ ಒಲ್ಲೆಂದಿಗಾದಿ
ಕಂಚು ಕೋಟೇಲಿ ಭಾರತ ಬಂಧಿ
ಸುತ್ತು ಸುತ್ತುಚರಖಾ ಹೊಡಿ ಗಿರಕಿ
ಗುಡಿ ಕೈಗಾರಿಕೆ ಎಂದೂ ತೀರದ ಬಾಯಾರಿಕೆ
ಮಾತು ನಂಬಿ ನೇಯ್ದ ಬಟ್ಟೆ ದೆಸೆಗೆಟ್ಟು ಹೋದೆ
ಗಾಂಧಿ! ಗಾಂಧಿ!!
ಅರಳೀತೆ ಮಾನವತೆ ಬರೀ ಮಾತಿಂದೆ
ಬರುವುದೇ? ಬದಲಾವಣೆ ಕೇವಲ ಅಹಿಂಸೆಯಿಂದೆ!
ಅಯ್ಯೋ! ಗಾಂಧಿ ಅನಾಮತ್ತು ನಿನ್ನದೇ ಅಡ್ಡಡ್ಡ
ಹೆಸರಿನಾ ಜನಾ
ದೇಶ ಕಟ್ಟಿ ಬೇಕಾಬಿಟ್ಟಿ ಗೋರಿಯಾದರು.
ಕೋಲ್ಹಿಡಿದು ಕೂಡು ರಸ್ತೇಲಿ ನಿಂತಿ
ಬೀರು ಬಾರಿಗೆ ಹೋಗುವರಿಗೆ ದಾರಿ ತೋರ್ತಾ.
ಗಾಂಧಿ ಹಾಕಲಿಲ್ಲ ಎಂದೂ ಟೋಪಿ
ಇಡೀ ಇಂಡಿಯಾಕೆ
ಯಾಕೆ ಹಾಕಿದಿ ಟೋಪಿ?

– ಪ್ರಹ್ಲಾದ ಬೆಟಗೇರಿ

ಬಾ ಮತ್ತೊಮ್ಮೆ......

ಪಕ್ಷಗಳು ಕುದಿಯುತಿವೆ ರಾಜಕೀಯ ಕುಲುಮೆಯಲಿ
ರೂಪ ಆಕಾರಕ್ಕೆ ಬರದೆ ಮತ್ತೆ ಮತ್ತೆ
ಬೀಳುತಲಿದೆ ಅಸತ್ಯದ ಕುಲುಮೆಯೊಳಗೆ
ಸುತ್ತಿಗೆ ಹಿಡಿದು ಮತ್ತೊಮ್ಮೆ
ಬರಬಾರದೇ ನೀನು ಕಮ್ಮಾರನಾಗಿ
ಜಾತಿ ಮತ ಕುಲಧರ್ಮಗಳ
ಹೆಸರಿನಲಿ ಹುಟ್ಟಿಸುತಿಹರು ಹೊಸ ಹೊಸ
ಪಕ್ಷಗಳು ಗಂಟಲು ಹರಿದು ಕಿರುಚುತಿಹರು
ಪಕ್ಷಗಳ ನೇತಾರರು
ಮೋಸ ಮಾಡುತಿವೆ ಬಡವರಿಗೆ
ಮೋಡಿಹಾಕುವ ಆಶ್ವಾಸನೆಗಳು ಭರವಸೆಗಳು
ಭಾವನೆಗಳಿಗೆ ಬೆಲೆಕೊಡದೆ
ಮತಗಳಿಸುವ ಕದೀಮರನೊಯ್ದು
ಚಿಲುಮೆಗೊಮ್ಮೆ ನೂಕಲು ಕರಕಾಗಿಸಲು
ಮತ್ತೊಮ್ಮೆ ಬರಬಾರದೇ ನೀನು......

ಬಾಂಬುಗಳಿಗೆ ಹತರಾಗುತ ನೋವಿನಲಿ ನಲಗುತ
ಮಾತನಾಡಲಾಗದವರ ಬಂಡೇಳದವರ
ಹಸಿದವರ ಬೆವರು ಹರಿಸುವವರ
ಕಾಲು ಕಸವಾಗುವವರ ಬೆಲೆಯೇ ಇಲ್ಲದವರ
ಕನಸುಗಳು ಕುಸಿಯುತಿವೆ.

ಗಾಂಧಿ ಎಂಬುವ ಹೆಸರು / ೩೨೮

ಬರುತ್ತಿಲ್ಲ ಈಗ ಸಾಂತ್ವನಕ್ಕೆ
ನಿನ್ನ ಸತ್ಯದ ಅಹಿಂಸೆಯ ಮಾತುಗಳು
ಅರ್ಥೈಸುವ ಬಸವ ಧರ್ಮಕ್ರಾಂತಿ
ನಿನ್ನ ನಿತ್ಯ ಅಹಿಂಸೆಗಳ ಕ್ರಾಂತಿಗಳೆಲ್ಲ ಹೋದವೆಲ್ಲಿ
ಅನರ್ಥಗಳಿಗೆ ಹಪಹಪಿಸುವ
ಚುನಾವಣೆ ಪ್ರಜಾಪ್ರಭುತ್ವಕ್ಕೆ ಹೊಡೆದಾಡುವ
ಈಗಿನ ರಾಜಕೀಯ ಕ್ರಾಂತಿಗಳು ತೋಳ
ಕುರಿಯಾಟಗಳ ರಕ್ತಕ್ರಾಂತಿಗಳಾಗುತಲಿವೆ
ಬಿಡು ಇನ್ನು ಮೌನ ಹಿಡಿ ಇನ್ನು ಸುತ್ತಿಗೆ
ಕೊಡಲು ಇನ್ನು ಚಮ್ಮಟಿ ಬಾ ಮತ್ತೊಮ್ಮೆ......

ಮಾಂಸ-ಮೃಷ್ಟಾನ್ನ ಭೋಜನದ ಬೊಜ್ಜುಗಾರರಿಗೆ
ಏರ್ ಕಂಡೀಶನ್‌ದ ಮೋಜುಗಾರರಿಗೆ
ಅಧಿಕಾರಮದದ ಗೂಳಿ ಗುಂಡಾಗಳಿಗೆ
ಗುಂಡಿನ ಲಾಬಿಗಳಲಿ ಹೊರಳಾಡುವ ಹೆಗ್ಗಣ ಹದ್ದುಗಳಿಗೆ
ಧರ್ಮನೆಪದ ಧರ್ಮಾಂಧರಿಗೆ
ಸಮಯ ಸಾಧಕರಿಗೆ ಪಕ್ಷಾಂತರಿಗಳನೆಲ್ಲ
ಚಿಲುಮೆಯಗ್ನಿಯಲಿ ಹಾಕು ಸುಡು
ಕುಲುಮೆಯಲಿ ಕಾಯಿಸಿ ಕರಗಿಸಿ
ಸುತ್ತಿಗೆಯಿಂದ ಹೊಡೆ ಹೊಡೆದು
ರೂಪ ಕೊಡಲು ಮತ್ತೊಮ್ಮೆ ಬಾ
ದೇಶಕ್ಕೆ ಕಮ್ಮಾರನಾಗಿ
ಕೇಳಿಸಲಿ ಮತ್ತೊಮ್ಮೆ ಆ
ಚಮ್ಮಟ ಧ್ವನಿ ದೇಶದೊಳಹೊರಗೆಲ್ಲ

- ಲತಾ ಗುತ್ತಿ

ಗಾಂಧೀಜಿಯಿಂದ ಗಾಂಧಿವರೆಗೆ ಮತ್ತು ಈಗ?

ನಿಜವಾದ ಗಾಂಧೀವಾದಿಗಳು
ನಿಜವಾದ ಸ್ತ್ರೀವಾದಿಗಳು
ನಿಜವಾದ ಕಾಂಗ್ರೆಸ್ಸಿಗರು
ನಮ್ಮದೇಶದಲ್ಲಿ ಇದ್ದಾರೆಯೇ?

ಯಾಕೆಂದರೆ,
ಗಾಂಧೀಜಿ ಗುಂಡಿಗೆ ಬಲಿಯಾದರು
ಇಂದಿರಾಗಾಂಧಿ ಗುಂಡಿಗೆ ತುತ್ತಾದರು
ರಾಜೀವಗಾಂಧಿ ಬಾಂಬಿನಲ್ಲಿ ಸಿಡಿದರು

ಮತ್ತೆ,
ಮಾನವೀಯತೆಯ ಪ್ರಶ್ನೆ
ಇಲ್ಲವೆನ್ನಿಸುತ್ತಿದೆ.....

ಯಾಕೆಂದರೆ,
ದಿನದಿನವೂ ಗುಂಡಿಗೆ ಬಲಿಯಾಗುತ್ತಿರುವ
ಅಮಾಯಕ ಜನರ ಗೋಳು ಕೇಳುತ್ತಿದೆ
ಮಾನವೀಯತೆಗಾಗಿ ಹುಡುಕುತ್ತ
ರಸ್ತೆ- ಜನಸಂದಣಿಯಾಗಿದೆ
ಮನೆಗಳಲ್ಲಿ ಟಿ.ವಿ. ರೇಡಿಯೋಗಳ

ಭಯಂಕರವಾದ ಆಟಾಟೋಪ!
ಕಾಡುಗಳನ್ನು ಕಡಿಯುತ್ತಿದ್ದಾರೆ!
ನಾವೆಲ್ಲ ನಗುತ್ತ ಬದುಕೋಣವೇ?

– ಎಸ್. ಮಾಲತಿ